ಮಹಿಳಾ ಮತ್ತು ಮಕ್ಕಳ
ಅಭಿವೃದ್ಧಿ ಇಲಾಖೆ

1098 CHILD HELPLINE 24X7

# ಬಾಲ್ಯ ವಿವಾಹ ಮುಕ್ತ ಕರ್ನಾಟಕ
# ಗುರಿ ತಲುಪಲು
# ಬಾಲ್ಯ ವಿವಾಹ ನಿಷೇಧಾಧಿಕಾರಿಗಳ ಅನುಷ್ಠಾನ ಕ್ರಮ
# ಹಾಗೂ
# ವಿವಿಧ ಇಲಾಖೆಗಳ ಪ್ರಮುಖ ಸುತ್ತೋಲೆಗಳ ಕೈಪಿಡಿ



ಪ್ರಕಟಣೆ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಕ್ಕಳ ರಕ್ಷಣಾ ನಿರ್ದೇಶನಾಲಯ ಬೆಂಗಳೂರು.
ಜಿಲ್ಲಾಡಳಿತ ಕೊಪ್ಪಳ, ಯುನಿಸೆಫ್ ಹೈದರಾಬಾದ್
ಹಾಗೂ ಯುನಿಸೆಫ್ ಮಕ್ಕಳ ಸಂರಕ್ಷಣಾ ಯೋಜನೆ, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಕೊಪ್ಪಳ.

ಸಮಗ್ರ ಶಿಕ್ಷಣ ಕರ್ನಾಟಕ
ಎಲ್ಲರೂ ಕಲಿಯೋಣ, ಎಲ್ಲರೂ ಬೆಳೆಯೋಣ
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

unicef
for every child

1098 CHILD HELPLINE 24X7

# ಬಾಲ್ಯ ವಿವಾಹ ಮುಕ್ತ ಕರ್ನಾಟಕ
# ಗುರಿ ತಲುಪಲು
# ಬಾಲ್ಯ ವಿವಾಹ ನಿಷೇಧಾಧಿಕಾರಿಗಳ ಅನುಷ್ಠಾನ ಕ್ರಮ
# ಹಾಗೂ
# ವಿವಿಧ ಇಲಾಖೆಗಳ ಪ್ರಮುಖ ಸುತ್ತೋಲೆಗಳ ಕೈಪಿಡಿ



ಪ್ರಕಟಣೆ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಕ್ಕಳ ರಕ್ಷಣಾ ನಿರ್ದೇಶನಾಲಯ ಬೆಂಗಳೂರು.
ಜಿಲ್ಲಾಡಳಿತ ಕೊಪ್ಪಳ, ಯುನಿಸೆಫ್ ಹೈದರಾಬಾದ್
ಹಾಗೂ ಯುನಿಸೆಫ್ ಮಕ್ಕಳ ಸಂರಕ್ಷಣಾ ಯೋಜನೆ, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಕೊಪ್ಪಳ.

ಸಮಗ್ರ ಶಿಕ್ಷಣ ಕರ್ನಾಟಕ
ಎಲ್ಲರೂ ಕಲಿಯೋಣ, ಎಲ್ಲರೂ ಬೆಳೆಯೋಣ
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

unicef
for every child

**ಇನ್ನು ಮುಂದೆ ಮಕ್ಕಳೊಂದಿಗೆ ಕೆಲಸ ಮಾಡುವಾಗ ಮಕ್ಕಳ ಕುರಿತು ಮಾತನಾಡುವಾಗ ಕೆಲವು ಶಬ್ದಗಳ ಬಳಕೆ, ಪರಿಭಾಷೆ, ಉಚ್ಚಾರಣೆ ತಪ್ಪು ಆಗದಿರಲಿ, ಅವುಗಳು ಈ ಕೆಳಗಿನಂತೆ ಸರಿಯಾಗಿರಲಿ.**

| ಕ್ರ.ಸ | ತಪ್ಪು ಬಳಕೆ, ಉಚ್ಚಾರಣೆ, ಮಿಥ್ಯ ಹಾಗೂ ಹಿಂದಿನ ಪರಿಭಾಷೆ. ಈಗ ಬಳಸುವಂತಿಲ್ಲ. | ಸರಿಯಾದ ಪದ ಬಳಕೆ, ಸತ್ಯ, ಹೊಸ ಪರಿಭಾಷೆ, ಹಾಗೂ ಘನತೆಯಿಂದ ಕೂಡಿದ ಸರಿಯಾದ ಕ್ರಮ |
|---|---|---|
| 1. | ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು | ಇಂದಿನ ಮಕ್ಕಳೇ ಇಂದಿನ ಪ್ರಜೆಗಳು |
| 2. | ಬಾಲಾಪರಾಧಿಗಳು | **ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳು** (CCL-Children in Conflict with Law) |
| 3. | ರಿಮಾಂಡ್ ಹೋಮ್ | **ವೀಕ್ಷಣಾಲಯ.** (OH- Observation Home) |
| 4. | ಅತ್ಯಾಚಾರ | **ಲೈಂಗಿಕ ಹಲ್ಲೆ/ಲೈಂಗಿಕ ಕಿರುಕುಳ/ಲೈಂಗಿಕ ದೌರ್ಜನ್ಯ/ಲೈಂಗಿಕ ಶೋಷಣೆ** |
| 5. | ಅನಾಥಮಗು/ಮಕ್ಕಳು | **ಶಾಶ್ವತವಾಗಿ ಜೈವಿಕ ಪೋಷಕರಿಂದ ಬೇರ್ಪಟ್ಟ ಮಗು/ ಮಕ್ಕಳು** |
| 6. | ದತ್ತು– ಮಕ್ಕಳಿಲ್ಲದವರು ಮಕ್ಕಳು ತೆಗೆದು ಕೊಳ್ಳುವುದು. | **ದತ್ತು** – ಪೋಷಕರಿಲ್ಲದ ಮಕ್ಕಳಿಗೆ ಉತ್ತಮ ಪೋಷಕರನ್ನು ಹುಡುಕಿ ಅವರಿಗೆ ಕಾನೂನು/ನಿಯಮಾನುಸಾರ ಮಕ್ಕಳನ್ನು ನೀಡುವ ಮುಖಾಂತರ ಮಕ್ಕಳಿಗೆ **ಅವರ ಕೌಟುಂಬಿಕ ಹಕ್ಕನ್ನು ಒದಗಿಸುವುದು ಹಾಗೂ ಕಾಪಾಡುವುದು.**<br>***ದತ್ತು ಎಂದರೆ ಒಂದು ಕುಟುಂಬಕ್ಕೆ ಮಗುವನ್ನು ಹುಡುಕುವುದಲ್ಲ! ಬದಲಿಗೆ ಒಂದು ಮಗುವಿಗೆ ಕುಟುಂಬವನ್ನು ಕಟ್ಟಿಕೊಡುವುದು*** |
| 7. | ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ. | **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ** |
| 8. | ಶಿಕ್ಷಣ ಮೂಲಭೂತ ಹಕ್ಕಾಗಿದ್ದು ಸಂವಿಧಾನ ರಚನೆ ಆದಾಗಿನಿಂದ. | ಶಿಕ್ಷಣ ಮೂಲಭೂತ ಹಕ್ಕಾಗಿದ್ದು 2002 ಇಸವಿಯಿಂದ. (ಸಂವಿಧಾನದ 93ನೇ ಬಿಲ್, 86ನೇ ತಿದ್ದುಪಡಿ). **ಕಲಂ 21ಎ** |
| 9. | ಸಮಗ್ರ ಮಕ್ಕಳ ರಕ್ಷಣಾ ಯೋಜನೆ/ಐಸಿಪಿಎಸ್ | **ಮಿಷನ್ ವಾತ್ಸಲ್ಯ– ಮಕ್ಕಳ ರಕ್ಷಣಾ ನಿರ್ದೇಶನಾಲಯ** |
| 10. | ಗುಡ್ ಟಚ್ ಬ್ಯಾಡ್ ಟಚ್<br>Good Touch and Bad Touch | **ಸುರಕ್ಷಿತ ಸ್ಪರ್ಶ ಅಸುರಕ್ಷಿತ ಸ್ಪರ್ಶ**<br>Safe Touch and Unsafe Touch |
| 11. | ಪೋಸ್ಕೋ ಕಾಯ್ದೆ: POSCO | ಪಾಕ್ಸೋ ಅಥವಾ ಪೋಕ್ಸೋ: POCSO<br>The Protection Of Children from Sexual Offences Act 2012, as Amended in 2019.<br>**ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯ್ದೆ 2012, ತಿದ್ದುಪಡಿ 2019** |
| 12 | POCSO ಮಗು, ಬಾಲ್ಯ ವಿವಾಹ ಮಗು, ಬಾಲ ಕಾರ್ಮಿಕ ಮಗು. ಬಿಕ್ಷಾಟನೆ ಮಗು | **ಮಗು ಅಷ್ಟೇ ಅಥವಾ ಮಗುವಿನ ಹೆಸರನ್ನು** ಹೇಳಿ ಮಗುವಿನ ಹಾಗೂ ಅವರ ಕುಟುಂಬದ ಘನತೆಯನ್ನು ಕಾಪಾಡಬೇಕು. |
| 13. | ಪೋಷಣೆ ಮತ್ತು ಪಾಲನಾ ಕೇಂದ್ರ | **ಪೋಷಣೆ ಮತ್ತು ರಕ್ಷಣಾ ಕೇಂದ್ರ** (CCIs) |
| 14. | ಬಾಲ ಮತ್ತು ಕಿಶೋರ ಕಾರ್ಮಿಕ ನಿಷೇಧ | **ಬಾಲ ಮತ್ತು ಕಿಶೋರ ಕಾರ್ಮಿಕ ಪದ್ಧತಿ ನಿಷೇಧ** |
| 15. | ಬಾಲ ನ್ಯಾಯ (ಪೋಷಣೆ ಮತ್ತು ರಕ್ಷಣೆ) ಕಾಯ್ದೆ 2015. | **ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ 2015, ತಿದ್ದುಪಡಿ 2021.** |
| 16. | ಹೆಣ್ಣು ಮಕ್ಕಳ ಮೇಲೆ ಮಾತ್ರ ಲೈಂಗಿಕ ದೌರ್ಜನ್ಯ ನಡೆಯುತ್ತದೆ. | **ಗಂಡು ಮಕ್ಕಳ ಮೇಲೆಯೂ ನಡೆಯುತ್ತದೆ.** ಅಧ್ಯಯನದ (DWCD) ಪ್ರಕಾರ ಗಂಡು ಮಕ್ಕಳ ಮೇಲೆ ಜಾಸ್ತಿ. (2017) |
| 17. | ಬಾಲ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ–1986 | ಮಕ್ಕಳು ಮತ್ತು ಕಿಶೋರ ಕಾರ್ಮಿಕ ಪದ್ಧತಿ (ನಿಷೇಧ ಮತ್ತು ನಿಯಂತ್ರಣ)ಕಾಯ್ದೆ–1986 (2016ರ ತಿದ್ದುಪಡಿ) |
| | ಮಕ್ಕಳ ಆಯೋಗ ಕಾಯ್ದೆ–2005. | **ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಕಾಯ್ದೆ–2005.** |
| 19. | ಗ್ರಾಮ ಲೆಕ್ಕಿಗರು (VAs) | **ಗ್ರಾಮ ಆಡಳಿತಾಧಿಕಾರಿಗಳು** (VAOs) |
| 20. | ಎ ಎನ್ ಎಮ್ (ANM) | **ಪ್ರಾಥಮಿಕ ಆರೋಗ್ಯ ರಕ್ಷಣಾಧಿಕಾರಿ** (PHCOs) |

# ಬಾಲ್ಯ ವಿವಾಹ ನಿಷೇಧಾಧಿಕಾರಿಗಳ ಅನುಷ್ಠಾನ ಕ್ರಮ
# ಹಾಗೂ ವಿವಿಧ ಇಲಾಖೆಗಳ ಪ್ರಮುಖ ಸುತ್ತೋಲೆಗಳ ಕೈಪಿಡಿ
## ಪರಿವಿಡಿ



| ಕ್ರಸ | ವಿವರ | ದಿನಾಂಕ | ಪುಟಗಳು | ಪು.ಸಂಖ್ಯೆ |
|---|---|---|---|---|
| ಶೀರ್ಷಿಕೆ ಹಾಗೂ ಮಿಥ್ಯ ಮತ್ತು ಸತ್ಯಗಳು | | – | 2 | 1–2 |
| ಪರಿವಿಡಿ | | – | 2 | 3–4 |
| ಬಾಲ್ಯ ವಿವಾಹ ನಿಷೇಧ ಕಾಯ್ದೆ–2006, ಬಾಲ್ಯ ವಿವಾಹ ನಿಷೇಧ (ಕರ್ನಾಟಕ) ತಿದ್ದುಪಡಿ 2016 ಹಾಗೂ ಕರ್ನಾಟಕ ನಿಯಮ 2014 ಸಾರಾಂಶ. | | – | 10 | 5–14 |
| 1. | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಂದ ರಾಜ್ಯದಲ್ಲಿ ಬಾಲ್ಯ ವಿವಾಹ ಶೂನ್ಯ ವರದಿ ಸಾಧನೆ ಮಾಡಲು ಕ್ರಮದ ಪತ್ರ | 12–08–2025 | 1 | 15 |
| 2. | ಬಾಲ್ಯ ವಿವಾಹ ತಡೆಯುವಲ್ಲಿ ನಿರ್ಲಕ್ಷ್ಯ ತೋರಿದ ಬಾಲ್ಯ ವಿವಾಹ ನಿಷೇಧಾಧಿಕಾರಿಗಳಿಗೆ ಸುಪ್ರೀಂ ಕೋರ್ಟ್ ರಿಟ್ ಪಿಟಿಷನ್ 1234/2017, ಬಿ.ಎನ್ ಎಸ್ 199(ಸಿ) ಮತ್ತು ಕರ್ನಾಟಕ ನಾಗರಿಕ ಸೇವಾ ನಿಯಮಗಳ ಪ್ರಕಾರ ಕ್ರಮ, ಮಕ್ಕಳ ರಕ್ಷಣಾ ನಿರ್ದೇಶನಾಲಯದ ನಿರ್ದೇಶಕರ ಪತ್ರ | 21–04–2025 | 1 | 16 |
| 3. | ಬಾಲ್ಯ ವಿವಾಹ ನಿಷೇಧ ಕಾಯ್ದೆ 2006 (ಕೇಂದ್ರ ಶಾಸನ) | 10–01–2007 | 10 | 17–26 |
| 4. | ಬಾಲ್ಯ ವಿವಾಹ ನಿಷೇಧ (ಕರ್ನಾಟಕ) ತಿದ್ದುಪಡಿ ಕಾಯ್ದೆ 2016, ಆಂಗ್ಲ ಆವೃತ್ತಿ | 26–04–2017 | 2 | 27–28 |
| 5. | ಬಾಲ್ಯ ವಿವಾಹ ನಿಷೇಧ (ಕರ್ನಾಟಕ) ತಿದ್ದುಪಡಿ ಕಾಯ್ದೆ 2016, ಕನ್ನಡ ಆವೃತ್ತಿ | 26–04–2017 | 1 | 29 |
| 6. | ಬಾಲ್ಯ ವಿವಾಹ ನಿಷೇಧ (ಕರ್ನಾಟಕ) ತಿದ್ದುಪಡಿ ಕಾಯ್ದೆ 2016, ಅನುಷ್ಠಾನ ಗಜೆಟ್ | 01–03–2018 | 1 | 30 |
| 7. | ಬಾಲ್ಯ ವಿವಾಹ ನಿಷೇಧ ಕರ್ನಾಟಕ ನಿಯಮ 2014. | 16–01–2018 | 12 | 31–42 |
| 8. | ಬಾಲ್ಯ ವಿವಾಹ ನಿಷೇಧಾಧಿಕಾರಿಗಳ ಮೂಲ ಪಟ್ಟಿ ಅಧಿಸೂಚನೆ | 28–05–2028 | 4 | 43–46 |
| 9. | ಬಾಲ್ಯ ವಿವಾಹ ನಿಷೇಧಾಧಿಕಾರಿಗಳ ಹೊಸ ಸೇರ್ಪಡೆ ಅಧಿಸೂಚನೆ | 04–02–2025 | 2 | 47–48 |
| 10. | ಬಾಲ್ಯ ವಿವಾಹ ನಿಷೇಧಾಧಿಕಾರಿಗಳಾಗಿ ಕಾರ್ಮಿಕ ಇಲಾಖೆಯ ಅಧಿಕಾರಿಗಳು, ಕಾರ್ಮಿಕ ಇಲಾಖೆಯ ಆಯುಕ್ತರ ಸುತ್ತೋಲೆ | 10–07–2017 | 2 | 49–50 |
| 11. | ಬಾಲ್ಯ ವಿವಾಹ ನಿಷೇಧ ಕಾಯ್ದೆ 2006 ರ ಅನುಷ್ಠಾನ ಕಾರ್ಯಬದ್ಧ ವಿಧಾನ **(SOP)** | 18–06–2015 | 7 | 51–57 |
| 12. | ರಾಜ್ಯದ ಯಾವುದೇ ಇಲಾಖೆಯು, ಯಾವುದೇ ಯೋಜನೆಯಡಿ, ಯಾವುದೇ ಫಲಾನುಭವಿಗಳಿಗೆ, ಯಾವುದೇ ಸೌಲಭ್ಯಗಳನ್ನು ನೀಡುವಾಗ ಕರಾರು ಪತ್ರ ಬರೆಸಿಕೊಳ್ಳುವುದು ಕಡ್ಡಾಯ, ಕರ್ನಾಟಕ ರಾಜ್ಯ ಹೆಚ್ಚುವರಿ ಕಾರ್ಯದರ್ಶಿಗಳ ಪತ್ರ | 25–08–2011 | 1 | 58 |
| 13. | ಬಾಲ್ಯ ವಿವಾಹ ಶಿಕ್ಷಾರ್ಹ ಅಪರಾಧ, ಇಲ್ಲಿ ಬಾಲ್ಯ ವಿವಾಹಕ್ಕೆ ಅವಕಾಶವಿಲ್ಲ, ಎಂದು, ಎಲ್ಲಾ ಮದುವೆ ಹಾಲ್, ಕಲ್ಯಾಣ ಮಂಟಪ, ದೇವಸ್ಥಾನ, ಮಠ, ಮಂದಿರಗಳಲ್ಲಿ ಶಾಶ್ವತ ಫಲಕ ಕಡ್ಡಾಯ. ಪೌರಾಡಳಿತ ನಿರ್ದೇಶಕರ ಪತ್ರ. | 21–09–2011 | 2 | 59–60 |
| 14. | ಮದುವೆ ಆಮಂತ್ರಣ ಪತ್ರ ಮುದ್ರಿಸುವವರು ಹಾಗೂ ಇತರ ಸೇವೆ ನೀಡುವವರು ವಧು ಮತ್ತು ವರನ ವಯಸ್ಸು 18 ಮತ್ತು 21 ಪೂರ್ಣವಾಗಿರುವುದನ್ನು ಖಾತ್ರಿಪಡಿಸಿದ ನಂತರವೇ ಸೇವೆ ಒದಗಿಸಬೇಕು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕರ ಪತ್ರ | 19–06–2014 | 1 | 61 |
| 15 | ರಾಜ್ಯದ ಎಲ್ಲಾ ಸರಕಾರಿ,ಅರೆಸರಕಾರಿ ಕಛೇರಿ/ಕಟ್ಟಡ, ಸರಕಾರಿ, ಅನುದಾನಿತ, ಅನುದಾನ ರಹಿತ, ಖಾಸಗಿ ಶಾಲೆ, ವಸತಿ ನಿಲಯಗಳಲ್ಲಿ ಕಡ್ಡಾಯವಾಗಿ 1098 ಮಕ್ಕಳ ಸಹಾಯವಾಣಿಯ ಶಾಶ್ವತ ಫಲಕದ ಮಾದರಿ ನಮೂನೆ. | – | 1 | 62 |
| 16. | ರಾಜ್ಯದ ಎಲ್ಲಾ ಗ್ರಾಮ ಆಡಳಿತಾಧಿಕಾರಿಗಳು, ತಮ್ಮ ಕಾರ್ಯವ್ಯಾಪ್ತಿಯಲ್ಲಿ ಬಾಲ್ಯ ವಿವಾಹ ನಿಷೇಧಾಧಿಕಾರಿಗಳಾಗಿರುವುದರಿಂದ ಅವರ ವ್ಯಾಪ್ತಿಯಲ್ಲಿ ಬಾಲ್ಯ ವಿವಾಹ ಆದಲ್ಲಿ ಅದಕ್ಕೇ ಅವರೇ ಹೊಣೆಗಾರರು. ಕಂದಾಯ ಇಲಾಖೆ ಸುತ್ತೋಲೆ | 20–9–2017 | 2 | 63–64 |
| 17. | ಸಾಮೂಹಿಕ ಮದುವೆ ಆಯೋಜಿಸುವ ಸಂದರ್ಭದಲ್ಲಿ ವಿವಿಧ ಸಂಘ–ಸಂಸ್ಥೆಗಳು, ಮಠ–ಮಂದಿರಗಳು ಅನುಸರಿಸಬೇಕಾದ ಕ್ರಮಗಳು. ಕಂದಾಯ ಇಲಾಖೆ ಸುತ್ತೋಲೆ. | 18–8–2011 | 4 | 65–68 |

| | | | | |
|---|---|---|---|---|
| 18. | ಬಾಲ್ಯ ವಿವಾಹಗಳನ್ನು ತಡೆಗಟ್ಟಲು ಪಂಚಾಯತ್ ರಾಜ್ ಸಂಸ್ಥೆಗಳು ಅನುಸರಿಸಬೇಕಾದ ವಿಧಿ ವಿಧಾನಗಳು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಸುತ್ತೋಲೆ. | 8–7–2011 | 3 | 69–71 |
| 19. | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಕಛೇರಿಯ ಕಟ್ಟಡಗಳಲ್ಲಿ ಕಡ್ಡಾಯವಾಗಿ 1098 ಮಕ್ಕಳ ಸಹಾಯವಾಣಿಯ ಶಾಶ್ವತ ಫಲಕ ಹಾಕಲು ನೀಡಿದ ಆದೇಶ. | 19–7–2027 | 1 | 72 |
| 20. | ಗ್ರಾಮ /ತಾಲೂಕು ಮಟ್ಟದಲ್ಲಿ ಮಕ್ಕಳ ರಕ್ಷಣಾ ಸಮಿತಿ ರಚನೆಯ ಸರ್ಕಾರದ ಆದೇಶ. | 28–7–2014 | 4 | 73–76 |
| 21. | ಗ್ರಾಮ ಪಂಚಾಯತಿ ಮಟ್ಟದಲ್ಲಿ ಮಹಿಳೆಯರ ಮತ್ತು ಮಕ್ಕಳ ರಕ್ಷಣಾ ಸಮಿತಿ ಸರ್ಕಾರದ ಆದೇಶ. | 6–8–2019 | 9 | 77–85 |
| 22. | ಗ್ರಾಮ ಪಂಚಾಯತಿ ಮಟ್ಟದಲ್ಲಿ ಮಹಿಳೆಯರ ಹಾಗೂ ಮಕ್ಕಳ ಸಾಗಾಣಿಕೆ ಹಾಗೂ ಮರಾಟ ತಡೆ ಸಮಿತಿಯನ್ನು ಬಲ ಪಡಿಸುವ ಬಗ್ಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ನಿರ್ದೇಶಕರ ಪತ್ರ. | 21–4–2016 | 1 | 86 |
| 23. | ಜಿಲ್ಲಾ ಮಟ್ಟದ ಜಿಲ್ಲಾ ಮಕ್ಕಳ ರಕ್ಷಣಾ ಸಮಿತಿಯ ರಚನೆಯ ಆದೇಶ. | 23–9–2011<br>24–11–2013 | 4 | 90 |
| 24. | ತಾಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಬಾಲ್ಯ ವಿವಾಹ ತಡೆ, ನಿರ್ಮೂಲನೆಯ ಸಮನ್ವಯತೆ ಹಾಗೂ ಪ್ರಗತಿ ಪರಿಶೀಲನಾ ಸಮಿತಿ ರಚನೆಯ ಸರ್ಕಾರದ ಆದೇಶ. | 22–1–2014 | 4 | 91–94 |
| 25. | ಬಾಲ್ಯ ವಿವಾಹಗಳನ್ನು ತಡೆಗಟ್ಟಲು ಆರೋಗ್ಯ ಇಲಾಖೆಯು ವಯಸ್ಸಿನ ಧೃಡೀಕರಣ ಪತ್ರ ನೀಡುವ ಕ್ರಮಗಳ ಸುತ್ತೋಲೆ. | 21–2–2024 | 6 | 95–100 |
| 26. | ಬಾಲ್ಯ ವಿವಾಹಗಳನ್ನು ತಡೆಗಟ್ಟಲು ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯ ಎಲ್ಲಾ ವಸತಿನಿಲಯಗಳಲ್ಲಿಲ್ಲಿರುವ ಮಕ್ಕಳಿಗೆ ಅರಿವು ಮೂಡಿಸಲು ಕ್ರಮ ಕೈಗೊಳ್ಳಲು, ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರ ಅದೇಶ. | 4–10–2027 | 2 | 101–102 |
| 27. | ಬಾಲ್ಯ ವಿವಾಹಗಳನ್ನು ತಡೆಗಟ್ಟಲು ಎಲ್ಲಾ ಶಾಲೆಗಳಲ್ಲಿ ಮಕ್ಕಳಿಗೆ ಅರಿವು ಮೂಡಿಸಲು ಹಾಗೂ ಬಾಲ್ಯ ವಿವಾಹ ಪ್ರಕರಣ ಬಂದಾಗ ವಯಸ್ಸಿನ ಧೃಡೀಕರಣ ಪತ್ರ ನೀಡುವ ಕ್ರಮ, ಸುಳ್ಳು ಪ್ರಮಾಣ ಪತ್ರ ನೀಡಿದರೆ ಕ್ರಮದ ಬಗ್ಗೆ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಸುತ್ತೋಲೆ. | 31–12–2026 | 5 | 103–107 |
| 28 | ಸರಕಾರಿ. ಅನುದಾನಿತ, ಅನುದಾನ ರಹಿತ, ಖಾಸಗಿ ಶಾಲೆ, ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ,  ಕಡ್ಡಾಯವಾಗಿ 1098 ಮಕ್ಕಳ ಸಹಾಯವಾಣಿಯ ಶಾಶ್ವತ ಫಲಕ ಹಾಕಲು ನೀಡಿದ ರಾಜ್ಯದ ಶಾಲಾ ಶಿಕ್ಷಣ ಇಲಾಖೆ, ಆಯುಕ್ತರು ನೀಡಿದ ಆದೇಶ. | 26–6–2025 | 1 | 108 |
| 29. | ರಾಜ್ಯದ ಎಲ್ಲಾ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳನ್ನು ಆಯಾ ತಾಲೂಕಿನ, ತಾಲೂಕು ಮಕ್ಕಳ ರಕ್ಷಣಾಧಿಕಾರಿಗಳನ್ನಾಗಿ ಸರ್ಕಾರ ನೇಮಿಸಿದ ಸರ್ಕಾರದ ನಡಾವಳಿ. | 2–6–2020 | 2 | 109–110 |
| 30. | ಶೂನ್ಯ ಎಫ್.ಐ.ಆರ್ ದಾಖಲಿಸುವುದು: ರಾಜ್ಯ ಪೊಲೀಸ್ ಮಹಾ ನಿರ್ದೇಶಕರ ಪತ್ರ | 26–11–2029 | 2 | 111–112 |
| 31. | ಮಕ್ಕಳಿಗೆ ಪೊಲೀಸ್ ಠಾಣೆ ಮುಖಾಂತರ ತೆರೆದ ಮನೆ ಕಾರ್ಯಕ್ರಮ ನಡೆಸುವ ಬಗ್ಗೆ ಕರ್ನಾಟಕ ರಾಜ್ಯ ಪೊಲೀಸ್ ಮಹಾ ನಿರ್ದೇಶಕರ ಹಾಗೂ ಸಮಗ್ರ ಶಿಕ್ಷಾ ಅಭಿಯಾನದ ನಿರ್ದೇಶಕರ ಪತ್ರ. | 31–5–2013<br>18–3–2019 | 6 | 113–118 |
| 32. | ಬಾಲ್ಯ ವಿವಾಹಗಳನ್ನು ಹಾಗೂ ಬಾಲಕಿಯರು ಗರ್ಭಿಣಿಯರಾಗುವುದನ್ನು ತಡೆಗಟ್ಟಲು ಮಾನ್ಯ ಮುಖ್ಯಮಂತ್ರಿಗಳು ನಡೆಸಿದ ಸಭೆಯ ತೀರ್ಮಾನದಂತೆ ಸರ್ಕಾರದ ನಡಾವಳಿ ಹಾಗೂ 10 ಇಲಾಖೆಗಳಿಗೆ ನೀಡಿದ ನಿರ್ದೇಶನಗಳು. | 6–9–2024 | 13 | 119–131 |
| 33. | ಮಕ್ಕಳು ಬಾಲ ಗರ್ಭಿಣಿಯರಾಗುವುದನ್ನು ತಡೆಗಟ್ಟಲು 10 ಇಲಾಖೆಗಳ ಜವಾಬ್ದಾರಿಗಳನ್ನು ಅನುಷ್ಠಾನ ಮಾಡುವ ಬಗ್ಗೆ ಮಮಅಇ ಕಾರ್ಯದರ್ಶಿಗಳ ಪತ್ರ | 22–8–2025 | 2 | 132–133 |
| 34. | ಸುಪ್ರೀಂ ಕೋರ್ಟ್‌ನ ಬಾಲ್ಯ ವಿವಾಹ ಪ್ರಕರಣ ಸಂಖ್ಯೆ 1234/2017 ರ ತೀರ್ಪಿನ/ನಿರ್ದೇಶನದ  ಸಾರಾಂಶ. | 18–10–2024 | 6 | 134–139 |
| 35. | DC/CEO-ZP/SP- ಬಾಲ್ಯ ವಿವಾಹ ತಡೆಯ ಬಗ್ಗೆ ಪ್ರತಿ 3 ತಿಂಗಳಿಗೊಮ್ಮೆ ಪ್ರಗತಿ ಪರಿಶೀಲನೆ: ಸರಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ನೀಡಿದ ಸುತ್ತೋಲೆ. | 14–5–2025 | 1 | 140 |

## ಬಾಲ್ಯ ವಿವಾಹ ನಿಷೇಧ ಕಾಯ್ದೆ 2006
## ಬಾಲ್ಯ ವಿವಾಹ ನಿಷೇಧ (ಕರ್ನಾಟಕ) ತಿದ್ದುಪಡಿ ಕಾಯ್ದೆ 2016
## ಬಾಲ್ಯ ವಿವಾಹ ನಿಷೇಧ ಕರ್ನಾಟಕ ನಿಯಮಗಳು 2014
## ಅನುಷ್ಠಾನದ ಕ್ರಮಬದ್ಧ ಕಾರ್ಯವಿಧಾನಗಳು: ಸಾರಾಂಶ

**1. ಬಾಲ್ಯ ವಿವಾಹ ನಿಷೇಧ ಕಾಯ್ದೆ 2006 ರ ಪ್ರಕಾರ ಮಗು ಎಂದರೆ ಯಾರು? ವ್ಯಾಖ್ಯಾನಗಳು / ಪರಿಭಾಷೆಗಳು: Definitions:**

**ಕಾಯ್ದೆ ಕಲಂ: 2 (ಎ) '**ಮಗು' ಎಂದರೆ ಇಪ್ಪತ್ತೊಂದು ವರ್ಷದೊಳಗಿನ ಯಾವುದೇ ಗಂಡು ಮತ್ತು ಹದಿನೆಂಟು ವರ್ಷದೊಳಗಿನ ಯಾವುದೇ ಹೆಣ್ಣು ವ್ಯಕ್ತಿ;

**2. ಬಾಲ್ಯ ವಿವಾಹ ಎಂದರೇನು?**

ಬಾಲ್ಯವಿವಾಹ ನಿಷೇಧ ಕಾಯಿದೆ 2006ರ ಪ್ರಕಾರ **18 ವರ್ಷ ಪೂರ್ಣವಾಗದ ಯಾವುದೇ ಬಾಲಕಿಗೆ** ಅಥವಾ **21 ವರ್ಷ ಪೂರ್ಣವಾಗದ ಯಾವುದೇ ಬಾಲಕನಿಗೆ** ಮಾಡುವ ಮದುವೆಯನ್ನು ಬಾಲ್ಯವಿವಾಹವೆಂದು ಗುರುತಿಸಲಾಗುತ್ತದೆ. ವಿವಾಹವಾಗುವ [ವಿವಾಹವಾಗುತ್ತಿರುವ / ವಿವಾಹವಾದ] ಯಾವುದೇ ಗಂಡು ಹೆಣ್ಣುಗಳಲ್ಲಿ ಯಾರಿಗಾದರೂ ಒಬ್ಬರಿಗೆ ವಯಸ್ಸು (ಹೆಣ್ಣಿಗೆ 18 ಅಥವಾ ಗಂಡಿಗೆ 21ರೊಳಗೆ) ಕಡಿಮೆ ಇದ್ದರೂ ಅದು ಬಾಲ್ಯವಿವಾಹವೇ ಆಗಿರುತ್ತದೆ. (ಕಾಯ್ದೆಯ ಸೆಕ್ಷನ್ 2 ಬಿ ಮತ್ತು ಸಿ) ***(ವಿವರಣೆ: ಹುಡುಗಿಗೆ 18 ವರ್ಷ ಪೂರ್ಣವಾಗಿರಬೇಕು. ಅಂದರೆ 19 ನೇ ವರ್ಷ ಪ್ರಾರಂಭವಾಗಿರಬೇಕು, ಹುಡುಗನಿಗೆ 21 ವರ್ಷ ಪೂರ್ಣವಾಗಿರಬೇಕು, ಅಂದರೆ 22ನೇ ವರ್ಷ ಪ್ರಾರಂಭವಾಗಿರಬೇಕು.)***

**3. ಬಾಲ್ಯ ವಿವಾಹ ಆದಲ್ಲಿ ತಪ್ಪಿಸ್ಥರು ಯಾರು?**

**ಕಾಯ್ದೆ: ಕಲಂ: 9; ಪುರುಷ ವಯಸ್ಕರು ಮಗುವನ್ನು ಮದುವೆಯಾದರೆ ಶಿಕ್ಷೆ: Punishment for male adult marrying a Child:** ಯಾರಾದರೂ **ಹದಿನೆಂಟು** ವರ್ಷ ಮೇಲ್ಪಟ್ಟ **ಪುರುಷರು,** 18 ವರ್ಷದೊಳಗಿನ ಬಾಲಕಿಯನ್ನು ಮದುವೆಯಾದರೆ ಅಂದರೆ ಬಾಲ್ಯ ವಿವಾಹವಾಗಿದ್ದರೆ ಅವರಿಗೆ **ಎರಡು ವರ್ಷದವರೆಗೆ** ವಿಸ್ತರಿಸಬಹುದಾದ ಕಠಿಣ ಕಾರಾಗೃಹ ಶಿಕ್ಷೆ ಮತ್ತು **ಒಂದು ಲಕ್ಷದವರೆಗೆ** ದಂಡ ಅಥವಾ ಎರಡನ್ನೂ ವಿಧಿಸಬಹುದು. (ಆದರೆ, **ಬಾಲ್ಯ ವಿವಾಹ ನಿಷೇಧ *(ಕರ್ನಾಟಕ) ತಿದ್ದುಪಡಿ ಕಾಯ್ದೆ 2016 ರ ಪ್ರಕಾರ ಕನಿಷ್ಟ ಒಂದು ವರ್ಷದಿಂದ ಎರಡು ವರ್ಷದವರೆಗೆ ವಿಸ್ತರಿಸಬಹುದಾದ ಕಠಿಣ ಕಾರಾಗೃಹ ಶಿಕ್ಷೆ ಮತ್ತು ಒಂದು ಲಕ್ಷದವರೆಗೆ ದಂಡ ಅಥವಾ ಎರಡನ್ನೂ ವಿಧಿಸಬಹುದು.).***

**ಕಾಯ್ದೆ: ಕಲಂ: 10: ಬಾಲ್ಯವಿವಾಹದ ನೆರವೇರಿಸುವುದಕ್ಕೆ ಶಿಕ್ಷೆ: Punishment tor solemnising a child marriage:** ಯಾರಾದರೂ ಬಾಲ್ಯವಿವಾಹವನ್ನು ನೆರವೇರಿಸಿದ್ದು, ನಿರ್ದೇಶಿಸಿದ್ದು ಅಥವಾ ನೆರವು ನೀಡಿದ್ದೇ ಆದಲ್ಲಿ ಅವರು ಅದು ಬಾಲ್ಯವಿವಾಹ ಅಲ್ಲವೆಂದು ನಿರೂಪಿಸಲು ಸಾಕಷ್ಟು ಪುರಾವೆಗಳನ್ನು ಒದಗಿಸದಿದ್ದಲ್ಲಿ ಅವರಿಗೆ ಎರಡು ವರ್ಷದವರೆಗೆ ವಿಸ್ತರಿಸಬಹುದಾದ ಕಠಿಣ ಕಾರಾಗೃಹ ಶಿಕ್ಷೆ ಮತ್ತು ಒಂದು ಲಕ್ಷದವರೆಗೆ ದಂಡ ವಿಧಿಸಬಹುದು. (ಆದರೆ, **ಬಾಲ್ಯ ವಿವಾಹ** ನಿಷೇಧ ***(ಕರ್ನಾಟಕ) ತಿದ್ದುಪಡಿ ಕಾಯ್ದೆ 2016 ರ ಪ್ರಕಾರ ಕನಿಷ್ಟ ಒಂದು ವರ್ಷದಿಂದ ಎರಡು ವರ್ಷದವರೆಗೆ ವಿಸ್ತರಿಸಬಹುದಾದ ಕಠಿಣ ಕಾರಾಗೃಹ ಶಿಕ್ಷೆ ಮತ್ತು ಒಂದು ಲಕ್ಷದವರೆಗೆ ದಂಡ ಅಥವಾ ಎರಡನ್ನೂ ವಿಧಿಸಬಹುದು).***

**ಕಾಯ್ದೆ: ಕಲಂ: 11: ಬಾಲ್ಯ ವಿವಾಹವನ್ನು ಉತ್ತೇಜಿಸಿದರೆ ಅಥವಾ ನೆರವೇರಿಸಲು ಒಪ್ಪಿಗೆ ನೀಡಿದರೆ ಶಿಕ್ಷೆ: Punishment for promoting or permitting solemnization of child marriages:** ಯಾವುದೇ ಮಗು ಬಾಲ್ಯವಿವಾಹಕ್ಕೆ ಒಳಗಾದರೆ, ಮಗು ಸುಪರ್ಧಿಯಲ್ಲಿರುವ ವ್ಯಕ್ತಿ, ಸಂಸ್ಥೆ ಅಥವಾ ಸಂಘಗಳ ಸದಸ್ಯರೂ ಸೇರಿದಂತೆ ತಂದೆ ತಾಯಿ ಮತ್ತು ಪೋಷಕರು ಅಥವಾ ಯಾವುದೇ ವ್ಯಕ್ತಿ ಅಥವಾ ಇತರೆ ಯಾವುದೇ ಸಾಮರ್ಥ್ಯದಿಂದ, ಸಕ್ರಮವಾಗಿ ಅಥವಾ ಅಕ್ರಮವಾಗಿ, ಬಾಲ್ಯವಿವಾಹಕ್ಕೆ ಹಾಜರಾಗುವುದು ಅಥವಾ ಭಾಗವಹಿಸುವುದೂ ಸೇರಿದಂತೆ ಮದುವೆಗೆ ಉತ್ತೇಜನ ನೀಡಿದರೆ ಅಥವಾ ಅದರ ಆಚರಣೆಗೆ ಒಪ್ಪಿಗೆ ನೀಡಿದರೆ ಅಥವಾ ಮದುವೆ ನಡೆಯುವುದನ್ನು ತಡೆಯುವುದರಲ್ಲಿ ನಿರ್ಲಕ್ಷತೆಯಿಂದ ವಿಫಲರಾದರೆ ಅವರಿಗೆ ಎರಡು ವರ್ಷಗಳ ಕಾಲ ವಿಸ್ತರಿಸಬಹುದಾದ ಕಠಿಣ ಕಾರಾಗೃಹ ಶಿಕ್ಷೆ ಮತ್ತು ಒಂದು ಲಕ್ಷ ರೂ ಗಳವರೆಗೂ ವಿಸ್ತರಿಸಬಹುದಾದ ದಂಡವನ್ನು ವಿಧಿಸಬಹುದು. ಆದರೆ ಯಾವುದೇ ಮಹಿಳೆಗೆ ಕಾರಾಗೃಹ ಶಿಕ್ಷೆ ವಿಧಿಸುವಂತಿಲ್ಲ. ***(ಆದರೆ, ಬಾಲ್ಯ ವಿವಾಹ ನಿಷೇಧ***

***(ಕರ್ನಾಟಕ) ತಿದ್ದುಪಡಿ ಕಾಯ್ದೆ 2016 ರ ಪ್ರಕಾರ ಕನಿಷ್ಟ ಒಂದು ವರ್ಷದಿಂದ ಎರಡು ವರ್ಷದವರೆಗೆ ವಿಸ್ತರಿಸಬಹುದಾದ ಕಠಿಣ ಕಾರಾಗೃಹ ಶಿಕ್ಷೆ ಮತ್ತು ಒಂದು ಲಕ್ಷದವರೆಗೆ ದಂಡ ಅಥವಾ ಎರಡನ್ನೂ ವಿಧಿಸಬಹುದು. ಆದರೆ ಯಾವುದೇ ಮಹಿಳೆಗೆ ಕಾರಾಗೃಹ ಶಿಕ್ಷೆ ವಿಧಿಸುವಂತಿಲ್ಲ, ಎಂಬ ಅಂಶವನ್ನು ತೆಗೆದು ಹಾಕಲಾಗಿದೆ).***

**ಕಾಯ್ದೆ: ಕಲಂ 13 (1) ಬಾಲ್ಯವಿವಾಹವನ್ನು ನಿಷೇಧಿಸಲು ತಡೆಯಾಜ್ಞೆ ನೀಡಲು ನ್ಯಾಯಾಲಯದ ಅಧಿಕಾರ: Power of court to issue injunction Prohibiting child marriages:** ಈ ಕಾಯಿದೆಯಲ್ಲಿ ಒಳಗೊಂಡಿರುವ ನಿಷೇಧಗಳಿಗೆ ವಿರುದ್ಧವಾಗಿ ಏನಾದರೂ ಜರುಗಿ, ಬಾಲ್ಯವಿವಾಹ ನಿಷೇದಾಧಿಕಾರಿಗಳಿಂದ ಅಥವಾ ಯಾವುದಾದರೂ ದೂರಿನ ಮೂಲಕ ಮಾಹಿತಿ ದೊರಕಿದಾಗ ಅಥವಾ ಯಾವುದಾದರೂ ವ್ಯಕ್ತಿಯ ಮೂಲಕ ತಿಳಿದಾಗ, ಮೊದಲ ದರ್ಜೆಯ ನ್ಯಾಯಾಂಗ ಮ್ಯಾಜಿಸ್ಟ್ರೇಟರು ಅಥವಾ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟರಿಗೆ, ಈ ಕಾಯಿದೆಯ ವಿರುದ್ಧವಾಗಿ ಬಾಲ್ಯ ವಿವಾಹಕ್ಕೆ ವ್ಯವಸ್ಥೆಯಾಗುತ್ತಿದೆ ಅಥವಾ ಇನ್ನೇನು ಅಂತಹ ಮದುವೆಯಾಗುತ್ತಿದೆ ಎಂಬುದು ಮನವರಿಕೆಯಾದರೆ ಅಂತಹ ಮ್ಯಾಜಿಸ್ಟ್ರೇಟರು ಆ ಬಾಲ್ಯವಿವಾಹವನ್ನು ನಿಲ್ಲಿಸಲು ವ್ಯಕ್ತಿಗಳಿಗೆ ಅಥವಾ ಸಂಘಟಕರಿಗೆ/ಸಂಘಟನೆಗೆ ತಡೆಯಾಜ್ಞೆಯನ್ನು ನೀಡಬೇಕು.

**ಕಾಯ್ದೆ: ಕಲಂ 13(2)** ಬಾಲ್ಯವಿವಾಹ ನಡೆಯುವ ಸಂಭವ ಅಥವಾ ಬಾಲ್ಯವಿವಾಹಕ್ಕೆ ಸಂಬಂಧಿಸಿದಂತೆ ಈ ಕುರಿತು ಸ್ವಂತ ಜ್ಞಾನವಿರುವ ಅಥವಾ ನಂಬಲು ಸಾಕಷ್ಟು ಕಾರಣಗಳಿರುವ **ಯಾವುದೇ ವ್ಯಕ್ತಿ** ಮತ್ತು ಸಾಕಷ್ಟು ನಂಬಲರ್ಹ ಮಾಹಿತಿಯಿರುವ **ಸ್ವಯಂಸೇವಾ ಸಂಸ್ಥೆಗಳು** ಉಪ ಸೆಕ್ಷನ್ (1)ರ ಅಡಿಯಲ್ಲಿ ದೂರನ್ನು ಸಲ್ಲಿಸಬಹುದು.

**ಕಾಯ್ದೆ: ಕಲಂ 13 (3)** ಪ್ರಥಮ ದರ್ಜೆ ನ್ಯಾಯಾಲಯ ಅಥವಾ ಮೆಟ್ರೋಪಾಲಿಟನ್ ನ್ಯಾಯಾಲಯ ಯಾವುದಾದರು ವರದಿ ಅಥವಾ ಮಾಹಿತಿಯ ಆಧಾರದ ಮೇಲೆ **ಸ್ವಂತವಾಗಿ ದೂರನ್ನು ದಾಖಲಿಸಿಕೊಳ್ಳಬಹುದು.**

**ಕಾಯ್ದೆ: ಕಲಂ 13 (10)** ಯಾರಾದರೂ ಉಪ ಸೆಕ್ಷನ್ 1ರ ಅಡಿಯಲ್ಲಿ ಆತನ ವಿರುದ್ಧ ತಡೆಯಾಜ್ಞೆ ನೀಡಿದ್ದೂ ಗೊತ್ತಿದ್ದೂ ಅದನ್ನು ಉಲ್ಲಂಘಿಸಿದರೆ ಅವರಿಗೆ ಎರಡು ವರ್ಷಗಳ ಕಾಲ ವಿಸ್ತರಿಸಬಹುದಾದ ಕಠಿಣ ಕಾರಾಗೃಹ ಶಿಕ್ಷೆ ಮತ್ತು ಒಂದು ಲಕ್ಷ ರೂ ಗಳವರೆಗೂ ವಿಸ್ತರಿಸಬಹುದಾದ ದಂಡವನ್ನು ವಿಧಿಸಬಹುದು. ಆದರೆ ಯಾವುದೇ ಮಹಿಳೆಗೆ ಕಾರಾಗೃಹ ಶಿಕ್ಷೆ ವಿಧಿಸುವಂತಿಲ್ಲ. ***(ಆದರೆ, ಬಾಲ್ಯ ವಿವಾಹ ನಿಷೇಧ (ಕರ್ನಾಟಕ) ತಿದ್ದುಪಡಿ ಕಾಯ್ದೆ 2016 ರ ಪ್ರಕಾರ ಕನಿಷ್ಟ ಒಂದು ವರ್ಷದಿಂದ ಎರಡು ವರ್ಷದವರೆಗೆ ವಿಸ್ತರಿಸಬಹುದಾದ ಕಠಿಣ ಕಾರಾಗೃಹ ಶಿಕ್ಷೆ ಮತ್ತು ಒಂದು ಲಕ್ಷದವರೆಗೆ ದಂಡ ಅಥವಾ ಎರಡನ್ನೂ ವಿಧಿಸಬಹುದು. ಆದರೆ ಯಾವುದೇ ಮಹಿಳೆಗೆ ಕಾರಾಗೃಹ ಶಿಕ್ಷೆ ವಿಧಿಸುವಂತಿಲ್ಲ, ಎಂಬ ಅಂಶವನ್ನು ತೆಗೆದು ಹಾಕಲಾಗಿದೆ).***

**4. ಮದುವೆಗೆ ಅರ್ಹ ವಯಸ್ಸಿನ ದಾಖಲೆ ಯಾವುದು?**

**ಬಾಲ್ಯ ವಿವಾಹ ನಿಷೇಧ ಕರ್ನಾಟಕ ನಿಯಮಗಳು 2014 ರ ಕಲಂ 6(2) ಷೆಡ್ಯೂಲ್ (3)** ರ ಪ್ರಕಾರ (ಎ). ಮೂಲ ಜನನ ಪ್ರಮಾಣ ಪತ್ರ, (ಬಿ). ಶಾಲಾ ಧೃಡೀಕರಣ ಪತ್ರ (ಸಿ). (ಎ) ಮತ್ತು (ಬಿ) ಎರಡೂ ಇಲ್ಲದಿದ್ದಲ್ಲಿ ಸರಕಾರಿ ವೈದಾಧಿಕಾರಿಯಿಂದ ವಯಸ್ಸಿನ ಧೃಡೀಕರಣ ಪತ್ರ ಪಡೆಯಬೇಕು. ಬೇರೆ ಯಾವ ವಯಸ್ಸಿನ ಪ್ರಮಾಣ ಪತ್ರವೂ ಮದುವೆಗೆ ಅರ್ಹವಲ್ಲ. ಕ್ರಮ ಸಂಖ್ಯೆ (ಎ) ಇದ್ದರೆ ಇದೇ ಅಂತಿಮ, ಇದು ಇಲ್ಲದ್ದಿದಲ್ಲಿ ಮಾತ್ರ (ಬಿ) ಯನ್ನು ಪರಿಗಣಿಸಬೇಕು. ಅವು ಎರಡೂ ಇಲ್ಲದಿದ್ದಲ್ಲಿ ಮಾತ್ರ ಸರಕಾರಿ ವೈದಾಧಿಕಾರಿಗಳು ನೀಡಿದ ವಯಸ್ಸಿನ ಧೃಡೀಕರಣ ಪತ್ರವನ್ನು ಪರಿಗಣಿಸಬೇಕು. ಅದು ರೆಡಿಯೋಲಾಜಿ ಯಂತ್ರದ ಮುಖಾಂತರ ಪರೀಕ್ಷಿಸುವ ಕಾರಣ ನಿರ್ಧಿಷ್ಟ ವಯಸ್ಸು ಇರುವುದಿಲ್ಲ, ಆದ ಕಾರಣ ಕೆಳ ಹಂತದ್ದನ್ನು ಪರಿಗಣಿಸಬೇಕು. ಉದಾ: ಬಾಲಕಿಗೆ 18 ರಿಂದ 19 ಇದ್ದರೆ ಅದು ಬಾಲ್ಯ ವಿವಾಹವೇ ಆಗಿದೆ, ಅಂದರೆ ಮಗುವಿನ ಹಿತದೃಷ್ಟಿಯಿಂದ ಕನಿಷ್ಟ ವಯಸ್ಸನ್ನು ಪರಿಗಣಿಸಬೇಕು. 19 ರಿಂದ 20, 21 ಅಂತ ಇದ್ದರೆ, ಈ ಕಾನೂನು ಅನ್ವಯಿಸುವುದಿಲ್ಲ. ಹುಡುಗನಿಗೆ ಕನಿಷ್ಟ 22 ರಿಂದ ಮೇಲೆ ಬಂದಿರಬೇಕು, ಆಗ ಯಾವ ಕ್ರಮದ ಅವಶ್ಯಕತೆ ಇರುವುದಿಲ್ಲ. ***(ಆಧಾರ್ ಕಾರ್ಡ್, ಮತದಾನ ಕಾರ್ಡ್, ರೇಶನ್ ಕಾರ್ಡ್, ಅಂಗನವಾಡಿ ದಾಖಲಾತಿ ಮುಂತಾದವುಗಳು ಮದುವೆಗೆ ಅರ್ಹವಲ್ಲ. ಅದೇ ರೀತಿ ಸ್ಥಳೀಯ ಕೋರ್ಟ್ ಅದಾಲತ್‌ನಲ್ಲಿ ಯಾವುದಾದರೂ ಸರಕಾರಿ ಸೌಲಭ್ಯ ಪಡೆಯಲು ಅರ್ಜಿ ಸಲ್ಲಿಸಿ, ಕೋರ್ಟ್ ಆದೇಶದ ಮೇರೆಗೆ ತುಂಬಾ ವರ್ಷಗಳ ನಂತರ ಅಥವಾ ತೀರಾ ಇತ್ತೀಚೆಗೆ ನೀಡಿದ ಜನನ ಪ್ರಮಾಣ ಪತ್ರ ಕೂಡ ಈ ನಿಯಮದಂತೆ ಮದುವೆಗೆ ಅರ್ಹವಲ್ಲ)***

**5. ಬಾಲ್ಯ ವಿವಾಹ ನಿಷೇಧಾಧಿಕಾರಿಗಳು ಯಾರು? : Child Marriage Prohibition Officers : ಕಾಯ್ದೆಯ ಕಲಂ 16 (1): ರ ಪ್ರಕಾರ,** ಅಧಿಕೃತ ರಾಜಪತ್ರದಲ್ಲಿ ಪ್ರಕಟಿಸುವ ಮೂಲಕ ರಾಜ್ಯ ಸರ್ಕಾರಗಳು ಆ ಪ್ರಕಟಣೆಯಲ್ಲಿ ನಿರ್ದಿಷ್ಟಪಡಿಸಿ ಇಡೀ ರಾಜ್ಯಕ್ಕೆ ಅಥವಾ ಅದು ಸೂಚಿಸುವ ನಿರ್ದಿಷ್ಟ ಪ್ರದೇಶಗಳಿಗೆ/ಭಾಗಗಳಿಗೆ ಅಧಿಕಾರಿ ಅಥವಾ ಅಧಿಕಾರಿಗಳನ್ನು **ಬಾಲ್ಯ ವಿವಾಹ ನಿಷೇಧಾಧಿಕಾರಿ**/ಗಳನ್ನಾಗಿ ಗುರುತಿಸಬೇಕು. ಅದರಂತೆ ಕರ್ನಾಟಕ ರಾಜ್ಯ ಸರ್ಕಾರವು ಮಾನ್ಯ ರಾಜ್ಯಪಾಲರ ಆಜ್ಞಾನುಸಾರ

28–05–2018ನೇ ದಿನಾಂಕದಂದು ಸಂಖ್ಯೆ:ಮಮಇ 205 ಮಮಅ–2011 (ಭಾ1) ರಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಚಿವಾಲಯ ವಿವಿಧ ಇಲಾಖೆಯ 49 ವಿವಿಧ ಹುದ್ದೆಯ ಸರಕಾರಿ ಅಧಿಕಾರಿಗಳನ್ನು ಇಡೀ ರಾಜ್ಯಕ್ಕೆ ಅನ್ವಯಿಸುವಂತೆ ಅವರವರ ಕಾರ್ಯವ್ಯಾಪ್ತಿಯ **ಬಾಲ್ಯ ವಿವಾಹ ನಿಷೇಧಾಧಿಕಾರಿಗಳು ಎಂದು** ಅಧಿಸೂಚನೆ ಹೊರಡಿಸಿದೆ. ದಿನಾಂಕ 4–2–2025 ರಂದು ಕಡತ ಸಂಖ್ಯೆ: ಮಮಇ 201 ಮಮಅ 2024 ರ ಮಾನ್ಯ ರಾಜ್ಯಪಾಲರ ಆಜ್ಞಾನುಸಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಚಿವಾಲಯ ಮತ್ತೆ ಪುನಃ 3 ಸರಕಾರಿ ಅಧಿಕಾರಿಗಳನ್ನು **ಬಾಲ್ಯ ವಿವಾಹ ನಿಷೇಧಾಧಿಕಾರಿಗಳು ಎಂದು** ಸೇರ್ಪಡೆ ಮಾಡಿ ಆದೇಶ ಹೊರಡಿಸಿದೆ. ಒಟ್ಟು ರಾಜ್ಯದಲ್ಲಿ ವಿವಿಧ ಇಲಾಖೆಯ 51 ಹುದ್ದೆಯ ಸರಕಾರಿ ನೌಕರರುಗಳನ್ನು **ಬಾಲ್ಯ ವಿವಾಹ ನಿಷೇಧಾಧಿಕಾರಿಗಳು** ಎಂದು ಘೋಷಿಸಿದೆ. ಅದರಂತೆ ರಾಜ್ಯದಲ್ಲಿ ಸುಮಾರು ಒಂದು ಲಕ್ಷಕ್ಕೂ ಅಧಿಕ ಬಾಲ್ಯ ವಿವಾಹ ನಿಷೇಧಾಧಿಕಾರಿಗಳು ಇದ್ದಾರೆ. ಅವರು ಗ್ರಾಮ ಮಟ್ಟದಿಂದ ರಾಜ್ಯ ಮಟ್ಟದವರೆಗೆ ಇದ್ದಾರೆ. ಅದರ ಪಟ್ಟಿ ಪುಟ ಸಂಖ್ಯೆ 43 ರಿಂದ 50 ರಲ್ಲಿ ಇದೆ ಓದಿ. ನಿಮ್ಮ ಕಾರ್ಯವ್ಯಾಪ್ತಿಯ **ಬಾಲ್ಯ ವಿವಾಹ ನಿಷೇಧಾಧಿಕಾರಿಗಳ** ವಿವರ ಅವರ ದೂರವಾಣಿ ಸಂಖ್ಯೆಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳಿ.

**6. ಇದರಲ್ಲಿನ ಅಪರಾಧ ಜಾಮೀನು ರಹಿತವೇ?**

**ಹೌದು, ಕಾಯ್ದೆ: ಕಲಂ: 15: Offences to be cognizable and non bailable: ಸಂಜ್ಞೇಯ ಮತ್ತು ಜಾಮೀನುರಹಿತ ಅಪರಾಧ:** ಭಾರತೀಯ ಅಪರಾಧ ಸಂಹಿತೆ 1973ರಲ್ಲಿ ಏನೇ ಹೇಳಿದ್ದರೂ ಸಹ ಈ ಕಾಯ್ದೆಯಡಿ ಬರುವ ಅಪರಾಧಗಳು ಸಂಜ್ಞೇಯ ಮತ್ತು ಜಾಮೀನು ರಹಿತ.

**7. ಬಾಲ್ಯ ವಿವಾಹ ನಿಷೇಧಾಧಿಕಾರಿಗಳನ್ನಾಗಿ ಯಾರನ್ನೆಲ್ಲಾ ನೇಮಕ ಮಾಡಬಹುದು:**

**ಕಾಯ್ದೆ: 17: Child Marriage Prohibition Officers to be public servant: ಬಾಲ್ಯ ವಿವಾಹ ನಿಷೇಧಾದಿಕಾರಿಗಳು ಸಾರ್ವಜನಿಕ ಅಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುವುದು:** ಬಾಲ್ಯವಿವಾಹ **ನಿಷೇಧ** ಅಧಿಕಾರಿಯು ಭಾರತೀಯ ದಂಡ ಸಂಹಿತೆಯ ಸೆಕ್ಷನ್ 21ರಲ್ಲಿ (ಈಗಿನ ಬಿ.ಎನ್.ಎಸ್ ಸೆಕ್ಷನ್: 2(28) ವ್ಯಾಖ್ಯಾನಿಸಲಾದ ಸಾರ್ವಜನಿಕ ಸೇವೆಯ ವ್ಯಾಪ್ತಿಗೆ ಒಳಪಟ್ಟಿರಬೇಕು. ಅಂದರೆ, ಬಿ.ಎನ್.ಎಸ್ 2(28) ಪ್ರಕಾರ ಲೋಕ ನೌಕರನಾಗಿರಬೇಕು.

**8. ಬಾಲ್ಯ ವಿವಾಹ ನಿಷೇಧಾಧಿಕಾರಿಗಳಿಗೆ ರಕ್ಷಣೆ ಇದೆಯಾ?**

**ಕಾಯ್ದೆ: 18(1): ಉತ್ತಮ ಉದ್ದೇಶದಿಂದ ರಕ್ಷಣೆಯ ಕ್ರಮಗಳನ್ನು ತೆಗೆದುಕೊಳ್ಳುವುದು: Protection of action taken in good faith:** ಬಾಲ್ಯ ವಿವಾಹ ನಿಷೇಧ ಅಧಿಕಾರಿಯು ಉತ್ತಮ ಉದ್ದೇಶದಿಂದ ಮಾಡಿದ ಅಥವಾ ಈ ಕಾಯಿದೆಯ ಅಥವಾ ಇದರಡಿಯ ಯಾವುದೇ ನಿಯಮ ಅಥವಾ ಆದೇಶದಡಿ ಯಾವುದೇ ಕ್ರಮಗಳನ್ನು ಕೈಗೊಳ್ಳುವ ನಿರ್ಧಾರ ಮಾಡಿದ್ದರೆ, ಅವರ ವಿರುದ್ಧ ಯಾವುದೇ ಕ್ರಮ, ಶಿಕ್ಷೆ ಅಥವಾ ಯಾವುದೇ ಕಾನೂನು ಪ್ರಕ್ರಿಯೆ ಇರುವುದಿಲ್ಲ.

**9. ಬಾಲ್ಯ ವಿವಾಹ ನಿಷೇಧಾಧಿಕಾರಿಗಳ ಕರ್ತವ್ಯ ಹಾಗೂ ಜವಾಬ್ದಾರಿಗಳೇನು?**

**ಕಾಯ್ದೆ: ಕಲಂ: 16 (3): ಬಾಲ್ಯ ವಿವಾಹ ನಿಷೇಧಾಧಿಕಾರಿಗಳ ಕರ್ತವ್ಯಗಳು: It shall be the duty of the Child Marriage Prohibition Officer:**

**16 (3)**(ಎ) ಬಾಲ್ಯ ವಿವಾಹಗಳ ಆಚರಣೆಯನ್ನು ಅವರಿಗೆ ಸೂಕ್ತವೆಂದು ಎನಿಸಿದ ಕ್ರಮಗಳನ್ನು ತೆಗೆದುಕೊಳ್ಳುವ ಮೂಲಕ ತಡೆಯಬೇಕು;

(ಬಿ) ಈ ಕಾಯ್ದೆಯ ನಿಬಂದನೆಗಳನ್ನು ಉಲ್ಲಂಘಿಸುವ ವ್ಯಕ್ತಿಯನ್ನು ಪರಿಣಾಮಕಾರಿ ಶಿಕ್ಷೆಗೆ ಒಳಪಡಿಸಲು ಸಾಕ್ಷಿಗಳನ್ನು ಸಂಗ್ರಹಿಸಬೇಕು;

(ಸಿ) ಬಾಲ್ಯ ವಿವಾಹಗಳ ಆಚರಣೆಯನ್ನು ಉತ್ತೇಜಿಸುವುದು, ನೆರವು ನೀಡುವುದು, ಧನ ಸಹಾಯ ಮಾಡುವುದು ಅಥವಾ ಅನುಮತಿ ನೀಡುವುದರ ವಿರುದ್ಧ ವ್ಯಕ್ತಿಗತ ಪ್ರಕರಣಗಳಲ್ಲಿ ಸಲಹೆ ನೀಡುವುದು ಅಥವಾ ಸಮುದಾಯಕ್ಕೆ ಸಮಾಲೋಚನೆ ನೀಡುವುದು;

(ಡಿ) ಬಾಲ್ಯವಿವಾಹದಿಂದ ಆಗುವ ದುಷ್ಪರಿಣಾಮಗಳ ಕುರಿತು ವ್ಯಾಪಕವಾದ ಪ್ರಚಾರ ನೀಡಬೇಕು;

(ಇ) ಸಮುದಾಯಗಳನ್ನು ಬಾಲ್ಯ ವಿವಾಹ ಕುರಿತಂತೆ ಜಾಗೃತಗೊಳಿಸಬೇಕು;

(ಎಫ್) ರಾಜ್ಯ ಸರ್ಕಾರ ನಿರ್ದೇಶಿಸಿದಂತೆ ಬಾಲ್ಯ ವಿವಾಹ ಪ್ರಕರಣಗಳನ್ನು ಮತ್ತು ಅಂಕಿಅಂಶಗಳನ್ನು ಒದಗಿಸಬೇಕು;

(ಜಿ) ರಾಜ್ಯ ಸರ್ಕಾರ ವಹಿಸಿದ ಬೇರೆ ಯಾವುದೇ ಕೆಲಸಗಳನ್ನು ಮತ್ತು ಕರ್ತವ್ಯಗಳನ್ನು ನಿರ್ವಹಿಸಬೇಕು;

***ಹೆಚ್ಚಿನ ವಿವರಗಳನ್ನು, ಬಾಲ್ಯ ವಿವಾಹ ನಿಷೇಧ ಕರ್ನಾಟಕ ನಿಯಮ 2014 ರಲ್ಲಿ ಹೇಳಲಾಗಿದೆ.***

**10. 19 ವರ್ಷದ ಹುಡುಗಿ, 20 ವರ್ಷದ ಹುಡುಗನನ್ನು ಮದುವೆಯಾದರೆ, ಅದು ಬಾಲ್ಯ ವಿವಾಹವೇ? ಈ ಪ್ರಕರಣವನ್ನು ನಿಭಾಯಿಸುವುದು ಹೇಗೆ?:**

**ಹೌದು! ಅದು ಬಾಲ್ಯ ವಿವಾಹವೇ ಆಗಿದೆ. ಆದರೆ ಪ್ರಕರಣ ದಾಖಲಿಸುವಾಗ ಕಾಯ್ದೆಯ ಕಲಂ 9 ರಲ್ಲಿ ಅಪ್ರಾಪ್ತ ಹುಡುಗಿಯನ್ನು ಮದುವೆಯಾದ ಪುರುಷ ಅಂತ ಇರುವ ಕಾರಣ, ಕಲಂ 9 ರಡಿಯಲ್ಲಿ ಹುಡುಗಿಯ ಮೇಲೆ ಪ್ರಕರಣ ದಾಖಲಿಸಲು ಬರುವುದಿಲ್ಲ. ಆದ್ದರಿಂದ ಕಲಂ 10 ರಲ್ಲಿ** ಬಾಲ್ಯವಿವಾಹವನ್ನು ನೆರವೇರಿಸಿದ, ನಿರ್ದೇಶಿಸಿದ, ಅಥವಾ ನೆರವು ನೀಡಿದವರ ಮೇಲೆ ಪ್ರಕರಣ ದಾಖಲಿಸಬೇಕು. ಅಂದರೆ : ಡಿಟಿಪಿ, ಮಾಡಿದವರು, ಆಮಂತ್ರಣ ಪತ್ರಿಕೆ ಮುದ್ರಿಸಿದವರು, ಪೂಜಾರಿ, ಶಾಮಿಯಾನ ಹಾಕಿದವರು, ವಾಲಗದವರು, ಡೆಕೋರೇಶನ್‌ನವರು, ಅಡುಗೆಯವರು, ಪೋಟೊ ಹಾಗೂ ವಿಡಿಯೋ ತೆಗೆಯುವವರು, ಸಹಕರಿಸಿದವರು, ವಾಹನ ವ್ಯವಸ್ಥೆ ಮಾಡಿದವರು ಮತ್ತು ಇತರರು) **ಹಾಗೂ ಕಲಂ 11 ರಲ್ಲಿ** ಯಾವುದೇ ಮಗು ಬಾಲ್ಯವಿವಾಹಕ್ಕೆ ಒಳಗಾದರೆ, ಮಗು ಸುಪರ್ಧಿಯಲ್ಲಿರುವ ವ್ಯಕ್ತಿ, ಸಂಸ್ಥೆ ಅಥವಾ ಸಂಘಗಳ ಸದಸ್ಯರೂ ಸೇರಿದಂತೆ ತಂದೆ ತಾಯಿ ಮತ್ತು ಪೋಷಕರು ಅಥವಾ ಯಾವುದೇ ವ್ಯಕ್ತಿ ಬಾಲ್ಯವಿವಾಹಕ್ಕೆ ಹಾಜರಾಗುವುದು ಅಥವಾ ಭಾಗವಹಿಸುವುದೂ ಸೇರಿದಂತೆ ಮದುವೆಗೆ ಉತ್ತೇಜನ ನೀಡಿದರೆ ಅಥವಾ ಅದರ ಆಚರಣೆಗೆ ಒಪ್ಪಿಗೆ ನೀಡಿದರೆ ಅಂತಹವರೆಲ್ಲರ ಮೇಲೆ ಪ್ರಕರಣ ದಾಖಲಿಸಬಹುದು. ಇದು ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಹಾಗೂ ರಕ್ಷಣೆ) ತಿದ್ದುಪಡಿ ಕಾಯ್ದೆ 2021 ಅಥವಾ ಮಕ್ಕಳ ಕಲ್ಯಾಣ ಸಮಿತಿಯ ವ್ಯಾಪ್ತಿಗೆ ಬರುವುದಿಲ್ಲ. ಯಾಕೆಂದರೆ ಇಬ್ಬರಿಗೂ 18 ವರ್ಷ ಪೂರ್ಣವಾಗಿದೆ. ಈ ಪ್ರಕರಣವನ್ನು ಸ್ಥಳೀಯ ಬಾಲ್ಯ ವಿವಾಹ ನಿಷೇಧಾಧಿಕಾರಿಗಳು ನಿಭಾಯಿಸಬೇಕು. ಆ ವ್ಯಾಪ್ತಿಯ ಶಿಶು/ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ **(ಅವರುಗಳು ಈಗ ತಾಲೂಕು ಮಕ್ಕಳ ರಕ್ಷಣಾಧಿಕಾರಿಗಳು)** ಬೆಂಬಲ ಪಡೆಯಬೇಕು. ಮಹಿಳೆಗೆ ರಕ್ಷಣೆ ಬೇಕೆಂದರೆ ಸ್ಥಳೀಯ ಸಖಿ ಕೇಂದ್ರ, ಮಹಿಳಾ ಸಾಂತ್ವನ ಕೇಂದ್ರದ ಸಹಾಯ ಪಡೆಯಬೇಕು.

**11. ಮದುವೆ ಆದ ಹುಡುಗ ಹುಡುಗಿ ಇಬ್ಬರೂ 18 ವರ್ಷದೊಳಗಿನವರು ಆದರೆ, ಅದು ಬಾಲ್ಯ ವಿವಾಹವೇ? ಯಾರ ಮೇಲೆ ಪ್ರಕರಣ ದಾಖಲಿಸಬೇಕು?**

ಹೌದು! ಅದು ಕೂಡಾ ಬಾಲ್ಯ ವಿವಾಹವೇ ಆಗಿದೆ. ಆದರೆ ಇಲ್ಲಿ ಇಬ್ಬರೂ ಮಕ್ಕಳಾದ್ದರಿಂದ ಕಾಯ್ದೆಯ ಕಲಂ 10 ಹಾಗೂ 11 ರಲ್ಲಿ ಒಳಗೊಳ್ಳುವ ಎಲ್ಲರ ಮೇಲೂ ಪ್ರಕರಣ ದಾಖಲಿಸಬೇಕು. ಹುಡುಗ, ಹುಡುಗಿಯ ತಂದೆ ತಾಯಿ, ಪೋಷಕರು, ಸಹಕರಿಸಿದ ಕುಟುಂಬ ಸದಸ್ಯರು, ಬೆಂಬಲಿಸಿದ, ಭಾಗವಹಿಸಿದ ಎಲ್ಲರ ಮೇಲೆ ಪ್ರಕರಣ ದಾಖಲಿಸಬೇಕು.

**12. ಹುಡುಗ, ಹುಡುಗಿ ಯಾರಿಗೂ ಗೊತ್ತಿಲ್ಲದೆಯೇ, ಅವರಾಗಿಯೇ ಕದ್ದು ಮುಚ್ಚಿ ದೇವಸ್ಥಾನ ಅಥವಾ ಯಾವುದೇ ಜಾಗದಲ್ಲಿ ತಾಳಿ (ಮದುವೆ ಮಾಡಿಕೊಂಡು) ಬಂದರೆ ಯಾರ ಮೇಲೆ ಪ್ರಕರಣ ದಾಖಲಿಸಬೇಕು?**

(ಎ) ಹುಡುಗಿ 18 ವರ್ಷದ ಒಳಗೆ ಇದ್ದು, ಹುಡುಗ 18 ವರ್ಷ ಮೇಲಿನವನಾಗಿದ್ದರೆ ನೇರವಾಗಿ ಹುಡುಗನ ಮೇಲೆ ಕಲಂ 9 ರಲ್ಲಿ ಪ್ರಕರಣ ದಾಖಲಿಸುವುದು. ನಂತರ ವಿಚಾರಣೆ/ತನಿಖೆಯಲ್ಲಿ ಬೇರೆ ಯಾವುದೇ ಅಂಶ ಹಾಗೂ ಕಲಂ: 10, 11 ರ ಪ್ರಕಾರ ಆರೋಪಿಗಳು, ಇತರ ಕಾಯ್ದೆಯ ಅಂಶಗಳು ಕಂಡು ಬಂದರೆ ಅವುಗಳನ್ನು ದೋಷಾರೋಪ ಪಟ್ಟಿ ಮಾಡುವಾಗ ನ್ಯಾಯಾಲಯದ ಅನುಮತಿ ಪಡೆದು ಆಯಾ ಸೂಕ್ತ ಕಾಯ್ದೆಯ ಸೂಕ್ತ ಕಲಂಗಳನ್ನು ಸೇರಿಸಿ ದೋಷಾರೋಪ ಪಟ್ಟಿ ತಯಾರಿಸಿ ನ್ಯಾಯಾಲಯದಲ್ಲಿ ಸಲ್ಲಿಸುವುದು.

(ಬಿ) ಹುಡುಗಿ 18 ವರ್ಷ ಮೇಲ್ಪಟ್ಟು ಅಂದರೆ 19 ಇದ್ದು, ಹುಡುಗ 19, ಅಥವಾ 20 ವರ್ಷ ಇದ್ದಲ್ಲಿ, (ಅವರಾಗಿಯೇ ಮದುವೆ ಮಾಡಿಕೊಂಡು ಬಂದ ಪ್ರಕರಣ ಇದ್ದಾಗ) ವಿಚಾರಣೆ/ತನಿಖೆಯನ್ನು ಚುರುಕುಗೊಳಿಸಿದಾಗ ಯಾರಾದರೊಬ್ಬರು ಸಿಕ್ಕೇ ಸಿಗುತ್ತಾರೆ, ಆಗ ಅವರ ಮೇಲೆ ಕಲಂ: 10,11 ರ ಪ್ರಕಾರ ಪ್ರಕರಣ ದಾಖಲಿಸುವುದು. ಯಾರಾದಾರೊಬ್ಬರ ಸಹಾಯ, ಬೆಂಬಲ, ಕುಮ್ಮಕ್ಕು ಇಲ್ಲದೇ ಅವರೇ ಇಬ್ಬರೇ ಮದುವೆಯಾಗಲು 99% ಸಾಧ್ಯವಿಲ್ಲ. ಇದು ತನಿಖಾಧಿಕಾರಿಗಳು ತಮ್ಮ ಜ್ಞಾನ, ತಿಳುವಳಿಕೆ, ಬುದ್ಧಿವಂತಿಕೆ, ಚಾಣಾಕ್ಷ್ಯತನ ವಿವೇಚನೆ ಬಳಸಿ ತನಿಖೆ/ ವಿಚಾರಣೆ ಮಾಡಿದಾಗ ಮಾತ್ರ ಸಾಧ್ಯವಾಗುತ್ತದೆ.

**13. ಬಾಲ್ಯ ವಿವಾಹದ ತಯಾರಿ, ಸಿದ್ದತೆ ಅಥವಾ ಬಾಲ್ಯ ವಿವಾಹ ಹಿಂದೆ ನಡೆದಿದೆ, ನಾಳೆ/ಮುಂದೆ ನಡೆಯಲಿದೆ, ನಡೆದು ಹೋಗಿದೆ ಎಂದು ಗೊತ್ತಾದರೆ ಯಾರಿಗೆ ದೂರು ಕೊಡುವುದು ಮತ್ತು ಹೇಗೆ?**

(ಎ) ತಕ್ಷಣ ಸ್ಥಳೀಯ ನಿಮ್ಮ ಕೇತ್ರದ ವ್ಯಾಪ್ತಿಯಲ್ಲಿರುವ ಬಾಲ್ಯ ವಿವಾಹ ನಿಷೇಧಾಧಿಕಾರಿಗಳಿಗೆ, ನಿಮಗೆ ಗೊತ್ತಿರುವ ಎಲ್ಲಾ ವಿವರಗಳೊಂದಿಗೆ ಮಾಹಿತಿ ನೀಡುವುದು. (ದೂರುದಾರರ ಗೌಪ್ಯತೆ ಕಾಪಾಡಬೇಕು)

(ಬಿ) 1098 ಕ್ಕೆ ಕರೆ ಮಾಡಿ ವಿವರ ನೀಡುವುದು.
(ಸಿ) ತಕ್ಷಣ ಸ್ಥಳೀಯ ಪೊಲೀಸ್ ಠಾಣೆಗೆ ಮಾಹಿತಿ ಅಥವಾ/ ದೂರು ನೀಡುವುದು.
(ಡಿ) ನಿಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿನ ಯವುದೇ ಕೋರ್ಟ್ ಆವರಣದಲ್ಲಿರುವ ಕಾನೂನು ಸೇವಾ ಪ್ರಾಧಿಕಾರಕ್ಕೆ ಮಾಹಿತಿ ನೀಡಬಹುದು.
(ಇ) ನಿಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿನ ಯವುದೇ ಪ್ರಥಮ ದರ್ಜೆ ನ್ಯಾಯಾಲಯ ಅಥವಾ ಮೆಟ್ರೋಪಾಲಿಟನ್ ನ್ಯಾಯಾಲಯಕ್ಕೆ ಮಾಹಿತಿ ನೀಡಬಹುದು. (ಕಾಯ್ದೆಯ ಕಲಂ 13 (3) ರಡಿಯಲ್ಲಿ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಳ್ಳಲು ಅಧಿಕಾರವಿದೆ)
(ಎಫ್) ತುರ್ತು ಸಂದರ್ಭದಲ್ಲಿ ತಹಶೀಲ್ದಾರರಿಗೆ/ ಜಿಲ್ಲಾಧಿಕಾರಿಗಳಿಗೆ ಮಾಹಿತಿ ನೀಡಬೇಕು. ಯಾಕೆಂದರೆ ಅಕ್ಷಯ ತೃತೀಯ ಮುಂತಾದ ವಿಶೇಷ ಸಂದರ್ಭದಲ್ಲಿ ಅವರು ತಾಲೂಕು/ಜಿಲ್ಲೆಯ ಹಿರಿಯ ಬಾಲ್ಯ ವಿವಾಹ ನಿಷೇಧಾಧಿಕಾರಿಗಳು. ಜಿಲ್ಲಾಧಿಕಾರಿಗಳು ಬಾಲ್ಯವಿವಾಹ ನಿಷೇಧ ಅಧಿಕಾರಿಗಳಿಗೆ ಇರುವ ಅಥವಾ ಈ ಕಾಯ್ದೆಯಡಿ ಇರುವ ಎಲ್ಲಾ ಅಧಿಕಾರಗಳನ್ನು ಹೊಂದಿರುತ್ತಾರೆ.
(ಜಿ) ದೂರು ಅಥವಾ ಮಾಹಿತಿ ನೀಡುವಾಗ ಆದಷ್ಟು ಹೆಚ್ಚಿನ ವಿವರ ನೀಡಬೇಕು, ಹಲವು ಮೂಲಗಳಿಂದ ಇತರ ಅಧಿಕಾರಿಗಳಿಂದ ಸಂಗ್ರಹಿಸಿ ನೀಡಬೇಕು.
(ಎಚ್) ಮಗುವನ್ನು ರಕ್ಷಿಸಿ ಮಕ್ಕಳ ಕಲ್ಯಾಣ ಸಮಿತಿ ಮುಂದೆ ಹಾಜರುಪಡಿಸುವುದು.

**14. ಬಾಲ್ಯ ವಿವಾಹ ಪ್ರಕರಣ ದಾಖಲಿಸುವಾಗ ಯಾವ ಯಾವ ಕಾಯ್ದೆಯ ಯಾವೆಲ್ಲಾ ಕಲಂಗಳನ್ನು ಹಾಕಬೇಕು?**

(ಎ) ಬಾಲ್ಯ ವಿವಾಹ ನಿಷೇಧ ಕಾಯ್ದೆ 2006 ಯ ಕಲಂ 9,10,11 ಅಪ್ರಾಪ್ತರ ವಯಸ್ಸು, ಪ್ರಕರಣಕ್ಕನುಗುಣವಾಗಿ ಈ ಹಿಂದೆ ವಿವರಿಸಿದಂತೆ.
(ಬಿ) ಪ್ರಮುಖವಾಗಿ ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ 2015, ತಿದ್ದುಪಡಿ 2021 ರ ಕಲಂ 75 ನ್ನು ಕಡ್ಡಾಯವಾಗಿ ಹಾಕಲೇಬೇಕು. ಯಕೆಂದರೆ ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಮಾದರಿ ನಿಯಮ 2016, ತಿದ್ದುಪಡಿ 2022 ರ ಕಲಂ:55 ರಲ್ಲಿ ಬಾಲ್ಯ ವಿವಾಹವು ಮಗುವಿನ ಮೇಲಿನ ಕ್ರೌರ್ಯ ಎಂದು ಹೇಳಲಾಗಿದೆ. ಕಾಯ್ದೆಯಲ್ಲಿ ಮಕ್ಕಳ ಮೇಲಿನ ಕ್ರೌರ್ಯಕ್ಕೆ ಕಲಂ 75 ರಲ್ಲಿ 3 ವರ್ಷ ಜೈಲು ಶಿಕ್ಷೆ ಹಾಗೂ ಒಂದು ಲಕ್ಷ ದಂಡ ಅಥವಾ ಎರಡನ್ನೂ ವಿಧಿಸಲಾಗುತ್ತದೆ. ಆದ್ದರಿಂದ ಬಾಲ್ಯ ವಿವಾಹ ಪ್ರಕರಣದಲ್ಲಿ ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ 2015, ತಿದ್ದುಪಡಿ 2021 ರ ಕಲಂ 75 ನ್ನು ಕಡ್ಡಾಯವಾಗಿ ಹಾಕಲೇಬೇಕು.
(ಸಿ) ಮದುವೆಯಾಗಿ ಕನಿಷ್ಟ ಒಂದು ದಿನ ಕಳೆದಿದ್ದು, ಒಟ್ಟಿಗೆ ವಾಸ ಮಾಡಿದ್ದು, ದೈಹಿಕ ಸಂಪರ್ಕ ಮಾಡಿರುವುದು ವಿಚಾರಣೆ/ತನಿಖೆಯಲ್ಲಿ ಕಂಡು ಬಂದರೆ ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯ್ದೆ 2012, ತಿದ್ದುಪಡಿ 2019 ರ ಕಲಂ 4, 6, ಇತರ ಯಾವುದೆಲ್ಲ ಅನ್ವಯಿಸುತ್ತದೆ ಅದನ್ನು ಕಡ್ಡಾಯವಾಗಿ ಹಾಕಲೇಬೇಕು/ಸೇರಿಸಬೇಕು. (ಇದು ಮಗುವಿನ ವಯಸ್ಸು, ಪ್ರಕರಣದನ್ವಯ ವ್ಯತ್ಯಾಸವಿರುತ್ತದೆ, ಅದರಂತೆ ಕ್ರಮ ಕೈಗೊಳ್ಳುವುದು)
(ಡಿ) ಮದುವೆಯಾಗಿ ಕನಿಷ್ಟ ಒಂದು ದಿನ ಕಳೆದಿದ್ದು, ಒಟ್ಟಿಗೆ ವಾಸ ಮಾಡಿದ್ದು, ದೈಹಿಕ ಸಂಪರ್ಕ ಮಾಡಿರುವುದು ವಿಚಾರಣೆ/ತನಿಖೆಯಲ್ಲಿ ಕಂಡು ಬಂದರೆ ಬಿ.ಎನ್.ಎಸ್ ಕಲಂ:64(1), 64(2), ಮಗು ಹದಿನಾರು ವರ್ಷದೊಳಗಿದ್ದಲ್ಲಿ 65(1) ಹನ್ನೆರಡು ವರ್ಷದೊಳಗಿದ್ದಲಿ 65(2) ಯನ್ನು ಹಾಕಬೇಕು.
(ಇ) 18 ಒಳಗಿನ ಬಾಲಕಿಯನ್ನು ಅಥವಾ ಬಾಲಕನ್ನು ಮದುವೆ ಮಾಡಿಸಿ ಒಂದು ಊರಿನಿಂದ ಇನ್ನೊಂದು ಊರಿಗೆ ಕರೆದುಕೊಂಡು ಹೋಗಿ ಕೆಲಸಕ್ಕೆ ನೇಮಿಸಿ ದುಡಿಸಿಕೊಂಡಲ್ಲಿ, ಮಾಲೀಕರ ಮೇಲೆ **ಮಕ್ಕಳು ಮತ್ತು ಕಿಶೋರ ಕಾರ್ಮಿಕ ಪದ್ಧತಿ (ನಿಷೇಧ ಮತ್ತು ನಿಯಂತ್ರಣ)ಕಾಯ್ದೆ–1986 (2016ರ ತಿದ್ದುಪಡಿ) ಯ ಕಲಂ 14 (1) ಅಥವಾ 14 (1)(ಎ) ಹಾಕಬೇಕು, ಪ್ರಕರಣಕ್ಕನುಗುಣವಾಗಿ** ಸಂರ್ಭನುಸಾರ ದಾಖಲಿಸುವುದು.
(ಎಫ್) ಮದುವೆಯಾದ ಮೇಲೆ ಒಂದು ಊರಿಂದ ಇನ್ನೊಂದು ಊರಿಗೆ ಕಾನೂನುಬಾಹಿರವಾಗಿ, ಯಾವುದೇ ನಿಯಮ ಅಥವಾ ಕಾನೂನುಬದ್ದ ಒಪ್ಪಂದ ಇಲ್ಲದೆ, ಬೇರೆ ಊರಿಗೆ ಕರೆದುಕೊಂಡು ಹೋದಲ್ಲಿ ಅಲ್ಲಿ ಅನೈತಿಕ ಸಾಗಾಣಿಕೆ ಅಥವಾ ಮಾರಾಟದ ಸಂಶಯ ಕಂಡುಬಂದಲ್ಲಿ ಬಿ.ಎನ್.ಎಸ್ ಕಲಂ: 143(4) ನ್ನು ಹಾಕಬೇಕು.
(ಜಿ) ಮದುವೆಯಾದ ಮೇಲೆ ಯಾವುದಾದರೂ ದುಡಿಮೆಗೆ ಸೇರಿಸಿದಲ್ಲಿ ಅಲ್ಲಿ ಕಾನೂನಿನ್ವಯ ಕನಿಷ್ಟ ಕೂಲಿ ವೇತನ ನೀಡದಿದ್ದಲ್ಲಿ ಕಾರ್ಮಿಕ ಇಲಾಖೆಗೆ ಸೂಚಿಸಿ ಕನಿಷ್ಟ ಕೂಲಿ ವೇತನ ಕಾಯ್ದೆಯಡಿಯಲ್ಲಿ ಕನಿಷ್ಟ ಕೂಲಿ ವೇತನ ಕೊಡಿಸಬೇಕು.

(ಎಚ್) ಮದುವೆಯಾದ ನಂತರ ಜೀತಕ್ಕೆ ಸೇರಿಸಿದ್ದರೆ ಜೀತ ಪದ್ಧತಿ ನಿರ್ಮೂಲನಾ ಕಾಯ್ದೆ–1976 ರ ಪ್ರಕಾರ ಕ್ರಮ ವಹಿಸುವುದು. ಕಂದಾಯ ಇಲಾಖೆಯ ಸಹಾಯ ಪಡೆದು, ತಹಶೀಲ್ದಾರರು, ಉಪವಿಭಾಗಾಧಿಕಾರಿಗಳ ಗಮನಕ್ಕೆ ತಂದು ಮುಂದಿನ ಕ್ರಮ ವಹಿಸುವುದು.

**15. ಬಾಲ್ಯವಿವಾಹಕ್ಕೆ ಸಿದ್ಧತೆ, ನಿಶ್ಚಿತಾರ್ಥ, ಮಾತುಕತೆ ಮಾಡುತ್ತಿದ್ದಾರೆ ಎಂಬ ಮಾಹಿತಿ ದೂರು ಬಂದಾಗ ಕೈಗೊಳ್ಳಬೇಕಾದ ಕ್ರಮಗಳು ಯಾವುವು?**

1. ಬಾಲ್ಯವಿವಾಹ ತಡೆಗಾಗಿ ಸ್ಥಳೀಯ ಆ ವ್ಯಾಪ್ತಿಯ ಎಲ್ಲಾ ಬಾಲ್ಯ ವಿವಾಹ ನಿಷೇಧಾಧಿಕಾರಿಗಳು ಪರಸ್ಪರರಿಗೆ ಮಾಹಿತಿಯನ್ನು ಶೀಘ್ರವಾಗಿ ಹಂಚಿಕೊಂಡು ಅವರವರ ಇಲಾಖೆಗಳ ಸಿಬ್ಬಂದಿಗಳ ಮುಖಾಂತರ ಬಂದ ಮಾಹಿತಿಯನ್ನು ವಿವಿಧ ಮೂಲಗಳಿಂದ ಖಚಿತಪಡಿಸಿಕೊಳ್ಳಬೇಕು. (ಇಬ್ಬರಲ್ಲಿ ಒಬ್ಬರು/ ಅಥವಾ ಇಬ್ಬರೂ ಕಾನೂನು ನಿಯಮಾನುಸಾರ ಅಪ್ರಾಪ್ತರು ಎಂದು ಖಚಿತ ಪಡಿಸಿಕೊಳ್ಳಿ. ಆದರೆ ಮದುವೆಗೆ ಮುಂಚಿತವಾಗಿ ಕ್ರಮ ಕೈಗೊಳ್ಳುವ ಕಾರಣ ಒಂದು ವೇಳೆ ಸ್ಪಷ್ಟ ಮಾಹಿತಿ ಲಭ್ಯವಾಗದಿದ್ದಲ್ಲಿ ನೇರ ಬೇಟಿ ಮಾಡಿ ದಾಖಲೆ ಪರಿಶೀಲಿಸಿ ಅರಿವು ಮೂಡಿಸುವುದು.)

2. ಶೀಘ್ರವಾಗಿ ಆಯಾ ಕ್ಷೇತ್ರ ವ್ಯಾಪ್ತಿಯ ಬಾಲ್ಯ ವಿವಾಹ ನಿಷೇಧಾಧಿಕಾರಿಗಳು, ಹಾಗೂ ಸ್ಥಳೀಯ ಗ್ರಾಮ ಪಂಚಾಯತಿ ಪ್ರತಿನಿಧಿಗಳು, ಸ್ಥಳೀಯ ಅಧಿಕಾರಿಗಳು, ಪೊಲೀಸ್ ಸಿಬ್ಬಂದಿ ಒಟ್ಟಾಗಿ ಸೇರಿ ಬಾಲ್ಯವಿವಾಹ ನಡೆಸಲು ಸಿದ್ಧತೆ ಮಾಡುತ್ತಿರುವ ಅಥವಾ ನಿಶ್ಚಿತಾರ್ಥ, ಮಾತುಕತೆ ನಡೆಸುತ್ತಿರುವ ಕುಟುಂಬಕ್ಕೆ ಭೇಟಿ ನೀಡಿ, ವಾಸ್ತವಾಂಶಗಳನ್ನು ಕಲೆ ಹಾಕಿ ಕುಟುಂಬದ ಸದಸ್ಯರು, ಬಾಲಕಿ / ಬಾಲಕರಿಗೆ ಜಾಗೃತಿ ಮೂಡಿಸಿ, ಬಾಲ್ಯವಿವಾಹ ಆಗದಂತೆ ಮನವೊಲಿಸುವುದು. ಇದರೊಂದಿಗೆ ತಾವು ಬಾಲ್ಯವಿವಾಹ ನಡೆಸುವುದಿಲ್ಲ ಎಂದು ರೂ. 100 ರ ಬಾಂಡ್ ಪತ್ರದಲ್ಲಿ ಕರಾರು/ಮುಚ್ಚಳಿಕೆ ಪತ್ರ ಬರೆಸಿಕೊಳ್ಳುವುದು.

3. ಕರಾರು ಪತ್ರ ಬರೆಸಿಕೊಳ್ಳುವಾಗ ಎರಡೂ ಕುಟುಂಬಗಳನ್ನು ಮಾತನಾಡಿಸಿ, (ವಿವಿಧ ತಂತ್ರ ಜ್ಞಾನ ಬಳಸಿ) ಕರಾರು ಪತ್ರದ ಪ್ರಕಾರ ಕಾನೂನು ಪ್ರಕಾರ ವಯಸ್ಸಾದ ಮೇಲೆಯೇ ಇವರು ಮದುವೆ ಮಾಡುತ್ತಾರೆ, ಕದ್ದು ಮುಚ್ಚಿ ಮದುವೆ ಮಾಡವುದಿಲ್ಲ ಎಂಬುದು ಖಾತ್ರಿಯಾದರೆ ಬಾಲಕಿ/ ಬಾಲಕ (ಅಪ್ರಾಪ್ತರಿದ್ದವರನ್ನು) ಅವರ ಮನೆಯಲ್ಲಿಯೇ ಇರಲು ಅವಕಾಶ ನೀಡಬಹುದು. ಸಂಶಯವಿದ್ದು, ಕದ್ದು ಮುಚ್ಚಿ ಮದುವೆ ಮಾಡಬಹುದು ಎಂಬ ಸಂಶಯವಿದ್ದಲ್ಲಿ ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ 2015, ತಿದ್ದುಪಡಿ 2021ರ ಪ್ರಕಾರ ಹಾಗೂ ನಿಯಮಾನುಸಾರ ನಮೂನೆ 17 ರಲ್ಲಿ ಮಕ್ಕಳ ಕಲ್ಯಾಣ ಸಮಿತಿ ಮುಂದೆ ಹಾಜರುಪಡಿಸಬೇಕು. ಮಕ್ಕಳ ಕಲ್ಯಾಣ ಸಮಿತಿಯವರು ತಕ್ಷಣ ಸಾಮಾಜಿಕ ತನಿಖಾ ವರದಿ ತರಿಸಬೇಕು ಹಾಗೂ ಮಗುವಿಗೆ ಸೂಕ್ತವಾಗಿರುವ ತಮ್ಮ ವ್ಯಾಪ್ತಿಯ ಪೋಷಣೆ ಮತ್ತು ರಕ್ಷಣಾ ಕೇಂದ್ರದಲ್ಲಿ ತಾತ್ಕಾಲಿಕ ಪೋಷಣೆ ಮತ್ತು ರಕ್ಷಣೆಗಾಗಿ ನಮೂನೆ 18 ರಲ್ಲಿ ಆದೇಶ ನೀಡಬೇಕು.

4. ಮಕ್ಕಳ ಕಲ್ಯಾಣ ಸಮಿತಿಯವರು ಬಾಲಕಿಯನ್ನು ಬಾಲ್ಯ ವಿವಾಹದ ಪರಿಣಾಮದ ಬಗ್ಗೆ ಕನಿಷ್ಟ 3 ರಿಂದ 4 ಸಲ ಆಪ್ತ ಸಮಾಲೋಚನೆ ಮಾಡುವ ಮುಖಾಂತರ, 18 ವರ್ಷ ಆದ ಮೇಲೆಯೇ ನಾನು ಮದುವೆ ಆಗುತ್ತೇನೆ ಎಂಬ ತೀರ್ಮಾನವನ್ನು ಅವಳೇ ಸ್ವೀಕರಿಸುವಂತೆ ಮಾಡಬೇಕು. ನಂತರ ಕುಟುಂಬದವರನ್ನು ಕರೆಸಿ ಪ್ರತ್ಯೇಕ ಕರಾರು ಪತ್ರ ಬರೆಸಿಕೊಂಡು ಇಬ್ಬರ ಸಾಕ್ಷಿ ಹಾಕಿಸಿ ಕುಟುಂಬಕ್ಕೆ ಬಿಡುಗಡೆ ಮಾಡಬಹುದು. ಮನೆಗೆ ಕಳುಹಿಸಿದರೆ ಕದ್ದು ಮುಚ್ಚಿ ಮದುವೆ ಮಾಡಬಹುದು ಎಂದು ಸಂಶಯ ಇದ್ದಲ್ಲಿ ಮಾತ್ರ ಕೆಲವು ದಿನಗಳ ಕಾಲ ಪೋಷಣೆ ಮತ್ತು ರಕ್ಷಣಾ ಕೇಂದ್ರದಲ್ಲಿ ಪೋಷಣೆ ಮತ್ತು ರಕ್ಷಣೆಗಾಗಿ ತಾತ್ಕಲಿಕವಾಗಿ ಇರಿಸಬಹುದು. ಮಕ್ಕಳನ್ನು ಮನೆಗೆ ಕಳುಹಿಸಲು ಸಾಮಾಜಿಕ ತನಿಖಾ ವರದಿ ಬರಲೇ ಬೇಕೆಂಬುದು ಕಡ್ಡಾಯವಲ್ಲ, ಮಗು ಮನೆಗೆ ಹೋದ ಮೇಲೆಯೂ ಮಾಡಬಹುದು/ಮಾಡಬೇಕು, ಪ್ರಕರಣ ಮುಕ್ತಾಯಗೊಳಿಸಲು ಸಾಮಾಜಿಕ ತನಿಖಾ ವರದಿ ಕಡ್ಡಾಯ ಅದರ ಆಧಾರದ ಮೇಲೆ ವೈಯಕ್ತಿಕ ಪೋಷಣಾ ಯೋಜನೆ ತಯಾರಿಸಿ ಅವರವರ ಕುಟುಂಬದಲ್ಲಿಯೇ ಅನುಷ್ಠಾನ ಮಾಡಲು ಮನೆ ಬೇಟಿ ಮಾಡಿದಾಗ ಮಾರ್ಗದರ್ಶನ ಮಾಡಿ ಬರಬೇಕು.

5. ಕರಾರು ಪತ್ರವನ್ನು 3 ಪ್ರತಿ ಝೆರಾಕ್ಸ್ ಮಾಡಿಸಿ, ಅದಕ್ಕೆ ವಯಸ್ಸಿನ ಧೃಡೀಕರಣ ಪತ್ರವನ್ನು ಲಗತ್ತಿಸಬೇಕು. ಒಂದು ಪ್ರತಿಯನ್ನು ಅಪ್ರಾಪ್ತ ಮಗುವಿನ ಕುಟುಂಬಕ್ಕೆ ನೀಡಬೇಕು, ಇನ್ನೊಂದು ಪ್ರತಿಯನ್ನು ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ನೀಡಬೇಕು, ಮತ್ತೊಂದು ಪ್ರತಿಯನ್ನು ಸ್ಥಳೀಯ ಮಗುವಿನ ಮನೆ ಹತ್ತಿರದ ಬಾಲ್ಯ ವಿವಾಹ ನಿಷೇಧಾಧಿಕಾರಿಗಳ

ಕಚೇರಿಯಲ್ಲಿಡಬೇಕು. **ಮೂಲ ಪ್ರತಿಯನ್ನು ಆಯಾ ತಾಲೂಕಿನ ಶಿಶು ಅಭಿವೃದ್ಧಿ ಯೋಜನಾಧಾಕಾರಿಗಳಿಗೆ (ತಾಲೂಕು ಮಕ್ಕಳ ರಕ್ಷಣಾಧಿಕಾರಿಗಳಿಗೆ ಸಲ್ಲಿಸಬೇಕು.**

6. ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಆ ಬಾಲಕಿ/ಬಾಲಕನ ಮನೆಯ ಹತ್ತಿರದ ನಾಲ್ಕು ಜನ ಬಾಲ್ಯ ವಿವಾಹ ನಿಷೇಧಾಧಿಕಾರಿಗಳಿಗೆ ಆ ಕರಾರು ಪತ್ರದಂತೆ ಆ ಬಾಲಕಿ/ಬಾಲಕನಿಗೆ ಮುಂದೆ 18/21 ವರ್ಷ ಪೂರ್ಣವಾಗುವವರೆಗೆ ಮದುವೆ ಮಾಡದಂತೆ ಪ್ರತಿ ತಿಂಗಳು ಮನೆ ಭೇಟಿ ಮಾಡಿ ಮದುವೆ ಮಾಡದಿರುವಂತೆ ನಾಲ್ಕು ಬಾಲ್ಯ ವಿವಾಹ ನಿಷೇಧಾಧಿಕಾರಿಗಳು ಪ್ರತಿ ತಿಂಗಳು ಸರದಿಯಂತೆ ಅರಿವು ಮೂಡಿಸುವುದು. ಅದರ ವಿವರವನ್ನು ಅವರುಗಳು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿಗೆ ಪ್ರತಿ ತಿಂಗಳು 24 ನೇ ತಾರೀಕಿನೊಳಗಾಗಿ ಕಳುಹಿಸಬೇಕು. ಅದನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಒಟ್ಟಾಗಿ ಎಲ್ಲಾ ಪ್ರಕರಣವನ್ನು ಕ್ರೋಡೀಕರಿಸಿ ಮಾನ್ಯ ಜಿಲ್ಲಾಧಿಕಾರಿಗಳವರಿಗೆ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಮೂಲಕ ಪ್ರತಿ ತಿಂಗಳು 30 ನೇ ತಾರೀಕಿನೊಳಗಾಗಿ ಸಲ್ಲಿಸಬೇಕು.

7. ಶಾಲೆ / ಕಾಲೇಜುಗಳಲ್ಲಿ ಓದುತ್ತಿರುವ ಮಕ್ಕಳಾಗಿದ್ದಲ್ಲಿ ಅವರಿಗೆ ಶಿಕ್ಷಣ ಮುಂದುವರೆಸಲು ಸಲಹೆ ನೀಡಬೇಕು. ಹಾಗೆ ಶಾಲೆ/ಕಾಲೇಜಿಗೆ ಹೋಗಿಬರಲು ಏನಾದರೂ ತೊಡಕಿದ್ದಲ್ಲಿ ರಕ್ಷಣೆ ಮತ್ತು ಸಹಕಾರವನ್ನು ಒದಗಿಸುವಂತೆ ಸ್ಥಳೀಯ ಆಡಳಿತದೊಂದಿಗೆ ವ್ಯವಸ್ಥೆ ಮಾಡಬೇಕು.

8. ಬಾಲ್ಯವಿವಾಹ ನಡೆಸುವುದಿಲ್ಲವೆಂದು ಸಂಬಂಧಿಸಿದವರು ಮುಚ್ಚಳಿಕೆ ಪತ್ರ ಕೊಟ್ಟಮೇಲೂ ವಿವಾಹವನ್ನು ಜರುಗಿಸಿದ್ದೇ ಆದಲ್ಲಿ, ಅಂತಹವರು ಕರಾರು ಬದ್ಧರಾಗಿಲ್ಲ ಎಂದು ಅಂತಹವರ ಮೇಲೆ ಮೊಕದ್ದಮೆ ಹೂಡಬಹುದು.

9. ಮುಚ್ಚಳಿಕೆ ಪತ್ರ ಕೊಟ್ಟಮೇಲೂ ಕದ್ದುಮುಚ್ಚಿ ಮದುವೆ ಮಾಡಬಹುದೆಂಬ ಸಂಶಯ ಇದ್ದಲ್ಲಿ ಬಾಲಕಿ / ಬಾಲಕನನ್ನು ಮಕ್ಕಳ ಕಲ್ಯಾಣ ಸಮಿತಿಯ ಮುಖಾಂತರ ತಾತ್ಕಾಲಿಕವಾಗಿ ಬಾಲಮಂದಿರಕ್ಕೆ ದಾಖಲು ಮಾಡುವುದು.

10. ಬಾಲಕ/ಬಾಲಕಿಗೆ ಆಪ್ತಸಮಾಲೋಚನೆ, ಆರೋಗ್ಯ ರಕ್ಷಣೆ ಹಾಗೂ ಶಿಕ್ಷಣದೊಂದಿಗೆ, ಜೀವನಕೌಶಲ್ಯದ ಅಂಶಗಳನ್ನು ಒದಗಿಸಿ, ಆವಶ್ಯಕತೆಯಿದ್ದಲ್ಲಿ ವೃತ್ತಿ ಶಿಕ್ಷಣದ ಮಾಹಿತಿ ಒದಗಿಸಿ ತರಬೇತಿಗೆ ಅವಕಾಶಗಳನ್ನು ಮಾಡಿಕೊಡಬೇಕು. ಈ ಮಕ್ಕಳು ಮಧ್ಯದಲ್ಲೇ ಶಾಲೆ ತೊರೆದವರಾದರೆ 7ನೇ ತರಗತಿ ಮತ್ತು 10ನೇ ತರಗತಿಗೆ (ಸಾಧ್ಯವಾದಲ್ಲಿ ಪಿ.ಯು.ಸಿ ಅಥವಾ ಅದಕ್ಕೆ ತತ್ಸಮಾನವಾದ ಅರ್ಹತೆಗಾಗಿ) ನೇರವಾಗಿ ಪರೀಕ್ಷೆಗೆ ಹಾಜರಾಗಲು ಬೇಕಾದ ಎಲ್ಲ ವ್ಯವಸ್ಥೆಗಳನ್ನು ಮಾಡಿಕೊಡಬೇಕು.

## 16. ಬಾಲ್ಯವಿವಾಹದ ಹಿಂದಿನ ದಿನ ಅಥವಾ ಮದುವೆಯ ದಿನ ಶಾಸ್ತ್ರ ಮುಗಿಸುವ ಮುನ್ನ ಮಾಹಿತಿ / ದೂರು ಬಂದಾಗ ರಕ್ಷಣಾ ಕ್ರಮ ಯಾವುವು?

1. ದೂರು / ಮಾಹಿತಿ ಸ್ವೀಕಾರ – ಸ್ಥಳ, ವಿಳಾಸ, ಬಾಲಕ /ಬಾಲಕಿಯ ಹೆಸರು ಮತ್ತು ಸಂಬಂಧಿಗಳ ಮಾಹಿತಿ ಸಂಗ್ರಹಿಸುವುದು.

2. ತಕ್ಷಣ ಸ್ಥಳೀಯ ಸಂಪರ್ಕ ಜಾಲ ಮತ್ತು ಸ್ಥಳೀಯ ಎಲ್ಲಾ ಬಾಲ್ಯವಿವಾಹ ನಿಷೇಧ ಅಧಿಕಾರಿಗಳೊಂದಿಗೆ ತಕ್ಷಣ ಸಂಪರ್ಕ ಬೆಳೆಸಿ (30 ನಿಮಿಷದ ಒಳಗಾಗಿ) ಘಟನೆ ಸತ್ಯಾಸತ್ಯತೆ ಅರಿಯುವುದು.

3. ಸ್ಥಳೀಯ ಅಧಿಕಾರಿಗಳ ತಂಡ, ಒಬ್ಬರು ಬಾಲ್ಯವಿವಾಹ ನಿಷೇಧಾಧಿಕಾರಿ, ಪೊಲೀಸ್ ಸಿಬ್ಬಂದಿ, (ಕನಿಷ್ಠ ಒಬ್ಬರಾದರೂ ಮಹಿಳಾ ಸಿಬ್ಬಂದಿ ಕಡ್ಡಾಯ). ತಕ್ಷಣ ಸ್ಥಳಕ್ಕೆ ತೆರಳಬೇಕು.

4. ಸ್ಥಳಕ್ಕೆ ತಲುಪಿದಾಗ ತಂಡದ ವಾಹನವನ್ನು ದೂರ ನಿಲ್ಲಿಸಿ ಯಾರಿಗೂ ಅನುಮಾನ ಬರದಂತೆ ಮತ್ತು ಯಾರೊಂದಿಗೂ ಅಹಿತಕರವಾಗಿ ನಡೆದುಕೊಳ್ಳದೆ, ದಾಳಿ (attack) ಮಾಡದೇ ಸೌಜನ್ಯದಿಂದ ನೇರವಾಗಿ ಮದುವೆ ನಡೆಯುತ್ತಿರುವ ಸ್ಥಳಕ್ಕೆ ಹೋಗಿ ಬಾಲಕ / ಬಾಲಕಿಯ ತಂದೆ–ತಾಯಿ / ಇಬ್ಬರು ಸಂಬಂಧಿಕರನ್ನು ಕರೆಸಿ ವಧು/ವರರ ವಯಸ್ಸಿನ ದಾಖಲೆ ಕೇಳುವುದು. **ಮೇಲ್ನೋಟಕ್ಕೆ ಬಾಲಕ/ಬಾಲಕಿ ಅಪ್ರಾಪ್ತ ವಯಸ್ಸಿನವರು ಆದರೆ ಅವರಲ್ಲಿ ಯಾವುದೇ ದಾಖಲೆ ಸಿಗದಿದ್ದಲ್ಲಿ, ಆದಷ್ಟು ಬೇಗನೆ ಸಂಬಂಧಿಸಿದ ಅಧಿಕಾರಿಗಳಿಗೆ ದಾಖಲೆಗಳನ್ನು ಒದಗಿಸಲು ಸೂಚಿಸಬೇಕು.**

5. ವಯಸ್ಸಿಗೆ ಸಂಬಂಧಿಸಿ ದಾಖಲೆಗಳು ಸಮರ್ಪಕವಾಗಿಲ್ಲದಿದ್ದಲ್ಲಿ ಹಾಗೂ ತಂಡದ ಸದಸ್ಯರ ಗಮನಿಸುವಿಕೆಯಲ್ಲಿ ಬಾಲಕ /ಬಾಲಕಿ ಅಪ್ರಾಪ್ತರು ಎಂದು ಕಂಡುಬಂದಲ್ಲಿ ಕುಟುಂಬದವರನ್ನು ಪ್ರತ್ಯೇಕವಾಗಿ ಕರೆದು ಮನವೊಲಿಸಿ, ಮಾಹಿತಿ

ಹಂಚಿಕೊಂಡು ಮದುವೆಯನ್ನು ನಿಲ್ಲಿಸಲು ಒಪ್ಪಿಸುವುದು ಹಾಗೂ ಈ ಹಿಂದೆ ತಿಳಿಸಿದಂತೆ ಮುಚ್ಚಳಿಕೆ ಪತ್ರ ಬರೆಸಿಕೊಳ್ಳಬೇಕು. (ಗೊಂದಲ/ ಗಲಾಟೆಯಾಗಬಹುದೆಂದು ಸಂಶಯವಿದ್ದಲ್ಲಿ ಸ್ಥಳಿಯ ಯಾವುದಾದರೂ ಸರಕಾರಿ ಕಚೇರಿಗೆ ಕಟುಂಬದ ಅಗತ್ಯ ಸದಸ್ಯರನ್ನು ಮಾತ್ರ ಕರೆಸಿ ಅಲ್ಲಿ ಅಥವಾ ಮಕ್ಕಳ ಕಲ್ಯಾಣ ಸಮಿತಿಗೆ ಕರೆಸಿ ಕರಾರು ಪತ್ರ ಬರೆಸಿಕೊಳ್ಳಬಹುದು.

6. ಬಾಲಕಿ/ಬಾಲಕನನ್ನು ರಕ್ಷಿಸಿ **'ಮಕ್ಕಳ ಕಲ್ಯಾಣ ಸಮಿತಿ'** ಮುಂದೆ ಹಾಜರುಪಡಿಸಿ ಬಾಲಮಂದಿರಗಳಲ್ಲಿ ದಾಖಲಿಸಿ, ಸೂಕ್ತ ಆಪ್ತ ಸಮಾಲೋಚನಾ ಕ್ರಮ ಕೈಗೊಳ್ಳುವುದು. ಕುಟುಂಬದವರು ಬಂದು ಸೂಕ್ತ ದಾಖಲೆಗಳನ್ನು ಒದಗಿಸಿ, ಬಾಲ್ಯಾವಸ್ಥೆ ದಾಟುವವರೆಗೆ ಮದುವೆ ಮಾಡುವುದಿಲ್ಲ ಎಂದು ಕರಾರು ಪತ್ರದ ಖಾತ್ರಿ ಆದಮೇಲೆ (ಕದ್ದುಮುಚ್ಚಿ ಅಥವಾ ಬೇರೆ ಕಡೆಗೆ ಹೋಗಿ ಮದುವೆ ಮಾಡದಿರುವುದನ್ನು ಖಾತ್ರ ಪಡಿಸಿಕೊಂಡು) ಐ.ಸಿ.ಪಿ.ಯ ಆಧಾರದ ಮೇಲೆ ಹಾಗೂ ಅನುಸರಣೆಗೆ ಸ್ಥಳೀಯ ಬಾಲ್ಯವಿವಾಹ ನಿಷೇಧಾಧಿಕಾರಿಗಳನ್ನು ನೇಮಿಸಿ ಮಕ್ಕಳನ್ನು ಕುಟುಂಬದವರೊಡನೆ ಮನೆಗೆ ಕಳುಹಿಸಿಕೊಡುವುದು.

7. ಬಾಲ್ಯವಿವಾಹ ನಡೆಸುತ್ತಿರುವ ಸ್ಥಳದಲ್ಲಿ ಪರಿಸ್ಥಿತಿ ಕೈ ಮೀರಿದಲ್ಲಿ ಪೊಲೀಸ್ ಅಧಿಕಾರಿಗಳ ಸಹಾಯ ಪಡೆದು ಬಾಲಕಿ / ಬಾಲಕನನ್ನು ರಕ್ಷಿಸಿ ಕರೆತಂದು ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರುಪಡಿಸುವುದು. ಅಥವಾ ಗಂಭೀರ ಸಂದರ್ಭಗಳು ಇದ್ದಲ್ಲಿ ಸರ್ಕಾರಿ ವಕೀಲರು ಅಥವಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ವಕೀಲ ಸಿಬ್ಬಂದಿಯವರ ಸಹಾಯ ಪಡೆದು ಬಾಲ್ಯವಿವಾಹ ನಿಷೇಧ ಕಾಯ್ದೆ – 2006ರ ಸೆಕ್ಷನ್ –13 (1) ಸ್ಥಳೀಯ ಕೋರ್ಟ್‌ನಲ್ಲಿ ತಡೆಯಾಜ್ಞೆಗೆ ಅರ್ಜಿ ಸಲ್ಲಿಸಿ ನ್ಯಾಯಾಧೀಶರಿಂದ ತಡೆಯಾಜ್ಞೆ ಆದೇಶವನ್ನು ಪಡೆದು ಪೊಲೀಸ್‌ರ ಸಹಾಯ ಪಡೆದು ಮದುವೆಯನ್ನು ನಿಲ್ಲಿಸುವುದು.

8. ಬಾಲ್ಯವಿವಾಹದ ಪ್ರಕರಣವನ್ನು ಪೊಲೀಸರು ಕಾನೂನಿಗನುಗುಣವಾಗಿ ದೂರು /ಎಫ್.ಐ.ಆರ್. ದಾಖಲಿಸುವಾಗ ಇತರ ಮಾಹಿತಿಗಳೊಡನೆ ಮದುವೆ ಮಂಟಪ, ಶಾಮಿಯಾನ, ಅಡುಗೆಯವರು, ಫೋಟೋ / ವಿಡಿಯೋ ದಾಖಲು ಮಾಡುವವರು, ಮದುವೆಗೆ ಬಂದವರು ಮೊದಲಾದವರ ಹೇಳಿಕೆಯನ್ನು ಕ್ರಮಬದ್ಧ ರೀತಿಯಲ್ಲಿ ದಾಖಲಿಸಿಕೊಳ್ಳುವುದು.

9. ಮಕ್ಕಳ ಕಲ್ಯಾಣ ಸಮಿತಿಯು ಸೂಕ್ತ ಸಮಯದಲ್ಲಿ ಬಾಲಕಿಗೆ / ಬಾಲಕನಿಗೆ ಯಾವುದೇ ಮಾನಸಿಕ ತೊಂದರೆಯಾಗದಂತೆ ತಕ್ಷಣ ಧೈರ್ಯ ತುಂಬಿ ಅವರ (ಮಕ್ಕಳ) ತಪ್ಪಿಲ್ಲ ಎಂಬ ಆಪ್ತ ಸಮಾಲೋಚನೆ ನಡೆಸಲು ವ್ಯವಸ್ಥೆ ಮಾಡುವುದು.

10. ಈ ಎಲ್ಲಾ ಪ್ರಕಿಯೆಯಲ್ಲಿ ಮಕ್ಕಳ ಸ್ನೇಹಿ ಆಡಳಿತ ಕ್ರಮ ವಹಿಸುವುದು ಕಡ್ಡಾಯ.

**17. ಬಾಲ್ಯ ವಿವಾಹವಾಗಿ ತುಂಬಾ ದಿನಗಳು ಆದ ಮೇಲೆ ಗೊತ್ತಾದಲ್ಲಿ ಪ್ರಕರಣ ದಾಖಲಿಸುವ ಕ್ರಮಗಳು ಯಾವುವು?**

1. ಮಾಹಿತಿಯ ಸ್ಪಷ್ಟತೆ ಹಾಗೂ ಸತ್ಯಾ ಸತ್ಯತೆಯನ್ನು ಖಾತ್ರಿಪಡಿಸಿಕೊಳ್ಳಿ.

2. ಸ್ಥಳೀಯ ತಂಡ ಮನೆ ಬೇಟಿ ಮಾಡಿ ಬಾಲಕಿಯಾಗಿದ್ದಲ್ಲಿ ಅವಳು 18 ವರ್ಷದೊಳಗೆ ಇದ್ದಲ್ಲಿ ಕುಟುಂಬದವರನ್ನು ಆಪ್ತ ಸಮಾಲೋಚನೆ ನಡೆಸಿ, ಕಾನೂನು, ನಿಯಮ, ಸಾಧಕ ಭಾಧಕಗಳನ್ನೆಲ್ಲಾ ತಿಳಿಸಿ ಬಾಲಕಿಯನ್ನು ರಕ್ಷಸಿ ಮಕ್ಕಳ ಕಲ್ಯಾಣ ಸಮಿತಿಗೆ ಹಾಜರುಪಡಿಸಬೇಕು.

3. ಎಲ್ಲಾ ಮಾಹಿತಿ ಪ್ರಮುಖವಾಗಿ ವಯಸ್ಸಿನ ದಾಖಲೆ ಹಾಗೂ ಇತರ ವಿವರ ಸಂಗ್ರಹಿಸಿ ಸ್ಥಳೀಯ ಬಾಲ್ಯ ವಿವಾಹ ನಿಷೇಧಾಧಿಕಾರಿಗಳೇ ಮದುವೆ ನಡೆದ ವ್ಯಾಪ್ತಿಯ ಪೊಲೀಸ್ ಠಾಣೆಗೆ ದೂರು ನೀಡಬೇಕು ಅಥವಾ ಬಾಲ್ಯ ವಿವಾಹ ನಿಷೇಧ (ಕರ್ನಾಟಕ) ತಿದ್ದುಪಡಿ ಕಾಯ್ದೆ 2016 ರ, 15 ಎ ಯ ಅವಕಾಶವನ್ನು ಬಳಸಿಕೊಂಡು ಪೊಲೀಸ್‌ನವರೇ ತಾವೇ ಸ್ವಯಂ ಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡು ಎಫ್.ಐ.ಆರ್ ಮಾಡಿ ಮುಂದಿನ ಪ್ರಕ್ರಿಯೆ ಮಾಡಬೇಕು.

4. ಪ್ರಕರಣ ದಾಖಲಿಸುವಾಗ ಇತರೇ ಕಾಯ್ದೆಗಳ ಕಲಂಗಳನ್ನು ಸೇರಿಸಿ. (ಕ್ರಮ ಸಂಖ್ಯೆ: 14 ರಲ್ಲಿ ವಿವರಿಸಿದಂತೆ).

5. ಬಾಲಕಿಗೆ ಬೇಕಾದ ಸೂಕ್ತ ಆಪ್ತ ಸಮಾಲೋಚನೆ, ಜೀವನ ಕೌಶಲ್ಯ, ಶಾಲೆ/ಕಾಲೇಜ್ ಮುಂದುವರಿಕೆಗೆ ಅವಕಾಶ, ಶಾಲೆಗೇ ಹೋಗಿಲ್ಲ ಎಂದಾದರೆ ಸೂಕ್ತ ವೃತ್ತಿ ಕೌಶಲ್ಯ ಕೇಂದ್ರಗಳಿಗೆ ದಾಖಲಿಸುವುದು, ಶಾಲೆ ಬಿಟ್ಟಿದ್ದು ಮುಂದೆ ಆಸಕ್ತಿ ಇದ್ದಲ್ಲಿ ಮುಕ್ತ ವಿಶ್ವ ವಿದ್ಯಾಲಯದಲ್ಲಿ ವಯಸ್ಸಿಗನುಗುಣವಾಗಿ ಪರೀಕ್ಷೆಗೆ ಅವಕಾಶ ಕಲ್ಪಿಸುವುದು, ಹಾಗೂ ಅತ್ಯಂತ ಆರ್ಥಿಕ ಸಂಕಷ್ಟ ಇದ್ದಲ್ಲಿ ಕಡ್ಡಾಯವಾಗಿ ಯಾವುದಾದರೂ ಸರಕಾರಿ ಯೋಜನೆಯ ಸೌಲಭ್ಯವನ್ನು ಕೊಡಿಸಬೇಕು.

**18. ಸಾಮೂಹಿಕ ವಿವಾಹಗಳಲ್ಲಿ ಬಾಲ್ಯವಿವಾಹಗಳನ್ನು ತಡೆಗಟ್ಟುವುದು ಹೇಗೆ?**

1. ಆಯಾ ವಾರ್ಡ್ / ಗ್ರಾಮ / ತಾಲೂಕು ವ್ಯಾಪ್ತಿಯ ಬಾಲ್ಯವಿವಾಹ ನಿಷೇಧಾಧಿಕಾರಿಗಳು ಅವರ ಕ್ಷೇತ್ರ ವ್ಯಾಪ್ತಿಯಲ್ಲಿ ಸಾಮೂಹಿಕ ವಿವಾಹ ಏರ್ಪಡಿಸುವ ಎಲ್ಲ ಸಂಘಸಂಸ್ಥೆಗಳು, ವ್ಯಕ್ತಿಗಳು, ದೇವಸ್ಥಾನ, ಮಠಗಳು, ಮಸೀದಿ, ಚರ್ಚ್, ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ಬಾಲ್ಯವಿವಾಹ ನಿಷೇಧ ಕಾಯಿದೆ 2006 ಮತ್ತು ಸಂಬಂಧಿತ ವಿಚಾರಗಳನ್ನು ಕುರಿತು

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಚೈಲ್ಡ್‌ಲೈನ್ ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳ ಮೂಲಕ ತರಬೇತಿಗಳನ್ನು ಕಾಲಕಾಲಕ್ಕೆ ಏರ್ಪಡಿಸುತ್ತಿರಬೇಕು.

2. ಸಾಮೂಹಿಕ ವಿವಾಹಗಳನ್ನು ಮಾಡುವ ಆಯೋಜಕರು ಸೂಕ್ತ ನೋಂದಣಿ, ವರ್ಷಕ್ಕೊಮ್ಮೆ ನವೀಕರಣ, ಸಂಸ್ಥೆಯ ಚಟುವಟಿಕೆಗಳ ಪಟ್ಟಿಯಲ್ಲಿ ಸಾಮೂಹಿಕ ವಿವಾಹಗಳನ್ನು ನಡೆಸುವುದು ಎಂಬ ಅಂಶ ಸೇರಿಸುವುದನ್ನು ಕಡ್ಡಾಯಗೊಳಿಸುವುದು.

3. ಸಾಮೂಹಿಕ ವಿವಾಹಗಳನ್ನು ಏರ್ಪಡಿಸುವ ಆಯೋಜಕರು ತಮ್ಮ ಕಛೇರಿ ಮತ್ತು ಸಂಬಂಧಿತ ಸ್ಥಳಗಳಲ್ಲಿ, ಸಮಾರಂಭದಲ್ಲಿ ಬಾಲ್ಯವಿವಾಹ ನಿಷೇಧ ಕುರಿತು ಭಿತ್ತಿಪತ್ರ, ಕರಪತ್ರಗಳನ್ನು ಸೂಕ್ತರೀತಿಯಲ್ಲಿ ಪ್ರದರ್ಶಿಸಲು ಮತ್ತು ಹಂಚಲು ನಿರ್ದೇಶಿಸಬೇಕು. ಸಾಮೂಹಿಕ ವಿವಾಹ ಕುರಿತು ಹೊರಡಿಸುವ ಭಿತ್ತಿಪತ್ರ, ಕರಪತ್ರ, ಜಾಹೀರಾತು, ಬ್ಯಾನರ್ ಮೊದಲಾದವುಗಳಲ್ಲಿ 'ಬಾಲ್ಯವಿವಾಹಗಳನ್ನು ನಡೆಸಲು ಅವಕಾಶ ಕೊಡುವುದಿಲ್ಲ' ಎಂದು ಸ್ಪಷ್ಟವಾಗಿ ಹಾಕಿರುವುದನ್ನು ಖಾತ್ರಿಪಡಿಸುವುದು.

4. ಸಾಮೂಹಿಕ ಮದುವೆ ಮಾಡಿಸುವವರು 100 ದಂಪತಿಗಳು ಇದ್ದಲ್ಲಿ ಕನಿಷ್ಠ 20 ದಿನ, 101 ರಿಂದ 200 ಇದ್ದಲ್ಲಿ 40 ದಿನ, 200 ಮೇಲ್ಪಟ್ಟು ಇದ್ದಲ್ಲಿ ಕನಿಷ್ಠ 60 ದಿನ ಮುಂಚಿತವಾಗಿ ಸಾಮೂಹಿಕ ಮದುವೆ ನಡೆಸುವ ವಧೂ ವರರ ನಿಯಾಮನುಸಾರ ವಯಸ್ಸಿನ ಪ್ರಮುಖ ದಾಖಲೆಗಳೊಂದಿಗೆ ಆಯಾ ವ್ಯಾಪ್ತಿಯ ತಹಶೀಲ್ದಾರರಿಗೆ ಕಡ್ಡಾಯವಾಗಿ ಅನುಮತಿಗಾಗಿ ಅರ್ಜಿ ಸಲ್ಲಿಸಬೇಕು.

5. ತಹಶೀಲ್ದಾರರು ಆ ಅರ್ಜಿ ಹಾಗೂ ವಧು ವರರ ವಿವರದ ಕಡತವನ್ನು ಕಾನೂನು ನಿಯಮಾನುಸಾರ ಪರಿಶೀಲಿಸಲು ಸ್ಥಳೀಯ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ಕಳುಹಿಸಬೇಕು.

6. ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಸ್ಥಳೀಯ ಪೊಲೀಸ್ ಠಾಣೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, 1098 ತಂಡದವರನ್ನು ಕರೆಸಿ ಹಾಗೂ ಅವರ ತಂಡ ಎಲ್ಲರೂ ಒಟ್ಟಾಗಿ ಕಡತವನ್ನು ಪರಿಶೀಲಿಸಬೇಕು. ಮದುವೆಗೆ ಬಂದಿರುವ ವಧೂ ವರರ ವಿವರವನ್ನು ಕಾನೂನು ನಿಯಮಾನುಸಾರ ವಯಸ್ಸಿನ ದಾಖಲೆ ವಧುವಿಗೆ 18 ಪೂರ್ಣ ವರನಿಗೆ 21 ಪೂರ್ಣವಾಗಿರುವುದನ್ನು ಖಾತ್ರಿಪಡಿಸಿ ಪ್ರತ್ಯೇಕ ಪಟ್ಟಿ ತಯಾರಿಸಿ, ಅದರಂತೆ ಪಟ್ಟಿಯಲ್ಲಿ ನಮೂದಿಸಿರುವವರಿಗೆ ಮಾತ್ರ ಕಾನೂನು ನಿಯಮಾನುಸಾರ ಅವಕಾಶ ನೀಡಲು ತಹಶೀಲ್ದಾರರಿಗೆ ಕಡತ ಕಳುಹಿಸಬೇಕು.

7. ತಹಶೀಲ್ದಾರರು ಪರಿಶೀಲಿಸಿದ ಪಟ್ಟಿಯಲ್ಲಿರುವವರಿಗೆ ಮಾತ್ರ ಅವಕಾಶವೆಂದು, ಜೊತೆಗೆ ಸೂಕ್ತ ಮಾನದಂಡಗಳನ್ನು ವಿಧಿಸಿ (ಪಟ್ಟಿಯನ್ನು ಬಿಟ್ಟು ಬೇರೆ ಯಾವ ವಧೂ ವರರಿಗೆ ಮದುವೆಗೆ ಅವಕಾಶವನ್ನು ಕಡ್ಡಾಯವಾಗಿ ನೀಡಬಾರದೆಂಬ ಷರತ್ತಿನೊಂದಿಗೆ) ಅನುಮತಿ ನೀಡಬೇಕು. ತಹಶೀಲ್ದಾರರ ಅನುಮತಿಯ ನಂತರವೇ ಸಂಘಟಕರು ಮುಂದಿನ ಎಲ್ಲಾ ವ್ಯವಸ್ಥೆಗಳನ್ನು ಮಾಡಬೇಕು.

9. ಸಾಮೂಹಿಕ ಮದುವೆ ದಿನ ಸ್ಥಳೀಯ ಬಾಲ್ಯ ವಿವಾಹ ನಿಷೇಧಾದಿಕಾರಿಗಳ ತಂಡ ಪೊಲೀಸ್ ತಂಡದೊಂದಿಗೆ, ಮಹಿಳಾ ಸಿಬ್ಬಂದಿಯೊಂದಿಗೆ ಹಾಜರಿರಬೇಕು. ಮೂಹೂರ್ತಕ್ಕೆ ಮುಂಚಿತವಾಗಿಯೇ ಹೋಗಿ ಅನುಮತಿ ನೀಡಿದ ವಧೂ ವರರೇ ಹೌದು ಅಲ್ಲ ಎಂಬುದನ್ನು ಖಚಿತಪಡಿಸಿಕೊಂಡ ನಂತರವೇ, ವಧೂ ವರರು ಮಂಟಪಕ್ಕೆ ಬರುವಂತೆ ಖಾತ್ರಿಪಡಿಸುವುದು. ಯಾವುದೇ ಬಾಲ್ಯ ವಿವಾಹ ಆಗದಂತೆ ನಿಗಾ ವಹಿಸುವುದು.

**19. ಬಾಲ್ಯ ವಿವಾಹ ಅಸಿಂಧುವೇ?**

ಹೌದು. ಕರ್ನಾಟಕದಲ್ಲಿ ಅಸಿಂಧು. ಬೇರೆ ರಾಜ್ಯದಲ್ಲಿ ಅಸಿಂಧು ಅಲ್ಲ. ಬಾಲ್ಯ ವಿವಾಹ ನಿಷೇಧ (ಕರ್ನಾಟಕ) ತಿದ್ದುಪಡಿ ಕಾಯ್ದೆ 2016 ರ ಕಲಂ: 3(1) (ಎ) ಪ್ರಕಾರ 3–3–2018 ರ ನಂತರ ಆದ/ಆಗುವ ಎಲ್ಲಾ ಬಾಲ್ಯ ವಿವಾಹಗಳು ಅಸಿಂಧು. ಅದಕ್ಕೆ ಕಾನೂನಿನ ಯಾವುದೇ ಮಾನ್ಯತೆ ಇಲ್ಲ. ಆದರೆ ಮದುವೆ ಅಸಿಂಧುವಾಗಿದ್ದರೂ ಮದುವೆಯಾದ ಬಾಲಕಿಗೆ ಬಾಲಕನ ಕಡೆಯಿಂದ ಪರಿಹಾರ, ವಸತಿ, ರಕ್ಷಣೆ, ಜೀವನಾಂಶ, ಒಂದುವೇಳೆ ಮಗು ಜನಿಸಿದ್ದರೆ, ಮಗುವಿನ ರಕ್ಷಣೆ ಮುಂತಾದ ವಿಷಯಗಳಿಗೆ ಕಾಯ್ದೆ: ಕಲಂ: 4, 5 ರ ಪ್ರಕಾರ ಜಿಲ್ಲಾ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿ ಆದೇಶಗಳನ್ನು ಪಡೆಯಬಹುದು.

**20. ಬಾಲ್ಯ ವಿವಾಹ ಆಗಿ, ಆ ದಂಪತಿಗಳಿಗೆ ಜನಿಸಿದ ಮಗುವಿಗೆ ಯಾವೆಲ್ಲ ಹಕ್ಕು ಅನ್ವಯಿಸುತ್ತದೆ?**

ಬಾಲ್ಯ ವಿವಾಹ ಆದ ದಂಪತಿಗಳಿಗೆ ಹುಟ್ಟಿದ ಮಗುವಿಗೆ ಈ ದೇಶದ ಪ್ರಜೆಗಳಿಗಿರುವ ಎಲ್ಲಾ ಹಕ್ಕುಗಳು 100% ಅನ್ವಯಿಸುತ್ತದೆ. ಕಾಯ್ದೆ: ಕಲಂ: 6 ಪ್ರಕಾರ ಆ ಮಗು **ಔರಸ (Legitimate Child)** ಮಗು ಆಗಿರುತ್ತದೆ. ಅಂತಹ ಮಕ್ಕಳಿಗೆ ಈ ದೇಶದ ಎಲ್ಲಾ ಸೌಲಭ್ಯ ಪಡೆಯುವ ಹಕ್ಕು ಇರುತ್ತದೆ. ಮಗು ಗರ್ಭದಲ್ಲಿರುವಾಗ ಹಾಗೂ ಜನಿಸಿದ ಮೇಲೆ ಕೂಡಾ ಎಲ್ಲಾ ಸೌಲಭ್ಯಗಳನ್ನು ಕಡ್ಡಾಯವಾಗಿ ನೀಡಲೇಬೇಕು. ಉದಾ: ತಾಯಿ ಕಾರ್ಡ್, ಕಬ್ಬಿಣದ ಅಂಶದ ಮಾತ್ರೆ, ಚುಚ್ಚು ಮದ್ದು, ಪೌಷ್ಠಿಕ ಆಹಾರ, ಜನನ ಪ್ರಮಾಣ ಪತ್ರ, ಲಸಿಕೆಗಳು, ಭಾಗ್ಯಲಕ್ಷ್ಮಿ ಯೋಜನೆ ಇತ್ಯಾದಿಗಳನ್ನು ನೀಡಲೇಬೇಕು. ಅದನ್ನೆಲ್ಲಾ ಪಡೆಯುವ ಹಕ್ಕು ಮಗುವಿಗಿದೆ.

**21. ಈ ಕಾಯ್ದೆ ಎಲ್ಲ ಧರ್ಮದವರಿಗೆ ಅನ್ವಯಿಸುತ್ತದೆಯೇ?**

ಹೌದು, ಈ ಕಾಯ್ದೆ ಧರ್ಮಾತೀತವಾದ ಕಾಯ್ದೆ. ಈ ದೇಶದ ಎಲ್ಲಾ ಧರ್ಮದವರಿಗೂ ಅನ್ವಯಿಸುತ್ತದೆ. ಕಲಂ: 1(2) ಪ್ರಕಾರ ಈ ಕಾಯ್ದೆಯು ಭಾರತ ದೇಶದ ಹೊರಗಿರುವ ಹಾಗೂ ಒಳಗಿರುವ ಎಲ್ಲಾ ನಾಗರಿಕರಿಗೆ ಅನ್ವಯಿಸುತ್ತದೆ. (ಈ ಕಾಯ್ದೆಯಲ್ಲಿ ಇಂತಹುದೇ ಧರ್ಮಕ್ಕೆ ಎಂಬ ಯಾವುದೇ ಉಲ್ಲೇಖವಿಲ್ಲ, ಆದ್ದರಿಂದ ದೇಶದಲ್ಲಿರುವ ಎಲ್ಲಾ ಧರ್ಮದವರಿಗೆ ಅನ್ವಯಿಸುತ್ತದೆ). ***(ಕೊಪ್ಪಳದ ಸೀಮಾ ಬೇಗಂ ವಿರುದ್ಧ ಕೊಪ್ಪಳ ಜಿಲ್ಲಾಡಳಿತ ಮತ್ತು ಇತರರ ಪ್ರಕರಣದಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯ ಧಾರವಾಡ ಪೀಠದ ರಿಟ್ ಪಿಟಿಷನ್ ಸಂಖ್ಯೆ: 75889/2013, ದಿನಾಂಕ: 26–2–2013 ರ ತೀರ್ಪು, ಈ ಅಂಶವನ್ನು ಎತ್ತಿ ಹಿಡಿದಿದೆ. "ಬಾಲ್ಯ ತುಂಬಾ ಅಮೂಲ್ಯವಾದದ್ದು. ವಯಸ್ಕನಾದಾಗ ಯಾವುದೇ ವ್ಯಕ್ತಿಗೆ ಮನೆ, ಹೆಂಡತಿ/ಗಂಡ, ಕೆಲಸ, ಆಸ್ತಿ, ಯಾವುದನ್ನಾದರೂ ಕೊಡಬಹುದು ಆದರೆ ಕಳೆದುಹೋದ ಬಾಲ್ಯವನ್ನು ಮರಳಿ ಕೊಡಲಾಗುವುದಿಲ್ಲ. ಬಾಲ್ಯವನ್ನು ಸಂಪೂರ್ಣವಾಗಿ ಅನುಭವಿಸಲು ಆ ಮಗು ವಯಸ್ಸಿಗೆ ಬಂದು ಮದುವೆಯ ಬಂಧನಕ್ಕೆ ಒಳಗಾಗುವ ಮೊದಲು ಬಿಡಬೇಕು. ಎಂದು ಹೇಳುವ ಮೂಲಕ ಮಕ್ಕಳ ಹಕ್ಕನ್ನು ಎತ್ತಿಹಿಡಿದು, ಮಕ್ಕಳ ಹಕ್ಕಿನ ವಿಚಾರದಲ್ಲಿ ಬಾಲ್ಯ ವಿವಾಹ ನಿಷೇಧ ಕಾಯ್ದೆ 2006 ಎಲ್ಲಾ ಧರ್ಮದ ಕಾನೂನನ್ನು ಮೀರಿದ್ದು ಎಂಬುದನ್ನು ಸ್ಪಷ್ಟಪಡಿಸಿದೆ. ಬಾಲ್ಯ ವಿವಾಹ ಪ್ರಕರಣ ಪಿಟಿಷನ್ ಸಂಖ್ಯೆ 1234/ 2017 ರಲ್ಲಿ ಸುಪ್ರೀಂ ಕೋರ್ಟ್ ದಿನಾಂಕ 18–10–2024 ರಂದು ತನ್ನ ತೀರ್ಪಿನಲ್ಲಿ ಇದೇ ಅಂಶವನ್ನು ಎತ್ತಿ ಹಿಡಿದಿದೆ)***

**22. <u>ತಮ್ಮ ವ್ಯಾಪ್ತಿಯಲ್ಲಿ ಬಾಲ್ಯವಿವಾಹ ನಿರ್ಮೂಲನೆಗಾಗಿ ಕ್ರಿಯಾ ಯೋಜನೆಯನ್ನು ತಯಾರಿಸಿ ಪ್ರತಿ ವರ್ಷದ ಆರಂಭದಲ್ಲಿಯೇ ಸ್ಥಳೀಯ ಸರ್ಕಾರಗಳು ಸಿದ್ಧಪಡಿಸಿ, ಅನುಷ್ಠಾನಕ್ಕಾಗಿ ಈ ಕೆಳಗಿನಂತೆ ತಂಡಗಳನ್ನು ರಚಿಸಿಕೊಂಡಿರಬೇಕು.</u>**

| | |
|---|---|
| **ಗ್ರಾಮ ಮಟ್ಟದ ತಂಡ** | ಗ್ರಾಮ ಆಡಳಿತಾಧಿಕಾರಿಗಳು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಸ್ಥಳೀಯ ಸರಕಾರಿ/ಅನುಧಾನಿತ ಶಾಲಾ ಮುಖ್ಯ ಶಿಕ್ಷಕರು, ಪಿ.ಯು ಕಾಲೇಜ್ (ಇದ್ದಲ್ಲಿ) ಪ್ರಾಂಶುಪಾಲರು, ಅಂಗನವಾಡಿ ಮೆಲ್ವೀಚಾರಕರು, ಪೊಲೀಸ್ ಅಧಿಕಾರಿಗಳು. (ಈ 6 ಜನ ಕಡ್ಡಾಯ ಇದರಲ್ಲಿ ಒಬ್ಬರು ಅಥವಾ ಇಬ್ಬರು ಮಹಿಳಾ ಅಧಿಕಾರಿಗಳು ಕಡ್ಡಾಯ). ಜೊತೆಗೆ ಗ್ರಾಮದ ಪ್ರೇರಕರು, ಅಂಗನವಾಡಿ ಕಾರ್ಯಕರ್ತರು, ನಾಗರಿಕ ಸಂಘ ಸಂಸ್ಥೆ /ಸ್ವಯಂಸೇವಾ ಸಂಸ್ಥೆಗಳ ಸಿಬ್ಬಂದಿ, ಚೈಲ್ಡ್‌ಲೈನ್ 1098 / ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸದಸ್ಯರು ಗ್ರಾಮ ಪಂಚಾಯಿತಿ ಅಧ್ಯಕ್ಷರು/ಸದಸ್ಯರು ಇತರರು ಇರಬೇಕು. |
| **ಗ್ರಾಮ ಪಂಚಾಯತಿ** | ಗ್ರಾಮ ಆಡಳಿತಾಧಿಕಾರಿಗಳು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಸ್ಥಳೀಯ ಸರಕಾರಿ/ಅನುಧಾನಿತ ಶಾಲಾ ಮುಖ್ಯ ಶಿಕ್ಷಕರು, ಪಿ.ಯು ಕಾಲೇಜ್ (ಇದ್ದಲ್ಲಿ) ಪ್ರಾಂಶುಪಾಲರು, ಅಂಗನವಾಡಿ ಮೆಲ್ವೀಚಾರಕರು, ಪೊಲೀಸ್ ಅಧಿಕಾರಿಗಳು. (ಈ 6 ಜನ ಕಡ್ಡಾಯ ಇದರಲ್ಲಿ ಒಬ್ಬರು ಅಥವಾ ಇಬ್ಬರು ಮಹಿಳಾ ಅಧಿಕಾರಿಗಳು ಕಡ್ಡಾಯ). ಜೊತೆಗೆ ಆಯಾ ಗ್ರಾಮದ ಪ್ರೇರಕರು, ಅಂಗನವಾಡಿ ಕಾರ್ಯಕರ್ತರು, ನಾಗರಿಕ ಸಂಘ ಸಂಸ್ಥೆ /ಸ್ವಯಂಸೇವಾ ಸಂಸ್ಥೆಗಳ ಅಥವಾ ಚೈಲ್ಡ್‌ಲೈನ್ 1098 / ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸದಸ್ಯರು ಗ್ರಾಮ ಪಂಚಾಯಿತಿ ಅಧ್ಯಕ್ಷರು/ಸದಸ್ಯರು ಇತರರು ಇರಬೇಕು. ದೂರುಗಳು ಮತ್ತು ಪರಿಸ್ಥಿತಿಗನುಗುಣವಾಗಿ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಮಾಹಿತಿ ನೀಡಿ ಆ ಹಂತದ ಹಿರಿಯ ಅಧಿಕಾರಿಗಳನ್ನು ಸೇರಿಸಿಕೊಳ್ಳುವುದು. |
| **ನಗರ / ಪುರಸಭೆ ಪ್ರದೇಶ.** | ಆರೋಗ್ಯ ನಿರೀಕ್ಷಕರು, ಶಾಲಾ ಮುಖ್ಯೋಪಾಧ್ಯಾಯರು (ಸರ್ಕಾರಿ/ಅನುಧಾನಿತ ಶಾಲೆ), ಪಿ.ಯು ಕಾಲೇಜ್‌ನ (ಇದ್ದಲ್ಲಿ) ಪ್ರಾಂಶುಪಾಲರು, ಅಂಗನವಾಡಿ ಮೇಲ್ವಿಚಾರಕರು (ಕಡ್ಡಾಯ) ಪ್ರೇರಕರು ಚೈಲ್ಡ್‌ಲೈನ್ 1098/ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸದಸ್ಯರು. ನಂತರ ನಗರ/ಪುರಸಭೆಯ ಮುಖ್ಯಾಧಿಕಾರಿಗಳ ಗಮನಕ್ಕೆ ತಂದು ಇತರ ಅಧಿಕಾರಿಗಳನ್ನು ಸೇರಿಸಿಕೊಳ್ಳಬಹುದು. |

**ಸೂಚನೆ: ಇದೇ ತರಹ ಆಯಾ ಹಂತ/ ತಾಲೂಕು/ಜಿಲ್ಲಾ ಮಟ್ಟದ ತಂಡ ಸದಾ ಕ್ರೀಯಾಶೀಲವಾಗಿ ಸಿದ್ದವಾಗಿರಬೇಕು. ಸಂಪೂರ್ಣ ವಿವರಕ್ಕೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಹೊರತಂದ ಕ್ರಮಬದ್ಧ ಕಾರ್ಯವಿಧಾನವನ್ನು ಓದುವುದು.**

**ಡಾ. ಶಮ್ಲಾ ಇಕ್ಬಾಲ್,** ಭಾ.ಆ.ಸೇ.,
ಸರ್ಕಾರದ ಕಾರ್ಯದರ್ಶಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ

ಕರ್ನಾಟಕ ಸರ್ಕಾರದ ಸಚಿವಾಲಯ
ಮೊದಲನೇ ಮಹಡಿ, 3ನೇ ಗೇಟ್,
ಬಹುಮಹಡಿಗಳ ಕಟ್ಟಡ, ಬೆಂಗಳೂರು-560 001
ಕಛೇರಿ ದೂರವಾಣಿ: 080-2235 3991
080-2203 2562
ಇ-ಮೇಲ್: prlsecy-wc@karnataka.gov.in

ಅ.ಸ.ಪ. ಸಂಖ್ಯೆ: ಮಮಇ 115 ಮಭಾಬ 2024 (Part-1) ದಿನಾಂಕ:12.08.2025

ಮಾನ್ಯರೇ,

ವಿಷಯ : ವಿವಿಧ ಬಾಗೀದಾರ ಇಲಾಖೆಗಳ ಅಧಿಕಾರಿ/ಸಿಬ್ಬಂದಿಗಳಿಗೆ ಬಾಲ್ಯವಿವಾಹ ನಿಷೇಧ ಕಾಯ್ದೆ ಕುರಿತಂತೆ ಸಾಮರ್ಥ್ಯಾಭಿವೃದ್ಧಿ ತರಬೇತಿ ಏರ್ಪಡಿಸುವ ಕುರಿತು.

*****

2023-24 ರ ಅವಧಿಯಲ್ಲಿ ರಾಜ್ಯಾದ್ಯಂತ ಸುಮಾರು 700 ಬಾಲ್ಯವಿವಾಹ ಪ್ರಕರಣಗಳು ವರದಿಯಾಗಿದ್ದು ಈ ಕುರಿತು ದಿನಾಂಕ: 30/06/2025 ಮತ್ತು 31/06/2025 ರಂದು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆಯಲ್ಲಿ ಬಾಲ್ಯವಿವಾಹ ತಡೆಗಟ್ಟಲು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸೂಚಿಸಿರುತ್ತಾರೆ.

ದಿನಾಂಕ:20.06.2025ರ ಸರ್ಕಾರದ ಪತ್ರದಲ್ಲಿ ಬಾಲ್ಯವಿವಾಹಗಳನ್ನು ತಡೆಗಟ್ಟಲು ಜಿಲ್ಲಾ ತಾಲ್ಲೂಕು ಮತ್ತು ಗ್ರಾಮ ಪಂಚಾಯತ್ ಹಂತಗಳಲ್ಲಿ ವಿವಿಧ ಭಾಗೀದಾರ ಇಲಾಖೆಗಳ ಅಧಿಕಾರಿ/ಸಿಬ್ಬಂದಿಗಳಿಗೆ ಸಾಮರ್ಥ್ಯಾಭಿವೃದ್ಧಿ ತರಬೇತಿಯನ್ನು ಆಯೋಜಿಸಲು ತಿಳಿಸಲಾಗಿದೆ.

ಅದರಂತೆ, ಸಿದ್ಧಪಡಿಸಿರುವ ಕ್ರಿಯಾ ಯೋಜನೆಯಂತೆ ತಮ್ಮ ಜಿಲ್ಲಾ ವ್ಯಾಪ್ತಿಯ ಭಾಗೀದಾರ ಇಲಾಖೆಗಳ ಎಲ್ಲಾ ಬಾಲ್ಯವಿವಾಹ ನಿಷೇಧಾಧಿಕಾರಿಗಳಿಗೆ/ಸಂಪನ್ಮೂಲ ಅಧಿಕಾರಿಗಳಿಗೆ ಸಾಮರ್ಥ್ಯಾಭಿವೃದ್ಧಿ ತರಬೇತಿಯನ್ನು ಹಮ್ಮಿಕೊಳ್ಳುವುದು.

ಮುಂದುವರೆದು, ಮಕ್ಕಳ ರಕ್ಷಣಾ ನಿರ್ದೇಶನಾಲಯದಿಂದ ಯೂನಿಸೆಫ್ ಸಹಯೋಗದೊಂದಿಗೆ ರಾಜ್ಯಮಟ್ಟದಲ್ಲಿ, ಜಿಲ್ಲಾಮಟ್ಟದಲ್ಲಿನ ಒಬ್ಬ ತರಬೇತುದಾರ ತರಬೇತಿ (TOT)ಗೆ ಮತ್ತು ವಿಭಾಗೀಯಮಟ್ಟದಲ್ಲಿ, ಪ್ರತಿ ತಾಲ್ಲೂಕಿಗೊಬ್ಬ ನೋಡಲ್ ಅಧಿಕಾರಿ/ಸಂಪನ್ಮೂಲ ಅಧಿಕಾರಿಗೆ ತರಬೇತಿ ನೀಡಲಾಗುತ್ತದೆ. ಸದರಿ ತರಬೇತುದಾರರಿಂದ ಜಿಲ್ಲೆಯಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ತರಬೇತಿಯನ್ನು ನೀಡಲು ತಮ್ಮ ಹಂತದಲ್ಲಿ ತುರ್ತು ಕ್ರಮವಹಿಸುವುದು ಹಾಗೂ ಜಿಲ್ಲಾ ವ್ಯಾಪ್ತಿಯಲ್ಲಿನ ಎಲ್ಲಾ ಬಾಲ್ಯವಿವಾಹ ನಿಷೇಧಾಧಿಕಾರಿಗಳಿಗೆ ತರಬೇತಿಯಾಗಿರುವುದರ ಕುರಿತು ಖಚಿತಪಡಿಸಿಕೊಳ್ಳುವುದು ಮತ್ತು ಜಿಲ್ಲೆಯಲ್ಲಿ ಬಾಲ್ಯವಿವಾಹಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು/ನಡೆಯದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲು ಕೋರಿದೆ.

ಆದರಗಳೊಂದಿಗೆ,

ತಮ್ಮ ವಿಶ್ವಾಸಿ,

ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಹಾಗೂ ಎಲ್ಲಾ ಜಿಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.

ಕರ್ನಾಟಕ ಸರ್ಕಾರ
ಮಕ್ಕಳ ರಕ್ಷಣಾ ನಿರ್ದೇಶನಾಲಯ
3ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕಗೋಪುರ, ಡಾ|| ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು-560001
E-mail ID: icps.kar@gmail.com Ph.No.080-22869381/82

ಸಂಖ್ಯೆ:ಮರನಿ/ಬಾ.ವಿ.ನಿ.ಕೋ/ಸ.ಸಮಿತಿ/2024-25 ದಿನಾಂಕ:21-04-2025

ಇವರಿಗೆ

ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
ಎಲ್ಲಾ ಜಿಲ್ಲೆಗಳು,

ಮಾನ್ಯರೇ,

ವಿಷಯ : ಬಾಲ್ಯವಿವಾಹ ಪ್ರಕರಣಗಳಲ್ಲಿ ನಿರ್ಲಕ್ಷ್ಯ ತೋರುವ ಸಾರ್ವಜನಿಕ ಸೇವಕರ ವಿರುದ್ಧ ಕಡ್ಡಾಯ ಕ್ರಮ ಜರುಗಿಸುವ ಕುರಿತು

ಉಲ್ಲೇಖ : 1. ರಿಟ್ ಪಿಟಿಷನ್ ಪ್ರಕರಣ ಸಂಖ್ಯೆ:WP(C)1234/2017ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯ ದಿನಾಂಕ:18.10.2024 ರಂದು ನೀಡಿದ ನಿರ್ದೇಶನ.
2. ದಿನಾಂಕ:06.03.2025ರಂದು ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಬಾಲ್ಯವಿವಾಹಗಳನ್ನು ತಡೆಯುವ ರಾಜ್ಯಮಟ್ಟದ ಸಮನ್ವಯ ಮತ್ತು ಪರಿಶೀಲನಾ ಸಭೆಯ ನಡವಳಿ.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ (1)ರ ರಿಟ್ ಪಿಟಿಷನ್ ಪ್ರಕರಣ ಸಂಖ್ಯೆ:WP(C) 1234/2017ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ದಿನಾಂಕ:18.10.2024ರ ಆದೇಶದ ದ್ವಾರಾ ಸಂಖ್ಯೆ:211 (B) (3)ರಲ್ಲಿ ಹಾಗೂ ಉಲ್ಲೇಖ(2)ರ ದಿನಾಂಕ:06.03.2025ರಂದು ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಬಾಲ್ಯವಿವಾಹಗಳನ್ನು ತಡೆಯುವ ರಾಜ್ಯಮಟ್ಟದ ಸಮನ್ವಯ ಮತ್ತು ಪರಿಶೀಲನಾ ಸಭೆಯ ನಡವಳಿಯ 12ನೇ ಅಂಶದಲ್ಲಿ ಯಾವುದೇ ಸಾರ್ವಜನಿಕ ಸೇವಕರು ತಮ್ಮ ಕಾರ್ಯವ್ಯಾಪ್ತಿಯಲ್ಲಿ ಬಾಲ್ಯವಿವಾಹಗಳನ್ನು ತಡೆಯಲು ನಿರ್ಲಕ್ಷ್ಯ ತೋರಿದಲ್ಲಿ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ, 2023ರ ಸೆಕ್ಷನ್ 199(C) ಪ್ರಕರಣಗಳ ಪ್ರಕಾರ ಕಡ್ಡಾಯ ಕ್ರಮ ಜರುಗಿಸಲು ಅವಕಾಶವಿದೆ ಎಂಬ ಬಗ್ಗೆ ಉಲ್ಲೇಖಿಸಲಾಗಿರುತ್ತದೆ.

ಈ ಹಿನ್ನಲೆಯಲ್ಲಿ ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಯಾವುದೇ ಸಾರ್ವಜನಿಕ ಸೇವಕರು ತಮ್ಮ ಕಾರ್ಯವ್ಯಾಪ್ತಿಯಲ್ಲಿ ಬಾಲ್ಯವಿವಾಹಗಳನ್ನು ತಡೆಯಲು ನಿರ್ಲಕ್ಷ್ಯ ತೋರಿದಲ್ಲಿ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ, 2023ರ ಸೆಕ್ಷನ್ 199(C) ಪ್ರಕರಣಗಳ ಪ್ರಕಾರ ಕಡ್ಡಾಯ ಕ್ರಮ ಜರುಗಿಸಲು ಮತ್ತು ಅವರುಗಳ ವಿರುದ್ಧ ಶಿಸ್ತು ಕ್ರಮಕ್ಕೆ ಸಂಬಂಧಿಸಿದ ಇಲಾಖೆಯ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡುವಂತೆ ಕೋರಿದೆ.

ತಮ್ಮ ವಿಶ್ವಾಸಿ,

ನಿರ್ದೇಶಕರು,
ಮಕ್ಕಳ ರಕ್ಷಣಾ ನಿರ್ದೇಶನಾಲಯ
ಬೆಂಗಳೂರು.

ಪ್ರತಿ:
1. ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಸದಸ್ಯ ಕಾರ್ಯದರ್ಶಿಗಳುಬಾಲ್ಯವಿವಾಹಗಳನ್ನು ತಡೆಯುವ ಜಿಲ್ಲಾಮಟ್ಟದ ಸಮನ್ವಯ ಮತ್ತು ಪರಿಶೀಲನಾ ಸಮಿತಿ ಎಲ್ಲಾ ಜಿಲ್ಲೆಗಳು .
2. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಎಲ್ಲಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕ.

0DL-(N)O4/0007I2006-08

# भारत का राजपत्र
# The Gazette of India

| | | |
|---|---|---|
| **Extraordinary**<br>Part II / Section I | | ಅಸಾಧಾರಣ<br>ಭಾಗ–2 / ಖಂಡ – 1 |
| Published by Authority<br>No. 6, New Delhi, Thursday, January 11, 2007 / Pausa 21, 1928 | | ಪ್ರಾಧಿಕಾರದಿಂದ ಪ್ರಕಟಿತ<br>ನಂ. 6, ನವದೆಹಲಿ, ಗುರುವಾರ, ಜನವರಿ 11, 2007 / ಪೌಸ 21, 1928 |
| **MINISTRY OF LAW AND JUSTICE**<br>**(Legislative Department)** | | **ಕಾನೂನು ಮತ್ತು ನ್ಯಾಯ ಮಂತ್ರಾಲಯ**<br>**(ಶಾಸನ ವಿಭಾಗ)** |
| The following Act of Parliament received the assent of the President on the 10th January, 2007, and is here by published for general information:- | | ಸಂಸತ್‌ನ ಈ ಮುಂದಿನ ಕಾಯ್ದೆ ಗೆ 2007ರ ಜನವರಿ 10ರಂದು ರಾಷ್ಟ್ರಾಧ್ಯಕ್ಷರ ಒಪ್ಪಿಗೆ ಸಿಕ್ಕಿದ್ದು ಈ ಮೂಲಕ ಸಾರ್ವಜನಿಕ ಮಾಹಿತಿಗಾಗಿ ಪ್ರಕಟಿಸಲಾಗಿದೆ. |
| **THE PROHIBITION OF CHILD MARRIAGE ACT, 2006**<br>No.6 of 2007<br>*[10th January,* 2007.] | | **ಬಾಲ್ಯ ವಿವಾಹ ನಿಷೇಧ ಕಾಯ್ದೆ, 2006**<br>ಕ್ರಮ ಸಂಖ್ಯೆ 2007ರ 6<br>(10 ಜನವರಿ 2007) |
| **An Act to provide for the prohibition of solemnisation of child marriages and for matters connected therewith or incidental thereto.** | | **ಬಾಲ್ಯವಿವಾಹಗಳ ಆಚರಣೆಯನ್ನು ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳ ಅಥವಾ ಪ್ರಕರಣಗಳಿಗೆ ನಿಷೇಧವನ್ನು ಒದಗಿಸಲು ಕಾಯಿದೆ.** |
| Be it enacted by Parliament in the Fifty-seventh Year of the Republic of India as follows: | | ಭಾರತ ಗಣರಾಜ್ಯದ 57ನೇ ವರ್ಷದಲ್ಲಿ ಸಂಸತ್‌ನಲ್ಲಿ ಕಾಯಿದೆಯಾಗಿ ಈ ಮುಂದಿನಂತೆ ರಚಿಸಲಾಗಿದೆ. |

| | | | | | |
|---|---|---|---|---|---|
| | | **Short title, extent and commencement** | | | **ಕಿರು ಶೀರ್ಷಿಕೆ, ವ್ಯಾಪ್ತಿ ಮತ್ತು ಆರಂಭ** |
| 1 | (1) | This Act may be called the Prohibition of Child Marriage Act, 2006. | 1 | (1) | ಬಾಲ್ಯ ವಿವಾಹ ನಿಷೇಧ ಕಾಯ್ದೆ 2006 ಎಂದು ಈ ಕಾಯ್ದೆಯನ್ನು ಹೆಸರಿಸಬಹುದು. |
| | (2) | It extends to the whole of India except the State of Jammu and Kashmir; and it applies also to all citizens of India without and beyond India:<br><br>Provided that nothing contained in this Act shall apply to the renoncants of the Union territory of Pondicherry. | | (2) | ಜಮ್ಮು ಮತ್ತು ಕಾಶ್ಮೀರವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ಈ ಕಾಯಿದೆಯು ಅನ್ವಯಿಸುತ್ತದೆ ಮತ್ತು ಇದು ಭಾರತ ದೇಶದಲ್ಲಿರುವ ಮತ್ತು ಹೊರಗಿರುವ ಎಲ್ಲಾ ನಾಗರೀಕರಿಗೂ ಅನ್ವಯಿಸುತ್ತದೆ.<br><br>ಈ' ಕಾಯ್ದೆ ಯ ಯಾವುದೇ ನಿಯಮಗಳು ಕೇಂದ್ರಾಡಳಿತ ಪ್ರದೇಶವಾದ ಪಾಂಡಿಚೇರಿಗೆ ಅನ್ವಯಿಸುವುದಿಲ್ಲ. |

| | | | | | |
|---|---|---|---|---|---|
| | (3) | It shall come into force on such date as the Central Government may, by notification in the Official Gazette, appoint; and different dates may be appointed for different States and any reference in any provision to the commencement of this Act shall be construed in relation to any State as a reference to the coming into force of that provision in that State. | | (3) | ಕೇಂದ್ರ ಸರ್ಕಾರವು ಅಧಿಕೃತ ರಾಜಪತ್ರದಲ್ಲಿ ಘೋಷಿಸಿ, ಸೂಚಿಸಿದ ದಿನಾಂಕದಿಂದ ಈ ' ಕಾಯ್ದೆ ಯು ಜಾರಿಗೆ ಬರುತ್ತದೆ ಮತ್ತು ಕಾಯ್ದೆ ಯ ಜಾರಿಗಾಗಿ ಬೇರೆ ಬೇರೆ ರಾಜ್ಯಗಳಿಗೆ ಬೇರೆ ಬೇರೆ ದಿನಾಂಕವನ್ನು ಸೂಚಿಸಬಹುದು ಮತ್ತು ಈ ಕಾಯ್ದೆ ಯು ಆರಂಭವಾದ ಮೇಲೆ ಯಾವುದೇ ರಾಜ್ಯದಲ್ಲಿ ಈ ಕಾಯಿದೆಯ ಯಾವುದಾದರೂ ಉಲ್ಲೇಖ/ವಿಚಾರವನ್ನು ಕುರಿತು ನಿರ್ಬಂಧನೆಗಳನ್ನು ತಂದಿದ್ದೇ ಆದಲ್ಲಿ, ಅದನ್ನು ಆಯಾ ರಾಜ್ಯಕ್ಕೆ ಮಾತ್ರ ಸಂಬಂಧಿಸಿದ್ದೆಂದು ವ್ಯಾಖ್ಯಾನಿಸಲಾಗುತ್ತದೆ. |
| | | **Definitions** | | | **ವ್ಯಾಖ್ಯಾನಗಳು / ಪರಿಭಾಷೆಗಳು** |
| 2 | | In this Act, unless the context otherwise requires,- | 2 | | ವಿವಿಧ ಸಂದರ್ಭಗಳಲ್ಲಿ ಬೇರೆಯೇ ಅರ್ಥವನ್ನು ನೀಡದ ಹೊರತು ಈ ಕಾಯಿದೆಯಲ್ಲಿ ಈ ಮುಂದಿನ ಪದಗಳನ್ನು ಇಲ್ಲಿ ನಿಗದಿಪಡಿಸಿರುವಂತೆ ಅರ್ಥೈಸಬೇಕು; |
| | (a) | "child" means a person who, if a male, has not completed twenty-one years of age, and if a female, has not completed eighteen years of age; | | (a) | 'ಮಗು' ಎಂದರೆ ಇಪ್ಪತ್ತೊಂದು ವರ್ಷದೊಳಗಿನ ಯಾವುದೇ ಗಂಡು ಮತ್ತು ಹದಿನೆಂಟು ವರ್ಷದೊಳಗಿನ ಯಾವುದೇ ಹೆಣ್ಣು ವ್ಯಕ್ತಿ; |
| | (b) | "child marriage" means a marriage to which either of the contracting parties is a child; | | (b) | 'ಬಾಲ್ಯ ವಿವಾಹವೆಂದರೆ' ಮದುವೆಯ ಒಡಂಬಡಿಕೆಗೆ ಒಳಗಾಗುವ ಯಾವುದೇ ಒಬ್ಬ ವ್ಯಕ್ತಿ ಮಗುವಾಗಿರುವುದು; |
| | (c) | "contracting party", in relation to a marriage, means either of the parties whose marriage is or is about to be thereby solemnised; | | (c) | ಬಾಲ್ಯವಿವಾಹಕ್ಕೆ ಸಂಬಂಧಿಸಿದಂತೆ 'ಒಡಂಬಡಿಕೆಯಾಗುವ ವ್ಯಕ್ತಿಗಳು' ಎಂದರೆ ಮದುವೆಯಾಗುವ ಅಥವಾ ಮದುವೆಯ ಆಚರಣೆಯ ಸಂಭವ ಇರುವ ಯಾರಾದರೂ ಒಬ್ಬ ವ್ಯಕ್ತಿ; |
| | (d) | "Child Marriage Prohibition Officer" includes the Child Marriage Prohibition Officer appointed under sub-section (1) of section 16; | | (d) | "ಬಾಲ್ಯ ವಿವಾಹ ನಿಷೇಧ ಅಧಿಕಾರಿಗಳು" ಸೆಕ್ಷನ್ 16ರ ಉಪ ಸೆಕ್ಷನ್ (1) ರಡಿಯಲ್ಲಿ ನೇಮಕಗೊಂಡ ಬಾಲ್ಯ ವಿವಾಹ ನಿಷೇಧ ಅಧಿಕಾರಿಗಳನ್ನು ಒಳಗೊಂಡಿರುತ್ತಾರೆ. |
| 66 of 1984 | (e) | "district court" means, in any area for which a Family Court established under section 3 of the Family Courts Act, 1984 exists, such Family Court, and in any area for which there is no Family Court but a city civil court exists, that court and in any other area, the principal civil court of original jurisdiction and includes any other civil court which may be specified by the State Government, by notification in the Official Gazette ,as having jurisdiction in respect of the matters dealt with in this Act; | | (e) | "ಜಿಲ್ಲಾ ನ್ಯಾಯಾಲಯ" ಎಂದರೆ ಯಾವುದೇ ಪ್ರದೇಶದಲ್ಲಿ ಕೌಟುಂಬಿಕ ನ್ಯಾಯಾಲಯ ಕಾಯ್ದೆ 1984ರ ಸೆಕ್ಷನ್ 3ರ ಅಡಿಯಲ್ಲಿ ಕೌಟುಂಬಿಕ ನ್ಯಾಯಾಲಯ ಅಸ್ತಿತ್ವದಲ್ಲಿದ್ದರೆ ಮತ್ತು ಯಾವುದೇ ಪ್ರದೇಶದಲ್ಲಿ ಕೌಟುಂಬಿಕ ನ್ಯಾಯಾಲಯ ಇಲ್ಲದೆ ನಗರ ಸಿವಿಲ್ ನ್ಯಾಯಾಲಯವಿದ್ದರೆ ಆ ನ್ಯಾಯಾಲಯ, ಮತ್ತು ಇತರ ಪ್ರದೇಶಗಳಲ್ಲಿರುವ ಪ್ರಧಾನ ಸಿವಿಲ್ ನ್ಯಾಯಾಲಯಗಳು ತಮ್ಮ ಮೂಲ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುವುದು ಮತ್ತು ಈ ಕಾಯಿದೆಯ ವ್ಯಾಪ್ತಿಗೆ ಒಳಪಡುವ ಯಾವುದೇ ಪ್ರಕರಣವನ್ನು ವಿಚಾರಣೆಗೆ ಮಾಡಲು ಅದಿಕೃತ ಗೆಜೆಟ್ ಮೂಲಕ ಸರ್ಕಾರವು ಸೂಚಿಸುವ ಯಾವುದೇ ನ್ಯಾಯಾಲಯ; 1984 ರ 66 |
| 9 of 1875 | (f) | "minor" means a person who, under the provisions of the Majority Act, 1875 is to be deemed not to have attained his majority. | | (f) | "ಅಪ್ರಾಪ್ತ' ಎಂದರೆ ಪ್ರೌಢ ಕಾಯ್ದೆ 1875ರ ಅಡಿಯಲ್ಲಿ ವ್ಯಾಖ್ಯಾನಿಸಿರುವಂತೆ ಪ್ರೌಢಾವಸ್ಥೆ ತಲುಪಿಲ್ಲದ ವ್ಯಕ್ತಿಗಳು. 1875 ರ 9 |
| | | | | | |

| | | | | | |
|---|---|---|---|---|---|
| | | **Child marriages to be voidable at the option of contracting party being a child.** | | | **ಮದುವೆಯ ಕರಾರಿಗೆ ಒಡಂಬಡಿಕೆಗೆ ಒಳಪಡಲಿರುವ ವ್ಯಕ್ತಿ 'ಮಗು'ವಾಗಿದ್ದಲ್ಲಿ ಬಾಲ್ಯವಿವಾಹವು ಅಸಿಂಧುವಾಗುವುದು** |
| 3 | (1) | Every child marriage, whether solemnised before or after the commencement of this Act, shall be voidable at the option of the contracting party who was a child at the time of the marriage: Provided that a petition for annulling a child marriage by a decree of nullity may be filed in the district court only by a contracting party to the marriage who was a child at the time of the marriage. | 3 | (1) | ಈ ಕಾಯ್ದೆ ಪ್ರಾರಂಭವಾದ ಮೊದಲು ಮತ್ತು ನಂತರ ಜರುಗಿದ ಪ್ರತಿಯೊಂದು ಬಾಲ್ಯ ವಿವಾಹವು, ವಿವಾಹಕ್ಕೊಳಗಾದ ವ್ಯಕ್ತಿ ಮದುವೆಯ ಸಮಯದಲ್ಲಿ ಮಗುವಾಗಿದ್ದರೆ ಅವರ ಇಚ್ಛೆಯ ಮೇರೆಗೆ ಆ ವಿವಾಹವು ಅಸಿಂಧುವಾಗುತ್ತದೆ.<br><br>ಆದರೆ ಬಾಲ್ಯವಿವಾಹವನ್ನು ಅಸಿಂಧುವೆಂದು ಘೋಷಿಸಲು ನ್ಯಾಯಾಲಯಕ್ಕೆ ತಕರಾರು ಮನವಿಯನ್ನು ಮದುವೆಯ ಸಮಯದಲ್ಲಿ ಮಗುವಾಗಿದ್ದ ವ್ಯಕ್ತಿ ಸಲ್ಲಿಸಬೇಕು. |
| | (2) | If at the time of filing a petition, the petitioner is a minor, the petition may be filed through his or her guardian or next friend along with the Child Marriage Prohibition Officer. | | (2) | ತಕರಾರು ಮನವಿಯನ್ನು ಸಲ್ಲಿಸುವ ಸಮಯದಲ್ಲಿ ದೂರುದಾರರು ಅಪ್ರಾಪ್ತರಾಗಿದ್ದಲ್ಲಿ, ಅವನ/ಅವಳ ಪೋಷಕರ ಅಥವಾ ಹತ್ತಿರದ ಸೇಹಿತರ ಮೂಲಕ ಬಾಲ್ಯ ವಿವಾಹ ನಿಷೇಧ ಅಧಿಕಾರಿಯ ಜೊತೆಗೆ ಮನವಿಯನ್ನು ಸಲ್ಲಿಸಬಹುದು. |
| | (3) | The petition under this section may be filed at any time but before the child filing the petition completes two years of attaining majority. | | (3) | ಈ ಸೆಕ್ಷನ್ ಅಡಿಯಲ್ಲಿ ದೂರನ್ನು ಯಾವುದೇ ಸಮಯದಲ್ಲಿ ಸಲ್ಲಿಸಬಹುದು ಆದರೆ ಮಗು ಅದು ಪೌಢಾವಸ್ಥೆಗೆ ಬಂದ ಎರಡು ವರ್ಷದೊಳಗೆ ದೂರು ಸಲ್ಲಿಸಬೇಕು. |
| | (4) | While granting a decree of nullity under this section, the district court shall make an order directing both the parties to the marriage and their parents or their guardians to return to the other party, his or her parents or guardian, as the case may be, the money, valuables, ornaments and other gifts received on the occasion of the marriage by them from the other side, or an amount equal to the value of such valuables, ornaments, other gifts and money:<br>Provided that no order under this section shall be passed unless the concerned parties have been given notices to appear before the district court and show cause why such order should not be passed. | | (4) | ಈ ಸೆಕ್ಷನ್ ಅಡಿಯಲ್ಲಿ ಮದುವೆಯನ್ನು ಅಸಿಂಧುವೆಂದು ಘೋಷಿಸುವಾಗ ಜಿಲ್ಲಾ ನ್ಯಾಯಾಲಯವು ಮದುವೆಯಾದ ಇಬ್ಬರು ವ್ಯಕ್ತಿಗಳಿಗೆ ಮತ್ತು ಅವರ ತಂದೆ–ತಾಯಿಗಳಿಗೆ, ಪೋಷಕರಿಗೆ ಪ್ರಕರಣಕ್ಕೆ ತಕ್ಕ ಹಾಗೆ ಆತನ ಅಥವಾ ಆಕೆಯ ತರೆ ದೆ–ತಾಯಿಗಳಿಗೆ ಅಥವಾ ಪೋಷಕರಿಗೆ ಒಬ್ಬರು ಇನ್ನೊಬ್ಬರಿಂದ ಮದುವೆಯ ಸಮಯದಲ್ಲಿ ತೆಗೆದುಕೊಂಡ ಹಣ, ಬೆಲೆಬಾಳುವ ವಸ್ತುಗಳು, ಆಭರಣಗಳು ಮತ್ತು ಇತರೆ ಉಡುಗೊರೆಗಳ ಅಥವಾ ಆ ಬೆಲೆಬಾಳುವ ವಸ್ತುಗಳು, ಆಭರಣಗಳು ಮತ್ತು ಇತರೆ ಉಡುಗೊರೆಗಳ ಮೊತ್ತಕ್ಕೆ ಸರಿಸಮವಾದ ಹಣದ ವಾಪಸಾತಿಗೆ ಆದೇಶ ನೀಡಬಹುದು.<br><br>ಆದರೆ ಸಂಬಂಧಪಟ್ಟ ವ್ಯಕ್ತಿಗಳು ಜಿಲ್ಲಾ ನ್ಯಾಯಾಲಯಕ್ಕೆ ಹಾಜರಾಗಲು ನೋಟೀಸ್ ನೀಡದಿದ್ದರೆ ಮತ್ತು ಈ ರೀತಿಯ ಆದೇಶವನ್ನು ಏಕೆ ನೀಡಬಾರದು ಎಂಬುದಕ್ಕೆ ವಿವರಣೆ ಕೇಳದಿದ್ದರೆ ಈ ಕಾಯ್ದೆಯಡಿ ಯಾವುದೇ ಆದೇಶ ನೀಡುವಂತಿಲ್ಲ. |
| | | **Provision for maintenance and residence to female contracting party to child marriage.** | | | **ಬಾಲ್ಯ ವಿವಾಹವಾದ ಹುಡುಗಿಗೆ ನಿರ್ವಹಣಾ ವೆಚ್ಚ ಮತ್ತು ವಸತಿಯನ್ನು ಒದಗಿಸುವುದು.** |
| 4 | (1) | While granting a decree under section 3, the district court may also make an interim or final order directing the male contracting party to the child marriage, and in case the male contracting party to such marriage is a minor, his parent or guardian to pay maintenance to the female contracting party to the marriage until her remarriage. | 4 | (1) | ಜಿಲ್ಲಾ ನ್ಯಾಯಾಲಯವು ಸೆಕ್ಷನ್ 3ರ ಅಡಿಯಲ್ಲಿ ಆದೇಶವನ್ನು ನೀಡುವಾಗ ಬಾಲ್ಯ ವಿವಾಹವಾದ ಗಂಡಿಗೆ ಅಥವಾ ಗಂಡು ಅಪ್ರಾಪ್ತನಾಗಿದ್ದರೆ ಆತನ ತಂದೆ ತಾಯಿಗಳಿಗೆ, ಪೋಷಕರಿಗೆ ಬಾಲ್ಯ ವಿವಾಹಕ್ಕೆ ಒಳಗಾದ ಹೆಣ್ಣಿನ ನಿರ್ವಹಣಾ ವೆಚ್ಚವನ್ನು ಅವಳು ಮರುಮದುವೆಯಾಗುವ ತನಕ ಭರಿಸಬೇಕೆಂದು ಮಧ್ಯಂತರ ಅಥವಾ ಅಂತಿಮ ಆದೇಶವನ್ನು ನೀಡಬಹುದು. |

| | | | | | |
|---|---|---|---|---|---|
| | (2) | The quantum of maintenance payable shall be determined by the district court having regard to the needs of the child, the lifestyle enjoyed by such child during her marriage and the means of income of the paying party. | | (2) | ನೀಡಬೇಕಾದ ನಿರ್ವಹಣಾ ಮೊತ್ತದ ಗಾತ್ರವನ್ನು ಜಿಲ್ಲಾ ನ್ಯಾಯಾಲಯವು ಮಗುವಿನ ಅವಶ್ಯಕತೆಗೆ ಅನುಗುಣವಾಗಿ, ಮಗು ಮದುವೆಯ ಸಮಯದಲ್ಲಿ ಅನುಭವಿಸುತ್ತಿದ್ದ ಜೀವನ ಶೈಲಿ ಮತ್ತು ಪಾವತಿಸುವವರ ಆದಾಯದ ಮೇಲೆ ನಿರ್ಧರಿಸುತ್ತದೆ. |
| | (3) | The amount of maintenance may be directed to be paid monthly or in lump sum. | | (3) | ನಿರ್ವಹಣಾ ಮೊತ್ತವನ್ನು ಪ್ರತಿ ತಿಂಗಳೂ ಅಥವಾ ಒಮ್ಮೆಲೆ ನೀಡುವಂತೆ ನಿರ್ದೇಶಿಸಬಹುದು. |
| | (4) | In case the party making the petition under section 3 is the female contracting party, the district court may also make a suitable order as to her residence until her remarriage. | | (4) | ಸೆಕ್ಷನ್ 3ರ ಅಡಿಯಲ್ಲಿ ದೂರು ನೀಡಿದ ವ್ಯಕ್ತಿ ಮಹಿಳೆಯಾಗಿದ್ದಲ್ಲಿ, ಆಕೆ ಮರು ಮದುವೆಯಾಗುವ ತನಕ ಆಕೆಯ ವಾಸ್ತವ್ಯಕ್ಕೆ ಜಿಲ್ಲಾ ನ್ಯಾಯಾಲಯವು ಸೂಕ್ತವಾದ ಆದೇಶವನ್ನು ನೀಡಬಹುದು. |
| | | **Custody and maintenance of children of child marriages** | | | **ಬಾಲ್ಯವಿವಾಹದಿಂದ ಹುಟ್ಟಿದ ಮಕ್ಕಳ ಸುಪರ್ದಿ/ರಕ್ಷಣೆ ಮತ್ತು ನಿರ್ವಹಣೆ** |
| 5 | (1) | Where there are children born of the child marriage, the district court shall make an appropriate order for the custody of such children. | 5 | (1) | ಬಾಲ್ಯವಿವಾಹದಿಂದ ಮಕ್ಕಳು ಹುಟ್ಟಿದ್ದರೆ, ಜಿಲ್ಲಾ ನ್ಯಾಯಾಲಯವು ಅಂತಹ ಮಕ್ಕಳ ರಕ್ಷಣೆಗೆ ಸೂಕ್ತವಾದ ಆದೇಶವನ್ನು ಹೊರಡಿಸಬೇಕು. |
| | (2) | While making an order for the custody of a child under this section, the welfare and best interests of the child shall be the paramount consideration to, be given by the district court. | | (2) | ಈ ಸೆಕ್ಷನ್ ಅಡಿಯಲ್ಲಿ ಮಗುವಿನ ಸುಪರ್ಧಿಯ ಆದೇಶವನ್ನು ಹೊರಡಿಸುವಾಗ ಜಿಲ್ಲಾ ನ್ಯಾಯಾಲಯವು ಮಗುವಿನ ಕಲ್ಯಾಣ ಮತ್ತು ಹಿತದೃಷ್ಟಿಯನ್ನು ಗಾಢವಾಗಿ ಪರಿಗಣಿಸಬೇಕು. |
| | (3) | An order for custody of a child may also include appropriate directions for giving to the other party access to the child in such a manner as may best serve the interests of the child, and such other orders as the district court may, in the interest of the child, deem proper. | | (3) | ಮಗುವನ್ನು ಸುಪರ್ದಿಗೆ ಒಪ್ಪಿಸುವಾಗ ಮಗುವಿನ ಹಿತದೃಷ್ಟಿಗೆ ಪೂರಕವಾಗುವಂತೆ ಬೇರೆ ವ್ಯಕ್ತಿಗಳು ಮಗುವಿನೊಡನೆ ಒಡನಾಡಲು ಅವಕಾಶ ನೀಡುವಂತಹ ಸೂಕ್ತ ನಿರ್ದೇಶನವನ್ನು ಒಳಗೊಂಡಿರಬಹುದು ಮತ್ತು ಜಿಲ್ಲಾ ನ್ಯಾಯಾಲಯವು ಮಗುವಿನ ಹಿತದೃಷ್ಟಿಯಿಂದ ತನಗೆ ಸೂಕ್ತವೆನಿಸಿದ ಇತರೆ ಆದೇಶವನ್ನು ನೀಡಬಹುದು. |
| | (4) | The district court may also make an appropriate order for providing maintenance to the child by a party to the marriage or their parents or guardians. | | (4) | ಜಿಲ್ಲಾ ನ್ಯಾಯಾಲಯವು ಮದುವೆಗೆ ಸಂಬಂಧಪಟ್ಟ ಅಥವಾ ಅದರ ತಂದೆ–ತಾಯಿ ಅಥವಾ ಪೋಷಕರಿಗೆ ಮಗುವಿನ ನಿರ್ವಹಣಾ ವೆಚ್ಚವನ್ನು ನೀಡಲೂ ಸಹ ಸೂಕ್ತವಾದ ಆದೇಶವನ್ನು ನೀಡಬಹುದು. |
| | | **Legitimacy of children born of child marriages.** | | | **ಬಾಲ್ಯವಿವಾಹದಿಂದ ಜನಿಸಿದ ಮಗುವಿನ ಸ್ಥಾನಮಾನ** |
| 6 | | Notwithstanding that a child marriage has been annulled by a decree of nullity under section 3, every child be gotten or conceived of such marriage before the decree is made, whether born before or after the commencement of this Act, shall be deemed to be a legitimate child for all purposes. | 6 | | ಸೆಕ್ಷನ್ 3ರ ಅಡಿಯಲ್ಲಿ ಬಾಲ್ಯವಿವಾಹವನ್ನು ಅಸಿಂಧುವೆಂದು ಆದೇಶ ಹೊರಡಿಸಿದ್ದರೂ ಸಹ ಇಂತಹ ಬಾಲ್ಯವಿವಾಹಗಳಿಂದ ಈ ಕಾಯ್ದೆಯ ಪ್ರಾರಂಭಕ್ಕೆ ಮೊದಲು ಅಥವಾ ನಂತರ ಜನಿಸಿದ ಅಥವಾ ಗರ್ಭದಲ್ಲಿರುವ ಮಕ್ಕಳು ಎಲ್ಲಾ ಉದ್ದೇಶಕ್ಕೂ ಕಾನೂನುಬದ್ಧ ಮಕ್ಕಳೆಂದು ಪರಿಗಣಿಸಲಾಗುವುದು. |

| | | | | | |
|---|---|---|---|---|---|
| | | **Power of district court to modify orders issued under section 4 or section 5.** | | | **ಜಿಲ್ಲಾ ನ್ಯಾಯಾಲಯಕ್ಕೆ ಸೆಕ್ಷನ್ 4 ಅಥವಾ 5ರಡಿಯಲ್ಲಿ ನೀಡಿದ ಆದೇಶವನ್ನು ಮಾರ್ಪಡಿಸುವ ಅಧಿಕಾರ** |
| 7 | | The district court shall have the power to add to, modify or revoke any order made under section 4 or section 5 and if there is any change in the circumstances at any time during the pendency of the petition and even after the final disposal of the petition. | 7 | | ಪ್ರಕರಣ ಬಾಕಿ ಇರುವ ಸಂದರ್ಭದಲ್ಲಿ ಮತ್ತು ಪ್ರಕರಣಕ್ಕೆ ಅಂತಿಮ ಆದೇಶ ನೀಡಿದ ತರುವಾಯ ಬದಲಾದ ಸನ್ನಿವೇಶಗಳಲ್ಲಿ ಯಾವುದೇ ಸಮಯದಲ್ಲಿ ಸೆಕ್ಷನ್ 4 ಮತ್ತು ಸೆಕ್ಷನ್ 5ರ ಅಡಿಯಲ್ಲಿ ನೀಡಿದ ಯಾವುದೇ ಆದೇಶಕ್ಕೆ ಹೊಸದಾಗಿ ಸೇರಿಸಲು, ಮಾರ್ಪಡಿಸಲು, ಅಸಿಂಧುಗೊಳಿಸಲು ಜಿಲ್ಲಾ ನ್ಯಾಯಾಲಯಕ್ಕೆ ಅಧಿಕಾರವಿದೆ. |
| | | **Court to which petition should be made.** | | | **ದೂರು ಸಲ್ಲಿಸಬಹುದಾದ ನ್ಯಾಯಾಲಯ** |
| 8 | | For the purpose of grant of reliefs under sections 3, 4 and 5, the district court having jurisdiction shall include the district court having jurisdiction over the place where the defendant or the child resides, or where the marriage was solemnised or where the parties last resided together or the petitioner is residing on the date of presentation of the petition. | 8 | | ಸೆಕ್ಷನ್ 3, 4 ಮತ್ತು 5ರಡಿಯಲ್ಲಿ ಪರಿಹಾರ ಧನ ನೀಡುವ ಉದ್ದೇಶಕ್ಕಾಗಿ ವಿಚಾರಣೆ ನಡೆಸಿದ ಜಿಲ್ಲಾ ನ್ಯಾಯಾಲಯವು ಮಗು ವಾಸಿಸುತ್ತಿರುವ ಜಿಲ್ಲೆಯ ನ್ಯಾಯಾಲಯ ಅಥವಾ ಮದುವೆ ನಡೆದ ಸ್ಥಳದ ಜಿಲ್ಲಾ ನ್ಯಾಯಾಲಯ ಅಥವಾ ಇಬ್ಬರೂ ಕಡೆಯಬಾರಿ ಜೊತೆಗಿದ್ದ ಸ್ಥಳ ಅಥವಾ ಪ್ರಕರಣವನ್ನು ದಾಖಲಿಸುವಾಗ ಫಿರ್ಯಾದುದಾರ ನೆಲೆಸಿದ್ದ ಸ್ಥಳದ ಜಿಲ್ಲಾ ನ್ಯಾಯಾಲಯಗಳನ್ನು ಸೇರಿಸಿಕೊಳ್ಳಬಹುದು. |
| | | **Punishment for male adult marrying a child** | | | **ಪುರುಷ ವಯಸ್ಕರು ಮಗುವನ್ನು ಮದುವೆಯಾದರೆ ಶಿಕ್ಷೆ** |
| 9 | | Whoever, being a male adult above eighteen years of age, contracts a child marriage shall be punishable with rigorous imprisonment which may extend to two years or with fine which may extend to one lakh rupees or with both. | 9 | | ಯಾರಾದರೂ ಹದಿನೆಂಟು ವರ್ಷ ಮೇಲ್ಪಟ್ಟ ಪುರುಷರು ಬಾಲ್ಯ ವಿವಾಹವಾಗಿದ್ದರೆ ಅವರಿಗೆ ಎರಡು ವರ್ಷದವರೆಗೆ ವಿಸ್ತರಿಸಬಹುದಾದ ಕಠಿಣ ಕಾರಾಗೃಹ ಶಿಕ್ಷೆ ಮತ್ತು ಒಂದು ಲಕ್ಷದವರೆಗೆ ದಂಡ ಅಥವಾ ಎರಡನ್ನೂ ವಿಧಿಸಬಹುದು. |
| | | **Punishment tor solemnising a child marriage.** | | | **ಬಾಲ್ಯವಿವಾಹದ ಆಚರಣೆಗೆ ಶಿಕ್ಷೆ** |
| 10 | | Whoever performs, conducts, directs or abets any child marriage shall be punishable with rigorous imprisonment which may extend to two years and shall be liable to fine which may extend to one lakh rupees unless he proves that he had reasons to believe that the marriage was not a child marriage | 10 | | ಯಾರಾದರೂ ಬಾಲ್ಯವಿವಾಹವನ್ನು ನೆರವೇರಿಸಿದ್ದು, ನಿರ್ದೇಶಿಸಿದ್ದು ಅಥವಾ ನೆರವು ನೀಡಿದ್ದೇ ಆದಲ್ಲಿ ಅವರು ಅದು ಬಾಲ್ಯವಿವಾಹ ಅಲ್ಲವೆಂದು ನಿರೂಪಿಸಲು ಸಾಕಷ್ಟು ಪುರಾವೆಗಳನ್ನು ಒದಗಿಸದಿದ್ದಲ್ಲಿ ಅವರಿಗೆ ಎರಡು ವರ್ಷದವರೆಗೆ ವಿಸ್ತರಿಸಬಹುದಾದ ಕಠಿಣ ಕಾರಾಗೃಹ ಶಿಕ್ಷೆ ಮತ್ತು ಒಂದು ಲಕ್ಷದವರೆಗೆ ದಂಡ ವಿಧಿಸಬಹುದು. |
| | | **Punishment for promoting or permitting solemnization of child marriages.** | | | **ಬಾಲ್ಯವಿವಾಹವನ್ನು ಉತ್ತೇಜಿಸಿದರೆ ಅಥವಾ ಆಚರಿಸಲು ಒಪ್ಪಿಗೆ ನೀಡಿದರೆ ಶಿಕ್ಷೆ** |
| 11 | (1) | Where a child contracts a child marriage, any person having charge of the child, whether as parent or guardian or any other person or in any other capacity, lawful or unlawful, including any member of an organisation or association of persons who does any act to promote | 11 | (1) | ಯಾವುದೇ ಮಗು ಬಾಲ್ಯವಿವಾಹಕ್ಕೆ ಒಳಗಾದರೆ, ಮಗು ಸುಪರ್ಧಿಯಲ್ಲಿರುವ ವ್ಯಕ್ತಿ, ಸಂಸ್ಥೆ ಅಥವಾ ಸಂಘಗಳ ಸದಸ್ಯರೂ ಸೇರಿದಂತೆ ತಂದೆತಾಯಿ ಮತ್ತು ಪೋಷಕರು ಅಥವಾ ಯಾವುದೇ ವ್ಯಕ್ತಿ ಅಥವಾ ಇತರೆ ಯಾವುದೇ ಸಾಮರ್ಥ್ಯದಿಂದ, ಸಕ್ರಮವಾಗಿ ಅಥವಾ ಅಕ್ರಮವಾಗಿ, ಬಾಲ್ಯವಿವಾಹಕ್ಕೆ ಹಾಜರಾಗುವುದು ಅಥವಾ |

| | | | | | |
|---|---|---|---|---|---|
| | | the marriage or permits it to be solemnised, or negligently fails to prevent it from being solemnised, including attending or participating in a child marriage, shall be punishable with rigorous imprisonment which may extend to two years and shall also be liable to fine which may extend up to one lakh rupees:<br>Provided that no woman shall be punishable with imprisonment. | | | ಭಾಗವಹಿಸುವುದೂ ಸೇರಿದಂತೆ ಮದುವೆಗೆ ಉತ್ತೇಜನ ನೀಡಿದರೆ ಅಥವಾ ಅದರ ಆಚರಣೆಗೆ ಒಪ್ಪಿಗೆ ನೀಡಿದರೆ ಅಥವಾ ಮದುವೆಯ ಆಚರಣೆಯನ್ನು ತಡೆಯುವುದರಲ್ಲಿ ನಿರ್ಲಕ್ಷತೆಯಿಂದ ವಿಫಲರಾದರೆ ಅವರಿಗೆ ಎರಡು ವರ್ಷಗಳ ಕಾಲ ವಿಸ್ತರಿಸಬಹುದಾದ ಕಠಿಣ ಕಾರಾಗೃಹ ಶಿಕ್ಷೆ ಮತ್ತು ಒಂದು ಲಕ್ಷ ರೂಗಳವರೆಗೂ ವಿಸ್ತರಿಸಬಹುದಾದ ದಂಡವನ್ನು ವಿಧಿಸಬಹುದು.<br>ಆದರೆ ಯಾವುದೇ ಮಹಿಳೆಗೆ ಕಾರಾಗೃಹ ಶಿಕ್ಷೆ ವಿಧಿಸುವಂತಿಲ್ಲ. |
| | (2) | For the purposes of this section, it shall be presumed, unless and until the contrary is proved, that where a minor child has contracted a marriage, the person having charge of such minor child has negligently failed to prevent the marriage from being solemnised. | | (2) | ಈ ಕಾಯ್ದೆಯ ಉದ್ದೇಶಕ್ಕಾಗಿ ಬಾಲ್ಯವಿವಾಹವಾಗಿದ್ದರೆ, ಆ ಅಪ್ರಾಪ್ತ ಮಗುವಿನ ಸುಪರ್ಧಿವಹಿಸಿರುವ ವ್ಯಕ್ತಿ ಸಾಕಷ್ಟು ವಿರುದ್ಧವಾದುದನ್ನು ಸಾಧಿಸುವ ತನಕ ಆತನು ನಿರ್ಲಕ್ಷ್ಯದಿಂದ ವಿವಾಹವನ್ನು ತಡೆಯಲು ವಿಫಲನಾದನೆಂದೇ ಭಾವಿಸಲಾಗುವುದು. |
| | | **Marriage of a minor child to be void in certain circumstances.** | | | **ಕೆಲವು ಸಂದರ್ಭಗಳಲ್ಲಿ ಅಪ್ರಾಪ್ತ ಮಗುವಿನ ಮದುವೆ ಅಸಿಂಧು** |
| 12 | | Where a child, being a minor- | 12 | | ಮಗು ಅಪ್ರಾಪ್ತವಾಗಿದ್ದರೆ – |
| | (a) | is taken or enticed out of the keeping of the lawful guardian; or | | (a) | ಕಾನೂನುಬದ್ಧ ಪೋಷಕರಿಂದ ಹೊರಕ್ಕೆ ತೆಗೆದಿರುವುದು ಅಥವಾ ಅವಳನ್ನು ಆಕರ್ಷಿಸಲಾಗಿದ್ದಲ್ಲಿ; ಅಥವಾ |
| | (b) | by force compelled, or by any deceitful means induced to go from any place; or | | (b) | ಬಲವಂತವಾಗಿ ಮದುವೆಯಾಗಲು ಒತ್ತಾಯಿಸಿದ್ದಲ್ಲಿ; ಅಥವಾ ಯಾವುದಾದರೂ ಸ್ಥಳದಿಂದ ಮೋಸದಿಂದ ಹೋಗಲು ಪ್ರಚೋದಿಸಿದ್ದಲ್ಲಿ; ಅಥವಾ |
| | (c) | is sold for the purpose of marriage; and made to go through a form of marriage or if the minor is married after which the minor is sold or trafficked or used for immoral purposes, such marriage shall be null and void. | | (c) | ಮದುವೆಯಾಗಲೆಂದೇ ಮಾರಲ್ಪಟ್ಟಿದ್ದಲ್ಲಿ; ಮತ್ತು ಮದುವೆಯಂತಹ ವಿಧಾನದಲ್ಲಿ ತೊಡಗಿಸಿದ್ದಲ್ಲಿ; ಅಥವಾ ಅಪ್ರಾಪ್ತರನ್ನು ಮದುವೆ ಮಾಡಿ ಆಮೇಲೆ ಆ ಅಪ್ರಾಪ್ತರನ್ನು ಮಾರಿದ್ದಲ್ಲಿ ಅಥವ ಸಾಗಣೆಗೆ ಗುರಿಪಡಿಸಿದ್ದಲ್ಲಿ ಅಥವಾ ಅನೈತಿಕ ಬಳಕೆಯಾಗಿದ್ದಲ್ಲಿ, ಅಂತಹ ಮದುವೆಗಳನ್ನು ಅಸಿಂಧುವೆಂದು ಘೋಷಿಸಲಾಗುತ್ತದೆ; |
| | | **Power of court to issue injunction Prohibiting child marriages.** | | | **ಬಾಲ್ಯವಿವಾಹವನ್ನು ನಿಷೇಧಿಸಲು ತಡೆಯಾಜ್ಞೆ ನೀಡಲು ನ್ಯಾಯಾಲಯದ ಅಧಿಕಾರ** |
| 13 | (1) | Notwithstanding anything to the contrary contained in this Act, if, on an application of the Child Marriage Prohibition Officer or on receipt of information through a complaint or otherwise from any person, a Judicial Magistrate of the first class or a Metropolitan Magistrate is satisfied that a child marriage in contravention of this Act has been arranged or is about to be solemnised, such Magistrate shall issue an injunction against any person including a member of an organisation or an association of persons prohibiting such marriage. | 13 | (1) | ಈ ಕಾಯಿದೆಯಲ್ಲಿ ಒಳಗೊಂಡಿರುವ ನಿಷೇಧಗಳಿಗೆ ವಿರುದ್ಧವಾಗಿ ಏನಾದರೂ ಜರುಗಿ, ಬಾಲ್ಯವಿವಾಹ ನಿಷೇಧಾಧಿಕಾರಿಗಳಿಂದ ಅಥವಾ ಯಾವುದಾದರೂ ದೂರಿನ ಮೂಲಕ ಮಾಹಿತಿ ದೊರಕಿದಾಗ ಅಥವಾ ಯಾವುದಾದರೂ ವ್ಯಕ್ತಿಯ ಮೂಲಕ ತಿಳಿದಾಗ, ಮೊದಲ ದರ್ಜೆಯ ನ್ಯಾಯಾಂಗ ಮ್ಯಾಜಿಸ್ಟ್ರೇಟರು ಅಥವಾ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟರಿಗೆ, ಈ ಕಾಯಿದೆಯ ವಿರುದ್ಧವಾಗಿ ಬಾಲ್ಯ ವಿವಾಹಕ್ಕೆ ವ್ಯವಸ್ಥೆಯಾಗುತ್ತಿದೆ ಅಥವಾ ಇನ್ನೇನು ಅಂತಹ ಮದುವೆಯಾಗುತ್ತಿದೆ ಎಂಬುದು ಮನವರಿಕೆಯಾದರೆ ಅಂತಹ ಮ್ಯಾಜಿಸ್ಟ್ರೇಟರು ಆ ಬಾಲ್ಯವಿವಾಹವನ್ನು ನಿಲ್ಲಿಸಲು ವ್ಯಕ್ತಿಗಳಿಗೆ ಅಥವಾ ಸಂಘಟಕರಿಗೆ/ಸಂಘಟನೆಗೆ ತಡೆಯಾಜ್ಞೆಯನ್ನು ನೀಡಬೇಕು. |

| | | | | | |
|---|---|---|---|---|---|
| | (2) | A complaint under sub-section (1) may be made by any person having personal knowledge or reason to believe, and a non-governmental organisation having reasonable information, relating to the likelihood of taking place of solemnisation of a child marriage or child marriages. | | (2) | ಬಾಲ್ಯವಿವಾಹ ನಡೆಯುವ ಸಂಭವ ಅಥವಾ ಬಾಲ್ಯವಿವಾಹಕ್ಕೆ ಸಂಬಂಧಿಸಿದಂತೆ ಈ ಕುರಿತು ಸ್ವಂತ ಜ್ಞಾನವಿರುವ ಅಥವಾ ನಂಬಲು ಸಾಕಷ್ಟು ಕಾರಣಗಳಿರುವ ಯಾವುದೇ ವ್ಯಕ್ತಿ ಮತ್ತು ಸಾಕಷ್ಟು ನಂಬಲರ್ಹ ಮಾಹಿತಿಯಿರುವ ಸ್ವಯಂಸೇವಾ ಸಂಸ್ಥೆಗಳು ಉಪ ಸೆಕ್ಷನ್ (1)ರ ಅಡಿಯಲ್ಲಿ ದೂರನ್ನು ಸಲ್ಲಿಸಬಹುದು. |
| | (3) | The Court of the Judicial Magistrate of the first class or the Metropolitan Magistrate may also take *suo motu* cognizance on the basis of any reliable report or information. | | (3) | ಪ್ರಥಮ ದರ್ಜೆ ನ್ಯಾಯಾಲಯ ಅಥವಾ ಮೆಟ್ರೋಪಾಲಿಟನ್ ನ್ಯಾಯಾಲಯ ಯಾವುದಾದರು ವರದಿ ಅಥವಾ ಮಾಹಿತಿಯ ಆಧಾರದ ಮೇಲೆ ಸ್ವಂತವಾಗಿ ದೂರನ್ನು ದಾಖಲಿಸಿಕೊಳ್ಳಬಹುದು. |
| | (4) | For the purposes of preventing solemnisation of mass child marriages on certain days such as *Akshaya Trutiya,* the District Magistrate shall be deemed to be the Child Marriage Prohibition Officer with all powers as are conferred on a Child Marriage Prohibition Officer by or under this Act. | | (4) | ಅಕ್ಷಯ ತೃತೀಯದಂಥಹ ಕೆಲವು ನಿರ್ಧಿಷ್ಟ ದಿನಗಳಂದು ನಡೆಯುವ ಸಮೂಹಿಕ ಬಾಲ್ಯವಿವಾಹಗಳ ಆಚರಣೆಯನ್ನು ನಡೆಯುವ ಸಲುವಾಗಿ ಜಿಲ್ಲಾ ನ್ಯಾಯಾಧೀಶರು ಬಾಲ್ಯವಿವಾಹ ನಿಷೇಧ ಅಧಿಕಾರಿಯಾಗಿರುತ್ತಾರೆ ಮತ್ತು ಅವರು ಬಾಲ್ಯವಿವಾಹ ನಿಷೇಧ ಅಧಿಕಾರಿಗಳಿಗೆ ಇರುವ ಅಥವಾ ಈ ಕಾಯ್ದೆಯಡಿ ಇರುವ ಎಲ್ಲಾ ಅಧಿಕಾರಗಳನ್ನು ಹೊಂದಿರುತ್ತಾರೆ. |
| | (5) | The District Magistrate shall also have additional powers to stop or prevent solemnisation of child marriages and for this purpose, he may take all appropriate measures and use the minimum force required. | | (5) | ಜಿಲ್ಲಾ ನ್ಯಾಯಾಧೀಶರಿಗೆ ಬಾಲ್ಯವಿವಾಹಗಳ ಆಚರಣೆಯನ್ನು ನಿಲ್ಲಿಸಲು ಅಥವಾ ತಡೆಯಲು ಹೆಚ್ಚುವರಿ ಅಧಿಕಾರವಿದೆ ಮತ್ತು ಈ ಉದ್ದೇಶಕ್ಕಾಗಿ ಅವರು ಎಲ್ಲಾ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು ಮತ್ತು ಅವಶ್ಯವಿರುವ ಕನಿಷ್ಟ ಬಲವನ್ನು ಉಪಯೋಗಿಸಬೇಕು. |
| | (6) | No injunction under sub-section (1) shall be issued against any person or member of any organisation or association of persons unless the Court has previously given notice to such person, members of the organisation or association of persons, as the case may be, and has *offered* him or them an opportunity to show cause against the issue of the injunction: Provided that in the case of any urgency, the Court shall have the power to issue an interim injunction without giving any notice under this section. | | (6) | ಯಾವುದಾದರೂ ವ್ಯಕ್ತಿ/ವ್ಯಕ್ತಿಗಳು ಅಥವಾ ಸಂಘಟನೆಗೆ ಈ ಮೊದಲೇ ಬಾಲ್ಯವಿವಾಹ ನಡೆಸುವ/ಸಂಘಟಿಸುವ ಕುರಿತು ನೋಟೀಸ್ ನೀಡಿದ್ದು, ಅವರಿಗೆ/ಅಂತಹ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ತಡೆಯಾಜ್ಞೆಯ ವಿರುದ್ಧ ವಿವರಣೆ/ಕಾರಣ ನೀಡಲು ಅವಕಾಶ ನೀಡಿದ್ದಲ್ಲಿ, ಮೇಲೆ ಸೂಚಿಸಿರುವ ಉಪ ಸೆಕ್ಷನ್(1)ರಂತೆ ತಡೆಯಾಜ್ಞೆಯನ್ನು ನೀಡಲು ಬರುವುದಿಲ್ಲ; ಆದರೆ, ತುರ್ತು ಸಂದರ್ಭಗಳಲ್ಲಿ, ಈ ಸೆಕ್ಷನ್ ಅಡಿ ಯಾವುದೇ ನೋಟಿಸ್ ನೀಡದೆಯೇ ನ್ಯಾಯಾಲಯವು ಬಾಲ್ಯವಿವಾಹಕ್ಕೆ ತಡೆಯಾಜ್ಞೆ ನೀಡುವ ಅಧಿಕಾರವನ್ನು ಹೊಂದಿದೆ. |
| | (7) | An injunction issued under sub-section (1) may be confirmed or vacated after giving notice and hearing the party against whom the injunction was issued. | | (7) | ಯಾವ ವ್ಯಕ್ತಿಯ ವಿರುದ್ಧ ತಡೆಯಾಜ್ಞೆ ನೀಡಲಾಗಿತ್ತೋ ಅವರಿಗೆ ನೋಟೀಸ್ ಜಾರಿ ಮಾಡಿ ಮತ್ತು ವಿಚಾರಣೆ ನಡೆಸಿ ಉಪ ಸೆಕ್ಷನ್ 1ರಡಿಯಲ್ಲಿ ನೀಡಲಾದ ತಡೆಯಾಜ್ಞೆಯನ್ನು ದೃಢೀಕರಿಸಬಹುದು ಅಥವಾ ತೆರವುಗೊಳಿಸಬಹುದು. |
| | (8) | The Court may either on its own motion or on the application of any person aggrieved, rescind or alter an injunction issued under sub-section (1). | | (8) | ನ್ಯಾಯಾಲಯವು ತನ್ನ ಸ್ವಂತಿಕೆಯಿಂದ ಅಥವಾ ತೊಂದರೆಗೀಡಾದ ಯಾವುದೇ ವ್ಯಕ್ತಿಯ ಅರ್ಜಿಯ ಮೇರೆಗೆ ಉಪ ಸೆಕ್ಷನ್ 1ರಡಿಯಲ್ಲಿ ನೀಡಲಾದ ತಡೆಯಾಜ್ಞೆಯನ್ನು ತೆರವುಗೊಳಿಸಬಹುದು ಅಥವಾ ನವೀಕರಿಸಬಹುದು. |

| | | | | | |
|---|---|---|---|---|---|
| | (9) | Where an application is received under sub-section (1), the Court shall afford the applicant an early opportunity of appearing before it either in person or by an advocate and if the Court, after hearing the applicant rejects the application wholly or in part, it shall record in writing its reasons for so doing. | | (9) | ಉಪ ಸೆಕ್ಷನ್ 1ರಡಿಯಲ್ಲಿ ಅರ್ಜಿ ಪಡೆದುಕೊಂಡ ನಂತರ ನ್ಯಾಯಾಲಯವು ಅರ್ಜಿದಾರರಿಗೆ ಸ್ವತಃ ಅಥವಾ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಲು ತ್ವರಿತವಾಗಿ ಅವಕಾಶ ನೀಡಬೇಕು ಮತ್ತು ವಿಚರಣೆ ನಡೆಸಿದ ನಂತರ ಅರ್ಜಿದಾರ ತನ್ನ ಅರ್ಜಿಯನ್ನು ಸಂಪೂರ್ಣವಾಗಿ ಅಥವಾ ಭಾಗಶಃ ನಿರಾಕರಿಸಿದರೆ ಹಾಗೆ ಮಾಡಲು ಕಾರಣಗಳನ್ನು ಲಿಖಿತವಾಗಿ ದಾಖಲಿಸಬೇಕು. |
| | (10) | Whoever knowing that an injunction has been issued under sub-section (1) against him disobeys such injunction shall be punishable with imprisonment of either description for a term which may extend to two years or with fine which may extend to one lakh rupees or with both:<br>Provided that no woman shall be punishable with imprisonment | | (10) | ಯಾರಾದರೂ ಉಪ ಸೆಕ್ಷನ್ 1ರ ಅಡಿಯಲ್ಲಿ ಆತನ ವಿರುದ್ಧ ತಡೆಯಾಜ್ಞೆ ನೀಡಿದ್ದೂ ಗೊತ್ತಿದ್ದೂ ಅದನ್ನು ಉಲ್ಲಂಘಿಸಿದರೆ ಅವರಿಗೆ ಅವರಿಗೆ ಎರಡು ವರ್ಷಗಳ ಕಾಲ ವಿಸ್ತರಿಸಬಹುದಾದ ಕಠಿಣ ಕಾರಾಗೃಹ ಶಿಕ್ಷೆ ಮತ್ತು ಒಂದು ಲಕ್ಷ ರೂಗಳವರೆಗೂ ವಿಸ್ತರಿಸಬಹುದಾದ ದಂಡವನ್ನು ವಿಧಿಸಬಹುದು.<br><br>ಆದರೆ ಯಾವುದೇ ಮಹಿಳೆಗೆ ಕಾರಾಗೃಹ ಶಿಕ್ಷೆ ವಿಧಿಸುವಂತಿಲ್ಲ. |
| | | **Child marriages in Contravention of injunction orders to be void** | | | **ಆದೇಶಗಳನ್ನು ಉಲ್ಲಂಘಿಸಿದ ಬಾಲ್ಯವಿವಾಹಗಳು ಅಸಿಂಧುವಾಗುತ್ತವೆ.** |
| 14 | | Any child marriage solemnised in contravention of an injunction order issued under section 13, whether interim or final, shall be void *ab initio*. | 14 | | ಸೆಕ್ಷನ್ 13ರಡಿಯಲ್ಲಿ ತಾತ್ಕಾಲಿಕ ಅಥವಾ ಅಂತಿಮ ತಡೆಯಾಜ್ಞೆ ನೀಡಿದ್ದರೂ, ಅದರ ವಿರುದ್ಧವಾಗಿ ನಡೆದ ಯಾವುದೇ ಬಾಲ್ಯವಿವಾಹಗಳು ನಡೆದೇಇಲ್ಲ/ಆಗಿಯೇಇಲ್ಲ ಎಂದು ಪರಿಗಣಿಸಲ್ಪಡುತ್ತವೆ. |
| | | **Offences to be cognizable and non bailable** | | | **ವಾರಂಟುರಹಿತ ಮತ್ತು ಜಾಮೀನುರಹಿತ ಅಪರಾಧಗಳು** |
| 15 | | Notwithstanding anything contained in the Code of Criminal Procedure, 1973, an offence punishable under this Act shall be cognizable and non-bailable. | 15 | | ಭಾರತೀಯ ಅಪರಾಧ ಸಂಹಿತೆ 1973ರಲ್ಲಿ ಏನೇ ಹೇಳಿದ್ದರೂ ಸಹ ಈ ಕಾಯ್ದೆಯಡಿ ಬರುವ ಅಪರಾಧಗಳು ವಾರಂಟು ರಹಿತ ಮತ್ತು ಜಾಮೀನು ರಹಿತ |
| | | **Child Marriage Prohibition Officers** | | | **ಬಾಲ್ಯವಿವಾಹ ನಿಷೇಧ ಅಧಿಕಾರಿಗಳು** |
| 16 | (1) | The State Government shall, by notification in the Official Gazette, appoint for the whole, State, or such part thereof as may be specified in that notification, an officer or officers to be known as the Child Marriage Prohibition Officer having jurisdiction over the area or areas specified in the notification. | 16 | (1) | ಅಧಿಕೃತ ರಾಜಪತ್ರದಲ್ಲಿ ಪ್ರಕಟಿಸುವ ಮೂಲಕ ರಾಜ್ಯ ಸರ್ಕಾರಗಳು ಆ ಪ್ರಕಟನೆಯಲ್ಲಿ ನಿರ್ದಿಷ್ಟಪಡಿಸಿ ಇಡೀ ರಾಜ್ಯಕ್ಕೆ ಅಥವಾ ಅದು ಸೂಚಿಸುವ ನಿರ್ದಿಷ್ಟ ಪ್ರದೇಶಗಳಿಗೆ/ಭಾಗಗಳಿಗೆ ಅಧಿಕಾರಿ ಅಥವಾ ಅಧಿಕಾರಿಗಳನ್ನು **ಬಾಲ್ಯ ವಿವಾಹ ನಿಷೇಧಾಧಿಕಾರಿ**/ಗಳನ್ನಾಗಿ ಗುರುತಿಸಬೇಕು. |
| | (2) | The State Government may also request a respectable member of the locality with a record of social service or an officer of the Gram Panchayat or Municipality or an officer of the Government or any public sector undertaking or an office bearer of any non-governmental organisation to assist the Child Marriage Prohibition Officer and such member, officer or office bearer, as the case may be, shall be bound to act accordingly. | | (2) | ರಾಜ್ಯ ಸರ್ಕಾರವು ಸಮಾಜ ಸೇವೆಯ ಹಿನ್ನೆಲೆ ಇರುವ ಸಮುದಾಯದ ಗೌರವಾನ್ವಿತ ಸದಸ್ಯರು ಅಥವಾ ಗ್ರಾಮ ಪಂಚಾಯಿತಿ ಅಥವಾ ಪುರಸಭೆಯ ಅಧಿಕಾರಿ ಅಥವಾ ಸರ್ಕಾರಿ ಅಧಿಕಾರಿ ಅಥವಾ ಯಾವುದೇ ಖಾಸಗಿ ವಲಯದ ಅಥವಾ ಸ್ವಯಂಸೇವಾ ಸಂಸ್ಥೆಯ ವ್ಯಕ್ತಿಗಳನ್ನು ಬಾಲ್ಯವಿವಾಹ ನಿಷೇಧ ಅಧಿಕಾರಿಗೆ ನೆರವು ನೀಡುವಂತೆ ಮನವಿ ಮಾಡಬಹುದು ಮತ್ತು ಇಂಥಹ ಸದಸ್ಯರು, ಅಧಿಕಾರಿಗಳು ಬಾಲ್ಯ ವಿವಾಹದ ಯಾವುದೇ ಪ್ರಕರಣದಲ್ಲಿ ಕಾಯ್ದೆಗೆ ಬದ್ಧರಾಗಿರಬೇಕು. |

| | | | | | |
|---|---|---|---|---|---|
| | (3) | **It shall be the duty of the Child Marriage Prohibition Officer-** | | (3) | **ಬಾಲ್ಯ ವಿವಾಹ ನಿಷೇಧ ಅಧಿಕಾರಿಯ ಕರ್ತವ್ಯಗಳು –** |
| | (a) | To prevent solemarization of child marriages by taking such action as he may deem fit; | | (a) | ಬಾಲ್ಯವಿವಾಹಗಳ ಆಚರಣೆಯನ್ನು ಅವರಿಗೆ ಸೂಕ್ತವೆಂದು ಎನಿಸಿದ ಕ್ರಮಗಳನ್ನು ತೆಗೆದುಕೊಳ್ಳುವ ಮೂಲಕ ತಡೆಯಬೇಕು; |
| | (b) | to collect evidence for the effective prosecution of persons contravening the provisions of this Act; | | (b) | ಈ ಕಾಯ್ದೆಯ ಒದಗಣೆಯನ್ನು ಉಲ್ಲಂಘಿಸುವ ವ್ಯಕ್ತಿಯನ್ನು ಪರಿಣಾಮಕಾರಿ ಶಿಕ್ಷೆಗೆ ಒಳಪಡಿಸಲು ಸಾಕ್ಷಿಗಳನ್ನು ಸಂಗ್ರಹಿಸಬೇಕು; |
| | (c) | to advise either individual cases or counsel the residents of the locality generally not to indulge in promoting, helping, aiding or allowing the solemnisation of child marriages; | | (c) | ಬಾಲ್ಯವಿವಾಹಗಳ ಆಚರಣೆಯನ್ನು ಉತ್ತೇಜಿಸುವುದು, ನೆರವು ನೀಡುವುದು, ಧನ ಸಹಾಯ ಮಾಡುವುದು ಅಥವಾ ಅನುಮತಿ ನೀಡುವುದರ ವಿರುದ್ಧ ವ್ಯಕ್ತಿಗತ ಪ್ರಕರಣಗಳಲ್ಲಿ ಸಲಹೆ ನೀಡುವುದು ಅಥವಾ ಸಮುದಾಯಕ್ಕೆ ಸಮಾಲೋಚನೆ ನೀಡುವುದು; |
| | (d) | to create awareness of the evil which results from child marriages; | | (d) | ಬಾಲ್ಯವಿವಾಹದಿಂದ ಆಗುವ ದುಷ್ಪರಿಣಾಮಗಳ ಕುರಿತು ವ್ಯಾಪಕವಾದ ಪ್ರಚಾರ ನೀಡಬೇಕು; |
| | (e) | to sensitize the community on the issue of child marriages; | | (e) | ಸಮುದಾಯಗಳನ್ನು' ಬಾಲ್ಯವಿವಾಹ ಕುರಿತಂತೆ ಜಾಗೃತಗೊಳಿಸಬೇಕು; |
| | (f) | to furnish such periodical returns and statistics as the State Government may direct; and | | (f) | ರಾಜ್ಯ ಸರ್ಕಾರ ನಿರ್ದೇಶಿಸಿದಂತೆ ಬಾಲ್ಯವಿವಾಹ ಪ್ರಕರಣಗಳನ್ನು ಮತ್ತು ಅಂಕಿಅಂಶಗಳನ್ನು ಒದಗಿಸಬೇಕು; |
| | (g) | to discharge such other functions and duties as may be assigned to him by the State Government. | | (g) | ರಾಜ್ಯ ಸರ್ಕಾರ ವಹಿಸಿದ ಬೇರೆ ಯಾವುದೇ ಕೆಲಸಗಳನ್ನು ಮತ್ತು ಕರ್ತವ್ಯಗಳನ್ನು ನಿರ್ವಹಿಸಬೇಕು; |
| | (4) | The State Government may, by notification in the Official Gazette, subject to such conditions and limitations, invest the Child Marriage Prohibition Officer with such powers of a police officer as may be specified in the notification and the Child Marriage Prohibition Officer shall exercise such powers subject to such conditions and limitations, as may be specified in the notification. | | (4) | ರಾಜ್ಯ ಸರ್ಕಾರವು ಅಧಿಕೃತ ರಾಜಪತ್ರದಲ್ಲಿ ಪ್ರಕಟಿಸುವ ಮೂಲಕ, ಕೆಲವು ನಿರ್ದಿಷ್ಟ ನಿಯಮ ಮತ್ತು ನಿಬಂಧನೆಗಳೊಳಗೆ ಬಾಲ್ಯ ವಿವಾಹ ನಿಷೇಧಾಧಿಕಾರಿಗಳಿಗೆ ಪೊಲೀಸ್ ಅಧಿಕಾರಿಗಳ ಅಧಿಕಾರವನ್ನು ನೀಡಿ; ಪ್ರಕಟನೆಯಲ್ಲಿರುವ ನಿಯಮ ಮತ್ತು ನಿಬಂಧನೆಗಳೊಳಗೆ ಬಾಲ್ಯ ವಿವಾಹ ನಿಷೇಧಾಧಿಕಾರಿಗಳು ಅಂತಹ ಅಧಿಕಾರವನ್ನು ನಿರ್ವಹಿಸಲು ಅನುವು ಮಾಡಿಕೊಡಲಾಗುತ್ತದೆ. |
| | | **Child Marriage Prohibition Officers to be public servant** | | | **ಬಾಲ್ಯ ವಿವಾಹ ನಿಷೇಧಾಧಿಕಾರಿಗಳು ಸಾರ್ವಜನಿಕ ಅಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುವುದು** |
| | (5) | The Child Marriage Prohibition Officer shall have the power to move the Court for an order under sections 4, 5 and 13 and along with the child under section 3. | | (5) | ಬಾಲ್ಯವಿವಾಹ ನಿಷೇಧ ಅಧಿಕಾರಿಗೆ ಸೆಕ್ಷನ್ 4, 5, ಮತ್ತು 13ರ ಅಡಿಯಲ್ಲಿ ಹಾಗು ಮಗುವಿನ ಒಡಗೂಡಿ ಸೆಕ್ಷನ್ 3ರ ಅಡಿಯಲ್ಲಿ ನ್ಯಾಯಾಲಯಕ್ಕೆ ಆದೇಶ ನೀಡುವಂತೆ ಅರ್ಜಿ ಸಲ್ಲಿಸುವ ಅಧಿಕಾರವಿದೆ. |
| 17 | | The Child Marriage Prohibition Officers shall be deemed to be public servants within the meaning of section 21 of the Indian Penal Code. | 17 | | ಬಾಲ್ಯವಿವಾಹ ನಿಷೇಧ ಅಧಿಕಾರಿಯು ಭಾರತೀಯ ದಂಡ ಸಂಹಿತೆಯ ಸೆಕ್ಷನ್ 21ರಲ್ಲಿ ವ್ಯಾಖ್ಯಾನಿಸಲಾದ ಸಾರ್ವಜನಿಕ ಸೇವೆಯ ವ್ಯಾಪ್ತಿಗೆ ಒಳಪಟ್ಟಿರಬೇಕು. |

| | | | | | |
|---|---|---|---|---|---|
| | | **Protection of action taken in good faith** | | | **ಉತ್ತಮ ಉದ್ದೇಶದಿಂದ ರಕ್ಷಣೆಯ ಕ್ರಮಗಳನ್ನು ತೆಗೆದುಕೊಳ್ಳುವುದು** |
| 18 | | No suit, prosecution or other legal proceedings shall lie against the Child Marriage Prohibition Officer in respect of anything in good faith done or intended to be done pursuance of this Act or any rule or order made there under. | 18 | | ಬಾಲ್ಯ ವಿವಾಹ ನಿಷೇಧ ಅಧಿಕಾರಿಯು ಉತ್ತಮ ಉದ್ದೇಶದಿಂದ ಮಾಡಿದ ಆಥವಾ ಈ ಕಾಯಿದೆಯ ಅಥವಾ ಇದರಡಿಯ ಯಾವುದೇ ನಿಯಮ ಅಥವಾ ಆದೇಶದಡಿ ಯಾವುದೇ ಕ್ರಮಗಳನ್ನು ಕೈಗೊಳ್ಳುವ ನಿರ್ಧಾರ ಮಾಡಿದ್ದರೆ, ಅವರ ವಿರುದ್ಧ ಯಾವುದೇ ಕ್ರಮ, ಶಿಕ್ಷೆ ಅಥವಾ ಯಾವುದೇ ಕಾನೂನು ಪ್ರಕ್ರಿಯೆ ಇರುವುದಿಲ್ಲ. |
| | | **Power of state government to make rules** | | | **ನಿಯಮಗಳನ್ನು ರೂಪಿಸಲು ಸರ್ಕಾರಗಳಿಗೆ ಅಧಿಕಾರ** |
| 19 | (1) | The State Government may, by notification in the Official Gazette, make rules for carrying out the provisions of this Act. | 19 | (1) | ಈ ಕಾಯ್ದೆಯ ಆಶಯಗಳನ್ನು ಜಾರಿಗೆ ತರಲು ರಾಜ್ಯ ಸರ್ಕಾರಗಳು ನಿಯಮಗಳನ್ನು ರೂಪಿಸಿ ಅವುಗಳನ್ನು ತನ್ನ ಅಧೀಕೃತ ರಾಜಪತ್ರದಲ್ಲಿ ಪ್ರಕಟಿಸಬೇಕು. |
| | (2) | Every rule made under this Act shall, as soon as may be after it is made, be laid before the State Legislature. | | (2) | ಈ ಕಾಯ್ದೆಯಡಿ ರಚಿಸಲಾದ ಪ್ರತಿಯೊಂದು ನಿಯಮಗಳನ್ನು ರಚಿಸಿದ ತಕ್ಷಣ ರಾಜ್ಯದ ಶಾಸಕಾಂಗದ ಮುಂದಿಡಬೇಕು. |
| 20 | (a) | "in the case of contravention of the condition specified in clause *(iii)* of Section 5, with rigorous imprisonment which may' extend to two years or with fine' which may extend to one Lakh rupees, or with both".<br>Amendment of Act No. 25 of 1955. | 20 | (a) | ಸೆಕ್ಷನ್ 5ರ ಕ್ಲಾಝು (*iii*)ರಲ್ಲಿ ಸ್ಪಷ್ಟಪಡಿಸಿರುವ ಪರಿಸ್ಥಿತಿಯನ್ನು ಉಲ್ಲಂಘಿಸಿದ ಪಕ್ಷದಲ್ಲಿ ಎರಡು ವರ್ಷದವರೆಗೆ ವಿಸ್ತರಿಸಬಹುದಾದ ಕಠಿಣ ಕಾರಾಗೃಹ ವಾಸ ಮತ್ತು ಒಂದು ಲಕ್ಷ ರೂಪಾಯಿಗಳವರೆಗೆ ದಂಡ ಅಥವಾ ಎರಡನ್ನೂ ವಿಧಿಸಬಹುದು.<br>1955ರ ಕಾಯ್ದೆ ಸಂಖ್ಯೆ 25ಕ್ಕೆ ತಿದ್ದುಪಡಿ |
| | | **Repeal and** | | | **ತೆರವುಗೊಳಿಸುವುದು ಮತ್ತು ಉಳಿಸಿಕೊಳ್ಳುವುದು** |
| 21 | (1) | The Child Marriage Restraint Act, 1929 is hereby repealed. | 21 | (1) | 1929ರ ಬಾಲ್ಯವಿವಾಹ ನಿಯಂತ್ರಣ ಕಾಯ್ದೆಯನ್ನು ಈ ರೀತಿಯಾಗಿ ಕೈಬಿಡಲಾಗಿದೆ / ತೆರವುಗೊಳಿಸಲಾಗಿವೆ. |
| | | Notwithstanding such repeal, all cases and other proceedings pending or continued under the said Act at the commencement of this Act shall be continued and disposed of in accordance with the provisions of the repealed Act, as if this Act had not been passed. | | | ಈ ರೀತಿಯ ತೆರವನ್ನು ಹೊರತುಪಡಿಸಿ ಈ ಕಾಯ್ದೆಯ ಆರಂಭದ ಸಮಯದಲ್ಲಿ ಮೇಲೆ ತೆರವುಗೊಳಿಸಿದ ಕಾಯ್ದೆಯಡಿ ಬಾಕಿ ಇರುವ ಮತ್ತು ನಡೆಯುತ್ತಿರುವ ವಿಚಾರಣೆಗಳನ್ನು ಈ ಕಾಯ್ದೆಯು ಜಾರಿಯಾಗಿಲ್ಲ ಎಂದು ತಿಳಿದುಕೊಂಡು ತೆರವುಗೊಳಿಸಿದ ಕಾಯ್ದೆಯ ಅನುಸಾರ ಪ್ರಕರಣಗಳನ್ನು ಮುಂದುವರೆಸುವುದು ಮತ್ತು ತೀರ್ಪು ನೀಡುವುದು. |

K N. CHATURVEDI,
*Secy. to the Govt. of India*

*RNI No. KARBIL/2001/47147*

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ


| | | |
|---|---|---|
| ಭಾಗ-*IVA* | ಬೆಂಗಳೂರು, ಬುಧವಾರ, ಏಪ್ರಿಲ್ ೨೬, ೨೦೧೭ (ವೈಶಾಖ ೬, ಶಕ ವರ್ಷ ೧೯೩೯) | ನಂ. ೪೦೬ |
| ***Part-IVA*** | ***Bengaluru, Wednesday, April 26, 2017 (Vyshaka 6, Shaka Varsha 1939)*** | ***No. 406*** |


ಸಂಸದೀಯ ವ್ಯವಹಾರಗಳ ಸಚಿವಾಲಯ

ಅಧಿಸೂಚನೆ

**ಸಂಖ್ಯೆ: ಸಂವ್ಯಶಾಇ 44 ಶಾಸನ 2015, ಬೆಂಗಳೂರು, ದಿನಾಂಕ: 26.04.2017.**

The Prohibition of Child Marriage (Karnataka Amendment) Bill, 2016– ಇದಕ್ಕೆ 2017ರ ಏಪ್ರಿಲ್ ಮಾಹೆಯ ಇಪ್ಪತ್ತನೇ ದಿನಾಂಕದಂದು ಘನತೆವೆತ್ತ ರಾಷ್ಟ್ರಪತಿಗಳ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2017ರ ಕರ್ನಾಟಕ ಅಧಿನಿಯಮ ಸಂಖ್ಯೆ: 26 ಎಂಬುದಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

**KARNATAKA ACT NO. 26 OF 2017**

(First Published in the Karnataka Gazette Extra-ordinary on the twenty sixth day of April, 2017)

**THE PROHIBITION OF CHILD MARRIAGE (KARNATAKA AMENDMENT) ACT, 2016**

(Received the assent of the President on the twentieth day of April, 2017)

An Act to amend the Prohibition of Child Marriage Act, 2006 in its application to the State of Karnataka.

Whereas, it is expedient to amend the Prohibition of Child Marriage Act, 2006 (Central Act 6 of 2007), in its application to State of Karnataka, for the purposes hereinafter appearing;

Be it enacted by the Karnataka State Legislature in the sixty-seventh year of the Republic of India, as follows:-

**1. Short title and commencement.-** (1) This Act may be called the Prohibition of Child Marriage (Karnataka Amendment) Act, 2016.

(2) It shall come into force on such a date as the State Government may, by notification in the official Gazette, appoint.

**2. Substitution of section 3.-** In the Prohibition of Child Marriage Act, 2006 (Central Act 6 of 2007) (hereinafter referred to as the principal Act), In section 3, after sub-section (1) the following shall be inserted, namely:-

"(1A) Notwithstanding anything contained in sub-section(1) every child marriage solemnized on or after the date of coming into force of the Prohibition of Child Marriage (Karnataka Amendment) Act, 2016 shall be void abinitio".

**3. Amendment of section 9.-** In section 9 of the principal Act, for the words "be punishable with rigorous imprisonment which may extend to two years", the words "be punishable with rigorous imprisonment of not less one year which may extend up to two years" shall be substituted.

**4. Amendment of section 10.-** In section 10 of the principal Act, for the words "be punishable with rigorous imprisonment which may extend to two years", the words "be punishable with rigorous imprisonment of not less than one year which may extend up to two years" shall be substituted.

**5. Amendment of section 11.-** In section 11 of the principal Act, in sub-section (1),-

(a) for the words "be punishable with rigorous imprisonment which may extend to two years", the words "be punishable with a rigorous imprisonment of not less than one year which may extend up to two years" shall be substituted.

(b) proviso shall be omitted.

**6. Amendment of section 13.-** In section 13 of the principal Act, in sub-section (10),-

(a) for the words "of either description for a term which may extend to two years", the words "with a minimum term of one year, which may extend up to two years" shall be substituted.

(b) proviso shall be omitted.

**7. Insertion of new section 15A.-** In the principal Act, after section 15, the following shall be inserted, namely:-

"**15A. Police Officer to take cognizance of an offence suo-motto.-** Every Police Officer shall take cognizance of an offence committed in his jurisdiction under this Act, suo motto."

By Order and in the name of the Governor of Karnataka

**K. DWARAKANATH BABU**
Secretary to Government
Department of Parliamentary Affairs

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಏ7) ಪ್ರತಿಗಳು: 850

## ಬಾಲ್ಯವಿವಾಹ ನಿಷೇಧ (ಕರ್ನಾಟಕ ತಿದ್ದುಪಡಿ) ಕಾಯ್ದೆ–2016

## ಕರ್ನಾಟಕ ಕಾಯ್ದೆ ನಂ–26–2017 Dated 26-04-2017

**Implementation Gazette Notification WCD 206 SWW 2011(P-3) Bengaluru, Dated 01-03-2018**

**1. (1)** ಈ ಕಾಯ್ದೆಯನ್ನು **ಬಾಲ್ಯವಿವಾಹ ನಿಷೇಧ (ಕರ್ನಾಟಕ ತಿದ್ದುಪಡಿ) ಕಾಯ್ದೆ, 2016** ಎಂದು ಕರೆಯತಕ್ಕದ್ದು.

**2. ಕೇಂದ್ರ ಕಾಯ್ದೆಯ ಕಲಂ–3 (1)ಕ್ಕೆ 1 a ಯಾಗಿ ಸೇರ್ಪಡೆ :03–03–2018** ರ ನಂತರ ***ಕರ್ನಾಟಕ ರಾಜ್ಯದಲ್ಲಿ ಆದ ಮತ್ತು ಆಗುವ ಎಲ್ಲ ಬಾಲ್ಯವಿವಾಹಗಳು ಕಾನೂನು ಬಾಹಿರ ಹಾಗೂ ಆ ಮದುವೆಗಳಿಗೆ ಯಾವುದೇ ಕಾನೂನಿನ ಮಾನ್ಯತೆ ಇರುವುದಿಲ್ಲ ಅವುಗಳು ಸಂಪೂರ್ಣ ಅಸಿಂಧು.*** **(VOID)**

**3. ಕೇಂದ್ರ ಕಾಯ್ದೆ ಕಲಂ–9ಕ್ಕೆ ಸೇರ್ಪಡೆ:** 18 ವರ್ಷ ಮೇಲ್ಪಟ್ಟ ಪುರುಷರು ಬಾಲ್ಯವಿವಾಹ ಮಾಡಿಕೊಂಡರೆ ಅವರಿಗೆ 2 ವರ್ಷದ ವರೆಗೆ ವಿಸ್ತರಿಸಬಹುದಾದ ಎಂಬುದರ ಬದಲಾಗಿ ***ಅವರಿಗೆ ಕನಿಷ್ಠ 1 ವರ್ಷಕ್ಕೆ ಕಡಿಮೆ ಇರದ ಹಾಗೂ ಗರಿಷ್ಠ 2 ವರ್ಷದವರೆಗೆ ವಿಸ್ತರಿಸಬಹುದಾದ ಕಠಿಣ ಕಾರಾಗೃಹ ಶಿಕ್ಷೆ ಮತ್ತು 1 ಲಕ್ಷ ರೂಪಾಯಿಗಳವರೆಗೆ ದಂಡ*** ಅಥವಾ ಎರಡನ್ನೂ ವಿಧಿಸಬಹುದು.

**4. ಕೇಂದ್ರ ಕಾಯ್ದೆಯ 10ಕ್ಕೆ ಸೇರ್ಪಡೆ :** ಯಾರಾದರೂ ಬಾಲ್ಯವಿವಾಹವನ್ನು ನೆರವೇರಿಸಿದ್ದು, ನಿರ್ದೇಶಿಸಿದ್ದು, ಅಥವಾ ನೆರವು ನೀಡಿದ್ದೇ ಆದಲ್ಲಿ ಅವರಿಗೆ 2 ವರ್ಷ ವಿಸ್ತರಿಸಬಹುದಾದ ಎಂಬುದರ ***ಬದಲಾಗಿ ಕನಿಷ್ಠ 1 ವರ್ಷಕ್ಕೆ ಕಡಿಮೆ ಇರದ ಹಾಗೂ 2 ವರ್ಷಕ್ಕೆ ವಿಸ್ತರಿಸಬಹುದಾದ ಕಠಿಣ ಕಾರಾಗೃಹ ಶಿಕ್ಷೆ ಹಾಗೂ 1 ಲಕ್ಷ ರೂಪಾಯಿಗಳವರೆಗೆ ದಂಡ*** ವಿಧಿಸಬಹುದು.

**5. ಕೇಂದ್ರ ಕಾಯ್ದೆ ಕಲಂ–11 (1)ಕ್ಕೆ (a) ಯಾಗಿ ಸೇರ್ಪಡೆ :** ಯಾವುದೇ ಮಗು ಬಾಲ್ಯವಿವಾಹಕ್ಕೆ ಒಳಗಾದರೆ ಮಗು ಸುಪರ್ದಿಯಲ್ಲಿರುವ ವ್ಯಕ್ತಿ, ಸಂಸ್ಥೆ ಅಥವಾ ಸಂಘಗಳ ಸದಸ್ಯರು ಸೇರಿದಂತೆ ತಂದೆ–ತಾಯಿ, ಪೋಷಕರು ಅಥವಾ ಯವುದೇ ವ್ಯಕ್ತಿ ಹಾಜರಾದವರು, ಭಾಗವಹಿಸಿದವರು, ಉತ್ತೇಜನ ನೀಡಿದವರು, ಒಪ್ಪಿಗೆ ನೀಡಿದವರು, ನಿರ್ಲಕ್ಷತೆಯಿಂದ ಬಾಲ್ಯವಿವಾಹವನ್ನು ತಪ್ಪಿಸಲು ವಿಫಲರಾದರೆ ಅವರಿಗೆ 2 ವರ್ಷಗಳವರೆಗೆ ವಿಸ್ತರಿಸಬಹುದಾದ ***ಬದಲಾಗಿ ಕನಿಷ್ಠ 1 ವರ್ಷ ಕಡಿಮೆ ಇರದ ಹಾಗೂ 2 ವರ್ಷ ವಿಸ್ತರಿಸಬಹುದಾದ ಕಠಿಣ ಕಾರಾಗೃಹ ಶಿಕ್ಷೆ ಹಾಗೂ 1 ಲಕ್ಷ ರೂಪಾಯಿಗಳವರೆಗೆ ದಂಡ*** ವಿಧಿಸಬಹುದು.

(b) ಮಹಿಳೆಗೆ ಕಾರಾಗೃಹ ಶಿಕ್ಷೆ ವಿಧಿಸುವಂತಿಲ್ಲ ಎಂಬ ಅವಕಾಶವನ್ನು **ಕರ್ನಾಟಕ ತಿದ್ದುಪಡಿ ಕಾಯ್ದೆಯಲ್ಲಿ ತೆಗೆದು ಹಾಕಲಾಗಿದೆ.**

**6. ಕೇಂದ್ರ ಕಾಯ್ದೆಯ ಕಲಂ–13 (10)ಕ್ಕೆ (a) ಯಾಗಿ ಸೇರ್ಪಡೆ :** ಯಾರಾದರೂ ಕೇಂದ್ರಕಾಯ್ದೆಯ ಕಲಂ–13 (1)ರಡಿಯಲ್ಲಿ ಆತನ ವಿರುದ್ಧ ತಡೆಯಾಜ್ಞೆ ನೀಡಿದ್ದು, ಗೊತ್ತಿದ್ದೂ ಅದನ್ನು ಉಲ್ಲಂಘಿಸಿದರೆ ***ಅವರಿಗೆ 2 ವರ್ಷಗಳ ಬದಲಾಗಿ ಕನಿಷ್ಠ 1 ವರ್ಷ ಕಡಿಮೆ ಇರದ ಹಾಗೂ 2 ವರ್ಷಕ್ಕೆ ವಿಸ್ತರಿಸಬಹುದಾದ ಕಠಿಣ ಕಾರಾಗೃಹ ಶಿಕ್ಷೆ ಮತ್ತು 1*** *ಲಕ್ಷ ರೂಪಾಯಿಗಳವರೆಗೆ* ***ದಂಡ ಅಥವಾ ಎರಡನ್ನೂ ವಿಧಿಸಬಹುದು.***

(b) ಮಹಿಳೆಗೆ ಕಾರಾಗೃಹ ಶಿಕ್ಷೆ ವಿಧಿಸುವಂತಿಲ್ಲ ಎಂಬ ಅವಕಾಶವನ್ನು **ಕರ್ನಾಟಕ ತಿದ್ದುಪಡಿ ಕಾಯ್ದೆಯಲ್ಲಿ ತೆಗೆದು ಹಾಕಲಾಗಿದೆ.**

**7. ಕೇಂದ್ರ ಕಾಯ್ದೆ–15ಎ :** ಬಾಲ್ಯವಿವಾಹವು ಜಾಮೀನುರಹಿತ ಮತ್ತು ಸಂಜ್ಞೇಯ ಅಪರಾಧವಾದ್ದರಿಂದ ಎಲ್ಲ ***ಪೊಲೀಸ್ ಅಧಿಕಾರಿಗಳು ಅವರ ಕ್ಷೇತ್ರ ವ್ಯಾಪ್ತಿಯಲ್ಲಿ ನಡೆದ ಅಪರಾಧದ ಸಂಜ್ಞೇಯತೆಯನ್ನು ಗಮನಿಸಿ*** *(ಬಾಲ್ಯವಿವಾಹವನ್ನು)* ***ಸ್ವಯಂಪ್ರೇರಣೆಯಿಂದ (Suo motto) ಎಫ್.ಐ.ಆರ್ ದಾಖಲಿಸುವುದು.***

**ದಯವಿಟ್ಟು ಗಮನಿಸಿ; ಕನ್ನಡ ಭಾಷಾಂತರವು ಕೇವಲ ಅರ್ಥ ಮಾಡಿಕೊಳ್ಳಲು ಮಾತ್ರ. ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲು ಮೂಲ ಇಂಗ್ಲೀಷ್ ಪ್ರತಿಯನ್ನು** ಬಳಸುವುದು.

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**

| | | |
|---|---|---|
| ಭಾಗ-IVA | ಬೆಂಗಳೂರು, ಶುಕ್ರವಾರ, ಮಾರ್ಚ್ ೨, ೨೦೧೮ (ಫಾಲ್ಗುಣ ೧೧, ಶಕ ವರ್ಷ ೧೯೩೯) | ನಂ. ೩೪೧ |
| *Part-IVA* | *Bengaluru, Friday, March 2, 2018 (Palguna 11, Shaka Varsha 1939)* | *No. 341* |


**WOMEN AND CHILD DEVELOPMENT AND EMPOWERMENT OF DIFFERENTLY ABLED AND SENIOR CITIZENS SECRETARIAT**

**NOTIFICATION**

**No. WCD 206 SWW 2011 (P-3), Bengaluru, dated: 01.03.2018**

In exercise of the powers conferred by sub-section (2) of section 1 of the Prohibition of Child Marriage (Karnataka Amendment) Act, 2016 (Karnataka Act 26 of 2017) in supersession of earlier Notification No: WCD 206 SWW 2011 (P-3), dated: 14.09.2017 with effect from the date of 26.04.2017.

After so supersession of the said notification, in exercise of the powers conferred by sub-section (2) of section 1 of the Prohibition of Child Marriage (Karnataka Amendment) Act, 2016 (Karnataka Act 26 of 2017) the Government of Karnataka hereby appoints the third day of March 2018 to be the date on which the provisions of the said Act shall come into force.

By order and in the name of the Governor of Karnataka

**SANDHYA L. NAYAK**
Under Secretary to Government-1,
Department of Women and Child Development and
Empowerment of Differently Abled and Senior Citizens.


ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು (ಪ್ರ) ಪ್ರತಿಗಳು: ೨೦೦

RNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ



| ಭಾಗ-IVA | ಬೆಂಗಳೂರು, ಮಂಗಳವಾರ, ಜನವರಿ ೧೬, ೨೦೧೮ (ಪುಷ್ಯ ೨೬, ಶಕ ವರ್ಷ ೧೯೩೯) | ನಂ. ೮೮ |
|---|---|---|
| Part-IVA | Bengaluru, Tuesday, January 16, 2018 (Pushya 26, Shaka Varsha 1939) | No. 88 |



ಸಂಸದೀಯ ವ್ಯವಹಾರಗಳ ಸಚಿವಾಲಯ

ಅಧಿಸೂಚನೆ

**ಸಂಖ್ಯೆ: ಸಂವ್ಯಇ 47 ಕೇನಿಪ್ರ 2017, ಬೆಂಗಳೂರು, ದಿನಾಂಕ: 16.01.2018**

The Prohibitin of Child Marriage (Karnataka) Rules, 2014 ಇದರ ಅಧಿಕೃತ ಕನ್ನಡ ಭಾಷಾಂತರವನ್ನು ಕರ್ನಾಟಕ ಅಫಿಷಿಯಲ್ ಲಾಂಗ್ವೇಜ್ ಆಕ್ಟ್, 1963ರ ಪ್ರಕರಣ 5A ಅಡಿಯಲ್ಲಿ ರಾಜ್ಯಪಾಲರ ಅಧಿಕಾರದ ಮೇರೆಗೆ ಸಾರ್ವಜನಿಕರ ಮಾಹಿತಿಗಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಮರು ಪ್ರಕಟಿಸಲು ಆದೇಶಿಸಲಾಗಿದೆ.

**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವಾಲಯ**

**ಅಧಿಸೂಚನೆ**

**ಸಂಖ್ಯೆ: ಡಬ್ಲ್ಯೂಸಿಡಿ 205 ಎಸ್‌ಡಬ್ಲ್ಯೂಡಬ್ಲ್ಯೂ 2011, ಬೆಂಗಳೂರು, ದಿನಾಂಕ : 21-10-2015**

ಬಾಲ್ಯವಿವಾಹ ನಿಷೇಧ (ಕರ್ನಾಟಕ) ನಿಯಮಗಳು, 2014 ರ ಕರಡನ್ನು, ಬಾಲ್ಯವಿವಾಹ ನಿಷೇಧ ಅಧಿನಿಯಮ, 2006 (2007 ರ ಕೇಂದ್ರ ಅಧಿನಿಯಮ ಸಂಖ್ಯೆ 6) ರ 19ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ, ಕರ್ನಾಟಕ ರಾಜ್ಯಪತ್ರ, ದಿನಾಂಕ: 05-06-2014 ರ ಭಾಗ-IVಎ ನಲ್ಲಿ ಅಧಿಸೂಚನೆ ಸಂಖ್ಯೆ ಡಬ್ಲ್ಯೂಸಿಡಿ 205 ಎಸ್‌ಡಬ್ಲ್ಯೂಡಬ್ಲ್ಯೂ 2011, ದಿನಾಂಕ 11.04.2014ರಲ್ಲಿ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ್ದು, ಈ ನಿಯಮಗಳಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಈ ನಿಯಮಗಳನ್ನು ಪ್ರಕಟಿಸಿದ ದಿನಾಂಕದಿಂದ ಹದಿನೈದು ದಿನಗಳ ಒಳಗಾಗಿ ಆಹ್ವಾನಿಸಿರುವುದರಿಂದ;

ಮತ್ತು ಸದರಿ ರಾಜ್ಯಪತ್ರವನ್ನು 05.06.2014 ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ಮತ್ತು ರಾಜ್ಯ ಸರ್ಕಾರವು ಈ ಬಗ್ಗೆ ಆಕ್ಷೇಪಣೆಗಳು ಮತ್ತು ಸಲಹೆಗಳು ಬರದೇ ಇರುವುದರಿಂದ;

ಈಗ, ಬಾಲ್ಯವಿವಾಹ ನಿಷೇಧ ಅಧಿನಿಯಮ, 2006, (2007 ರ ಕೇಂದ್ರ ಅಧಿನಿಯಮ ಸಂಖ್ಯೆ:6) ರ 19ನೇ ಪ್ರಕರಣದ (1) ನೇ ಉಪ-ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು. ಈ ಮೂಲಕ ಮುಂದಿನ ನಿಯಮಗಳನ್ನು ರಚಿಸುತ್ತದೆ, ಅವೆಂದರೆ:-

ನಿಯಮಗಳು

1. **ಹೆಸರು ಮತ್ತು ಪ್ರಾರಂಭ.-** (1) ಈ ನಿಯಮಗಳನ್ನು ಬಾಲ್ಯವಿವಾಹ ನಿಷೇಧ (ಕರ್ನಾಟಕ) ನಿಯಮಗಳು, 2014 ಎಂದು ಕರೆಯತಕ್ಕದ್ದು.

(2) ಅವು ಸರ್ಕಾರಿ ರಾಜ್ಯಪತ್ರದಲ್ಲಿ ಅವುಗಳ ಪ್ರಕಟಣೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ಪರಿಭಾಷೆಗಳು.-** ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,

(ಎ) 'ಅಧಿನಿಯಮ' ಎಂದರೆ ಬಾಲ್ಯವಿವಾಹ ನಿಷೇಧ ಅಧಿನಿಯಮ, 2006 (2007 ರ ಕೇಂದ್ರ ಅಧಿನಿಯಮ ಸಂಖ್ಯೆ 6);

(ಬಿ) 'ದೂರು' ಅಥವಾ 'ಅರ್ಜಿ' ಎಂದರೆ ಬಾಲ್ಯವಿವಾಹ ನಿಷೇಧ ಅಧಿಕಾರಿಗೆ ಯಾರೇ ವ್ಯಕ್ತಿಯು ಅಥವಾ ಸಂಸ್ಥೆಯು ಅಥವಾ ಪೊಲೀಸರು ಮೌಖಿಕವಾಗಿ ಅಥವಾ ಲಿಖಿತದಲ್ಲಿ ಸಲ್ಲಿಸಿದ ಯಾವುದೇ ಆರೋಪ;

(ಸಿ) 'ನಮೂನೆ' ಎಂದರೆ ಈ ನಿಯಮಗಳಿಗೆ ಅನುಬಂಧಿಸಲಾದ ನಮೂನೆ;

(ಡಿ) 'ಪ್ರಕರಣ' ಎಂದರೆ, ಅಧಿನಿಯಮದ ಪ್ರಕರಣ;

(ಇ) 'ಅನುಸೂಚಿ' ಎಂದರೆ ಈ ನಿಯಮಗಳಿಗೆ ಅನುಬಂಧಿಸಲಾದ ಅನುಸೂಚಿ.

**3. ಬಾಲ್ಯವಿವಾಹ ನಿಷೇಧ ಅಧಿಕಾರಿಗೆ ಮಾಹಿತಿ.–** ಬಾಲ್ಯವಿವಾಹದ ಕೃತ್ಯವನ್ನು ಮಾಡಲಾಗಿದೆ ಅಥವಾ ಮಾಡಲಾಗುತ್ತಿದೆ ಅಥವಾ ಮಾಡುವ ಸಂಭವವಿದೆ ಎಂದು ನಂಬಲು ಕಾರಣವಿರುವ ಯಾರೇ ವ್ಯಕ್ತಿಯು, ಬಾಲ್ಯವಿವಾಹ ನಿಷೇಧ ಅಧಿಕಾರಿಗೆ ಮೌಖಿಕವಾಗಿ ಅಥವಾ ಅನುಸೂಚಿ–IVರಲ್ಲಿ ಲಿಖಿತವಾಗಿ ಅದರ ಬಗ್ಗೆ ಮಾಹಿತಿಯನ್ನು ನೀಡತಕ್ಕದ್ದು.

**4. ಬಾಲ್ಯವಿವಾಹ ನಿಷೇಧ ಅಧಿಕಾರಿಗಳ ಪ್ರಕಾರ್ಯಗಳು ಮತ್ತು ಕರ್ತವ್ಯಗಳು.–** (1) ಬಾಲ್ಯ ವಿವಾಹ ನಿಷೇಧ ಅಧಿಕಾರಿಯು, ಅಧಿನಿಯಮವನ್ನು ಜಾರಿಗೆ ತರುವುದಕ್ಕೆ ಸಂಬಂಧಿಸಿದಂತೆ ಯಾರೇ ಮಗುವು ಅಥವಾ ಅರ್ಜಿದಾರನಿಗೆ ಸೂಕ್ತ ಆದೇಶಗಳನ್ನು ಪಡೆಯಲು ಸಾಧ್ಯವಾಗುವಂತೆ, ಕಾನೂನು ಸೇವೆಗಳ ಪ್ರಾಧಿಕಾರ ಅಧಿನಿಯಮ, 1987 (1987ರ ಕೇಂದ್ರ ಅಧಿನಿಯಮ, 39)ರ ಮೇರೆಗೆ ಕಾನೂನು ಸೇವೆ ಪಡೆಯಲು ಅವಕಾಶ ಕಲ್ಪಿಸಿರುವುದನ್ನು ಸುನಿಶ್ಚಿತಪಡಿಸಿಕೊಳ್ಳಬೇಕು

(2) ಬಾಲ್ಯವಿವಾಹ ನಿಷೇಧ ಅಧಿಕಾರಿಯು, ಬಾಲ್ಯ ವಿವಾಹವನ್ನು ತಡೆಯಲು ಅಥವಾ ಬಾಲ್ಯ ವಿವಾಹದಿಂದ ಬಾಧಿತರಾದ ಮಗುವಿಗೆ ಸೇವೆಗಳನ್ನು ಒದಗಿಸಲು ಎಲ್ಲಾ ಸರ್ಕಾರಿ ಶಾಲೆಗಳು, ಅಂಚೆ ಕಛೇರಿಗಳಲ್ಲಿ, ಪಂಚಾಯಿತಿ ಕಛೇರಿಗಳಲ್ಲಿ, ಮೀನಾ ಕ್ಲಬ್‌ಗಳಲ್ಲಿ, ಕಿಶೋರಿ ಸಂಘಗಳಲ್ಲಿ, ಮಕ್ಕಳ ಗ್ರಾಮ ಸಭೆಗಳಲ್ಲಿ, ತೆರೆದಮನೆಯಲ್ಲಿ, ಗ್ರಾಮ, ಚಾವಡಿಯಲ್ಲಿ ಮತ್ತು ಇತರ ಸಾರ್ವಜನಿಕ ಸ್ಥಳಗಳಲ್ಲಿ ಅಧಿನಿಯಮದ ಉಪಬಂಧಗಳ ಹಾಗೂ ಎಲ್ಲಾ ಕಾನೂನುಗಳ ಮತ್ತು ಯೋಜನೆಗಳ ಬಗ್ಗೆ ಮಾಹಿತಿಯು ಸ್ಥಳೀಯ ಭಾಷೆಯಲ್ಲಿ ಲಭ್ಯವಾಗುವಂತೆ ಮಾಡಲು ರಾಜ್ಯ, ಜಿಲ್ಲೆ ಮತ್ತು ತಾಲ್ಲೂಕು ಕಾನೂನು ಸೇವಾ ಪ್ರಾಧಿಕಾರಗಳ ಸಹಯೋಗದೊಂದಿಗೆ ಕಾರ್ಯನಿರ್ವಹಿಸತಕ್ಕದ್ದು.

(3) ಬಾಲ್ಯವಿವಾಹ ನಿಷೇಧ ಅಧಿಕಾರಿಯು, ಬಾಲ್ಯವಿವಾಹದ ಹೆಣ್ಣಿನ ವಾಸಸ್ಥಳಕ್ಕೆ ಸಂಬಂಧಿಸಿದಂತೆ ಮಧ್ಯಂತರ ಆದೇಶಗಳನ್ನು ಪಡೆಯುವುದಕ್ಕಾಗಿ ತಾನಾಗಿಯೇ ಜಿಲ್ಲಾ ನ್ಯಾಯಾಲಯಕ್ಕೆ ಹೋಗಬಹುದು.

(4) ಬಾಲ್ಯವಿವಾಹ ನಿಷೇಧ ಅಧಿಕಾರಿಯು, ಯಾವುದೇ ಮಗುವಿಗೆ ಪಾಲನೆ ಮತ್ತು ಸಂರಕ್ಷಣೆ ಅಗತ್ಯವಿದ್ದರೆ ಅಧಿಕಾರ ವ್ಯಾಪ್ತಿಯುಳ್ಳ ಮಕ್ಕಳ ಕಲ್ಯಾಣ ಸಮಿತಿಗೆ ವರದಿ ಮಾಡತಕ್ಕದ್ದು. ಮಕ್ಕಳ ಕಲ್ಯಾಣ ಸಮಿತಿಯು, ವಿಚಾರಣೆಯನ್ನು ಪೂರ್ಣಗೊಳಿಸುವುದಕ್ಕಾಗಿ ಹಾಗೂ ಪುನರ್ವಸತಿ ಕಲ್ಪಿಸುವುದಕ್ಕಾಗಿ ಕಾಲಮಿತಿಯನ್ನು ನಿಗದಿಪಡಿಸುವುದಕ್ಕೆ ಸಂಬಂಧಿಸಿದಂತೆ ಮಧ್ಯಂತರ ಆದೇಶಗಳನ್ನು ಹೊರಡಿಸತಕ್ಕದ್ದು.

(5) ಬಾಲ್ಯವಿವಾಹ ನಿಷೇಧ ಅಧಿಕಾರಿಯು, ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960 (1960ರ ಕರ್ನಾಟಕ ಅಧಿನಿಯಮ 19)ರ, ಮತ್ತು ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ಸಂರಕ್ಷಣೆ) ಅಧಿನಿಯಮ, 2000 (2000ರ ಕೇಂದ್ರ ಅಧಿನಿಯಮ 56)ರ ಅಡಿಯಲ್ಲಿ ನೋಂದಾಯಿತವಾದ ಸರ್ಕಾರೇತರ ಸಂಸ್ಥೆಗಳ, ಕಂಪನಿಗಳ ಅಧಿನಿಯಮ, 1956 (1956ರ ಕೇಂದ್ರ ಅಧಿನಿಯಮ 1) ರ ಅಡಿಯಲ್ಲಿ ನೋಂದಾಯಿತವಾದ ಕಂಪನಿಗಳ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆಗಳನ್ನುಳ್ಳ ಪಟ್ಟಿಯನ್ನು (ಡೈರಕ್ಟರಿಯನ್ನು) ಸದರಿ ಅಧಿನಿಯಮಗಳಲ್ಲಿ ಹೇಳಿರುವ ಸಕ್ಷಮ ಪ್ರಾಧಿಕಾರದಿಂದ ಸಂಗ್ರಹಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(6) ಬಾಲ್ಯವಿವಾಹ ನಿಷೇಧ ಅಧಿಕಾರಿಯು, ಬಾಲ್ಯವಿವಾಹ ನಡೆಯುವ ಸಂದರ್ಭದಲ್ಲಿ ಬಾಲ್ಯವಿವಾಹವನ್ನು ನಿಲ್ಲಿಸುವುದಕ್ಕೆ ಸಾಧ್ಯವಾದ ಎಲ್ಲಾ ನೆರವನ್ನು ನೀಡತಕ್ಕದ್ದು ಮತ್ತು ವ್ಯಕ್ತಿಗೆ ಅಥವಾ ಅರ್ಜಿದಾರನಿಗೆ ಪೋಲೀಸರ ಸಹಾಯವೇನಾದರೂ ಬೇಕಿದ್ದರೆ ಅದು ದೊರಕುವುದನ್ನು ಖಚಿತಪಡಿಸಕೊಳ್ಳತಕ್ಕದ್ದು.

(7) ಅದರಲ್ಲೂ ಮುಖ್ಯವಾಗಿ ಬಾಲ್ಯವಿವಾಹ ನಿಷೇಧ ಅಧಿಕಾರಿಯು ಮತ್ತು ಯಾರಾದರೂ ಸಂಬಂಧಪಟ್ಟ ಪೊಲೀಸ್ ಅಧಿಕಾರಿಯು ಬಾಲ್ಯ ವಿವಾಹ ನಡೆದಿದೆಯೆಂಬ ಸಂಶಯವಿರುವ ಮಗುವಿನ ಬಗ್ಗೆ ಅಥವಾ ಸದ್ಯದಲ್ಲೇ ಬಾಲ್ಯ ವಿವಾಹ ನಡೆಯುತ್ತದೆ ಎಂಬ ಬಗ್ಗೆ ತನಗೆ ಮಾಹಿತಿ ನೀಡಿದ ಯಾವುದೇ ಮಗು/ವ್ಯಕ್ತಿ/ಸಂಘಟನೆಗಳ ಬಗ್ಗೆ ಅಥವಾ ಬಾಲ್ಯವಿವಾಹವಾದ ಅಪ್ರಾಪ್ತ ಮಗುವಿನ ಬಗ್ಗೆ ಮತ್ತು ಆ ಮಗು ಪ್ರಾಪ್ತ ವಯಸ್ಸನ್ನು ತಲುಪಿದ ತರುವಾಯ ಎರಡು ವರ್ಷಗಳನ್ನು ಪೂರ್ಣಗೊಳಿಸುವವರೆಗೆ ಗೌಪ್ಯತೆಯನ್ನು ಕಾಯ್ದುಕೊಳ್ಳತಕ್ಕದು.

(8) ಬಾಲ್ಯವಿವಾಹ ನಿಷೇಧ ಅಧಿಕಾರಿಯ ನಿಲುವು ಮುಖ್ಯವಾಗಿ ಬಾಲ್ಯವಿವಾಹವನ್ನು ತಡೆಯುವುದೇ ಆಗಿರತಕ್ಕದ್ದು ಮತ್ತು ಅದು ಪರಿಹಾರಾತ್ಮಕವಾಗಿರತಕ್ಕದ್ದು, ಇತರೆ ಎಲ್ಲಾ ಕ್ರಮಗಳು ಮತ್ತು ನಿರ್ದೇಶನಗಳು ಪರಿಣಾಮಕಾರಿಯಲ್ಲವೆಂದು ಕಂಡುಬಂದರೆ ಅಥವಾ ನಿಗದಿಪಡಿಸಿದ ಸಮಯದೊಳಗೆ ಆದೇಶಗಳನ್ನು ಅಥವಾ ನಿರ್ದೇಶನಗಳನ್ನು ಪಾಲಿಸುವುದಕ್ಕೆ ಪಕ್ಷಕಾರರು ವಿಫಲರಾದರೆ ಮಾತ್ರ ಕಾನೂನು ಕ್ರಮಕ್ಕೆ ಶಿಫಾರಸ್ಸು ಮಾಡತಕ್ಕದ್ದು ಅಥವಾ ಅದರ ಮೊರೆಹೋಗತಕ್ಕದ್ದು.

(9) ಬಾಲ್ಯವಿವಾಹ ಆಗದಂತೆ ತಪ್ಪಿಸಿ ಸಂರಕ್ಷಿಸಿದ ಮತ್ತು ಪಾಲನೆ ಮತ್ತು ಸಂರಕ್ಷಣೆಗಾಗಿ ಮಕ್ಕಳ ಕಲ್ಯಾಣ ಸಮಿತಿಗೆ ವಹಿಸಿದ ಮಗುವಿನ ಪುನರ್ವಸತಿಗಾಗಿ ಕ್ರಮಕೈಗೊಳ್ಳುವುದು ಬಾಲ್ಯವಿವಾಹ ನಿಷೇಧ ಅಧಿಕಾರಿಯ ಕರ್ತವ್ಯವಾಗಿರುತ್ತದೆ.

(10) ಬಾಲ್ಯವಿವಾಹಕ್ಕೊಳಗಾದ ಅಥವಾ ಬಾಲ್ಯ ವಿವಾಹ ಆಗದಂತೆ ತಪ್ಪಿಸಿ ಸಂರಕ್ಷಿಸಿದ ಮಕ್ಕಳಿಗೆ ಪುನರ್ವಸತಿ ಕಲ್ಪಿಸತಕ್ಕದ್ದು, ಬಾಲ್ಯವಿವಾಹ ನಿಷೇಧ ಅಧಿಕಾರಿಯು ಬಾಲ್ಯವಿವಾಹಕ್ಕೊಳಗಾದ ಮಗುವಿಗೆ ಲಭ್ಯವಿರುವ ಶಿಕ್ಷಣ, ಆಶ್ರಯ, ಕಾನೂನು ಸಮಾಲೋಚನೆ, ಮನರಂಜನೆ, ವೃತ್ತಿ ತರಬೇತಿ ಸೇವೆಗಳು ಹಾಗೂ ಬೆಂಬಲ, ಇತ್ಯಾದಿ ಬಗ್ಗೆ ಮಾಹಿತಿ

ನೀಡತಕ್ಕದ್ದು ಹಾಗೂ ಕರ್ನಾಟಕ ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ಸಂರಕ್ಷಣೆ) ನಿಯಮಗಳು, 2010ರ ಅಡಿಯಲ್ಲಿ ಆಜ್ಞಾಪಿಸಿರುವಂತೆ ಅದನ್ನು ಅದರ ಕುಟುಂಬಕ್ಕೆ ವಾಪಸ್ಸು ಕಳುಹಿಸತಕ್ಕದ್ದು ಮತ್ತು ಅಂಥ ಮಗು ಈ ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗುವಂತೆ ನೋಡಿಕೊಳ್ಳತಕ್ಕದ್ದು ಮತ್ತು ಮೊದಲಿದ್ದ ಸ್ಥಿತಿಯನ್ನು ಒದಗಿಸಿಕೊಡತಕ್ಕದ್ದು..

(11) ಈ ನಿಯಮಗಳ ಮೇರೆಗೆ ಬಾಲ್ಯವಿವಾಹಗಳನ್ನು ತಡೆಯುವುದಕ್ಕೆ ಸಂಬಂಧಿಸಿದಂತೆ ವಿವಿಧ ಇಲಾಖೆಗಳು ಮತ್ತು ಅವು ನಿರ್ವಹಿಸಬೇಕಾದ ಪಾತ್ರಗಳು ಅನುಸೂಚಿ-I ರಲ್ಲಿ ನಿರ್ದಿಷ್ಟ ಪಡಿಸಿದಂತೆ ಇರತಕ್ಕದ್ದು.

**5. ತುರ್ತು ಸಂದರ್ಭಗಳಲ್ಲಿ ಕೈಗೊಳ್ಳಬೇಕಾದ ಕ್ರಮ.–** ಯಾವಾಗ ಬಾಲ್ಯ ವಿವಾಹ ನಿಷೇಧಾಧಿಕಾರಿಯು ಅಥವಾ ವ್ಯಕ್ತಿಯು ಬಾಲ್ಯ ವಿವಾಹ ನಡೆಯುತ್ತಿರುವ ಬಗ್ಗೆ ಅಥವಾ ನಡೆಯಬಹುದೆಂಬ ಬಗ್ಗೆ ನಂಬಲರ್ಹ ಮಾಹಿತಿಯನ್ನು ಈ-ಮೇಲ್, ದೂರವಾಣಿ ಕರೆ, ಬಾಲ್ಯ ವಿವಾಹ ಮಾಡುವವರ ವಿರುದ್ಧ ಕ್ರಮ ತೆಗೆದುಕೊಳ್ಳಲು ಇಚ್ಛಿಸುವ ಯಾವ ವ್ಯಕ್ತಿಗೆ ರೂ.500/- ಗಳನ್ನು ಕೊಡಲಾಗುತ್ತಿದೆಯೋ ಅವರಿಂದ ಅಥವಾ ಇದೇ ತೆರನಾದ ಇತರ ಮೂಲಗಳ ಮೂಲಕ ಮಾಹಿತಿ ಸ್ವೀಕರಿಸಿದ ತುರ್ತು ಸಂಧರ್ಭದಲ್ಲಿ ಪೋಲೀಸರ ಸಹಾಯ ಪಡೆಯತಕ್ಕದ್ದು. ಪೋಲೀಸರು ಬಾಲ್ಯವಿವಾಹ ನಿಷೇಧ ಅಧಿಕಾರಿಯೊಂದಿಗೆ ಘಟನಾ ಸ್ಥಳಕ್ಕೆ ಭೇಟಿ ನೀಡಿ ಘಟನೆಯನ್ನು ಲಿಖಿತದಲ್ಲಿ ದಾಖಲು ಮಾಡತಕ್ಕದ್ದು ಮತ್ತು ಅಧಿನಿಯಮದ ಉಪಬಂಧಗಳ ಮೇರೆಗೆ ಸೂಕ್ತ ಆದೇಶವನ್ನು ಕೋರುವುದಕ್ಕಾಗಿ ಯಾವುದೇ ವಿಳಂಬವಿಲ್ಲದೆ ಅದನ್ನು ಮ್ಯಾಜಿಸ್ಟ್ರೇಟರಿಗೆ ವರದಿ ಮಾಡತಕ್ಕದ್ದು.

6. **ಸಾಮೂಹಿಕ ವಿವಾಹಗಳಲ್ಲಿ ಬಾಲ್ಯವಿವಾಹಗಳನ್ನು ಪ್ರತಿಬಂಧಿಸುವುದು.– (1)** ಬಾಲ್ಯವಿವಾಹವನ್ನು ಶಾಸ್ತ್ರೋಕ್ತವಾಗಿ ನೆರವೇರಿಸುವುದನ್ನು ತಡೆಯಲು, ಸಾಮೂಹಿಕ ವಿವಾಹಗಳು ನಡೆಯುವಾಗ ಅನುಸೂಚಿ-II ರಲ್ಲಿ ನಿರ್ದಿಷ್ಟಪಡಿಸಿದ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು.

(2) ವಿವಾಹಗಳನ್ನು ನಡೆಸುವುದಕ್ಕಾಗಿ (ನಮೂನೆ I ಮತ್ತು ನಮೂನೆ IIರಲ್ಲಿ) ವಯಸ್ಸಿನ ದಾಖಲೆಯನ್ನು ಸಲ್ಲಿಸಲು ಅನುಸೂಚಿ IIIರಲ್ಲಿ ಹೇಳಿರುವ ನಿಬಂಧನೆಗಳನ್ನು ಅನುಸರಿಸತಕ್ಕದ್ದು.

**7. ಮಕ್ಕಳ ಕಲ್ಯಾಣ ಸಮಿತಿಯಿಂದ ಅನುಸರಣೆ ಕಾರ್ಯ.–** ಅಧಿನಿಯಮದ 5ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಡಿಯಲ್ಲಿ ನ್ಯಾಯಾಲಯವು ಹೊರಡಿಸಿದ ಯಾವುದೇ ಆದೇಶದ ಪ್ರತಿಯನ್ನು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಗೆ ಕಳುಹಿಸತಕ್ಕದ್ದು. ಕಾಲಕಾಲಕ್ಕೆ ಅಧಿಕೃತ ಅಭಿರಕ್ಷಕರಿಂದ ಮಕ್ಕಳು ಸರಿಯಾದ ಪಾಲನೆ ಮತ್ತು ಸಂರಕ್ಷಣೆಯನ್ನು ಪಡೆಯುತ್ತಿರುವುದನ್ನು ಖಚಿತಪಡಿಸಿಕೊಳ್ಳುವುದು ಸಮಿತಿಯ ಕರ್ತವ್ಯವಾಗಿರತಕ್ಕದ್ದು.

**8. ನಿರಸನ ಮತ್ತು ಉಳಿಸುವಿಕೆಗಳು.– (1)** ಬಾಲ್ಯವಿವಾಹ ನಿಷೇಧ (ಕರ್ನಾಟಕ) ನಿಯಮಗಳು, 2008 ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

**(2)** ಹಾಗೆ ನಿರಸನಗೊಂಡಿದ್ದರೂ, ಈ ನಿಯಮಗಳ ಪ್ರಾರಂಭದಲ್ಲಿದ್ದ ನಿಯಮಗಳ ಅಡಿಯಲ್ಲಿ ಬಾಕಿ ಇರುವ ಅಥವಾ ಮುಂದುವರೆಯುತ್ತಿರುವ ಎಲ್ಲಾ ಪ್ರಕರಣಗಳು ಮತ್ತು ಇತರ ವ್ಯವಹರಣೆಗಳು, ಈ ನಿಯಮಗಳನ್ನು ರಚನೆ ಮಾಡಿರದಿದ್ದರೆ ಹೇಗೆ ನಿರಸಿತ ನಿಯಮಗಳ ಉಪಬಂಧಗಳಿಗನುಸಾರವಾಗಿಯೇ ಮುಂದುವರಿಯುತ್ತಿದ್ದವೋ ಮತ್ತು ವಿಲೆಯಾಗುತ್ತಿದ್ದವೋ ಹಾಗೆ ಮುಂದುವರಿಯತಕ್ಕದ್ದು ಮತ್ತು ವಿಲೆಯಾಗತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಸಂಧ್ಯಾ ಎಲ್. ನಾಯಕ್**

ಸರ್ಕಾರದ ಅಧೀನ ಕಾರ್ಯದರ್ಶಿ- I

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲ ಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ.

**ಅನುಸೂಚಿ – I**

**(4ನೇ ನಿಯಮದ (11)ನೇ ಉಪ-ನಿಯಮವನ್ನು ನೋಡಿ)**

**ಬಾಲ್ಯವಿವಾಹ ನಿಷೇಧ ಅಧಿಕಾರಿಯ ಮತ್ತು ವಿವಿಧ ಇಲಾಖೆಗಳ ನಿರ್ದಿಷ್ಟ ಪಾತ್ರಗಳು**

| | |
|---|---|
| ಮಹಿಳಾ ಮತು ಮಕ್ಕಳ ಅಭಿವೃದ್ಧಿ ಇಲಾಖೆ (ನೋಡಲ್ ಇಲಾಖೆ) | • ಬಾಲ್ಯವಿವಾಹವು ನಡೆದಾಗಲೆಲ್ಲಾ/ಮುಂದೆ ನಡೆಯಬಹುದಾಗಿದ್ದರೆ ಆಗ ಉಪನಿರ್ದೇಶಕರು, ಬಾಲ್ಯ ವಿವಾಹವನ್ನು ತಡೆಯುವುದಕ್ಕೆ ತಾಲ್ಲೂಕು ಮತ್ತು ಗ್ರಾಮಮಟ್ಟದ ಬಾಲ್ಯವಿವಾಹ ನಿಷೇಧಾಧಿಕಾರಿಗಳಿಗೆ ನಿರ್ದೇಶನಗಳನ್ನು (ಮೌಖಿಕ/ಲಿಖಿತ) ನೀಡತಕ್ಕದ್ದು.<br>• ಬಾಲ್ಯ ವಿವಾಹಕ್ಕೂ ಮೊದಲಿನ/ ನಂತರದ ವಿಷಯಗಳಿಗೆ ಸಂಬಂಧಿಸಿದಂತೆ ಕಾನೂನು ಸೇವೆಗಳ ನೆರವನ್ನು ಒದಗಿಸುವುದು. |

| | |
|---|---|
| | • ಅಧಿನಿಯಮದ 16(3)(1)ರ ಪ್ರಕಾರ ನಮೂನೆ ಸಂಖ್ಯೆ – III ರಲ್ಲಿ ನಿಯತಕಾಲಿಕವಾಗಿ ಬಾಲ್ಯವಿವಾಹ ಘಟನೆಯ ಅಂಕಿಅಂಶಗಳನ್ನು ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕರಿಗೆ ವರದಿ ಮಾಡತಕ್ಕದ್ದು.<br>• ಇಲಾಖಾ ಅಧಿಕಾರಿಯು, ವಿವಾಹಕ್ಕಾಗಿ ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸತಕ್ಕದ್ದು.<br>• ನಿರೂಪಣಾಧಿಕಾರಿಗಳು, ಬಾಲ್ಯವಿವಾಹವನ್ನು ತಡೆಗಟ್ಟುವಲ್ಲಿ ತಾಲ್ಲೂಕು ಮತ್ತು ಗ್ರಾಮಮಟ್ಟದ ಬಾಲ್ಯ ವಿವಾಹ ನಿಷೇಧಾಧಿಕಾರಿಗಳಿಗೆ ನೆರವು ನೀಡತಕ್ಕದ್ದು.<br>• ನಿರೂಪಣಾಧಿಕಾರಿಗಳು, ಘಟನೆಯ ವರದಿಯನ್ನು ನೀಡುವುದು ಮತ್ತು ತಾಲ್ಲೂಕುಗಳಿಂದ ಮಾಹಿತಿ ಸಂಗ್ರಹಿಸಿ ಜಿಲ್ಲಾ ಮಟ್ಟದ ವರದಿಗಳನ್ನು ಸಿದ್ಧಪಡಿಸಲು ಉಪನಿರ್ದೇಶಕರಿಗೆ ನೆರವಾಗತಕ್ಕದ್ದು ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರ ತಾಲ್ಲೂಕು ಮತ್ತು ಗ್ರಾಮಮಟ್ಟದ ಬಾಲ್ಯವಿವಾಹ ನಿಷೇಧಾಧಿಕಾರಿಗಳ ನಡುವೆ ಸಂಪರ್ಕ ಸೇತುವೆಯಾಗಿ ಕಾರ್ಯನಿರ್ವಹಿಸತಕ್ಕದ್ದು.<br>• ಸಂಬಂಧಪಟ್ಟ ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿಯು, ಸಾಮೂಹಿಕ ವಿವಾಹಗಳಲ್ಲಿ ಯಾವುದೇ ಬಾಲ್ಯ ವಿವಾಹವು ನಡೆಯುತ್ತಿಲ್ಲವೆಂಬುದನ್ನು ಖಚಿತಪಡಿಸಿಕೊಳ್ಳಲು ಆ ಸಾಮೂಹಿಕ ವಿವಾಹಗಳು ನಡೆಯುವ ಸ್ಥಳದಲ್ಲಿ ಕಡ್ಡಾಯವಾಗಿ ಹಾಜರಿರತಕ್ಕದ್ದು.<br>• ಸಾಮೂಹಿಕ ವಿವಾಹಗಳನ್ನು ಆಯೋಜಿಸುವವರು ನೋಂದಣಿ ಪುಸ್ತಕವನ್ನು ಮತ್ತು ವಿವಾಹವಾಗಬೇಕಾದ ಉದ್ದೇಶಿತ ಅರ್ಹ ಜೋಡಿಗಳ ಪಟ್ಟಿಯನ್ನು ಇಟ್ಟಿರುವುದನ್ನು ಮತ್ತು ಆ ಜೋಡಿಗಳ ಭಾವ ಚಿತ್ರಗಳನ್ನು, ಜನನ ಪ್ರಮಾಣಪತ್ರವನ್ನು ಅಥವಾ ಶಾಲಾ ಪ್ರಮಾಣ ಪತ್ರವನ್ನು ಅಥವಾ ಸಾರ್ವಜನಿಕ ಆಸ್ಪತ್ರೆಯ ನೊಂದಾಯಿತ ವೈದ್ಯಾಧಿಕಾರಿಯಿಂದ ವಯಸ್ಸಿನ ಪುರಾವೆಯಾಗಿ ಪಡೆದ ವೈದ್ಯಕೀಯ ಪ್ರಮಾಣಪತ್ರವನ್ನು ಪರಿಶೀಲಿಸಿದ ತರುವಾಯ ವಿವರಗಳನ್ನು ದಾಖಲು ಮಾಡಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.<br>• ಬಾಲ್ಯವಿವಾಹ ತಡೆಯುವುದಕ್ಕೆ ವಿಫಲರಾದ ಸಂದರ್ಭದಲ್ಲಿ ಹೊಣೆಗಾರರನ್ನಾಗಿ ಮಾಡಲಾಗುವುದು. |
| ಕಂದಾಯ ಇಲಾಖೆ | • ಜಿಲ್ಲಾ ನೋಂದಣಿ ಅಧಿಕಾರಿಯು, ಸಾಮೂಹಿಕ ವಿವಾಹಗಳನ್ನು ನಡೆಸುವ ಎಲ್ಲಾ ಸಂಘಸಂಸ್ಥೆಗಳನ್ನು ಅವು ವ್ಯಕ್ತಿಗತವಾದವುಗಳು, ಟ್ರಸ್ಟ್‌ಗಳು, ಧರ್ಮಾದಾಯ ಸಂಸ್ಥೆಗಳು, ಸಂಘಗಳು ಮತ್ತು ದೇವಸ್ಥಾನ ಪ್ರಾಧಿಕಾರಗಳು ಯಾವುದೇ ಆಗಿರಲಿ ಅವುಗಳನ್ನು ನೋಂದಾಯಿಸಿಕೊಳ್ಳತಕ್ಕದ್ದು.<br>• ಜಿಲ್ಲಾ ನೋಂದಣಿ ಅಧಿಕಾರಿಯು, ಪ್ರತಿ ಐದು ವರ್ಷಗಳಿಗೆ ಒಮ್ಮೆ ನೋಂದಣಿಯನ್ನು ನವೀಕರಿಸತಕ್ಕದ್ದು.<br>• ಸಂಬಂಧಪಟ್ಟ ಗೊತ್ತುಪಡಿಸಿದ ವಿವಾಹ ನೋಂದಣಿ ಪ್ರಾಧಿಕಾರಿಯು ಸಾಮೂಹಿಕ ವಿವಾಹಗಳು ನಡೆಯುವ ಸ್ಥಳದಲ್ಲಿ ಹಾಜರಿರತಕ್ಕದ್ದು ಮತ್ತು ಸ್ಥಳದಲ್ಲಿಯೇ ಅಂಥ ವಿವಾಹಗಳನ್ನು ನೊಂದಾಯಿಸತಕ್ಕದ್ದು ಮತ್ತು ಆ ಜೋಡಿಗಳಿಗೆ ನೋಂದಣಿ ಪ್ರಮಾಣ ಪತ್ರ ನೀಡತಕ್ಕದ್ದು. ಯಾವುದೇ ಕಾರಣದಿಂದ ಅವನ ನಿಯಂತ್ರಣ ಮೀರಿ ಅದೇ ದಿನದಂದು ಅಂಥ ವಿವಾಹಗಳನ್ನು ನೋಂದಣಿ ಮಾಡಲು ಸಾಧ್ಯವಾಗದಿದ್ದರೆ, ಅಂಥ ವಿವಾಹಗಳನ್ನು ಒಂದು ತಿಂಗಳ ಒಳಗಾಗಿ ನೋಂದಣಿ ಮಾಡತಕ್ಕದ್ದು.<br>• ಪಟ್ಟಿಯಲ್ಲಿ ಹೆಸರಿಲ್ಲದ ವ್ಯಕ್ತಿಗಳು ವಿವಾಹವಾಗುವುದಕ್ಕೆ ಅನುಮತಿಕೊಡತಕ್ಕದ್ದಲ್ಲ.<br>• ಆಯಾಯ ತಾಲ್ಲೂಕುಗಳ ತಹಸೀಲ್ದಾರರು, ಆಯೋಜಕರುಗಳಿಗೆ ಸಾಮೂಹಿಕ ವಿವಾಹಗಳನ್ನು ನಡೆಸುವುದಕ್ಕೆ ಅನುಮತಿ ನೀಡತಕ್ಕದ್ದು.<br>• ತಹಸೀಲ್ದಾರನು, ಬಂದಿರುವ ಅರ್ಜಿಗಳನ್ನು ಮತ್ತು ದಸ್ತಾವೇಜುಗಳನ್ನು ಪರಿಶೀಲಿಸುವುದಕ್ಕಾಗಿ ಬಾಲ್ಯವಿವಾಹ ನಿಷೇಧ ಅಧಿಕಾರಿಗಳು ಮತ್ತು ಇತರೆ ಅಧಿಕಾರಿಗಳ ಪಟ್ಟಿ ಮಾಡತಕ್ಕದ್ದು ಮತ್ತು ಪಟ್ಟಿಯನ್ನು ಅಧಿಪ್ರಮಾಣೀಕರಿಸಿದ ತರುವಾಯ ಅನುಮತಿಯನ್ನು ನೀಡತಕ್ಕದ್ದು. |

| | |
|---|---|
| | • ಕಂದಾಯ ನಿರೀಕ್ಷಕರು, ಯಾವುದೇ ಬಾಲ್ಯವಿವಾಹವು ನಡೆದಿಲ್ಲವೆಂಬುದನ್ನು ಖಚಿತ ಪಡಿಸುವುದಕ್ಕಾಗಿ ಸಾಮೂಹಿಕ ವಿವಾಹ ನಡೆಯುವ ಸ್ಥಳದಲ್ಲಿ ಕಡ್ಡಾಯವಾಗಿ ಹಾಜರಿರತಕ್ಕದ್ದು.<br>• ಸಂಬಂಧಪಟ್ಟ ಬಾಲ್ಯವಿವಾಹ ನಿಷೇಧ ಅಧಿಕಾರಿಗಳ ಕೋರಿಕೆಯ ಮೇರೆಗೆ, ಕಂದಾಯ ಪ್ರಾಧಿಕಾರಿಗಳು ಬಾಲ್ಯವಿವಾಹ ನಡೆಯುವುದನ್ನು ತಡೆಯುವುದಕ್ಕೆ ಅಗತ್ಯವಾದಗಲೆಲ್ಲ ಸಹಕರಿಸುವುದು.<br>• ಸಾಮೂಹಿಕ ವಿವಾಹಗಳನ್ನು ಆಯೋಜಿಸುವವರು, ನೋಂದಣಿ ಪುಸ್ತಕವನ್ನು ಮತ್ತು ವಿವಾಹವಾಗಬೇಕಾದ ಉದ್ದೇಶಿತ ಅರ್ಹ ಜೋಡಿಗಳ ಪಟ್ಟಿಯನ್ನು ನಿರ್ವಹಿಸಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ಅವರ ಭಾವ ಚಿತ್ರಗಳನ್ನು / ಜನನ ಪ್ರಮಾಣ ಪತ್ರಗಳನ್ನು/ ಶಾಲಾ ಪ್ರಮಾಣ ಪತ್ರವನ್ನು/ ಸಾರ್ವಜನಿಕ ಆಸ್ಪತ್ರೆಯ ವೈದ್ಯಾಧಿಕಾರಿಯಿಂದ ವಯಸ್ಸಿನ ದಾಖಲೆಯಾಗಿ ಪಡೆದ ವೈದ್ಯಕೀಯ ಪ್ರಮಾಣಪತ್ರವನ್ನು ಪರಿಶೀಲಿಸಿದ ತರುವಾಯ ವಿವರಗಳನ್ನು ದಾಖಲು ಮಾಡತಕ್ಕದ್ದು.<br>• ಅಗತ್ಯವಾದಾಗಲೆಲ್ಲ ನೋಡಲ್ ಇಲಾಖೆಯ ಬಾಲ್ಯವಿವಾಹ ನಿಷೇಧ ಅಧಿಕಾರಿಗಳಿಗೆ ನೆರವಾಗತಕ್ಕದ್ದು. |
| ಕಾರ್ಮಿಕ ಇಲಾಖೆ | • ಕಾರ್ಖಾನೆಗಳಲ್ಲಿ ಅಥವಾ ಯಾವುದೇ ಇತರ ಸ್ಥಳಗಳಲ್ಲಿ ಬಾಲ ಕಾರ್ಮಿಕರುಗಳನ್ನು ಪತ್ತೆ ಮಾಡುವ ಉದ್ದೇಶಕ್ಕಾಗಿ ದಾಳಿಗಳನ್ನು ನಡೆಸಿದಾಗ ಬಾಲ್ಯ ವಿವಾಹದ ಘಟನೆಗಳು ಕಂಡು ಬಂದರೆ ಅವುಗಳನ್ನು ವರದಿ ಮಾಡತಕ್ಕದ್ದು.<br>• ಅಗತ್ಯವಾದಗಲೆಲ್ಲ ನೋಡಲ್ ಇಲಾಖೆಯ ಬಾಲ್ಯವಿವಾಹ ನಿಷೇಧ ಅಧಿಕಾರಿಗಳಿಗೆ ನೆರವಾಗತಕ್ಕದ್ದು. |
| ಶಿಕ್ಷಣ ಇಲಾಖೆ | • ಸಾಮೂಹಿಕ ವಿವಾಹಗಳನ್ನು ಆಯೋಜಿಸುವವರು ನೋಂದಣಿ ಪುಸ್ತಕವನ್ನು ಮತ್ತು ವಿವಾಹವಾಗಬೇಕಾದ ಉದ್ದೇಶಿತ ಅರ್ಹ ಜೋಡಿಗಳ ಪಟ್ಟಿಯನ್ನು ನಿರ್ವಹಿಸಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ಅವರ ಭಾವ ಚಿತ್ರಗಳನ್ನು/ ಜನನ ಪ್ರಮಾಣ ಪತ್ರಗಳನ್ನು / ಶಾಲಾ ಪ್ರಮಾಣ ಪತ್ರವನ್ನು / ಸಾರ್ವಜನಿಕ ಆಸ್ಪತ್ರೆಯ ವೈದ್ಯಾಧಿಕಾರಿಯಿಂದ ವಯಸ್ಸಿನ ದಾಖಲೆಯಾಗಿ ಪಡೆದ ವೈದ್ಯಕೀಯ ಪ್ರಮಾಣಪತ್ರವನ್ನು/ ಪರಿಶೀಲಿಸಿದ ತರುವಾಯ ವಿವರಗಳನ್ನು ದಾಖಲು ಮಾಡತಕ್ಕದ್ದು.<br>• ಯಾವುದೇ ಮಗುವು ಒಂದು ವಾರಕ್ಕಿಂತ ಹೆಚ್ಚಿಗೆ ಶಾಲೆಗೆ ಗೈರುಹಾಜರಾಗಿರುವುದು ಕಂಡು ಬಂದರೆ, ಗೈರು ಹಾಜರಾಗಿರುವುದಕ್ಕೆ ಕಾರಣವನ್ನು ಪಡೆದುಕೊಳ್ಳಲು ಸಂಬಂಧಪಟ್ಟ ಶಿಕ್ಷಕರನ್ನು ಆಗ್ರಹಪಡಿಸತಕ್ಕದ್ದು.<br>• ಅವಶ್ಯಕವೆಂದು ಕಂಡುಬಂದಾಗ ವಯಸ್ಸಿನ ಪರಿಶೀಲನೆಗಾಗಿ ಶಾಲಾ ಪ್ರಮಾಣ ಪತ್ರವನ್ನು ಹಾಜರುಪಡಿಸತಕ್ಕದ್ದು.<br>• ಶಾಲೆಗಳಿಗೆ ಹಾಜರಾಗುವ ಮಕ್ಕಳು ನಿರ್ದಿಷ್ಟ ವಯೋಮಾನದೊಳಗೆ ವಿವಾಹವಾಗದಂತೆ ಮುತುವರ್ಜಿಯಿಂದ ನಿಗಾ ವಹಿಸತಕ್ಕದ್ದು.<br>• ಅಗತ್ಯವಾದಗಲೆಲ್ಲ ನೋಡಲ್ ಇಲಾಖೆಯ ಬಾಲ್ಯವಿವಾಹ ನಿಷೇಧ ಅಧಿಕಾರಿಗಳಿಗೆ ನೆರವಾಗತಕ್ಕದ್ದು.<br>• ಬಾಲ್ಯವಿವಾಹದ ವಿಷಯಗಳ ಬಗ್ಗೆ ಮಕ್ಕಳಿಗೆ ಅರಿವನ್ನು ಮೂಡಿಸತಕ್ಕದ್ದು. |
| ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | • ವಯಸ್ಸಿನ ಪ್ರಮಾಣ ಪತ್ರವನ್ನು ನೀಡುವುದಕ್ಕೂ ಮುಂಚೆ ದಸ್ತಾವೇಜುಗಳನ್ನು ಪರಿಶೀಲಿಸಬೇಕು. ವೈದ್ಯಾಧಿಕಾರಿಯು ಶಾಲಾ ದಾಖಲಾತಿ ಪ್ರಮಾಣ ಪತ್ರವೇನಾದರೂ ಲಭ್ಯವಿದ್ದರೆ ಅದನ್ನು ಪರಿಶೀಲಿಸತಕ್ಕದ್ದು.<br>• ಗೊತ್ತುಪಡಿಸಿದ ನಮೂನೆಯಲ್ಲಿ ವಯಸ್ಸಿನ ಪ್ರಮಾಣಪತ್ರವನ್ನು ನೀಡಲು ಸಾರ್ವಜನಿಕ ಆಸ್ಪತ್ರೆಗೆ ಅಗತ್ಯ ನಿರ್ದೇಶನವನ್ನು ನೀಡುವುದು.<br>• ಅಗತ್ಯವಾದಗಲೆಲ್ಲ ನೋಡಲ್ ಇಲಾಖೆಯ ಬಾಲ್ಯ ವಿವಾಹ ನಿಷೇಧ ಅಧಿಕಾರಿಗೆ ನೆರವಾಗುವುದು. |

| | |
|---|---|
| | • ಬಾಲ್ಯವಿವಾಹದಿಂದಾಗುವ (ಆರೋಗ್ಯ ಸಂಬಂಧಿತ) ಪರಿಣಾಮಗಳ ಕುರಿತು ಸಮುದಾಯದಲ್ಲಿ ತಿಳಿವಳಿಕೆ ನೀಡುವುದು. |
| **ಪೊಲೀಸ್ ಇಲಾಖೆ (ಒಳಾಡಳಿತ ಇಲಾಖೆ)** | • ವಿವಾಹ ಸ್ಥಳದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದು.<br>• ಪ್ರಥಮ ಮಾಹಿತಿ ವರದಿಯನ್ನು ದಾಖಲಿಸುವುದು ಮತ್ತು ಅಧಿನಿಯಮದಲ್ಲಿನ ಅನ್ವಯವಾಗುವ ಪ್ರಕರಣಗಳ ಮೇರೆಗೆ ಮೊಕದ್ದಮೆಗಳನ್ನು ದಾಖಲಿಸಿರುವುದನ್ನು ಖಚಿತಪಡಿಸುವುದು.<br>• ಸಂಬಂಧಪಟ್ಟ ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿಯ ಕೋರಿಕೆ ಮೇರೆಗೆ ಪೋಲೀಸ್ ಪ್ರಾಧಿಕಾರಿಗಳು ಅಗತ್ಯವಾದಗಲೆಲ್ಲ ಬಾಲ್ಯ ವಿವಾಹ ನಡೆಯುವುದನ್ನು ತಡೆಯಲು ಸಹಕರಿಸುವುದು.<br>• ಅಪರಾಧ ಮತ್ತು ಕೃತ್ಯವನ್ನು ಸ್ವಪ್ರೇರಣೆಯಿಂದ ನ್ಯಾಯಿಕ ಗ್ರಹಿಕೆಗೆ ತೆಗೆದುಕೊಳ್ಳುವುದು.<br>• ಅಗತ್ಯವಾದಗಲೆಲ್ಲ ನೋಡಲ್ ಇಲಾಖೆಯ ಬಾಲ್ಯವಿವಾಹ ನಿಷೇಧ ಅಧಿಕಾರಿಗೆ ನೆರವಾಗುವುದು. |
| **ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ** | • ಸಂಬಂಧಿಸಿದ ಪಂಚಾಯಿತಿಗಳ ಗ್ರಾಮಗಳಲ್ಲಿ ಯಾವುದೇ ಬಾಲ್ಯ ವಿವಾಹ ನಡೆದಿರುವುದಿಲ್ಲವೆಂಬುದನ್ನು ಖಚಿತಪಡಿಸುವುದು.<br>• ಅಗತ್ಯವಾದಾಗಲೆಲ್ಲ ನೋಡಲ್ ಇಲಾಖೆಯ ಬಾಲ್ಯವಿವಾಹ ನಿಷೇಧ ಅಧಿಕಾರಿಗೆ ನೆರವಾಗುವುದು.<br>• ಬಾಲ್ಯವಿವಾಹವನ್ನು ತಡೆಯುವ ಸಂಬಂಧದಲ್ಲಿ ವ್ಯಾಪಕವಾದ ಅರಿವನ್ನು ಮೂಡಿಸುವುದು.<br>• ಬಾಲ್ಯವಿವಾಹಗಳನ್ನು ತಡೆಯುವಲ್ಲಿ ಜಿಲ್ಲಾ ಪಂಚಾಯಿತಿ ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮಪಂಚಾಯಿತಿಗಳ ಸದಸ್ಯರುಗಳು ವಹಿಸಬಹುದಾದ ಪಾತ್ರದ ಬಗ್ಗೆ ಅವರಿಗೆ ತಿಳುವಳಿಕೆ ನೀಡುವುದು. |
| **ಸಮಾಜ ಕಲ್ಯಾಣ ಇಲಾಖೆ** | • ಯಾವುದೇ ಮಗುವು ಒಂದು ವಾರಕ್ಕಿಂತ ಹೆಚ್ಚಿಗೆ ಹಾಸ್ಟೆಲ್‌ಗಳಿಗೆ ಗೈರು ಹಾಜರಾಗಿರುವುದು ಕಂಡು ಬಂದರೆ, ಆ ಗೈರು ಹಾಜರಿಗೆ ಕಾರಣವನ್ನು ಕುರಿತು ವರದಿಗಳನ್ನು ಪಡೆಯುವುದಕ್ಕೆ ಸಂಬಂಧಪಟ್ಟ ಶಿಕ್ಷಕರಿಗೆ/ ತಂದೆತಾಯಿಗೆ ಅಗ್ರಹಪಡಿಸತಕ್ಕದ್ದು.<br>• ಅಗತ್ಯವಾದಗಲೆಲ್ಲ ನೋಡಲ್ ಇಲಾಖೆಯ ಬಾಲ್ಯವಿವಾಹ ನಿಷೇಧ ಅಧಿಕಾರಿಗೆ ನೆರವಾಗುವುದು.<br>• ಬಾಲ್ಯವಿವಾಹದ ದುಷ್ಪರಿಣಾಗಳ ಬಗ್ಗೆ ಹಾಸ್ಟೆಲ್ ಮಕ್ಕಳಿಗೆ ಅರಿವನ್ನು ಮೂಡಿಸುವುದು. |
| **ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ** | • ಯಾವುದೇ ಮಗುವು ಒಂದು ವಾರಕ್ಕಿಂತ ಹೆಚ್ಚಿಗೆ ಹಾಸ್ಟೆಲ್‌ಗೆ ಗೈರು ಹಾಜರಾಗಿರುವುದು ಕಂಡುಬಂದರೆ ಆ ಗೈರು ಹಾಜರಿಗೆ ಕಾರಣವನ್ನು ಕುರಿತು ವರದಿಗಳನ್ನು ಪಡೆಯುವುದಕ್ಕೆ ಸಂಬಂಧಪಟ್ಟ ಶಿಕ್ಷಕರಿಗೆ/ ತಂದೆತಾಯಿಗೆ ಅಗ್ರಹಪಡಿಸತಕ್ಕದ್ದು.<br>• ಅಗತ್ಯವಾದಗಲೆಲ್ಲ ನೋಡಲ್ ಇಲಾಖೆಯು ಬಾಲ್ಯವಿವಾಹ ನಿಷೇಧ ಅಧಿಕಾರಿಗೆ ನೆರವಾಗುವುದು. |
| **ಬುಡಕಟ್ಟು ಕಲ್ಯಾಣ ಇಲಾಖೆ** | • ಯಾವುದೇ ಮಗುವು ಒಂದು ವಾರಕ್ಕಿಂತ ಹೆಚ್ಚಿಗೆ ಹಾಸ್ಟೆಲ್‌ಗೆ ಗೈರು ಹಾಜರಾಗಿರುವುದು ಕಂಡುಬಂದರೆ ಆ ಗೈರು ಹಾಜರಿಗೆ ಕಾರಣವನ್ನು ಕುರಿತು ವರದಿಗಳನ್ನು ಪಡೆಯುವುದಕ್ಕೆ ಸಂಬಂಧಪಟ್ಟ ಶಿಕ್ಷಕರಿಗೆ/ ತಂದೆತಾಯಿಗೆ ಅಗ್ರಹಪಡಿಸತಕ್ಕದ್ದು.<br>• ಅಗತ್ಯವಾದಗಲೆಲ್ಲ ನೋಡಲ್ ಇಲಾಖೆಯು ಬಾಲ್ಯವಿವಾಹ ನಿಷೇಧ ಅಧಿಕಾರಿಗೆ ನೆರವಾಗುವುದು. |

## ಅನುಸೂಚಿ – II

**(6ನೇ ನಿಯಮದ (1)ನೇ ಉಪ-ನಿಯಮವನ್ನು ನೋಡಿ)**

**ಬಾಲ್ಯವಿವಾಹಗಳನ್ನು ತಡೆಯಲು ಸಾಮೂಹಿಕ ವಿವಾಹಗಳಿಗಾಗಿ ಕಡ್ಡಾಯ ಪ್ರಕ್ರಿಯೆಗಳು**

1. **ಆಯೋಜಕರುಗಳ ನೋಂದಣಿ.–**

(i) ಸಾಮೂಹಿಕ ವಿವಾಹಗಳನ್ನು ಆಯೋಜಿಸುವ ಎಲ್ಲಾ ಆಯೋಜಕರು ವ್ಯಕ್ತಿಗಳಾಗಿರಲಿ, ಟ್ರಸ್ಟ್‌ಗಳಾಗಿರಲಿ, ಧರ್ಮದಾಯಿಗಳಾಗಿರಲಿ, ಸಂಸ್ಥೆಗಳಾಗಿರಲಿ, ಮತ್ತು ದೇವಸ್ಥಾನ ಪ್ರಾಧಿಕಾರಿಗಳಾಗಿರಲಿ ಅವುಗಳು ಕಂದಾಯ ಇಲಾಖೆಯ ಅಧೀನದಲ್ಲಿರುವ ಜಿಲ್ಲಾ ನೋಂದಣಿ ಅಧಿಕಾರಿಯವರಲ್ಲಿ ನೋಂದಣಿ ಮಾಡಿಸಿಕೊಳ್ಳತಕ್ಕದ್ದು.

(ii) ನೋಂದಣಿಯನ್ನು ಪ್ರತಿ ಐದು ವರ್ಷಗಳಿಗೊಮ್ಮೆ ನವೀಕರಿಸತಕ್ಕದ್ದು.

(iii) ಆಯೋಜಕರುಗಳು ನೋಂದಣಿಯ ಸಮಯದಲ್ಲಿ ಈ ಮುಂದಿನ ದಾಖಲೆಗಳನ್ನು ಸಲ್ಲಿಸತಕ್ಕದ್ದು:–

(ಎ) ವ್ಯಕ್ತಿಗಳ/ಟ್ರಸ್ಟ್‌ನ/ಸಂಘದ/ ದೇವಸ್ಥಾನ ಪ್ರಾಧಿಕಾರಗಳ/ ಧಾರ್ಮಿಕ ಸಂಸ್ಥೆಗಳ/ ಚರ್ಚ್‌ನ/ ನಿರ್ದಿಷ್ಟಪಡಿಸಿದ ಇತರರ ಹೆಸರು.

(ಬಿ) ವಿಳಾಸ ಮತ್ತು ಅದನ್ನು ದೃಢೀಕರಿಸುವ ದಾಖಲೆಗಳು.

(ಸಿ) ಟ್ರಸ್ಟ್ /ಸಂಘವಾಗಿದ್ದ ಸಂದರ್ಭದಲ್ಲಿ ನೋಂದಣಿ ಪ್ರಮಾಣ ಪತ್ರ.

(ಡಿ) ಸಾಮೂಹಿಕ ವಿವಾಹಗಳನ್ನು ನಡೆಸುವ ಸಂದರ್ಭದಲ್ಲಿ ಯಾವುದೇ ಬಾಲ್ಯವಿವಾಹಗಳನ್ನು ನಡೆಸುವುದಿಲ್ಲ ಎಂಬ ಬಗ್ಗೆ ಅಫಿಡಾವಿಟ್.

(iv) ಯಾವುದೇ ಸಂಸ್ಥೆ/ವ್ಯಕ್ತಿಗಳು ನೋಂದಣಿಯಾಗದೆ ಸಾಮೂಹಿಕ ವಿವಾಹಗಳನ್ನು ನಡೆಸತಕ್ಕದ್ದಲ್ಲ.

(v) ವಿವಾಹಗಳನ್ನು ನಡೆಸಲು ಅನುಮತಿಯನ್ನು ಕೋರುವ ಸಮಯದಲ್ಲಿ ಪ್ರಾಧಿಕಾರಗಳಿಗೆ ನೋಂದಣಿಯ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.

(vi) ನೋಂದಣಿ ಪ್ರಾಧಿಕಾರವು, ನಿರ್ದಿಷ್ಟ ವಯಸ್ಸಿಗಿಂತ ಕಡಿಮೆ ವಯಸ್ಸಿನ ಜೋಡಿಯ ವಿವಾಹಗಳನ್ನು ಪ್ರೋತ್ಸಾಹಿಸುವ ಮೂಲಕ ಮಾನದಂಡಗಳ ಉಲ್ಲಂಘನೆ ಮಾಡಿದ ಆಧಾರದ ಮೇಲೆ ನೋಂದಣಿಯನ್ನು ರದ್ದುಪಡಿಸುವ ಅಧಿಕಾರವನ್ನು ಹೊಂದಿರುತ್ತದೆ.

2. **ಸಾಮೂಹಿಕ ವಿವಾಹಗಳನ್ನು ನಡೆಸಲು ಅನುಮತಿ.–** ಆಯೋಜಕರು, ಸಾಮೂಹಿಕ ವಿವಾಹಗಳನ್ನು ನಡೆಸಲು ಅನುಮತಿಯನ್ನು ಕೋರಿ ತಾಲ್ಲೂಕಿನ ತಹಶೀಲ್ದಾರರಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು. ಅರ್ಜಿಯು ಈ ಮುಂದಿನ ದಾಖಲೆಗಳನ್ನು ಒಳಗೊಂಡಿರತಕ್ಕದ್ದು:–

(i) ಸಾಮೂಹಿಕ ವಿವಾಹಗಳಲ್ಲಿ ಪಾಲ್ಗೊಳ್ಳುತ್ತಿರುವ ವಧುವಿನ ಮತ್ತು ವರನ ಪ್ರತ್ಯೇಕ ಭಾವಚಿತ್ರ.

(ii) ಜನನ ಪ್ರಮಾಣಪತ್ರ/ ಶಾಲಾ ಪ್ರಮಾಣಪತ್ರ/ ವಯಸ್ಸಿನ ರುಜುವಾತಿಗಾಗಿ ಸಾರ್ವಜನಿಕ ಆಸ್ಪತ್ರೆಯ ಸರ್ಕಾರಿ ವೈದ್ಯಾಧಿಕಾರಿಯಿಂದ ಪಡೆದ ವಯಸ್ಸಿನ ಪ್ರಮಾಣಪತ್ರ, (ವಯಸ್ಸಿನ ರುಜುವಾತು ಬಗ್ಗೆ ಹೆಚ್ಚಿನ ವಿವರಗಳಿಗಾಗಿ ಅನುಬಂಧವನ್ನು ಅವಲೋಕಿಸುವುದು)

(iii) ಪಡಿತರ ಚೀಟಿ, ಚುನಾವಣಾ ಗುರುತಿನ ಚೀಟಿ, ಪಾಸ್ ಪೋರ್ಟ್, ವಾಹನ ಚಾಲನಾ ಪರವಾನಗಿ, ಇತ್ಯಾದಿ ರೂಪದಲ್ಲಿರುವ ವಾಸಸ್ಥಳದ ವಿಳಾಸದ ಪುರಾವೆ.

(iv) ಜೋಡಿಗಳ ಸಮ್ಮತಿಯೊಂದಿಗೆ ವಧು ಮತ್ತು ವರರು ವಿವಾಹವಾಗುವ ವಯಸ್ಸಿನವರು ಎಂದು ಹೇಳುವ ಅವರ ಪೋಷಕರಿಬ್ಬರಿಂದ ಅಫಿಡಾವಿಟ್.

3. **ತಹಶೀಲ್ದಾರರಿಗೆ ಅರ್ಜಿಯನ್ನು ಸಲ್ಲಿಸುವುದಕ್ಕಾಗಿನ ಕಾಲಮಿತಿ ಈ ಕೆಳಗಿನಂತಿದೆ:–**

(i) ವಿವಾಹ ಕಾರ್ಯಕ್ರಮದಲ್ಲಿ ಭಾಗಿಯಾಗುವ ಜೋಡಿಗಳ ಸಂಖ್ಯೆ 100 ಕ್ಕಿಂತ ಕಡಿಮೆ ಇದ್ದರೆ ಆಗ, ವಿವಾಹದ ದಿನಾಂಕಕ್ಕೆ ಮುಂಚೆ ಇಪ್ಪತ್ತು ದಿನಗಳು.

(ii) ವಿವಾಹ ಕಾರ್ಯಕ್ರಮದಲ್ಲಿ ಭಾಗಿಯಾಗುವ ಜೋಡಿಗಳ ಸಂಖ್ಯೆ 200 ರವರೆಗೆ ಇದ್ದಾಗ ವಿವಾಹದ ದಿನಾಂಕಕ್ಕೆ ಮುಂಚೆ ನಲವತ್ತು ದಿನಗಳು.

(iii) ವಿವಾಹ ಕಾರ್ಯಕ್ರಮದಲ್ಲಿ ಭಾಗಿಯಾಗುವ ಜೋಡಿಗಳ ಸಂಖ್ಯೆ 200 ಕ್ಕಿಂತ ಹೆಚ್ಚಿಗೆ ಇದ್ದಾಗ, ವಿವಾಹದ ದಿನಾಂಕಕ್ಕೆ ಮುಂಚೆ ಅರವತ್ತು ದಿನಗಳು.

4. ಅವಧಿ ಮೀರಿ ಸಲ್ಲಿಸಿದ ಅರ್ಜಿಯನ್ನು ಸ್ವೀಕರಿಸತಕ್ಕದ್ದಲ್ಲ.

5. ತಹಶೀಲ್ದಾರರು, ಸಲ್ಲಿಸಲಾದ ಅರ್ಜಿಗಳ ಮತ್ತು ದಸ್ತಾವೇಜುಗಳನ್ನು ಪರಿಶೀಲಿಸಲು ಬಾಲ್ಯವಿವಾಹ ನಿಷೇಧ ಅಧಿಕಾರಿಗಳ (CMPOs) ಮತ್ತು ಇತರ ಅಧಿಕಾರಿಗಳ ನೆರವು ಪಡೆಯತಕ್ಕದ್ದು ಮತ್ತು ಪಟ್ಟಿಯನ್ನು ಅಧಿಪ್ರಮಾಣೀಕರಿಸಿದ ತರುವಾಯ ಅನುಮತಿಯನ್ನು ನೀಡತಕ್ಕದ್ದು.

6. ಅಧಿಕೃತ ಅನುಮತಿ ಪತ್ರದ ಪ್ರತಿಗಳನ್ನು ಅಧಿಪ್ರಮಾಣಿತ ಜೋಡಿಗಳ ಪಟ್ಟಿಯ ಜೊತೆಯಲ್ಲಿ ಮತ್ತು ವಿವಾಹದ ದಿನಾಂಕ, ದಿನ, ಸ್ಥಳ, ಅನುಮೋದನೆಗೊಂಡ ಜೋಡಿಗಳ ಸಂಖ್ಯೆ, ಮುಂತಾದ ವಿವರಗಳನ್ನು ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿಗೆ ಸಲ್ಲಿಸತಕ್ಕದ್ದು. ತಹಶೀಲದಾರರ ಅನುಮತಿಯ ಪ್ರತಿ ಮತ್ತು ಅನುಮೋದನೆಗೊಂಡ ಅರ್ಜಿಯ ಪಟ್ಟಿಯು ಪರಿಶೀಲನೆಗಾಗಿ ಮತ್ತು ತಪಾಸಣೆ ಮಾಡಲು ಸಾಮೂಹಿಕ ವಿವಾಹ ನಡೆಯುವ ದಿನದಂದು ಆ ಸ್ಥಳದಲ್ಲಿ ಲಭ್ಯವಿರತಕ್ಕದ್ದು.

7. ಪರಿಷ್ಕರಣಾ ಸಮಿತಿಯು ಅನುಮೋದಿಸಿದ ಅರ್ಜಿಗಳ ಪಟ್ಟಿಯಲ್ಲಿ ಜೋಡಿಗಳ ಹೆಸರು ಇರದ ಹೊರತು ಯಾವುದೇ ವಿವಾಹಕ್ಕೆ ಅನುಮತಿ ನೀಡತಕ್ಕದ್ದಲ್ಲ.

8. ಅಂಥ ಸಾಮೂಹಿಕ ವಿವಾಹಗಳಲ್ಲಿ ವಿವಾಹವಾಗುವಂತಹ ಜೋಡಿಗಳು, ಅಧಿನಿಯಮದಡಿಯಲ್ಲಿ ಹೇಳಿದ ಪ್ರಕಾರ ವಿವಾಹವಾಗುವ ವಯಸ್ಸಿನವರಿರಬೇಕು. ವಧುವಿನ ವಯಸ್ಸು ಹದಿನೆಂಟು ವರ್ಷಗಳಿಗಿಂತ ಕಡಿಮೆ ಇರತಕ್ಕದ್ದಲ್ಲ ಮತ್ತು ವರನ ವಯಸ್ಸು ಇಪ್ಪತ್ತೊಂದು ವರ್ಷಗಳಿಗಿಂತ ಕಡಿಮೆ ಇರತಕ್ಕದ್ದಲ್ಲ.

9. ವಧು ಅಥವಾ ವರನ ವಯಸ್ಸು ನಿರ್ದಿಷ್ಟಪಡಿಸಿದ ವಯಸ್ಸಿಗಿಂತ ಕಡಿಮೆ ಇದೆ ಅಥವಾ ಅವರಲ್ಲಿ ಒಬ್ಬರ ವಿವಾಹ ಈಗಾಗಲೇ ಆಗಿದೆ ಎಂಬಂತಹ ಸಂಶಯ ವ್ಯಕ್ತವಾದಲ್ಲಿ ಅಂಥ ಅರ್ಜಿಗಳನ್ನು ತಿರಸ್ಕರಿಸತಕ್ಕದ್ದು ಮತ್ತು ಈ ಸಂಗತಿಗಳನ್ನು ಆಯೋಜಕರ ಗಮನಕ್ಕೆ ತರತಕ್ಕದ್ದು.

10. ಆಯೋಜಕರು, ಬಾಲ್ಯವಿವಾಹವನ್ನು ನಿಷೇಧಿಸಲಾಗಿದೆ ಎಂದು ಮತ್ತು ಬಾಲ್ಯವಿವಾಹವು ದಂಡನೀಯ ಅಪರಾಧವಾಗಿದೆ ಎಂದು ಕಡ್ಡಾಯವಾಗಿ ಜಾಹೀರುಪಡಿಸತಕ್ಕದ್ದು. ಉಲ್ಲಂಘನೆಗಾಗಿನ ದಂಡನೀಯ ಕ್ರಮಗಳನ್ನು ಎದ್ದು ಕಾಣುವಂತೆ ಪ್ರಕಟಿಸತಕ್ಕದ್ದು.

11. ಸಾಮೂಹಿಕ ವಿವಾಹಗಳು ನಡೆಯುತ್ತಿರುವ ಸ್ಥಳದಲ್ಲಿ ಯಾವುದೇ ಬಾಲ್ಯವಿವಾಹವು ನಡೆಯುತ್ತಿಲ್ಲವೆಂಬುದನ್ನು ಖಚಿತಪಡಿಸುವುದಕ್ಕಾಗಿ ಸಂಬಂಧಪಟ್ಟ ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿಯು ಮತ್ತು ಕಂದಾಯ ನಿರೀಕ್ಷಕರು ಸಾಮೂಹಿಕ ವಿವಾಹ ನಡೆಯುವ ಸ್ಥಳದಲ್ಲಿ ಹಾಜರಿರತಕ್ಕದ್ದು.

12. ಸಂಬಂಧಪಟ್ಟ ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿಗಳ ಕೋರಿಕೆಯ ಮೇರೆಗೆ, ಬಾಲ್ಯವಿವಾಹ ನಡೆಯುವುದನ್ನು ತಡೆಯುವುದಕ್ಕೆ ಅಗತ್ಯವಾದಾಗಲೆಲ್ಲ ಪೊಲೀಸ್ ಮತ್ತು ಕಂದಾಯ ಪ್ರಾಧಿಕಾರಿಗಳು ಸಹಕರಿಸತಕ್ಕದ್ದು.

13. ಆಯೋಜಕರು, ಸಾಮೂಹಿಕ ವಿವಾಹಗಳ ವಿಡಿಯೋ ಚಿತ್ರೀಕರಣ/ ಭಾವಚಿತ್ರಗಳನ್ನು ವಿವಾಹವಾದ ಏಳು ದಿನಗಳೊಳಗಾಗಿ ಸಂಬಂಧಪಟ್ಟ ತಹಶೀಲ್ದಾರ್ ಅಥವಾ ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿಗಳಿಗೆ ಸಲ್ಲಿಸತಕ್ಕದ್ದು.

14. ಅರ್ಜಿಗಳನ್ನು ಪರಿಷ್ಕರಿಸುವ/ ಅನುಮತಿಯನ್ನು ನೀಡುವ ಪ್ರಕ್ರಿಯೆಯಲ್ಲಿ ಅಧಿಕಾರಿಗಳ/ ಪ್ರಾಧಿಕಾರಗಳ ಮೇಲೆ ಒತ್ತಡ ಹೇರುವ ಆಯೋಜಕರ ವಿರುದ್ಧ ಕ್ರಮ ಜರುಗಿಸಬೇಕು.

15. ಸಂಬಂಧಪಟ್ಟ ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿಗಳು, ಸಾಮೂಹಿಕ ವಿವಾಹಗಳಲ್ಲಿ ಭಾಗಿಯಾಗುವ ಜೋಡಿಗಳು ವಿವಾಹವಾಗುವ ವಯಸ್ಸಿಗಿಂತ ಕಡಿಮೆ ವಯಸ್ಸಿನವರೆಂದು ಕಂಡುಬಂದರೆ ಆಯೋಜಕರ ವಿರುದ್ಧ ಕಡ್ಡಾಯವಾಗಿ ಪ್ರಥಮ ಮಾಹಿತಿ ವರದಿಯನ್ನು ದಾಖಲಿಸತಕ್ಕದ್ದು.

16. ಸಾಮೂಹಿಕ ವಿವಾಹಗಳಲ್ಲಿ ನಡೆದ ಪ್ರತಿಯೊಂದು ವಿವಾಹವನ್ನು ಕರ್ನಾಟಕ ವಿವಾಹಗಳ (ನೋಂದಣಿ ಮತ್ತು ಸಂಕೀರ್ಣ ಉಪಬಂಧಗಳು) ಅಧಿನಿಯಮ, 1976 (1984ರ ಕರ್ನಾಟಕ ಅಧಿನಿಯಮ ಸಂಖ್ಯೆ 2) ರ ಮೇರೆಗೆ ಕಡ್ಡಾಯವಾಗಿ ನೋಂದಾಯಿಸತಕ್ಕದ್ದು. ಗೊತ್ತುಪಡಿಸಿದ ಸಂಬಂಧಪಟ್ಟ ವಿವಾಹ ನೋಂದಣಿ ಪ್ರಾಧಿಕಾರವು ಅಂಥ ವಿವಾಹಗಳು ನಡೆಯುವ ಸ್ಥಳದಲ್ಲಿ ಹಾಜರಿರತಕ್ಕದ್ದು ಮತ್ತು ಅದೇ ಸ್ಥಳದಲ್ಲಿ ಅಂಥ ವಿವಾಹಗಳನ್ನು ನೋಂದಣಿ ಮಾಡಿಕೊಳ್ಳತಕ್ಕದ್ದು ಹಾಗೂ ವಿವಾಹವಾದ ಜೋಡಿಗಳಿಗೆ ನೋಂದಣಿ ಪ್ರಮಾಣಪತ್ರಗಳನ್ನು ನೀಡತಕ್ಕದ್ದು. ಕೈಮೀರಿದ ಯಾವುದೇ ಕಾರಣಕ್ಕಾಗಿ ಅದೇ ದಿನದಂದು ಅಂಥ ವಿವಾಹಗಳನ್ನು ನೋಂದಣಿ ಮಾಡಲು ಸಾಧ್ಯವಾಗದಿದ್ದರೆ ಅಂಥ ವಿವಾಹ ನಡೆದ ಮೂವತ್ತು ದಿನಗಳೊಳಗಾಗಿ ವಿವಾಹವನ್ನು ನೋಂದಣಿ ಮಾಡತಕ್ಕದ್ದು. ವಿವಾಹವನ್ನು ನೋಂದಣಿ ಮಾಡಿಸುವುದು ಪೋಷಕರು ಮತ್ತು ಪಕ್ಷಕಾರರ ಜವಾಬ್ದಾರಿಯಾಗಿರತಕ್ಕದ್ದು. ವಿವಾಹವನ್ನು ನೋಂದಾಯಿಸಲು ತಪ್ಪಿದರೆ ಅವರು ಕ್ರಮಕ್ಕೆ ಗುರಿಯಾಗಬೇಕಾಗುತ್ತದೆ.

17. ಸಾಮೂಹಿಕ ವಿವಾಹದ ಸಂದರ್ಭದಲ್ಲಿ ಏನಾದರೂ ಉಲ್ಲಂಘನೆಗಳಾಗಿದ್ದರೆ ಅವುಗಳ ವಿವರ ಒಳಗೊಂಡಂತೆ ಸಾಮೂಹಿಕ ವಿವಾಹದ ಮಾಸಿಕ ವರದಿಯನ್ನು ಸಂಬಂಧಪಟ್ಟ ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿಗಳು/ ಬಾಲ್ಯವಿವಾಹ ನಿಷೇಧ ಅಧಿಕಾರಿಗಳು, ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಕಳುಹಿಸತಕ್ಕದ್ದು ಮತ್ತು ಅದರ ಒಂದು ಪ್ರತಿಯನ್ನು ಉಪ-ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರಿಗೆ ಕಳುಹಿಸತಕ್ಕದ್ದು.

## ಅನುಸೂಚಿ – III

**(6ನೇ ನಿಯಮದ (2)ನೇ ಉಪ-ನಿಯಮವನ್ನು ನೋಡಿ)**

**ವಯಸ್ಸಿನ ಪುರಾವೆಯನ್ನು ಸಲ್ಲಿಸುವುದಕ್ಕಾಗಿ ಕಡ್ಡಾಯ ಪ್ರಮಾಣಗಳು.**

1. ವಯಸ್ಸಿನ ರುಜುವಾತನ್ನು ಸಲ್ಲಿಸುವುದಕ್ಕಾಗಿ ದಾಖಲೆಗಳ ಆದ್ಯತಾ ಕ್ರಮವು ಈ ಮುಂದಿನಂತಿದೆ, ಎಂದರೆ:-

(ಎ) ಜನನ ಮತ್ತು ಮರಣದ ನೋಂದಣಾಧಿಕಾರಿ / ಉಪ-ನೋಂದಣಾಧಿಕಾರಿ ಕಛೇರಿಯಲ್ಲಿ ಜನನಗಳ ನೋಂದಣಿಯ ಆಧಾರದ ಮೇಲೆ ನೀಡಲಾದ ಜನನ ಪ್ರಮಾಣ ಪತ್ರ.

(ಬಿ) ಜನನ ಪ್ರಮಾಣಪತ್ರ ಲಭ್ಯವಿಲ್ಲದಿದ್ದಾಗ ಶಾಲಾ ಪ್ರಮಾಣಪತ್ರ, ಶಾಲಾ ಪ್ರವೇಶ ದಾಖಲಾತಿ ರಿಜಿಸ್ಟರ್‌ನ ಉದ್ಧೃತ ಭಾಗ/ ವರ್ಗಾವಣೆ ಪ್ರಮಾಣಪತ್ರ/ಎಸ್‌ಎಸ್‌ಎಲ್‌ಸಿ ಪ್ರಮಾಣಪತ್ರವನ್ನು ಸಲ್ಲಿಸಬೇಕು.

(ಸಿ) (ಎ) ಮತ್ತು (ಬಿ) ಬಾಬುಗಳಲ್ಲಿ ನಮೂದಿಸಲಾದ ವಯಸ್ಸಿನ ಪ್ರಮಾಣಪತ್ರದ ದಸ್ತಾವೇಜುಗಳು ಲಭ್ಯವಿಲ್ಲದಿದ್ದಾಗ ಮಾತ್ರವೇ ತಂದೆತಾಯಿ / ವ್ಯಕ್ತಿಗಳು, ನಾನು/ ನನ್ನ ಮಗ/ ಮಗಳನ್ನು ಶಾಲೆಗೆ ದಾಖಲಿಸಿರುವುದಿಲ್ಲ ಎಂಬ ಹೇಳಿಕೆ ಇರುವ ಅಫಿಡಾವಿಟ್‌ನೊಂದಿಗೆ ಸರ್ಕಾರಿ ಆಸ್ಪತ್ರೆಯ ವೈದ್ಯಾಧಿಕಾರಿಯಿಂದ ಪಡೆದ ವಯಸ್ಸಿನ ಪ್ರಮಾಣಪತ್ರವನ್ನು ಸಲ್ಲಿಸಬೇಕು.

2. ವೈದ್ಯಾಧಿಕಾರಿಯನ್ನು ಹೊರತುಪಡಿಸಿ ಯಾವುದೇ ಇತರ ವ್ಯಕ್ತಿ / ಅಧಿಕಾರಿಯಿಂದ ಪಡೆದ ಅಫಿಡಾವಿಟ್ ತರಹದ ಇತರ ದಾಖಲೆಗಳನ್ನು ವಯಸ್ಸಿನ ರುಜುವಾತಾಗಿ ಸ್ವೀಕರಿಸತಕ್ಕದ್ದಲ್ಲ.

3. ವಧು ಅಥವಾ ವರನ ತಂದೆತಾಯಿ/ ಪೋಷಕರು ವಯಸ್ಸಿನ ಪ್ರಮಾಣಪತ್ರಕ್ಕಾಗಿ ಸಲ್ಲಿಸುವ ಅರ್ಜಿಯು, ಈ ಅನುಸೂಚಿಗೆ ಅನುಬಂಧಿಸಿದ ನಮೂನೆ-1 ರಂತೆ ಇರತಕ್ಕದ್ದು.

4. ವೈದ್ಯಾಧಿಕಾರಿಯು ನೀಡುವ ವಯಸ್ಸಿನ ಪ್ರಮಾಣ ಪತ್ರವನ್ನು ಈ ಅನುಸೂಚಿಗೆ ಅನುಬಂಧಿಸಿದ ನಮೂನೆ-2 ರಲ್ಲಿರುವಂತೆ ಸಲ್ಲಿಸತಕ್ಕದ್ದು. ಅದರಲ್ಲಿ ಮಗುವಿನ ಭಾವಚಿತ್ರ, ಮಗುವಿನ ಸಹಿ/ ಹೆಬ್ಬೆರಳ ಗುರುತು, ತಂದೆತಾಯಿ/ ಪೋಷಕರು ಹೆಸರು, ನಿವಾಸದ ವಿಳಾಸ, ವೈದ್ಯಕೀಯ ಪರೀಕ್ಷೆಯ ಕಾರ್ಯವಿಧಾನ, ವೈದ್ಯರ ಹೆಸರು, ಪದನಾಮ, ಸಹಿ ಮತ್ತು ಅವನ/ಅವಳ ನೋಂದಣಿ ಸಂಖ್ಯೆ ಇರತಕ್ಕದ್ದು.

5. ಜನನ ಪ್ರಮಾಣಪತ್ರವು ಸುಳ್ಳು ಪ್ರಮಾಣಪತ್ರವಾಗಿದೆಯೆಂಬ ಸಂದೇಹ ಉಂಟಾದ ಸಂದರ್ಭದಲ್ಲಿ ಹೆಚ್ಚಿನ ಪರಿಶೀಲನೆಗಾಗಿ ಶಾಲಾ ಪ್ರಮಾಣಪತ್ರವನ್ನು ಪಡೆದುಕೊಳ್ಳತಕ್ಕದ್ದು.

6. ಜನನ ಪ್ರಮಾಣಪತ್ರ ಮತ್ತು ಶಾಲಾ ಪ್ರಮಾಣಪತ್ರದ ಮಾಹಿತಿಯಲ್ಲಿ ವಿರೋಧಾಭಾಸಗಳು ಇದ್ದಾಗ, ಜನನ ಪ್ರಮಾಣಪತ್ರವು ಅಧಿಕೃತ ರಿಜಿಸ್ಟರಿನಲ್ಲಿ ದಾಖಲಾಗಿದ್ದರೆ ಆ ಪ್ರಮಾಣಪತ್ರಕ್ಕೆ ಬದ್ಧರಾಗಬೇಕು.

## ನಮೂನೆ-I

**(6ನೇ ನಿಯಮದ (2)ನೇ ಉಪ-ನಿಯಮವನ್ನು ಮತ್ತು ಅನುಸೂಚಿ – III ನೋಡಿ)**

**ವಿವಾಹದ ಉದ್ದೇಶಕ್ಕಾಗಿ ವಯಸ್ಸಿನ ಪ್ರಮಾಣಪತ್ರದ ಅರ್ಜಿ**

ಭಾವಚಿತ್ರ

**(ತಂದೆತಾಯಿ/ಪೋಷಕರು/ವಧು/ವರ (ವಯಸ್ಕರಾಗಿದ್ದರೆ)**

ಮಗು / ವ್ಯಕ್ತಿಯ ಹೆಸರು :

ತಂದೆ ತಾಯಿ/ ಪೋಷಕರ ಹೆಸರು :

ವಿಳಾಸ :

ಮಾನ್ಯರೇ,

ನಾನು, ನನ್ನ ಮಗನ/ಮಗಳ/ ನನ್ನ ವಿವಾಹದ ಉದ್ದೇಶಕ್ಕಾಗಿ ಅವನ/ಅವಳ/ನನ್ನ ವಯಸ್ಸಿನ ಪ್ರಮಾಣಪತ್ರವನ್ನು ನೀಡಬೇಕಾಗಿ ಮನವಿ ಮಾಡುತ್ತೇನೆ. ನನ್ನ ಮಗ / ಮಗಳು/ ನಾನು ಅಧಿಕೃತವಾದ ಜನನ ಪ್ರಮಾಣಪತ್ರ ಹೊಂದಿರುವುದಿಲ್ಲ ಮತ್ತು ಅವಳು /ಅವನು/ ನಾನು ಶಾಲೆಗೆ ಹೋಗಿರುವುದಿಲ್ಲ, ಅಲ್ಲದೆ, ಯಾವುದೇ ಶಾಲಾ ಪ್ರಮಾಣ ಪತ್ರ ಹೊಂದಿರುವುದಿಲ್ಲ.

ಆದುದರಿಂದ ವಿವರವಾದ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ನನಗೆ ವಯಸ್ಸಿನ ಪ್ರಮಾಣ ಪತ್ರವನ್ನು ನೀಡಬೇಕಾಗಿ ಮನವಿ ಮಾಡುತ್ತೇನೆ.

**ಘೋಷಣೆ**

ಬಾಲ್ಯವಿವಾಹಗಳ ನಿಷೇಧ ಅಧಿನಿಯಮ, 2006ರ ಮೇರೆಗೆ ಬಾಲ್ಯವಿವಾಹವು ದಂಡನೀಯ ಅಪರಾಧವೆಂದು ನಾನು ತಿಳಿದುಕೊಂಡಿದ್ದೇನೆ.

ದಿನಾಂಕ :

ಸ್ಥಳ :

ಅರ್ಜಿದಾರರ ಹೆಸರು ಮತ್ತು ಸಹಿ/ ಎಡಗೈ ಹೆಬ್ಬೆರಳಿನ ಗುರುತು

ಕಛೇರಿಯ ಉಪಯೋಗಕ್ಕಾಗಿ

ಸ್ವೀಕರಿಸುವ ವೈದ್ಯಕೀಯ ಸಿಬ್ಬಂದಿಯ ಹೆಸರು ಮತ್ತು ಸಹಿ ದಿನಾಂಕ:

ಕಛೇರಿ ಮೊಹರು.

## ನಮೂನೆ-2

(6ನೇ ನಿಯಮದ (2)ನೇ ಉಪ-ನಿಯಮವನ್ನು ಮತ್ತು ಅನುಸೂಚಿ – **III** ನೋಡಿ)

ಸರ್ಕಾರಿ ಆಸ್ಪತ್ರೆ ಹೆಸರು ......................................

ಭಾವಚಿತ್ರ

**ವಿವಾಹದ ಉದ್ದೇಶಕ್ಕಾಗಿ ವಯಸ್ಸಿನ ಪ್ರಮಾಣಪತ್ರ**

ಹೆಸರು :________________ ವಯಸ್ಸು : ________________

ಲಿಂಗ : ________________ ಹುಟ್ಟಿದ ದಿನಾಂಕ : ____________

ತಂದೆ / ತಾಯಿ/ ಪೋಷಕರ ಹೆಸರು : ________________________

ವಿಳಾಸ : ______________________________________________

______________________________________________

______________________________________________

ಗುರುತಿನ ಚಿಹ್ನೆಗಳು : 1. ______________________

2. ______________________

ಆಸ್ಪತ್ರೆಯ ಹೊರರೋಗಿ ಸಂಖ್ಯೆ : __________ ದಿನಾಂಕ : ________ ಎಕ್ಸ್‌ರೆ (ಅವಶ್ಯವಿದ್ದರೆ)

ಮಾಡಿದ ವೈದ್ಯಕೀಯ ಪರೀಕ್ಷೆ : (1) ಎತ್ತರ :–

(2) ತೂಕ :–

(3) ದೈಹಿಕ ತೂಕದ ಸೂಚ್ಯಾಂಕ (**BMI**)

ರೇಡಿಯೋಗ್ರಾಫ್ ಮಾಡಿದ ಭಾಗ (1) ____________________

(2) ____________________

(3) ____________________

(4) ____________________

(5) ____________________

## ಅನೂಸೂಚಿ – IV

(3ನೇ ನಿಯಮ ನೋಡಿ)

**ಬಾಲ್ಯ ವಿವಾಹದ ಮಾಹಿತಿದಾರನು ಭರ್ತಿ ಮಾಡಬೇಕಾದ ಮಾಹಿತಿ**

(1) ಮಾಹಿತಿದಾರನ / ಅರ್ಜಿದಾರನ ವಿವರಗಳು

(ಎ) ಹೆಸರು

(ಬಿ) ತಂದೆಯ ಹೆಸರು

(ಸಿ) ವಯಸ್ಸು

(ಡಿ) ವಿಳಾಸ

(ಇ) ದೂರವಾಣಿ / ಮೊಬೈಲ್ ಸಂಖ್ಯೆ

(ಎಫ್) ಕೆಲಸದ ಸ್ಥಳದ ವಿಳಾಸ.

(2)ನೆರವೇರಿಸಬೇಕಾದ ಉದ್ದೇಶಿತ ಬಾಲ್ಯ ವಿವಾಹದ ವಿವರಗಳು:–

(ಎ) ಸ್ಥಳ

(ಬಿ) ದಿನಾಂಕ

(ಸಿ) ನೆರವೇರಿಸಬೇಕಾದ ಉದ್ದೇಶಿತ ವಿವಾಹವು :-

(i) ಸಾಮೂಹಿಕ ವಿವಾಹವೇ

(ii) ದೇವಸ್ಥಾನದಲ್ಲಿ ನಡೆಸಲಾಗುವುದೇ

(iii) ಸಂಸ್ಥೆ / ಸಂಘಟನೆ ಮೂಲಕ ನಡೆಸಲಾಗುವುದೇ

(iv) ವ್ಯಕ್ತಿಗಳಿಂದ ನಡೆಸಲಾಗುವುದೇ

(3) ಬಾಲ್ಯ ವಿವಾಹವನ್ನು ನಡೆಸಲು ಉದ್ದೇಶಿಸಿದ ಕ್ಷೇತ್ರಾಧಿಕಾರ ಹೊಂದಿರುವ ಪೊಲೀಸ್ ಠಾಣೆ.

(ಎ) ಪೊಲೀಸ್ ಠಾಣೆಯ ಹೆಸರು

(ಬಿ) ದೂರವಾಣಿ ಸಂಖ್ಯೆ

(ಸಿ) ಇ-ಮೇಲ್ ವಿಳಾಸ

(ಡಿ) ಫ್ಯಾಕ್ಸ್ ಸಂಖ್ಯೆ

(4)ಬಾಲ್ಯ ವಿವಾಹ ನಿಷೇಧ ಅಧಿಕಾರಿಗೆ ಮಾಹಿತಿ ನೀಡುವುದರ ಉದ್ದೇಶ

ಹೆಸರು :

ಸ್ಥಳ : ಸಹಿ ______________

**ವರದಿ:**

- ಕಾರ್ಪಲ್ ಬೋನ್ಸ್
- ಎಪಿಫೈಸಿಸ್ ಆಫ್ ಬೇಸ್ಡ್ ಆಫ್ ಫರ್ಸ್ಟ್ ಮೆಟಾ ಕಾರ್ಪಲ್
- ಎಪಿಫೈಸಿಸ್ ಆಫ್ ಹೆಡ್ ಆಫ್ ಸೆಕಂಡ್, ಥರ್ಡ್, ಫೋರ್ತ್ ಅಂಡ್ ಫಿಫ್ತ್ ಮೆಟಾ ಕಾರ್ಪಲ್
- ಎಪಿಫೈಸಿಸ್ ಲೋಯರ್ ಅಂಡ್ ಆಫ್ ರೆಡಿಯಸ್ ಅಂಡ್ ಅಲ್ನಾ
- ಎಪಿಫೈಸಿಸ್ ಆಫ್ ಹೆಡ್ ಆಫ್ ರೆಡಿಯಸ್ ಅಂಡ್ ಆಲೆಕ್ರೋನಾನ್
- ಎಪಿಫೈಸಿಸ್ ಆಫ್ ಲೋಯರ್ ಅಂಡ್ ಆಫ್ ಹ್ಯೂಮರ್ಸ್
- ಎಪಿಫೈಸಿಸ್ ಆಫ್ ಲಿಲಾಕ್ ಕ್ರೆಸ್ಟ್
- ಟ್ರೈ ರೇಡಿಯೇಟ್ ಕಾರ್ಟಿಲೇಜ್ (ವೈ-ಶೇಪ್ಡ್)
- ಎಪಿಫೈಸಿಸ್ ಆಫ್ ಪ್ರಾಕ್ಸಿಮಲ್ ಎಂಡ್ ಆರ್ ಫೆಮರ್
- ದಟ್ ಈಸ್ ಹೆಡ್, ಗ್ರೇಟರ್ ಟ್ರೋಕ್ಯಾಂಟರ್ ಅಂಡ್ ಲೆಸ್ಸರ್ ಟ್ರೋಕ್ಯಾಂಟರ್
- ಎಪಿಫೈಸಿಸ್ ಆಫ್ ಲೋಯಲ್ ಎಂಡ್ ಆಫ್ ಫಿಮರ್
- ಎಪಿಫೈಸಿಸ್ ಆಫ್ ಅಪ್ಪರ್ ಎಂಡ್ ಆಫ್ ಟಿಬಿಯಾ ಅಂಡ್ ಫಿಬ್ಯುಲಾ
- ಮೋಲಾರ್ ಟೂತ್ ಆಫ್ ಮ್ಯಾಂಡಿಬಲ್

ಅಭಿಪ್ರಾಯವನ್ನು ಸಮರ್ಥಿಸುವ ಆಧಾರಗಳು :

ನನ್ನ ಅಭಿಪ್ರಾಯದ ಪ್ರಕಾರ ಮತ್ತು ಆಧಾರಗಳನ್ನು ಗಮನಿಸಿ, ನಾನು ಈ ಮೂಲಕ ಅವನ /ಅವಳ ವಯಸ್ಸು ______________ ಎಂದು ಪ್ರಮಾಣೀಕರಿಸುತ್ತೇನೆ.

**ಘೋಷಣೆ**

ಬಾಲ್ಯವಿವಾಹ ನಿಷೇಧ ಅಧಿನಿಯಮ, 2006 ರ ಮೇರೆಗೆ ಬಾಲ್ಯವಿವಾಹವು ದಂಡನೀಯ ಅಪರಾಧವೆಂದು ನಮಗೆಲ್ಲ ತಿಳಿದಿದೆ.

ಪರೀಕ್ಷೆಗೊಳಪಟ್ಟ ಮಗುವಿನ ಹೆಸರು/ವ್ಯಕ್ತಿಯ ಸಹಿ/ ಎಡಗೈ ಹೆಬ್ಬೆರಳಿನ ಗುರುತು

ಪೋಷಕರು / ಪಾಲಕರ ಸಹಿ/ಎಡಗೈ ಹೆಬ್ಬೆರಳಿನ ಗುರುತು

ನೀಡಿದ ದಿನಾಂಕ : ________________

________________________

________________________

ವೈದ್ಯಾಧಿಕಾರಿಯ ಹೆಸರು ಮತ್ತು ಸಹಿ

ದಿನಾಂಕ :
ಅಧಿಕಾರಿ :
ಕಛೇರಿ ಮೊಹರು :
ಸ್ಥಳ :

ನೋಂದಣಿ ಸಂಖ್ಯೆ: ____________
ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ವಿಳಾಸ.

**ಸಂಧ್ಯಾ ಎಲ್. ನಾಯಕ್**
ಸರ್ಕಾರದ ಅಧೀನ ಕಾರ್ಯದರ್ಶಿ- I
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲ ಚೇತನರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ.

The above translation of the Prohibition of Child Marriage (Karnataka) Rules, 2014 shall be authoritative text in the language under section 5A of the Karnataka Official Language Act, 1963.

Governor of Karnataka
ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಕೆ. ದ್ವಾರಕನಾಥ್ ಬಾಬು**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳ ಇಲಾಖೆ

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಹಿ7) ಪ್ರತಿಗಳು: 230

## ಕರ್ನಾಟಕ ಸರ್ಕಾರ

ಸಂಖ್ಯೆ: ಮಮಇ 205 ಮಮಅ 2011(ಭಾ-1)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:28.05.2018.

## ಅಧಿಸೂಚನೆ

Government Notification No: WCD 377 SWW 2004, dated: 02.05.2008 and Addendum No: WCD 171 SWW 2011, dated: 16.11.2011 ರಲ್ಲಿ ರಾಜ್ಯಾದ್ಯಂತ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಅವರ ಅಧಿಕಾರ ವ್ಯಾಪ್ತಿಯನ್ನು ನಿಗದಿಪಡಿಸಿ ವಿವಿಧ ಹಂತಗಳಲ್ಲಿ ಬಾಲ್ಯ ವಿವಾಹ ನಿಷೇಧ ಅಧಿಕಾರಿಗಳೆಂದು ನೇಮಿಸಿ ಆಂಗ್ಲಭಾಷೆಯಲ್ಲಿ ಅಧಿಸೂಚನೆ ಹೊರಡಿಸಲಾಗಿರುತ್ತದೆ.

ದಿನಾಂಕ 19-11-2016 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಬಾಲ್ಯ ವಿವಾಹಗಳನ್ನು ತಡೆಯುವ ರಾಜ್ಯ ಮಟ್ಟದ ಸಮನ್ವಯ ಮತ್ತು ಪರಿಶೀಲನಾ ಸಮಿತಿಯ ಸಭೆಯಲ್ಲಿ ಬಾಲ್ಯ ವಿವಾಹ ನಿಷೇಧಾಧಿಕಾರಿಗಳನ್ನು ನೇಮಿಸಿರುವ ಅಧಿಸೂಚನೆಯನ್ನು ಕನ್ನಡದಲ್ಲಿ ಹೊರಡಿಸಲು ಮತ್ತು 21-09-2017 ರಂದು ನಡೆದ ಸಭೆಯಲ್ಲಿ ಇಲಾಖೆಯ ಐ.ಸಿ.ಡಿ.ಎಸ್ ಮೇಲ್ವಿಚಾರಕಿಯರನ್ನೂ ಸಹ ಬಾಲ್ಯವಿವಾಹ ನಿಷೇಧಾಧಿಕಾರಿಗಳೆಂದು ನೇಮಿಸಿ ಅಧಿಸೂಚನೆ ಹೊರಡಿಸಲು ಸಮಿತಿಯ ಅಧ್ಯಕ್ಷರು ಸೂಚಿಸಿರುತ್ತಾರೆ.

ಅದರಂತೆ ಬಾಲ್ಯ ವಿವಾಹ ನಿಷೇಧ ಕಾಯ್ದೆ 2006 (2007ರ ಕೇಂದ್ರ ಅಧಿನಿಯಮ ಸಂಖ್ಯೆ 6) ಪರಿಚ್ಛೇದ 16 ಉಪ ಪರಿಚ್ಛೇದ (1)ರಲ್ಲಿ ಪ್ರದತ್ತವಾದ ಅಧಿಕಾರದನ್ವಯ ಇಲಾಖೆಯ ಮೇಲ್ವಿಚಾರಕಿಯರನ್ನೂ ಸಹ ಬಾಲ್ಯ ವಿವಾಹ ನಿಷೇಧ ಅಧಿಕಾರಿಗಳನ್ನಾಗಿ ನೇಮಿಸಿ ಹಾಗೂ ಅವರ ಅಧಿಕಾರ ವ್ಯಾಪ್ತಿಯನ್ನು ನಿಗಧಿಪಡಿಸಿ ಈ ಹಿಂದೆ ಜಾರಿಯಲ್ಲಿದ್ದ ಆಂಗ್ಲಭಾಷೆಯ ಆದೇಶಗಳನ್ನು ಈ ಕೆಳಕಂಡಂತೆ ಕನ್ನಡಕ್ಕೆ ಭಾಷಾಂತರಿಸಿ ಆದೇಶಿಸಿದೆ.

| ಕ್ರ.ಸಂ | ಬಾಲ್ಯವಿವಾಹ ನಿಷೇಧಾಧಿಕಾರಿಗಳ ವಿವರ | ಅಧಿಕಾರ ವ್ಯಾಪ್ತಿ |
|---|---|---|
| 1 | ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | |
| 2 | ಯೋಜನಾ ನಿರ್ದೇಶಕರು, ಐಸಿಪಿಎಸ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, | |
| 3 | ಡೈರೆಕ್ಟರ್ ಜನರಲ್ ಆಫ್ ಪೊಲೀಸ್, | |
| 4 | ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್(ತರಬೇತಿ), ಬೆಂಗಳೂರು | |
| 5 | ಸಂಬಂಧಿಸಿದ ರೇಂಜ್‌ನ ಐ.ಜಿ.ಪಿ (I.G.P of the Concerned Range) | ರಾಜ್ಯ ವ್ಯಾಪ್ತಿ |
| 6 | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ | |
| 7 | ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ | |
| 8 | ಸರ್ಕಾರದ ಕಾರ್ಯದರ್ಶಿಗಳು, ಕಂದಾಯ ಇಲಾಖೆ | |
| 9 | ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | |
| 10 | ಆಯುಕ್ತರು, ಕಾರ್ಮಿಕ ಇಲಾಖೆ | |
| 11 | ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ | |
| 12 | ಆಯುಕ್ತರು, ಹಿಂದುಳಿದ ವರ್ಗಗಳ ಅಭಿವೃದ್ಧಿ ಇಲಾಖೆ | |

| | | |
|---|---|---|
| 13 | ನಿರ್ದೇಶಕರು (ಪಂಚಾಯತ್ ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | |
| 14 | ನಿರ್ದೇಶಕರು, ಟ್ರೈಬಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ | |
| 15 | ಜಿಲ್ಲಾಧಿಕಾರಿಗಳು | |
| 16 | ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು | |
| 17 | ಹಿರಿಯ ಮಕ್ಕಳ ಕಲ್ಯಾಣಾಧಿಕಾರಿ, ಸ್ಪೆಷಲ್ ಜುವೆನೈಲ್ ಪೊಲೀಸ್ ಯೂನಿಟ್, ಒಳಾಡಳಿತ ಇಲಾಖೆ | |
| 18 | ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯಿತಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | |
| 19 | ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ. | |
| 20 | ಜಿಲ್ಲಾ ಆರೋಗ್ಯಾಧಿಕಾರಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | ಜಿಲ್ಲಾ ವ್ಯಾಪ್ತಿ |
| 21 | ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ಸಮಾಜ ಕಲ್ಯಾಣ ಇಲಾಖೆ | |
| 23 | ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಅಭಿವೃದ್ಧಿ ಇಲಾಖೆ | |
| 24 | ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | |
| 25 | ನಿರೂಪಣಾಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | |
| 26 | ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಐಸಿಪಿಎಸ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, | |
| 27 | ಐಟಿಡಿಪಿ-ಪ್ರಾಜೆಕ್ಟ್ ಡೆವೆಲಪ್‌ಮೆಂಟ್ ಆಫೀಸರ್, ಟ್ರೈಬಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ | |
| 28 | ಜಿಲ್ಲಾ ಕಾರ್ಮಿಕಾಧಿಕಾರಿಗಳು, ಕಾರ್ಮಿಕ ಇಲಾಖೆ | |
| 29 | ತಹಶೀಲ್ದಾರರು | |
| 30 | ಕಾರ್ಯ ನಿರ್ವಹಣಾಧಿಕಾರಿ, ತಾಲ್ಲೂಕು ಪಂಚಾಯಿತಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | |
| 31 | ತಾಲ್ಲೂಕು ವೈದ್ಯಾಧಿಕಾರಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | |
| 32 | ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ, ಸಮಾಜ ಕಲ್ಯಾಣ ಇಲಾಖೆ | ತಾಲ್ಲೂಕು ವ್ಯಾಪ್ತಿ |
| 33 | ಕಾರ್ಮಿಕ ನಿರೀಕ್ಷಕರು, ಕಾರ್ಮಿಕ ಇಲಾಖೆ | |
| 34 | ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ | |
| 35 | ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, | |
| 36 | ಸಂರಕ್ಷಣಾಧಿಕಾರಿಗಳು, (ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ), ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, | |
| 37 | ಸರ್ಕಲ್ ಇನ್‌ಸ್ಪೆಕ್ಟರ್, ಪೊಲೀಸ್ ಇಲಾಖೆ. | |
| 38 | ವಿಸ್ತರಣಾಧಿಕಾರಿ, ಹಿಂದುಳಿದ ವರ್ಗಗಳ ಅಭಿವೃದ್ಧಿ ಇಲಾಖೆ | |
| 39 | ಕಂದಾಯ ನಿರೀಕ್ಷಕರು, ಕಂದಾಯ ಇಲಾಖೆ | ಕಂದಾಯ ಹೋಬಳಿ ವ್ಯಾಪ್ತಿ |
| **40** | ಪೊಲೀಸ್ ಸಬ್ ಇನ್‌ಸ್ಪೆಕ್ಟರ್, ಪೊಲೀಸ್ ಇಲಾಖೆ | ಠಾಣಾ ವ್ಯಾಪ್ತಿ |
| 41 | **ಮೇಲ್ವಿಚಾರಕಿಯರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ** | **ಐ.ಸಿ.ಡಿ.ಎಸ್ ವಲಯ ವ್ಯಾಪ್ತಿ** |
| 42 | ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | ಗ್ರಾಮ ಪಂಚಾಯಿತಿ ವ್ಯಾಪ್ತಿ |
| 43 | ಗ್ರಾಮ ಲೆಕ್ಕಿಗರು, ಕಂದಾಯ ಇಲಾಖೆ | ಸಾಜಾ ವ್ಯಾಪ್ತಿ |
| 44 | ಶಾಲಾ ಮುಖ್ಯೋಪಾಧ್ಯಾಯರು, ಶಿಕ್ಷಣ ಇಲಾಖೆ | ಗ್ರಾಮ ವ್ಯಾಪ್ತಿ |
| 45 | ಶಾಲಾ ಮುಖ್ಯೋಪಾಧ್ಯಾಯರು, ಶಿಕ್ಷಣ ಇಲಾಖೆ | ಮಹಾನಗರ |
| 46 | ಕಂದಾಯ ನಿರೀಕ್ಷಕರು, ಕಂದಾಯ ಇಲಾಖೆ | ಪಾಲಿಕೆ/ನಗರಸಭೆ/ಪುರಸಭೆ/ಪಟ್ಟಣ |

| | | |
|---|---|---|
| 47 | ಆರೋಗ್ಯ ನಿರೀಕ್ಷಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | ಪಂಚಾಯಿತಿ ವ್ಯಾಪ್ತಿ |
| 48 | ಹಿರಿಯ ಕಾರ್ಮಿಕ ನಿರೀಕ್ಷಕರು/ಕಾರ್ಮಿಕ ನಿರೀಕ್ಷಕರು, ಕಾರ್ಮಿಕ ಇಲಾಖೆ | |
| 49 | ಪ್ರದೇಶ ವ್ಯಾಪ್ತಿಯ ಪೊಲೀಸ್ ಇನ್‌ಸ್ಪೆಕ್ಟರ್, ಪೊಲೀಸ್ ಇಲಾಖೆ | |
| 50 | ಎಲ್ಲಾ ಕಂದಾಯ ಅಧಿಕಾರಿಗಳು, ಮಹಾನಗರ ಪಾಲಿಕೆ/ನಗರಸಭೆ/ಪುರಸಭೆ/ಪಟ್ಟಣ ಪಂಚಾಯಿತಿ | |

**ಬಾಲ್ಯ ವಿವಾಹ ನಿಷೇಧ ಕಾಯ್ದೆ –2006ರ ಕಲಂ 16(3) ರಂತೆ ಬಾಲ್ಯ ವಿವಾಹ ನಿಷೇಧ ಅಧಿಕಾರಿಗಳ ಕರ್ತವ್ಯಗಳು:–**

(ಎ) ತಾನು ಸೂಕ್ತವೆಂದು ಭಾವಿಸಬಹುದಾದಂಥ ಕ್ರಮವನ್ನು ತೆಗೆದುಕೊಳ್ಳುವುದರ ಮೂಲಕ ಬಾಲ್ಯ ವಿವಾಹವು ಶಾಸ್ತ್ರೋಕ್ತವಾಗಿ ನೆರವೇರುವುದನ್ನು ತಡೆಯುವುದು.

(ಬಿ) ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸುವ ವ್ಯಕ್ತಿಗಳ ವಿರುದ್ಧ ಪರಿಣಾಮಕಾರಿ ಪ್ರಾಸಿಕ್ಯೂಷನ್ ಜರುಗಿಸುವ ಬಗ್ಗೆ ಸಾಕ್ಷ್ಯವನ್ನು ಸಂಗ್ರಹಿಸುವುದು.

(ಸಿ) ಬಾಲ್ಯ ವಿವಾಹಗಳನ್ನು ಶಾಸ್ತ್ರೋಕ್ತವಾಗಿ ನೆರವೇರಿಸುವುದಕ್ಕೆ ಉತ್ತೇಜಿಸುವುದರಲ್ಲಿ, ಸಹಾಯ ಮಾಡುವುದರಲ್ಲಿ, ನೆರವು ನೀಡುವುದರಲ್ಲಿ ಅಥವಾ ಅನುಮತಿಸುವುದರಲ್ಲಿ ತೊಡಗಬಾರದೆಂದು ಪ್ರತ್ಯೇಕ ಪ್ರಕರಣಗಳಲ್ಲಿ ಅಥವಾ ಸ್ಥಳೀಯ ನಿವಾಸಿಗಳಿಗೆ ಸಲಹೆ ನೀಡುವುದು.

(ಡಿ) ಬಾಲ್ಯ ವಿವಾಹಗಳಿಂದಾಗುವ ಕೆಟ್ಟ ಪರಿಣಾಮಗಳ ಬಗ್ಗೆ ಅರಿವು ಮೂಡಿಸುವುದು.

(ಇ) ಬಾಲ್ಯ ವಿವಾಹಗಳ ಸಮಸ್ಯೆಯ ಬಗ್ಗೆ ಸಮುದಾಯದಲ್ಲಿ ಸಂವೇದನೆಯನ್ನುಂಟು ಮಾಡುವುದು.

(ಎಫ್) ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದಂಥ ನಿಯತಕಾಲಿಕ ವಿವರಪಟ್ಟಿಕೆಗಳನ್ನು ಮತ್ತು ಅಂಕಿ ಅಂಶಗಳನ್ನು ಒದಗಿಸುವುದು.

(ಜಿ) ರಾಜ್ಯ ಸರ್ಕಾರವು ಅವರಿಗೆ ವಹಿಸಬಹುದಾದಂತಹ ಇತರ ಪ್ರಕಾರ್ಯಗಳನ್ನು ಮತ್ತು ಕರ್ತವ್ಯಗಳನ್ನು ನಿರ್ವಹಿಸುವುದು.

**ಬಾಲ್ಯ ವಿವಾಹ ನಿಷೇಧ (ಕರ್ನಾಟಕ) ನಿಯಮಾವಳಿ 2014ರ ನಿಯಮ ಸಂಖ್ಯೆ 4ರ ಪ್ರಕಾರ ಬಾಲ್ಯವಿವಾಹ ನಿಷೇಧ ಅಧಿಕಾರಿಗಳ ಪ್ರಕಾರ್ಯಗಳು ಮತ್ತು ಕರ್ತವ್ಯಗಳು:–**

1 ಬಾಲ್ಯವಿವಾಹ ನಿಷೇಧ ಅಧಿಕಾರಿಯು, ಅಧಿನಿಯಮವನ್ನು ಜಾರಿಗೆ ತರುವುದಕ್ಕೆ ಸಂಬಂಧಿಸಿದಂತೆ ಯಾರೇ ಮಗುವು ಅಥವಾ ಅರ್ಜಿದಾರನಿಗೆ ಸೂಕ್ತ ಆದೇಶಗಳನ್ನು ಪಡೆಯಲು ಸಾಧ್ಯವಾಗುವಂತೆ, ಕಾನೂನು ಸೇವೆಗಳ ಪ್ರಾಧಿಕಾರ ಅಧಿನಿಯಮ, 1987 (1987ರ ಕೇಂದ್ರ ಅಧಿನಿಯಮ, 39)ರ ಮೇರೆಗೆ ಕಾನೂನು ಸೇವೆ ಪಡೆಯಲು ಅವಕಾಶ ಕಲ್ಪಿಸಿರುವುದನ್ನು ಸುನಿಶ್ಚಿತಪಡಿಸಿಕೊಳ್ಳಬೇಕು

2 ಬಾಲ್ಯವಿವಾಹ ನಿಷೇಧ ಅಧಿಕಾರಿಯು, ಬಾಲ್ಯ ವಿವಾಹವನ್ನು ತಡೆಯಲು ಅಥವಾ ಬಾಲ್ಯ ವಿವಾಹದಿಂದ ಬಾಧಿತರಾದ ಮಗುವಿಗೆ ಸೇವೆಗಳನ್ನು ಒದಗಿಸಲು ಎಲ್ಲಾ ಸರ್ಕಾರಿ ಶಾಲೆಗಳು, ಅಂಚೆ ಕಛೇರಿಗಳಲ್ಲಿ, ಪಂಚಾಯಿತಿ ಕಛೇರಿಗಳಲ್ಲಿ, ಮೀನಾ ಕ್ಲಬ್‌ಗಳಲ್ಲಿ, ಕಿಶೋರಿ ಸಂಘಗಳಲ್ಲಿ, ಮಕ್ಕಳ ಗ್ರಾಮ ಸಭೆಗಳಲ್ಲಿ, ತೆರೆದಮನೆಯಲ್ಲಿ, ಗ್ರಾಮ, ಚಾವಡಿಯಲ್ಲಿ ಮತ್ತು ಇತರ ಸಾರ್ವಜನಿಕ ಸ್ಥಳಗಳಲ್ಲಿ ಅಧಿನಿಯಮದ ಉಪಬಂಧಗಳ ಹಾಗೂ ಎಲ್ಲಾ ಕಾನೂನುಗಳ ಮತ್ತು ಯೋಜನೆಗಳ ಬಗ್ಗೆ ಮಾಹಿತಿಯು ಸ್ಥಳೀಯ ಭಾಷೆಯಲ್ಲಿ ಲಭ್ಯವಾಗುವಂತೆ ಮಾಡಲು ರಾಜ್ಯ, ಜಿಲ್ಲೆ ಮತ್ತು ತಾಲ್ಲೂಕು ಕಾನೂನು ಸೇವಾ ಪ್ರಾಧಿಕಾರಗಳ ಸಹಯೋಗದೊಂದಿಗೆ ಕಾರ್ಯನಿರ್ವಹಿಸತಕ್ಕದ್ದು.

3 ಬಾಲ್ಯವಿವಾಹ ನಿಷೇಧ ಅಧಿಕಾರಿಯು, ಬಾಲ್ಯವಿವಾಹದ ಹೆಣ್ಣಿನ ವಾಸಸ್ಥಳಕ್ಕೆ ಸಂಬಂಧಿಸಿದಂತೆ ಮಧ್ಯಂತರ ಆದೇಶಗಳನ್ನು ಪಡೆಯುವುದಕ್ಕಾಗಿ ತಾನಾಗಿಯೇ ಜಿಲ್ಲಾ ನ್ಯಾಯಾಲಯಕ್ಕೆ ಹೋಗಬಹುದು.

4 ಬಾಲ್ಯವಿವಾಹ ನಿಷೇಧ ಅಧಿಕಾರಿಯು, ಯಾವುದೇ ಮಗುವಿಗೆ ಪಾಲನೆ ಮತ್ತು ಸಂರಕ್ಷಣೆ ಅಗತ್ಯವಿದ್ದರೆ ಅಧಿಕಾರ ವ್ಯಾಪ್ತಿಯುಳ್ಳ ಮಕ್ಕಳ ಕಲ್ಯಾಣ ಸಮಿತಿಗೆ ವರದಿ ಮಾಡತಕ್ಕದ್ದು. ಮಕ್ಕಳ ಕಲ್ಯಾಣ ಸಮಿತಿಯು, ವಿಚಾರಣೆಯನ್ನು ಪೂರ್ಣಗೊಳಿಸುವುದಕ್ಕಾಗಿ ಹಾಗೂ ಪುನರ್ವಸತಿ ಕಲ್ಪಿಸುವುದಕ್ಕಾಗಿ ಕಾಲಮಿತಿಯನ್ನು ನಿಗಧಿಪಡಿಸುವುದಕ್ಕೆ ಸಂಬಂಧಿಸಿದಂತೆ ಮಧ್ಯಂತರ ಆದೇಶಗಳನ್ನು ಹೊರಡಿಸತಕ್ಕದ್ದು.

5 ಬಾಲ್ಯವಿವಾಹ ನಿಷೇಧ ಅಧಿಕಾರಿಯು, ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960 (1960ರ ಕರ್ನಾಟಕ ಅಧಿನಿಯಮ 19)ರ, ಮತ್ತು ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ಸಂರಕ್ಷಣೆ) ಅಧಿನಿಯಮ, 2000 (2000ರ ಕೇಂದ್ರ ಅಧಿನಿಯಮ 56)ರ ಅಡಿಯಲ್ಲಿ ನೋಂದಾಯಿತವಾದ ಸರ್ಕಾರೇತರ ಸಂಸ್ಥೆಗಳ, ಕಂಪನಿಗಳ ಅಧಿನಿಯಮ, 1956 (1956ರ ಕೇಂದ್ರ ಅಧಿನಿಯಮ 1) ರ ಅಡಿಯಲ್ಲಿ ನೋಂದಾಯಿತವಾದ ಕಂಪನಿಗಳ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆಗಳನ್ನುಳ್ಳ ಪಟ್ಟಿಯನ್ನು (ಡೈರಕ್ಟರಿಯನ್ನು) ಸದರಿ ಅಧಿನಿಯಮಗಳಲ್ಲಿ ಹೇಳಿರುವ ಸಕ್ಷಮ ಪ್ರಾಧಿಕಾರದಿಂದ ಸಂಗ್ರಹಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

6 ಬಾಲ್ಯವಿವಾಹ ನಿಷೇಧ ಅಧಿಕಾರಿಯು, ಬಾಲ್ಯವಿವಾಹ ನಡೆಯುವ ಸಂದರ್ಭದಲ್ಲಿ ಬಾಲ್ಯವಿವಾಹವನ್ನು ನಿಲ್ಲಿಸುವುದಕ್ಕೆ ಸಾಧ್ಯವಾದ ಎಲ್ಲಾ ನೆರವನ್ನು ನೀಡತಕ್ಕದ್ದು ಮತ್ತು ವ್ಯಕ್ತಿಗೆ ಅಥವಾ ಅರ್ಜಿದಾರನಿಗೆ ಪೊಲೀಸರ ಸಹಾಯವೇನಾದರೂ ಬೇಕಿದ್ದರೆ ಅದು ದೊರಕುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

7 ಅದರಲ್ಲೂ ಮುಖ್ಯವಾಗಿ ಬಾಲ್ಯವಿವಾಹ ನಿಷೇಧ ಅಧಿಕಾರಿಯು ಮತ್ತು ಯಾರಾದರೂ ಸಂಬಂಧಪಟ್ಟ ಪೊಲೀಸ್ ಅಧಿಕಾರಿಯು ಬಾಲ್ಯ ವಿವಾಹ ನಡೆದಿದೆಯೆಂಬ ಸಂಶಯವಿರುವ ಮಗುವಿನ ಬಗ್ಗೆ ಅಥವಾ ಸಧ್ಯದಲ್ಲೇ ಬಾಲ್ಯ ವಿವಾಹ ನಡೆಯುತ್ತದೆ ಎಂಬ ಬಗ್ಗೆ ತನಗೆ ಮಾಹಿತಿ ನೀಡಿದ ಯಾವುದೇ ಮಗು/ವ್ಯಕ್ತಿ/ಸಂಘಟನೆಗಳ ಬಗ್ಗೆ ಅಥವಾ ಬಾಲ್ಯವಿವಾಹವಾದ ಅಪ್ರಾಪ್ತ ಮಗುವಿನ ಬಗ್ಗೆ ಮತ್ತು ಆ ಮಗು ಪ್ರಾಪ್ತ ವಯಸ್ಸನ್ನು ತಲುಪಿದ ತರುವಾಯ ಎರಡು ವರ್ಷಗಳನ್ನು ಪೂರ್ಣಗೊಳಿಸುವವರೆಗೆ ಗೌಪ್ಯತೆಯನ್ನು ಕಾಯ್ದುಕೊಳ್ಳತಕ್ಕದ್ದು.

8 ಬಾಲ್ಯವಿವಾಹ ನಿಷೇಧ ಅಧಿಕಾರಿಯ ನಿಲುವು ಮುಖ್ಯವಾಗಿ ಬಾಲ್ಯವಿವಾಹವನ್ನು ತಡೆಯುವುದೇ ಆಗಿರತಕ್ಕದ್ದು ಮತ್ತು ಅದು ಪರಿಹಾರಾತ್ಮಕವಾಗಿರತಕ್ಕದ್ದು, ಇತರೆ ಎಲ್ಲಾ ಕ್ರಮಗಳು ಮತ್ತು ನಿರ್ದೇಶನಗಳು ಪರಿಣಾಮಕಾರಿಯಲ್ಲವೆಂದು ಕಂಡುಬಂದರೆ ಅಥವಾ ನಿಗಧಿಪಡಿಸಿದ ಸಮಯದೊಳಗೆ ಆದೇಶಗಳನ್ನು ಅಥವಾ ನಿರ್ದೇಶನಗಳನ್ನು ಪಾಲಿಸುವುದಕ್ಕೆ ಪಕ್ಷಕಾರರು ವಿಫಲರಾದರೆ ಮಾತ್ರ ಕಾನೂನು ಕ್ರಮಕ್ಕೆ ಶಿಫಾರಸ್ಸು ಮಾಡತಕ್ಕದ್ದು ಅಥವಾ ಅದರ ಮೊರೆಹೋಗತಕ್ಕದ್ದು.

9 ಬಾಲ್ಯವಿವಾಹ ಆಗದಂತೆ ತಪ್ಪಿಸಿ ಸಂರಕ್ಷಿಸಿದ ಮತ್ತು ಪಾಲನೆ ಮತ್ತು ಸಂರಕ್ಷಣೆಗಾಗಿ ಮಕ್ಕಳ ಕಲ್ಯಾಣ ಸಮಿತಿಗೆ ವಹಿಸಿದ ಮಗುವಿನ ಪುನರ್ವಸತಿಗಾಗಿ ಕ್ರಮಕೈಗೊಳ್ಳುವುದು ಬಾಲ್ಯವಿವಾಹ ನಿಷೇಧ ಅಧಿಕಾರಿಯ ಕರ್ತವ್ಯವಾಗಿರುತ್ತದೆ.

10 ಬಾಲ್ಯವಿವಾಹಕ್ಕೊಳಗಾದ ಅಥವಾ ಬಾಲ್ಯ ವಿವಾಹ ಆಗದಂತೆ ತಪ್ಪಿಸಿ ಸಂರಕ್ಷಿಸಿದ ಮಕ್ಕಳಿಗೆ ಪುನರ್ವಸತಿ ಕಲ್ಪಿಸತಕ್ಕದ್ದು, ಬಾಲ್ಯವಿವಾಹ ನಿಷೇಧ ಅಧಿಕಾರಿಯು ಬಾಲ್ಯವಿವಾಹಕ್ಕೊಳಗಾದ ಮಗುವಿಗೆ ಲಭ್ಯವಿರುವ ಶಿಕ್ಷಣ, ಆಶ್ರಯ, ಕಾನೂನು ಸಮಾಲೋಚನೆ, ಮನರಂಜನೆ, ವೃತ್ತಿ ತರಬೇತಿ ಸೇವೆಗಳು ಹಾಗೂ ಬೆಂಬಲ, ಇತ್ಯಾದಿ ಬಗ್ಗೆ ಮಾಹಿತಿ ನೀಡತಕ್ಕದ್ದು ಹಾಗೂ ಕರ್ನಾಟಕ ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ಸಂರಕ್ಷಣೆ) ನಿಯಮಗಳು, 2010ರ ಅಡಿಯಲ್ಲಿ ಆಜ್ಞಾಪಿಸಿರುವಂತೆ ಮಗುವನ್ನು ಅದರ ಕುಟುಂಬಕ್ಕೆ ವಾಪಸ್ಸು ಕಳುಹಿಸತಕ್ಕದ್ದು ಮತ್ತು ಅಂಥ ಮಗು ಈ ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗುವಂತೆ ನೋಡಿಕೊಳ್ಳತಕ್ಕದ್ದು ಮತ್ತು ಮೊದಲಿದ್ದ ಸ್ಥಿತಿಯನ್ನು ಒದಗಿಸಿಕೊಡತಕ್ಕದ್ದು.

11 ಈ ನಿಯಮಗಳ ಮೇರೆಗೆ ಬಾಲ್ಯವಿವಾಹಗಳನ್ನು ತಡೆಯುವುದಕ್ಕೆ ಸಂಬಂಧಿಸಿದಂತೆ ವಿವಿಧ ಇಲಾಖೆಗಳು ಮತ್ತು ಅವು ನಿರ್ವಹಿಸಬೇಕಾದ ಪಾತ್ರಗಳು ಅನುಸೂಚಿ-1 ರಲ್ಲಿ ನಿರ್ದಿಷ್ಟ ಪಡಿಸಿದಂತೆ ಇರತಕ್ಕದ್ದು.

**<u>ಕರ್ನಾಟಕ ಸರ್ಕಾರ</u>**

ಕಡತ ಸಂಖ್ಯೆ: ಮಮಇ 201 ಮಮಅ 2024

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 04.02.2025.

**<u>ಸೇರ್ಪಡೆ ಆದೇಶ</u>**

ಸರ್ಕಾರದ ಅಧಿಸೂಚನೆ ಸಂಖ್ಯೆ: ಮಮಇ 205 ಮಮಅ 2011(ಭಾ-1), ದಿನಾಂಕ 28.05.2018ರಲ್ಲಿ ಬಾಲ್ಯ ವಿವಾಹ ನಿಷೇಧಾಧಿಕಾರಿಗಳನ್ನಾಗಿ ನೇಮಿಸಿ ಆದೇಶಿಸಲಾಗಿರುತ್ತದೆ. ಮುಂದುವರೆದು, ಈ ಕೆಳಗಿನ ಅಧಿಕಾರಿ/ ಸಿಬ್ಬಂದಿಗಳನ್ನು ಅವರ ಹೆಸರಿನ ಮುಂದೆ ತೋರಿಸಿರುವ ಕ್ರಮ ಸಂಖ್ಯೆಯಂತೆ ಹೆಚ್ಚುವರಿಯಾಗಿ ಸೇರ್ಪಡೆಗೊಳಿಸಿ ಆದೇಶಿಸಿದೆ.

| ಕ್ರ. ಸಂ. | ಬಾಲ್ಯ ವಿವಾಹ ನಿಷೇಧಾಧಿಕಾರಿಗಳನ್ನಾಗಿ ಹೆಚ್ಚುವರಿಯಾಗಿ ಸೇರ್ಪಡೆ ಮಾಡಬಹುದಾದ ಅಧಿಕಾರಿ/ ಸಿಬ್ಬಂದಿಗಳು | ಅಧಿಸೂಚನೆಯಲ್ಲಿ ಸೇರ್ಪಡೆಗೊಳಿಸಬಹುದಾದ ಕ್ರ.ಸಂ. |
|---|---|---|
| 1 | ನಿರ್ದೇಶಕರು, ಮಕ್ಕಳರಕ್ಷಣಾ ನಿರ್ದೇಶನಾಲಯ | ಕ್ರಮ ಸಂಖ್ಯೆ (1) ರ ನಂತರ ಕ್ರಮ ಸಂಖ್ಯೆ 1 (ಎ)ರಲ್ಲಿ |
| 2 | ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರುಗಳು | 34ರ ನಂತರ ಕ್ರಮ ಸಂಖ್ಯೆ 34 (ಎ)ರಲ್ಲಿ |
| 3 | ಮಕ್ಕಳ ಸಹಾಯವಾಣಿಗಳನ್ನು ನಿರ್ವಹಿಸುವ ಜಿಲ್ಲಾ ಕೋ-ಆರ್ಡಿನೇಟರ್‌ಗಳು | ಕ್ರಮ ಸಂಖ್ಯೆ 26ರ ನಂತರ 26 (ಎ)ರಲ್ಲಿ |

CMP cele
447
6/2/2025

Directorate of Child Protection
Inward No. 1249
Date. 6/2/2025
Bengaluru-560001

6/2

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

R. Latha
**(ಆರ್. ಲತಾ)** 4/2/25
ಸರ್ಕಾರದ ಅಧೀನ ಕಾರ್ಯದರ್ಶಿ-3,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ.

**<u>ಇವರಿಗೆ:</u>**

6/2/25

6/2/25

1. ಪ್ರಧಾನ ಮಹಾಲೇಖಪಾಲರು, (ಎ & ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-560001.
2. ಅಪರ ಮುಖ್ಯ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು-560001.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು-560001.
4. ಸರ್ಕಾರದ ಪ್ರಧಾನ ಕಾರ್ಯದರ್ಶಿ , ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು-560001.
5. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು-560001.
6. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು-560001.
7. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು-01.
9. ಸರ್ಕಾರದ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು-01.
10. ಸರ್ಕಾರದ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ/ಹಜ್ ಮತ್ತು ವಕ್ಫ್ ಇಲಾಖೆ, ವಿಕಾಸ ಸೌಧ, ಬೆಂಗಳೂರು-560001.

11. ಜಂಟಿ ಕಾರ್ಯದರ್ಶಿ,(ಸಚಿವ ಸಂಪುಟ ಶಾಖೆ), ಮುಖ್ಯ ಕಾರ್ಯದರ್ಶಿಯವರ ಕಛೇರಿ (ಪ್ರಕರಣ ಸಂಖ್ಯೆ: ಸಿ. 419/2024), ವಿಧಾನ ಸೌಧ, ಬೆಂಗಳೂರು.
12. ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ, ವಿ.ವಿ. ಟವರ್, ಬೆಂಗಳೂರು-560001.
13. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಪಿಡಬ್ಲ್ಯೂಡಿ ಕಟ್ಟಡ ಆವರಣ, ಆನಂದ್‌ರಾವ್ ಸರ್ಕಲ್, ಬೆಂಗಳೂರು.

**ಪ್ರತಿ ಮಾಹಿತಿಗಾಗಿ:**

1. ಮಾನ್ಯ ಮುಖ್ಯ ಮಂತ್ರಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬೆಂಗಳೂರು.
5. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

*******

ಕರ್ನಾಟಕ ಸರ್ಕಾರ ಕಾರ್ಮಿಕ ಇಲಾಖೆ

ಸಂ. ಜಂಕಾಆ/ಬಾವಿನಿಕಾ/ಇತರೆ-01/2017-18

ಕಾರ್ಮಿಕ ಆಯುಕ್ತರ ಕಛೇರಿ
ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ,
ಬೆಂಗಳೂರು-29, ದಿ: 10-07-2017

# : ಸುತ್ತೋಲೆ :

ವಿಷಯ: **The Prohibition of Child Marriage (Karnataka Amendment) Act, 2016-reg.**

ಉಲ್ಲೇಖ: 1) ಸರ್ಕಾರದ ಪತ್ರ ಸಂಖ್ಯೆ: ಕಾಇ 247 ಸ್ಲೀಮರ 2016, ದಿನಾಂಕ: 04-07-2017.
2) ಸಂಸದೀಯ ವ್ಯವಹಾರಗಳ ಸಚಿವಾಲಯದಿಂದ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾಗಿರುವ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 44 ಶಾಸನ 2015, ದಿನಾಂಕ: 26-04-2017.
3) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಸೂಚನೆ ಸಂಖ್ಯೆ: ಡಬ್ಲ್ಯೂಸಿಡಿ 377 ಎಸ್‌ಡಬ್ಲ್ಯೂಡಬ್ಲ್ಯೂ 2004, ದಿನಾಂಕ: 02-05-2008.
4) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಟಿಪ್ಪಣಿ ಸಂಖ್ಯೆ: ಡಬ್ಲ್ಯೂಸಿಡಿ 171 ಎಸ್‌ಡಬ್ಲ್ಯೂಡಬ್ಲ್ಯೂ 2011, ದಿನಾಂಕ: 16-11-2011.

^^^

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1)ರ ಸರ್ಕಾರದ ಪತ್ರದಲ್ಲಿ ಉಲ್ಲೇಖ (2)ರ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿರುವ **The Prohibition of Child Marriage (Karnataka Amendment) Act, 2016**-ರ ಅಧಿಸೂಚನೆಯಂತೆ ಮುಂದಿನ ಅಗತ್ಯ ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಲಾಗಿರುತ್ತದೆ.

ಉಲ್ಲೇಖ (2)ರ **The Prohibition of Child Marriage (Karnataka Amendment) Act, 2016** ರ ಅಧಿಸೂಚನೆಯು ಅವಶ್ಯ ತಿದ್ದುಪಡಿಗಳನ್ನು ಒಳಗೊಂಡಿದ್ದು, ಸ್ವಯಂವೇದ್ಯವಾಗಿರುವ ಈ ಅಧಿಸೂಚನೆ ಪ್ರತಿಯನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿ ಎಲ್ಲಾ ಅಧಿಕಾರಿಗಳ ಗಮನಕ್ಕೆ ಹಾಗೂ ನಿಯಮಾನುಸಾರ ಕ್ರಮ ಕೈಗೊಳ್ಳುವುದಕ್ಕಾಗಿ ಈ ಮೂಲಕ ಕಳುಹಿಸಲಾಗಿದೆ.

ಉಲ್ಲೇಖ (3)ರ ಅಧಿಸೂಚನೆಯಲ್ಲಿ ಬಾಲ್ಯ ವಿವಾಹ ನಿಷೇಧ ಕಾಯ್ದೆ, 2007ರ ಕಲಂ 16.ರನ್ವಯ ರಾಜ್ಯ, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಕಾರ್ಯವ್ಯಾಪ್ತಿಗಳನ್ನು ನಿಗಧಿಪಡಿಸಿ, ಬಾಲ್ಯ ವಿವಾಹ ನಿಷೇಧಾಧಿಕಾರಿಗಳಾಗಿ

(ಪು.ತ.ನೋ..2)

ಕಾರ್ಯಾಚರಿಸಬೇಕಾದ ಅಧಿಕಾರಿಗಳನ್ನು ಅಧಿಸೂಚಿಸಲಾಗಿದ್ದು, ತಾಲ್ಲೂಕು ಮಟ್ಟದಲ್ಲಿ ಕಾರ್ಮಿಕ ಅಧಿಕಾರಿಗಳನ್ನು ನೇಮಕ ಮಾಡಲಾಗಿರುತ್ತದೆ. (ಪ್ರತಿ ಲಗತ್ತಿಸಿದೆ). ನಂತರ, ಉಲ್ಲೇಖ (4)ರ ಟಿಪ್ಪಣಿಯಲ್ಲಿ ಉಲ್ಲೇಖ (3)ರ ಅಧಿಸೂಚನೆಗೆ ಹೆಚ್ಚುವರಿಯಾಗಿ ಇಲಾಖೆಯ ಉಪ ಕಾರ್ಮಿಕ ಆಯುಕ್ತರು ಹಾಗೂ ಸಹಾಯಕ ಕಾರ್ಮಿಕ ಆಯುಕ್ತರನ್ನು ಜಿಲ್ಲಾ ಮಟ್ಟದಲ್ಲಿ ಬಾಲ್ಯ ವಿವಾಹ ನಿಷೇಧಾಧಿಕಾರಿಗಳಾಗಿ ನೇಮಿಸಲಾಗಿರುತ್ತದೆ. (ಪ್ರತಿ ಲಗತ್ತಿಸಿದೆ).

ಆದಕಾರಣ, ಕಾರ್ಮಿಕ ಇಲಾಖೆಯ ವತಿಯಿಂದ ಬಾಲ್ಯ ವಿವಾಹ ನಿಷೇಧಾಧಿಕಾರಿಗಳಾಗಿ ಮೇಲ್ಕಂಡ ಅಧಿಸೂಚನೆಗಳನ್ವಯ ನೇಮಕಗೊಂಡಿರುವ ಎಲ್ಲಾ ಸಂಬಂಧಿತ ಅಧಿಕಾರಿಗಳು, ಉಲ್ಲೇಖ (2)ರ **The Prohibition of Child Marriage (Karnataka Amendment) Act, 2016** ರ ಅಧಿಸೂಚನೆಯಲ್ಲಿ ತಿದ್ದುಪಡಿಯಾಗಿರುವ ಪ್ರಾವಧನಗಳ ಬಗ್ಗೆ ಕೂಲಂಕುಶವಾಗಿ ಪರಿಶೀಲಿಸಿ ಮನವರಿಕೆ ಮಾಡಿಕೊಂಡು ನಿಯಮಾನುಸಾರ ತಮ್ಮ ಕಾರ್ಯವ್ಯಾಪ್ತಿಗಳಲ್ಲಿ ಬಾಲ್ಯ ವಿವಾಹ ನಿಷೇಧಾಧಿಕಾರಿಗಳಾಗಿ ಕಾರ್ಯಾಚರಣೆ ಮಾಡಬೇಕೆಂದು ಎಲ್ಲಾ ಸಂಬಂಧಿತ ಅಧಿಕಾರಿಗಳಿಗೆ ಈ ಮೂಲಕ ಆದೇಶಿಸಲಾಗಿದೆ.

(ಆರ್.ಆರ್.ಜನ್ನು)
ಕಾರ್ಮಿಕ ಆಯುಕ್ತರು.

ಇವರಿಗೆ:

1) ಎಲ್ಲಾ ಉಪ ಕಾರ್ಮಿಕ ಆಯುಕ್ತರು.
2) ಎಲ್ಲಾ ಸಹಾಯಕ ಕಾರ್ಮಿಕ ಆಯುಕ್ತರು.
3) ಎಲ್ಲಾ ಕಾರ್ಮಿಕ ಅಧಿಕಾರಿಗಳು,

ಪ್ರತಿಯನ್ನು ಮಾಹಿತಿಗಾಗಿ:

1) ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, ವಿಕಾಸ ಸೌಧ, ಬೆಂಗಳೂರು.
2) ಅಪರ ಕಾರ್ಮಿಕ ಆಯುಕ್ತರು, ಆಡಳಿತ ಶಾಖೆ, ಬೆಂಗಳೂರು
3) ಅಪರ ಕಾರ್ಮಿಕ ಆಯುಕ್ತರು, ಕೈಗಾರಿಕಾ ಬಾಂಧವ್ಯ ಶಾಖೆ, ಬೆಂಗಳೂರು.
4) ಉಪ ಕಾರ್ಮಿಕ ಆಯುಕ್ತರು, ಪ್ರಚಾರ ಮತ್ತು ಅಂಕಿ ಅಂಶ ಶಾಖೆ, ಬೆಂಗಳೂರು.
5) ಕಾರ್ಮಿಕ ಆಯುಕ್ತರ ಆಪ್ತ ಸಹಾಯಕರು, ಆಪ್ತ ಶಾಖೆ, ಬೆಂಗಳೂರು.

ಬಿ.ಎಂ. ವಿಜಯಶಂಕರ್ ಭಾ.ಆ.ಸೇ.
ನಿರ್ದೇಶಕರು
ಮಹಿಳೆಯರ ಮತ್ತು ಮಕ್ಕಳ
ಅಭಿವೃದ್ಧಿ ಇಲಾಖೆ

ಕರ್ನಾಟಕ ಸರ್ಕಾರ

ಒಂದನೇ ಮಹಡಿ
ಬಹುಮಹಡಿಗಳ ಕಟ್ಟಡ
ಡಾ॥ ಅಂಬೇಡ್ಕರ್ ರಸ್ತೆ
ಬೆಂಗಳೂರು-560 001

ಅ.ಸ ಪತ್ರ ಸಂಖ್ಯೆ:ಮಮಅಇ/ಬಾವಿನಿಕೋ/9/2014-15

ದಿನಾಂಕ:18-06-2015.

ಸನ್ಮಾನ್ಯರೆ,

ವಿಷಯ:- ಬಾಲ್ಯ ವಿವಾಹ ನಿಷೇಧ ಕುರಿತಂತೆ ಜಿಲ್ಲಾ ಮಟ್ಟದಲ್ಲಿ/ತಾಲ್ಲೂಕು ಮಟ್ಟದಲ್ಲಿ/ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಬಾಲ್ಯ ವಿವಾಹ ನಿಷೇಧಾಧಿಕಾರಿಗಳು ನಿರ್ವಹಿಸಬೇಕಾದ ಕರ್ತವ್ಯಗಳ ವಿವರ ಹಾಗೂ ಅಗತ್ಯ ನಮೂನೆಗಳನ್ನು ಸಿದ್ದಪಡಿಸಿ ಕಳುಹಿಸುತ್ತಿರುವುರಿಂದ ವಿಶೇಷ ಸೂಚನಾ ಪತ್ರವನ್ನು ಹೊರಡಿಸುವಂತೆ ಕೋರಿ.

ಉಲ್ಲೇಖ:- 1. ಭಾರತ ಸರ್ಕಾರದ ಬಾಲ್ಯ ವಿವಾಹ ನಿಷೇಧ ಕಾಯ್ದೆ-2006

2. ಭಾರತ ಸರ್ವೋಚ್ಛ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾದ ಡಾ॥ ಶಿವರಾಜ್ ಪಾಟೀಲ್ ರವರು ದಿನಾಂಕ:30-06-2014 ರಂದು ಕರ್ನಾಟಕ ಸರ್ಕಾರ ಹಾಗೂ ಕರ್ನಾಟಕ ಹೈಕೋರ್ಟ್‌ಗೆ ಸಲ್ಲಿಸಿದ ಕೋರ್ ಕಮಿಟಿಯ ವರದಿ.

ಬಾಲ್ಯ ವಿವಾಹವು ಸಮಾಜದ ಅಭಿವೃದ್ದಿಗೆ ಮಾರಕವಾಗಿರುವ ಸಮಸ್ಯೆಯಾಗಿದ್ದು, ಇದರಿಂದ ಮಕ್ಕಳ ಭವಿಷ್ಯ ಹಾಗೂ ಹಕ್ಕುಗಳಿಗೆ ಧಕ್ಕೆಯುಂಟಾಗಿ ಮಕ್ಕಳು ಸಂಕಷ್ಟದಲ್ಲಿ ಬದುಕುವ ಸ್ಥಿತಿ ನಿರ್ಮಾಣವಾಗಿರುತ್ತದೆ. ಈಗಾಗಲೇ ಈ ಪದ್ಧತಿಯನ್ನು ಸಂಪೂರ್ಣವಾಗಿ ಹೋಗಲಾಡಿಸಲು ಮತ್ತು ಜನಸಾಮಾನ್ಯರಲ್ಲಿ ಬಾಲ್ಯವಿವಾಹದ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಲು ಇಲಾಖೆಯು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತದೆ.

ಸರ್ಕಾರದಿಂದ ನೇಮಿಸಲ್ಪಟ್ಟ ಬಾಲ್ಯ ವಿವಾಹ ನಿಷೇಧಾಧಿಕಾರಿಗಳು ಬಾಲ್ಯ ವಿವಾಹ ತಡೆಗಟ್ಟುವ ಸಂದರ್ಭದಲ್ಲಿ ಕೈಗೊಳ್ಳಬಹುದಾದ ಅಗತ್ಯ ಕ್ರಮಗಳು ಮತ್ತು ಬಾಲ್ಯ ವಿವಾಹ ಪ್ರಕರಣಗಳಲ್ಲಿ ಮಕ್ಕಳನ್ನು ರಕ್ಷಣೆ ಮಾಡಿದ ನಂತರ ಕೈಗೊಳ್ಳಬೇಕಾಗಿರುವ ಕ್ರಮಗಳ (Rescue and post rescue Oparetion) ಬಗ್ಗೆ ಇಲಾಖೆಯಲ್ಲಿ ಕಾರ್ಯಾಗಾರ ನಡೆಸಿ **ತಾಲ್ಲೂಕು ಮಟ್ಟದಲ್ಲಿ ಬಾಲ್ಯ ವಿವಾಹ ನಿಷೇಧಾಧಿಕಾರಿಗಳೂ ಆಗಿರುವ ತಹಶೀಲ್ದಾರರು ಹಾಗೂ ಅಧ್ಯಕ್ಷರು, ಬಾಲ್ಯ ವಿವಾಹ ನಿಷೇಧಾಧಿಕಾರಿಗಳ ಸಮನ್ವಯ ಮತ್ತು ಪರಿಶೀಲನಾ ಸಮಿತಿ ಇವರಿಂದ ಬಾಲ್ಯ ವಿವಾಹ ನಿಷೇದಾಧಿಕಾರಿಗಳು ನೀಡಬೇಕಾದ ನೋಟೀಸ್ ಹಾಗೂ ಶಾಲಾ ಮುಖ್ಯೋಪಾಧ್ಯಾಯರಿಂದ ಜನ್ಮ ದಿನಾಂಕ ದೃಢೀಕರಣ ಪಡೆಯಲು ಪತ್ರ ಮತ್ತು ಬಾಲ್ಯ ವಿವಾಹಕ್ಕೆ ಒಳಗಾಗುತ್ತಿದ್ದ ಬಾಲಕ/ಬಾಲಕಿಯ ಪೋಷಕರು ನೀಡಬೇಕಾದ ಅಫಿಡವಿಟ್ ಇತ್ಯಾದಿ ನಮೂನೆಗಳನ್ನು ತಯಾರಿಸಲಾಗಿದೆ. ಸದರಿ ನಮೂನೆಗಳನ್ನು ಈ ಪತ್ರದೊಂದಿಗೆ ತಮಗೆ ಕಳುಹಿಸಿಕೊಡಲಾಗುತ್ತಿದ್ದು, ದಯವಿಟ್ಟು** ಈ ಬಗ್ಗೆ ವಿಶೇಷ ಸೂಚನಾ ಪತ್ರಗಳನ್ನು ಜಿಲ್ಲಾ/ತಾಲ್ಲೂಕು/ಹೋಬಳಿ/ಗ್ರಾಮ ಪಂಚಾಯತ್/ಗ್ರಾಮ ಮಟ್ಟದ ಬಾಲ್ಯವಿವಾಹ ನಿಷೇದಾಧಿಕಾರಿಗಳಿಗೆ ತಮ್ಮ ಕಛೇರಿಯಿಂದ ಹೊರಡಿಸಿ ಬಾಲ್ಯ ವಿವಾಹ ನಿಷೇಧಾಧಿಕಾರಿಗಳು ಚಾಚು ತಪ್ಪದೇ ತಮ್ಮ ಕರ್ತವ್ಯ ಪಾಲಿಸುವಂತೆ ತಾವು ಸೂಕ್ತ ನಿರ್ದೇಶನ ನೀಡಬೇಕೆಂದು ಕೋರುತ್ತೇನೆ. ಮೂರು ತಿಂಗಳಿಗೊಮ್ಮೆ ಬಾಲ್ಯ ವಿವಾಹ ನಿಷೇಧ ಸಮನ್ವಯ ಮತ್ತು ಪರಿಶೀಲನಾ ಸಮಿತಿಯ ಸಭೆ ಕರೆದು ಪರಿಶೀಲನೆ ಮಾಡಿ ವರದಿಯನ್ನು ಕಳುಹಿಸಿಕೊಡಬೇಕೆಂದು ಕೋರುತ್ತೇನ.

ತಮ್ಮ ವಿಶ್ವಾಸಿ,

ಶ್ರೀ/ಶ್ರೀಮತಿ.________________
ಜಿಲ್ಲಾಧಿಕಾರಿಗಳು/ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
30 ಜಿಲ್ಲೆಗಳು.

p/os(c)/Child marriage/Other letters

## ಬಾಲ್ಯ ವಿವಾಹ ತಡೆಗಟ್ಟುವ ಸಂದರ್ಭದಲ್ಲಿ ಕೈಗೊಳ್ಳಬಹುದಾದ ಕ್ರಮಗಳು:

**1. ವಿವಾಹ ನಡೆಯುವ ಬಗ್ಗೆ ಮಾಹಿತಿಯು ಮುಂಚಿತವಾಗಿ ತಿಳಿದು ಬಂದಲ್ಲಿ ವಹಿಸಬೇಕಾದ ಕ್ರಮಗಳು:**

- ಸಂಬಂಧಿಸಿದ ಗ್ರಾಮ ಪಂಚಾಯತಿ ಮಟ್ಟದ ಬಾಲ್ಯ ವಿವಾಹ ನಿಷೇಧಾಧಿಕಾರಿಗಳಾದ ಪಿಡಿಓ, ಗ್ರಾಮ ಲೆಕ್ಕಿಗರು, ಕಂದಾಯ ನಿರೀಕ್ಷಕರು, ಮುಖ್ಯ ಶಿಕ್ಷಕರು, ಪೊಲೀಸ್ ಸಿಬ್ಬಂದಿ ಇವರಿಗೆ ಮಾಹಿತಿ ನೀಡುವುದು. ಹಾಗೂ ಹುಡುಗ/ಹುಡುಗಿ ಇಬ್ಬರ ಮನೆಗೂ ಭೇಟಿ ನೀಡಿ, ವಿವಾಹ ಮಾಡದೇ ಇರುವ ಬಗ್ಗೆ ಇಬ್ಬರಿಂದಲೂ ಅಫಿಡವಿಟ್ ಪಡೆಯುವುದು.
- ಮಾಹಿತಿ ದೊರಕಿದ ಕೂಡಲೇ ವಯಸ್ಸಿನ ದೃಢೀಕರಣವನ್ನು ಶಾಲೆಯಿಂದ ಪಡೆದು ನಂತರ ವಿವಾಹ ನೆರವೇರಲಿರುವ ಸಂಬಂಧಿಸಿದ ಛತ್ರದ ಮಾಲೀಕರಿಗೆ/ಧಾರ್ಮಿಕ ಸಂಸ್ಥೆಯ ಮುಖ್ಯಸ್ಥರಿಗೆ ತಿಳುವಳಿಕೆ ಪತ್ರ ನೀಡುವುದು.

**2. ವಿವಾಹ ನಡೆಯುವ ಹಿಂದಿನ ದಿನ ಮಾಹಿತಿ ತಿಳಿದುಬಂದಲ್ಲಿ ವಹಿಸಬೇಕಾದ ಕ್ರಮಗಳು:**

- ವಿವಾಹ ನಡೆಯುವ ಸ್ಥಳಕ್ಕೆ ಸಂಬಂಧಪಟ್ಟ ನಿಷೇದಾಧಿಕಾರಿಗಳು ತೆರಳಿ ಪೋಷಕರಿಗೆ, ವಧು-ವರನ ವಯಸ್ಸಿನ ದೃಢೀಕರಣ ನೀಡಿ, ನಂತರವೇ ವಿವಾಹ ಮಾಡುವಂತೆ ತಿಳಿಸುವುದು.
- ನಿಷೇಧಾಧಿಕಾರಿಗಳು/ಸಿಬ್ಬಂದಿ ಸ್ಥಳಕ್ಕೆ ತಂಡದಲ್ಲಿ ಭೇಟಿ ನೀಡುವುದು. ಪೊಲೀಸ್, ಮಕ್ಕಳ ಸಹಾಯವಾಣಿ, ಸಾಂತ್ವನ, ಶಾಲಾ ಶಿಕ್ಷಕರು ದೂರವಾಣಿ ಮೂಲಕ ಒಬ್ಬರನ್ನೊಬ್ಬರು ಸಂಪರ್ಕಿಸಿ ಸ್ಥಳಕ್ಕೆ ಧಾವಿಸಿ, ವಿವಾಹವನ್ನು ತಡೆದು, ಅಫಿಡೆವಿಟ್ ಬರೆಸಿಕೊಳ್ಳುವುದು.
- ಪೋಷಕರು ವಯಸ್ಸಿನ ದೃಢೀಕರಣ ನೀಡದಿದ್ದಲ್ಲಿ ವಿವಾಹ ನಡೆಯಲು ಅವಕಾಶ ನೀಡಬಾರದು.
- ಸೂಚನೆ ಮೀರಿ ವಿವಾಹ ನೆರವೇರಿಸಿದಲ್ಲಿ ಕೂಡಲೇ ಫೋಟೋ ತೆಗೆದುಕೊಂಡು ಪ್ರಕರಣ ದಾಖಲಿಸುವುದು.
- ವಧು-ವರರ ವಾಸಸ್ಥಳ ವಿಳಾಸ ಪಡೆದ ನಂತರ ವಧೂ/ವರರು ಇತರೆ ಜಿಲ್ಲೆಯವರಾಗಿದ್ದಲ್ಲಿ ಸಂಬಂಧಿಸಿದ ಜಿಲ್ಲೆಯ ಉಪ ನಿರ್ದೇಶಕರು/ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ಪತ್ರ ಬರೆದು ವಯಸ್ಕರಾಗುವವರೆಗೆ ಅನುಪಾಲನೆ ಮಾಡಲು ತಿಳಿಸಬೇಕು.
- ಬಾಲ್ಯ ವಿವಾಹದಿಂದ ಪಾರು ಮಾಡಿದ ನಂತರ ಬಾಲಕ/ಬಾಲಕಿ ಇಚ್ಛಿಸಿದಲ್ಲಿ ಸರ್ಕಾರಿ ಬಾಲಕಿಯರ/ಬಾಲಕರ ಬಾಲ ಮಂದಿರಕ್ಕೆ ದಾಖಲು ಮಾಡುವುದು/ಸೂಕ್ತ ಪುನರ್ವಸತಿ ಕಲ್ಪಿಸುವುದು.

3. ಅನುಸರಣಾ ಕ್ರಮ:

- ಛತ್ರದ ಮಾಲೀಕರಿಗೆ ಜಿಲ್ಲಾಧಿಕಾರಿಗಳಿಂದ ನೋಟೀಸ್ ನೀಡುವುದು.
- ಪುರೋಹಿತರಿಗೆ ನೋಟೀಸ್ ನೀಡುವುದು.

......................2

- ಮುಖ್ಯೋಪಾಧ್ಯಾಯರು/ಶಿಕ್ಷಕರು ಶಾಲೆಯಲ್ಲಿ 03 ದಿನಗಳಿಗಿಂತ ಹೆಚ್ಚಿಗೆ ಗೈರು ಹಾಜರಾದ ಮಕ್ಕಳ ಮನೆಗೆ ಭೇಟಿ ಮಾಡಿ ಮಾಹಿತಿ ನಿರ್ವಹಿಸುವುದು.
- ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಶಾಲಾ/ಕಾಲೇಜುಗಳಲ್ಲಿ ನಡೆಸುವುದು.
- ಸ್ಥಳೀಯ ಟಿ.ವಿ ಛಾನಲ್‌ಗಳಲ್ಲಿ ಸ್ಕ್ರಾಲ್ ನ್ಯೂಸ್ ನೀಡುವುದು.
- ಚಲನ ಚಿತ್ರ ಮಂದಿರಗಳಲ್ಲಿ ಸ್ಲೈಡ್ ಶೋ ಮೂಲಕ ಜಾಹೀರಾತು ನೀಡುವುದು.
- ಕಡ್ಡಾಯವಾಗಿ ವಿವಾಹಗಳನ್ನು ನೊಂದಣಿಗೆ ಮಾಡಿಸುವುದು.
- ಬಾಲ್ಯ ವಿವಾಹ ಮುಕ್ತ ಗ್ರಾಮ, ಗ್ರಾಮ ಪಂಚಾಯತಿ, ತಾಲ್ಲೂಕು ಎಂದು ಘೋಷಣೆ ಮಾಡಲು ಕ್ರಮ ವಹಿಸುವುದು.
- ಶಾಲೆ ಬಿಟ್ಟ ಕಿಶೋರ/ಕಿಶೋರಿಯರಿಗೆ ಸೂಕ್ತ ವೃತ್ತಿ ತರಬೇತಿ ಕೇಂದ್ರಗಳನ್ನು ಜಿಲ್ಲಾ/ತಾಲ್ಲೂಕು ಮಟ್ಟದಲ್ಲಿ ಪ್ರಾರಂಭಿಸಿದಾಗ ಟೇಲರಿಂಗ್, ಬ್ಯೂಟಿಷಿಯನ್, ಕಂಪ್ಯೂಟರ್, ಮೊಬೈಲ್ ರಿಪೇರಿ, ಇತ್ಯಾದಿ ತರಬೇತಿ ನೀಡಲು ಕ್ರಮ ವಹಿಸುವುದು.
- ಆಹ್ವಾನ ಪತ್ರಿಕೆ ಮುದ್ರಿಸುವ ಪ್ರಿಂಟಿಂಗ್ ಪ್ರೆಸ್‌ನವರೂ ಜನ್ಮ ದಿನಾಂಕದ ದೃಢೀಕರಣ ಪಡೆದ ನಂತರವೇ ಅಹ್ವಾನ ಪತ್ರಿಕೆ ಮುದ್ರಿಸಲು ತಿಳುವಳಿಕೆ ನೀಡುವುದು.
- ಕಿಶೋರಿ ಕ್ಲಬ್: ಪ್ರತಿ ಶಾಲೆಯಲ್ಲಿ ರಚಿಸಿ, ಮಕ್ಕಳಿಗೆ ಪ್ರತಿ ವಾರ ಅರಿವು ಮೂಡಿಸುವ ಕಾರ್ಯಕ್ರಮ ಏರ್ಪಡಿಸುವುದು.
- ಸಾಂತ್ವನ ಕೇಂದ್ರದ ಸಿಬ್ಬಂದಿಗಳು ಬಾಲ್ಯ ವಿವಾಹ ನಿಷೇಧ ಚಟುವಟಿಕೆಗಳಲ್ಲಿ ತೊಡಗಿದಲ್ಲಿ ಅಂತಹವರಿಗೆ ಕನಿಷ್ಠ ಪ್ರಯಾಣ ಭತ್ಯೆ/ದಿನಭತ್ಯೆಗಳನ್ನು ನೀಡಲು ಅನುದಾನ ಬಿಡುಗಡೆ ಮಾಡುವುದು.

## ಬಾಲ್ಯ ವಿವಾಹ ಪ್ರಕರಣಗಳಲ್ಲಿ ಮಕ್ಕಳನ್ನು ರಕ್ಷಣೆ ಮಾಡಿದ ನಂತರ ಕೈಗೊಳ್ಳಬೇಕಾಗಿರುವ ಕ್ರಮಗಳು (Post Rescue operation)

ಬಾಲ್ಯ ವಿವಾಹ ಪ್ರಕರಣಗಳಲ್ಲಿ ಈ ಕೆಳಕಂಡ 2 ಸಂದರ್ಭಗಳಲ್ಲಿ ಮಕ್ಕಳನ್ನು ರಕ್ಷಣೆ ಮಾಡಬೇಕಾಗಿರುತ್ತದೆ.

1) ಬಾಲ್ಯ ವಿವಾಹ ಜರುಗುವ ಮುನ್ನ.
2) ಬಾಲ್ಯ ವಿವಾಹ ಜರುಗಿದ ನಂತರ.

ಮೇಲ್ಕಂಡ ಪ್ರಕರಣಗಳಲ್ಲಿ ಮಕ್ಕಳ ಪುನರ್ವಸತಿಗಾಗಿ ಈ ಕೆಳಕಂಡ ಕ್ರಮಗಳನ್ನು ಅನುಸರಿಸಬೇಕಾಗಿರುತ್ತದೆ.

1) **ಬಾಲ್ಯ ವಿವಾಹ ಜರುಗುವ ಮುನ್ನ:** ಈ ಸಂದರ್ಭದಲ್ಲಿ ಪೋಷಕರಿಗೆ ತಿಳುವಳಿಕೆ ಹೇಳಿ ಬಾಲಕ/ಬಾಲಕಿಗೆ ಮದುವೆ ಮಾಡುವುದಿಲ್ಲವೆಂದು ಅವರಿಂದ ಪ್ರಮಾಣ ಪತ್ರ (Affidavit) ಪಡೆದು ಬಾಲಕ/ಬಾಲಕಿಯನ್ನು ಪೋಷಕರ ಬಳಿಯೇ ಇರಿಸುವುದು. ಕೆಲವೊಮ್ಮೆ ಪೋಷಕರು Affidavit ನೀಡಿದ ನಂತರವೂ ಮದುವೆ ಮಾಡುತ್ತಾರೆಂಬ ಅನುಮಾನಗಳಿದ್ದಲ್ಲಿ ಬಾಲಕ/ಬಾಲಕಿಯನ್ನು ಮಕ್ಕಳ ಕಲ್ಯಾಣ ಸಮಿತಿ ಗಮನಕ್ಕೆ ತಂದು ಮಕ್ಕಳ ಪಾಲನಾ ಸಂಸ್ಥೆಗೆ ದಾಖಲಿಸಬೇಕು.
2) **ಬಾಲ್ಯ ವಿವಾಹ ಜರುಗಿದ ನಂತರ:**
   a) ಬಾಲ್ಯ ವಿವಾಹಕ್ಕೊಳಗಾದ ಬಾಲಕ/ಬಾಲಕಿಯರೊಂದಿಗೆ ಸಮಾಲೋಚಿಸಿ ಅವರ ಹೇಳಿಕೆಯನ್ನು ಆಲಿಸಿ ಅವರನ್ನು ಪೋಷಕರ ವಶಕ್ಕೆ ಬಿಡುವುದು ಅಥವಾ ಸಂಸ್ಥೆಗೆ ದಾಖಲಿಸಿಕೊಳ್ಳುವುದು.
   b) ಮದುವೆಗೆ ಕಾರಣರಾದ ಎಲ್ಲರ ಮೇಲೆ ಬಾಲ್ಯವಿವಾಹ ನಿಷೇಧ ಅಧಿನಿಯಮದಡಿ ಪ್ರಕರಣ ದಾಖಲಿಸುವುದು.
   c) ಪ್ರಕರಣ ದಾಖಲಿಸುವಾಗ ಯಾವುದೇ ಸಾಕ್ಷ್ಯಾಧಾರಗಳು ಇಲ್ಲದೆ ಇದ್ದರೂ ಸಹ CMPO ರವರು ಮದುವೆ ನಡೆದ ಬಗ್ಗೆ ಖಚಿತ ಮಾಹಿತಿ ಇದ್ದಲ್ಲಿ ಅದೇ ಮಾಹಿತಿಯನ್ನು ನೀಡಿ ಪ್ರಕರಣ ದಾಖಲಿಸಬಹುದಾಗಿದೆ.ಪೊಲೀಸ್ ವಿಚಾರಣೆ ನಡೆಸಿ, ಮುಂದಿನ ಕ್ರಮವಹಿಸುವುದು.
   d) ಬಾಲ್ಯ ವಿವಾಹಕ್ಕೊಳಗಾದ ಬಾಲಕಿಯನ್ನು ಸಂಸ್ಥೆಗೆ ಸೇರಿಸಿದಾಗ ಮೊಟ್ಟ ಮೊದಲನೆಯದಾಗಿ ಆಕೆಯ ಆರೋಗ್ಯ ತಪಾಸಣೆ ಮಾಡಿಸಬೇಕು. ವಿವಾಹವಾಗಿ ಕೆಲವಾರು ತಿಂಗಳು ಕಳೆದಿದ್ದಲ್ಲಿ ಆಕೆ ಗರ್ಭಿಣಿಯಾಗಿರುವ ಸಾಧ್ಯತೆ ಇರುವುದರಿಂದ ಅಂತಹ ಸಂದರ್ಭದಲ್ಲಿ ತೆಗೆದುಕೊಳ್ಳಬಹುದಾದ ಮುಂದಿನ ಸೂಕ್ತ ಕ್ರಮಗಳ ಬಗ್ಗೆ ಬಾಲಕಿ ಹಾಗೂ ಆಕೆಯ ಪೋಷಕರಲ್ಲಿ ಚರ್ಚಿಸಿ ಕ್ರಮವಹಿಸಬೇಕಾಗಿರುತ್ತದೆ.
   e) ಬಾಲಕಿಯನ್ನು ಸಂಸ್ಥೆಗೆ ದಾಖಲಿಸಿದಾಗ ಅಥವಾ ಪೋಷಕರ ವಶಕ್ಕೆ ನೀಡಿದಾಗ ಆಕೆಯ ವಿದ್ಯಾಭ್ಯಾಸ ಮುಂದುವರೆಸಲು ಅಥವಾ ಯಾವುದಾದರೂ ವೃತ್ತಿ ತರಬೇತಿ ಪಡೆಯಲು ಸೂಕ್ತ ಮಾರ್ಗದರ್ಶನ ಹಾಗೂ ಅವಶ್ಯಕತೆ ಇದ್ದಲ್ಲಿ ಪ್ರಾಯೋಜಿತ ಕಾರ್ಯಕ್ರಮದಡಿಯಲ್ಲಿ ಆರ್ಥಿಕ ಸೌಲಭ್ಯ ನೀಡಲು ಕ್ರಮವಹಿಸಬೇಕಾಗಿರುತ್ತದೆ.

# ಕರ್ನಾಟಕ ಸರ್ಕಾರ

ತಹಶೀಲ್ದಾರವರ ಕಾರ್ಯಾಲಯ, ______________ತಾಲ್ಲೂಕು, ______________ಜಿಲ್ಲೆ ದಿನಾಂಕ:........................

**-:ನೋಟೀಸ್:-**

*-*-*-*-*

ತಮಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ತಮ್ಮ ಮಗ/ಮಗಳು/ಕುಮಾರ/ಕುಮಾರಿ____________ ಎಂಬ ಅಪ್ರಾಪ್ತ ಬಾಲಕ/ಬಾಲಕಿಗೆ ವಿವಾಹ ಏರ್ಪಡಿಸಿರುವುದು ತಿಳಿದು ಬಂದಿದೆ. ಬಾಲಕಿಗೆ 18 ವರ್ಷ ಹಾಗೂ ಬಾಲಕನಿಗೆ 21 ವರ್ಷ ಪೂರ್ಣಗೊಳ್ಳುವ ಮೊದಲು ವಿವಾಹ ಮಾಡುವುದು ಕಾನೂನು ಬಾಹಿರವಾಗಿರುತ್ತದೆ. ತಾವು ಒಂದು ವೇಳೆ ಕಾನೂನು ಉಲ್ಲಂಘಿಸಿ ತಮ್ಮ ಮಗ/ಮಗಳಿಗೆ ವಿವಾಹ ಏರ್ಪಡಿಸಿದಲ್ಲಿ ವಿವಾಹವಾಗುವ ಹುಡುಗ ಮತ್ತು ಹುಡುಗಿಯ ತಂದೆ, ತಾಯಿ ಮತ್ತು ಮದುವೆ ನೆರವೇರಿಸಿದವರು ಬಾಲ್ಯ ವಿವಾಹ ನಿಷೇಧ ಅಧಿನಿಯಮ-2006ರ ಅಡಿಯಲ್ಲಿ ಶಿಕ್ಷೆಗೆ ಗುರಿಯಾಗುತ್ತಾರೆ. ಈ ಅಪರಾಧಕ್ಕೆ 2 ವರ್ಷ ಜೈಲು ಶಿಕ್ಷೆ ಹಾಗೂ 1 ಲಕ್ಷ ದಂಡ ವಿಧಿಸಲಾಗುವುದು.

ತಾವು ತಮ್ಮ ಮಗಳಿಗೆ 18 ವರ್ಷ/ಮಗನಿಗೆ 21 ವರ್ಷದೊಳಗೆ ವಿವಾಹ ಮಾಡುವುದಿಲ್ಲ ಎಂಬ ಬಗ್ಗೆ ಅಫಿಡವಿಟ್(ಪ್ರಮಾಣ ಪತ್ರ) ಬರೆದುಕೊಟ್ಟು ಅದರಂತೆ ನಡೆದುಕೊಳ್ಳುವುದು. ಅದನ್ನು ಉಲ್ಲಂಘಿಸಿದ್ದಲ್ಲಿ ಕಾನೂನು ರೀತ್ಯಾ ತಮ್ಮ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂಬ ಅಂಶವನ್ನು ತಮ್ಮ ಗಮನಕ್ಕೆ ತರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಸಮಗ್ರ ಶಿಶು ಅಭಿವೃದ್ಧಿ ಯೋಜನೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ________________________ ಇವರ ಕಚೇರಿಯನ್ನು ಸಂಪರ್ಕಿಸುವುದು.

ತಹಶೀಲ್ದಾರ್ ಹಾಗೂ ಅಧ್ಯಕ್ಷರು,<br>ಬಾಲ್ಯ ವಿವಾಹ ನಿಷೇಧ ಸಮನ್ವಯ<br>ಮತ್ತು ಪರಿಶೀಲನಾ ಸಮಿತಿ,<br>______________ತಾಲ್ಲೂಕು,<br>______________ಜಿಲ್ಲೆ.

ಗೆ,

__________________

__________________

__________________

ಪ್ರತಿಯನ್ನು:-

1. ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು____________________ಗ್ರಾಮ ಪಂಚಾಯತಿ, ________________ತಾಲ್ಲೂಕು ಇವರಿಗೆ ನೀಡುತ್ತಾ, ಪ್ರತಿ 03 ತಿಂಗಳಿಗೊಮ್ಮೆ ಅನುಪಾಲನಾ ವರದಿಯನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿಯವರಿಗೆ ನೀಡತಕ್ಕದ್ದು.
2. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ________________ ಜಿಲ್ಲೆ ಇವರಿಗೆ ಕಳುಹಿಸುತ್ತಾ, ಬಾಲಕಿ/ಬಾಲಕಿಗೆ ಪುನರ್ವಸತಿ ಅವಶ್ಯಕತೆಯಿದ್ದಲ್ಲಿ ಕ್ರಮವಹಿಸಲು ಕೋರಿದೆ.

## ಕರ್ನಾಟಕ ಸರ್ಕಾರ

ಮುಖ್ಯೋಪಾಧ್ಯಾಯರು, ದಿನಾಂಕ:............................

__________________

__________________

__________________

ಮಾನ್ಯರೇ,

ವಿಷಯ: ಕುಮಾರಿ/ಕುಮಾರ............................ಇವರ ಜನ್ಮ ದಿನಾಂಕ ದೃಢೀಕರಣ ನೀಡುವ ಬಗ್ಗೆ.

*-*-*-*-*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕುಮಾರಿ/ಕುಮಾರ......................................................ಇವರ ವಿವಾಹವು ನೆರವೇರಲಿರುವುದಾಗಿ ಮಾಹಿತಿ ಬಂದಿದ್ದು, ಅವರು ಅಪ್ರಾಪ್ತ ವಯಸ್ಕರಾಗಿರುವುದರಿಂದ ಹಾಗೂ ವಿವಾಹವು ಕಾನೂನು ಬಾಹಿರವಾಗಿರುವುದರಿಂದ ಈ ವಿವಾಹವನ್ನು ತಡೆಗಟ್ಟಬೇಕಾಗಿದೆ. ಕಾರಣ ಸದರಿ ಬಾಲಕಿ/ಬಾಲಕ ತಮ್ಮ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ/ವಿದ್ಯಾಭ್ಯಾಸ ಮಾಡಿರುವ ಬಗ್ಗೆ ತಮ್ಮ ಶಾಲೆಯ ದಾಖಾಲಾತಿಯ ಆಧಾರದ ಮೇಲೆ ತುರ್ತಾಗಿ ಜನ್ಮ ದಿನಾಂಕ ದೃಢೀಕರಣ ನೀಡಲು ಕೋರಿದೆ.

ತಮ್ಮ ವಿಶ್ವಾಸಿ,

______________________

(ಹುದ್ದೆ) ಹಾಗೂ

ಬಾಲ್ಯ ವಿವಾಹ ನಿಷೇಧಾಧಿಕಾರಿಗಳು,

__________________ಗ್ರಾಮ

__________________ತಾಲ್ಲೂಕು,

__________________ಜಿಲ್ಲೆ.

## ಬಾಲ್ಯ ವಿವಾಹಕ್ಕೊಳಗಾಗುತ್ತಿದ್ದ ಬಾಲಕ/ಬಾಲಕಿಯ ಪೋಷಕರು ರೂ.20 ರ ಛಾಪಾ ಕಾಗದದಲ್ಲಿ ನೀಡಬೇಕಾದ ಅಫಿಡವಿಟ್

:ಪ್ರಮಾಣ ಪತ್ರ:

ನಾನು

ಶ್ರೀ/ಶ್ರೀಮತಿ.......................................................................................................

ವಯಸ್ಸು............................ವಾಸ.......................................................................................

...............................................................................................................ಈ ಕೆಳಕಂಡಂತೆ ಪ್ರಮಾಣೀಕರಿಸುತ್ತೇನೆ.

1) ನಾನು ನನ್ನ ಮಗ/ಮಗಳು/ಕುಮಾರ/ಕುಮಾರಿ ........................................................................ ವಯಸ್ಸು. ........................ಇವಳಿಗೆ/ಇವನಿಗೆ ನಾನು ಕಾನೂನಿನ ತಿಳುವಳಿಕೆ ಇಲ್ಲದ ಕಾರಣ ಮದುವೆ ಮಾಡಲು ತಯಾರಿ ನಡೆಸಿರುತ್ತೇನೆ. ಆದರೆ ಈಗ ............................................................ ರವರು ಈ ಬಗ್ಗೆ ತಿಳುವಳಿಕೆ ನೀಡಿದ್ದು, ಮದುವೆಯನ್ನು ನಿಲ್ಲಿಸಿದ್ದೇನೆ ಹಾಗೂ ನನ್ನ ಮಗನಿಗೆ/ಮಗಳಿಗೆ .................... ವರ್ಷ ಆಗುವವರೆಗೆ ಮದುವೆ ಮಾಡುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.
2) ನಾನು ಪ್ರತಿ 3 ತಿಂಗಳಿಗೊಮ್ಮೆ ನನ್ನ ಮಗ/ಮಗಳೊಂದಿಗೆ ಮಕ್ಕಳ ಕಲ್ಯಾಣ ಸಮಿತಿ/ಸ್ಥಳೀಯ ಪೋಲೀಸ್ ಠಾಣಾ ಮಕ್ಕಳ ಕಲ್ಯಾಣಾಧಿಕಾರಿಯವರ ಮುಂದೆ ಹಾಜರಾಗಲು ಬದ್ಧನಾಗಿರುತ್ತೇನೆ.
3) ನಾನು ನನ್ನ ಮಗ/ಮಗಳಿಗೆ ಮುಂದಿನ ವಿದ್ಯಾಭ್ಯಾಸ/ ವೃತ್ತಿ ತರಬೇತಿಗೆ ಅವಕಾಶ ಕಲ್ಪಿಸಿಕೊಡುತ್ತೇನೆ.
4) ನಮ್ಮ ಮಗಳು/ಮಗ ನಮ್ಮ ಮನೆಯಲ್ಲಿಯೇ ನಮ್ಮ ಜೊತೆಯಲ್ಲಿ ವಾಸಿಸುತ್ತಾರೆಂದು ತಿಳಿಸುತ್ತೇನೆ.
5) .......................................................................ಕಾರಣದಿಂದಾಗಿ ಮಗಳು/ಮಗನನ್ನು ಪ್ರಸ್ತುತ ನಮ್ಮೊಂದಿಗೆ ಇರಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲದ ಕಾರಣ ಅವಳು/ಅವನನ್ನು ನಮ್ಮ ಸಂಬಂಧಿಕರು/ಸ್ನೇಹಿತರ ಈ ಕೆಳಕಂಡ ವಿಳಾಸದಲ್ಲಿ ................................................ವರೆಗೆ ಇರಿಸುತ್ತೇನೆ.

**ಬಾಲಕ/ಬಾಲಕಿ ಇರುವ ವಿಳಾಸ:**

........................................................................

........................................................................

........................................................................

6) ಮೇಲಿನ ಎಲ್ಲಾ ಅಂಶಗಳು ಸತ್ಯವಾಗಿದ್ದು, ಯಾವುದೇ ಅಂಶಕ್ಕೆ ನಾನು ವಿರುದ್ಧವಾಗಿ ನಡೆದುಕೊಂಡಲ್ಲಿ ನನ್ನ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಬಹುದು ಎಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ: ಪ್ರಮಾಣೀಕರ್ತ

ಸ್ಥಳ:

ADDITIONAL CHIEF SECRETARY

ಕರ್ನಾಟಕ ಸರ್ಕಾರದ ಸಚಿವಾ
Karnataka Government Secre

ಅ.ಸ. ಪತ್ರ ಸಂಖ್ಯೆ: ಮಮಇ 170 ಮಮಅ 2011 ದಿನಾಂಕ: 25.08.2011.

ಮಾನ್ಯರೇ,

ಮಾನ್ಯ ಉಚ್ಚನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 11154/2006 ನ್ನು ವಿಲೇ ಮಾಡುವ ಸಂದರ್ಭದಲ್ಲಿ ಬಾಲ್ಯ ವಿವಾಹ ನಿಷೇಧ ಕಾಯ್ದೆ 2006ನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕ್ರಿಯಾ ಯೋಜನೆಯನ್ನು ತಯಾರಿಸಲು ಕೋರ್ ಕಮಿಟಿಯನ್ನು ರಚಿಸಲು ಸೂಚಿಸಿದ ಹಿನ್ನಲೆಯಲ್ಲಿ ರಾಜ್ಯ ಸರ್ಕಾರವು ಜಸ್ಟೀಸ್ ಡಾ: ಶಿವರಾಜ್ ವಿ.ಪಾಟೀಲ್ ಇವರ ಅಧ್ಯಕ್ಷತೆಯಲ್ಲಿ ಕೋರ್ ಕಮಿಟಿಯನ್ನು ರಚಿಸಿದ್ದು, ಸದರಿ ಕೋರ್ ಕಮಿಟಿಯು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿರುತ್ತದೆ.

ಎಲ್ಲಾ ಇಲಾಖೆಗಳ ವಿವಿಧ ಯೋಜನೆಗಳಡಿ ಸೌಲಭ್ಯಕ್ಕಾಗಿ ನೀಡುವ ಅರ್ಜಿಗಳಲ್ಲಿ "ಬಾಲ್ಯ ವಿವಾಹವನ್ನು ನಿಷೇಧಿಸಲಾಗಿದೆ, ಬಾಲ್ಯ ವಿವಾಹ ಶಿಕ್ಷಾರ್ಹ ಅಪರಾಧ" ಎಂದು ಮುದ್ರಿಸುವುದರ ಜೊತೆಗೆ, ಈ ಕೆಳಕಂಡಂತೆ ಅರ್ಜಿದಾರರಿಂದ ಘೋಷಣೆಗೆ ಸಹಿಯನ್ನು ಪಡೆಯಬೇಕೆಂಬುದು ಸದರಿ ಸಮಿತಿಯ ಮಾಡಿರುವ ಶಿಫಾರಸ್ಸುಗಳಲ್ಲಿ ಒಂದಾಗಿರುತ್ತದೆ.

> "ನನ್ನ ಕುಟುಂಬದಲ್ಲಿ ಯಾವುದೇ ಬಾಲ್ಯವಿವಾಹಕ್ಕೆ ಅವಕಾಶ ನೀಡುವುದಿಲ್ಲ ಹಾಗೂ ಅಂತಹ ಬಾಲ್ಯ ವಿವಾಹದಲ್ಲಿ ಭಾಗಿಯಾಗುವುದಿಲ್ಲ, ತಪ್ಪಿದಲ್ಲಿ, ನನಗೆ ನೀಡಿರುವ ಸರ್ಕಾರದ ಸವಲತ್ತನ್ನು ಹಿಂಪಡೆಯಬಹುದಾಗಿದೆ"

ಆದ ಕಾರಣ ಕೋರ್ ಕಮಿಟಿಯ ಶಿಫಾರಸ್ಸಿನಂತೆ (ಉದ್ಧೃತ ಭಾಗ ಲಗತ್ತಿಸಿದೆ) ಮುಂದಿನ ಕ್ರಮ ಕೈಗೊಳ್ಳುವಂತೆ ತಮ್ಮನ್ನು ಕೋರಬಯಸುತ್ತೇನೆ.

ತಮ್ಮ ವಿಶ್ವಾಸಿ,

(ಕೆ. ಜೈರಾಜ್)

ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು,

132

ಕೊಠಡಿ ಸಂಖ್ಯೆ-331, 3ನೇ ಮಹಡಿ, ವಿಧಾನ ಸೌಧ, ಡಾ|| ಅಂಬೇಡ್ಕರ್ ವೀಧಿ, ಬೆಂಗಳೂರು - 560 001.
Room No. 331, 3rd Floor, Vidhana Soudha, Dr. Ambedkar Veedhi, Bangalore - 560 001.
Tel. +91-80-2225 7982 / 2203 3400 Fax +91-80-2225 6306 E-mail : acs@karnataka.gov.in

ಸಂ:ಪೌನಿ:ಇತರೆ:ಸಿಆರ್:423:2011-12

ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು,ದಿನಾಂಕ:21.09.2011

:: ಸುತ್ತೋಲೆ ::

ವಿಷಯ: ಬಾಲ್ಯ ವಿವಾಹ ನಿಷೇಧದ ಬಗ್ಗೆ ಕಡ್ಡಾಯವಾಗಿ ಮದುವೆ ನಡೆಯುವ ಕಲ್ಯಾಣ ಮಂದಿರಗಳಲ್ಲಿ, ದೇವಸ್ಥಾನಗಳಲ್ಲಿ ಮತ್ತು ಮದುವೆ ನಡೆಯುವ ಇತರೆ ಸ್ಥಳಗಳಲ್ಲಿ ಫಲಕಗಳನ್ನು ಪ್ರದರ್ಶಿಸುವ ಕುರಿತು.

ಉಲ್ಲೇಖ: ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರುರವರ ಪತ್ರದ ಸಂಖ್ಯೆ:ಮಮಅ:ಮಕ:20:2010-11 ದಿನಾಂಕ:9.8.2011.

---

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಬಾಲ್ಯ ವಿವಾಹ ನಿಷೇಧ ಕಾಯ್ದೆ 2006 ನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಗಳಾದ ಜಸ್ಟೀಸ್ ಡಾ:ಶಿವರಾಜ ವಿ.ಪಾಟೀಲ್‌ರವರ ಅಧ್ಯಕ್ಷತೆಯಲ್ಲಿ ಕೋರ್ ಕಮಿಟಿಯನ್ನು ರಚಿಸಿದ್ದು, ಸದರಿ ಕೋರ್ ಕಮಿಟಿಯು ದಿನಾಂಕ:30.06.2011 ರಂದು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿ, ಬಾಲ್ಯ ವಿವಾಹ ನಿಷೇಧದ ಬಗ್ಗೆ ಎಲ್ಲಾ ಕಲ್ಯಾಣ ಮಂದಿರಗಳಲ್ಲಿ, ದೇವಸ್ಥಾನಗಳಲ್ಲಿ ಮತ್ತು ಮದುವೆ ನಡೆಯುವ ಇತರೆ ಸ್ಥಳಗಳಲ್ಲಿ ಕಡ್ಡಾಯವಾಗಿ ಫಲಕಗಳನ್ನು ಪ್ರದರ್ಶಿಸಲು ಶಿಫಾರಸ್ಸು ಮಾಡಿರುತ್ತಾರೆ.

ಆದುದರಿಂದ ತಮ್ಮ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಮದುವೆ ನಡೆಯುವ ಕಲ್ಯಾಣ ಮಂದಿರಗಳಲ್ಲಿ, ದೇವಸ್ಥಾನಗಳಲ್ಲಿ ಮತ್ತು ಮದುವೆ ನಡೆಯುವ ಇತರೆ ಸ್ಥಳಗಳಲ್ಲಿ ಫಲಕಗಳನ್ನು ಕಡ್ಡಾಯವಾಗಿ ಪ್ರದರ್ಶಿಸಲು ಸೂಚಿಸಿದೆ.

ಆಯುಕ್ತರು,
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು.

ಪ್ರತಿಯನ್ನು ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.

1. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಒಂದನೇ ಮಹಡಿ, ಬಹು ಮಹಡಿಗಳ ಕಟ್ಟಡ ಬೆಂಗಳೂರು.
2. ಎಲ್ಲಾ ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ
3. ಎಲ್ಲಾ ಪೌರಾಯುಕ್ತರು, ನಗರಸಭೆ,
4. ಎಲ್ಲಾ ಮುಖ್ಯಾಧಿಕಾರಿಗಳು, ಪುರಸಭೆ/ ಪಟ್ಟಣ ಪಂಚಾಯಿತಿ

58
10/10/11

1041
ನಿರ್ದೇಶನಾಲಯ
C.W
03 OCT 2011

1523
12/10

Deputy Commissioner and Chairperson
Unicef Child Protection Project
D C Office Sath Kacheri
RAICHUR-584101. Ph.08532-229011

199

ಬಾಲ್ಯವಿವಾಹ ನಡೆಯದಂತೆ ತಡೆಯಲು ದೇವಸ್ಥಾನ/ಮಠ/ಕಲ್ಯಾಣ ಮಂಟಪ/ ಫಂಕ್ಷನ್‌ಹಾಲ್‌ಗಳಲ್ಲಿ ಹಾಕಬೇಕಾದ ಶಾಶ್ವತ ಬೋರ್ಡಿನ ವಿಷಯ. (ಈ ಬೋರ್ಡ್‌ನ್ನು ಪೇಯಿಂಟ್‌ನಲ್ಲಿ ಬರೆಸುವುದು/ಫ್ಲೆಕ್ಸ್‌ಗಳಲ್ಲಿ ಹಾಕಬಹುದಾಗಿದೆ)

ಸಾರ್ವಜನಿಕರಿಗೆ ಮಹತ್ವದ ಸೂಚನೆ.

# ಬಾಲ್ಯವಿವಾಹ ಶಿಕ್ಷಾರ್ಹ ಅಪರಾಧ.

**ಇಲ್ಲಿ ಯಾವುದೇ ಕಾರಣಕ್ಕೂ "18 ವರ್ಷದೊಳಗಿನ ಹೆಣ್ಣು ಮಕ್ಕಳ ಮತ್ತು 21 ವರ್ಷದೊಳಗಿನ ಗಂಡು ಮಕ್ಕಳ ಮದುವೆಗೆ ಅಥವಾ "ಬಾಲ್ಯವಿವಾಹಕ್ಕೆ" ಅವಕಾಶವಿಲ್ಲ, ಕಾನೂನಿನಂತೆ ಸಂಪೂರ್ಣವಾಗಿ ನಿಷೇಧಿಸಲಾಗಿದೆ."**

- ಬಾಲ್ಯ ವಿವಾಹ ಜಾಮೀನು ರಹಿತ ಹಾಗೂ ವಿಚಾರಣಾರ್ಹ ಅಪರಾಧವಾಗಿರುತ್ತದೆ.
- ಬಾಲ್ಯವಿವಾಹಗಳನ್ನು ನಡೆಸುವುದು ಕಾನೂನು ಬಾಹಿರ.
- ಬಾಲ್ಯವಿವಾಹ ನಿಷೇಧ ಕಾಯ್ದೆ 2006 ರಂತೆ ಶಿಕ್ಷಿಸಲಾಗುತ್ತದೆ.
- 18 ವರ್ಷದೊಳಗಿನ ಬಾಲಕಿಯರು ಮತ್ತು 21 ವರ್ಷದೊಳಗಿನ ಬಾಲಕರ ವಿವಾಹಗಳಿಗೆ ಬೆಂಬಲಿಸುವವರೆಲ್ಲರ ಮೇಲೆ ಮೊಕದ್ದಮೆ ಹೂಡಲಾಗುತ್ತದೆ.
- 2 ವರ್ಷದವರೆಗೆ ಕಠಿಣ ಕಾರಾಗೃಹ ಅಥವಾ ರೂ. 1.00 ಲಕ್ಷದವರೆಗೆ ದಂಡ ಅಥವಾ ಈ ಎರಡನ್ನೂ ವಿಧಿಸಬಹುದಾಗಿರುತ್ತದೆ.

ಮದುವೆಗಿಂತ ಮಕ್ಕಳ ಭವಿಷ್ಯ ಮುಖ್ಯ

ಬಾಲ್ಯ ವಿವಾಹ ನಿಲ್ಲಿಸಿ, ಮಕ್ಕಳ ಹಕ್ಕುಗಳನ್ನು ರಕ್ಷಿಸಿ,

ಎಲ್ಲರೂ ಬನ್ನಿ ಒಂದಾಗಿ, ಬಾಲ್ಯವಿವಾಹ ತಡೆಯಲು ಮುಂದಾಗಿ.

—ವ್ಯವಸ್ಥಾಪಕರು

Deputy Commissioner and Chairperson
Unicef Child Protection Project
D. C. Office Sath Kacheri
RAICHUR 584101 Ph.08532-229011

131

ಆರ್.ಆರ್.ಜನ್ನು, ಭಾ.ಆ.ಸೇ
ನಿರ್ದೇಶಕರು
ಮಹಿಳೆಯರ ಮತ್ತು ಮಕ್ಕಳ
ಅಭಿವೃದ್ಧಿ ಇಲಾಖೆ
**DIRECTOR OF WOMEN AND CHILD DEVELOPMENT IN KARNATAKA**

ಒಂದನೇ ಮಹಡಿ
ಬಹುಮಹಡಿಗಳ ಕಟ್ಟಡ
ಡಾ॥ ಅಂಬೇಡ್ಕರ್ ರಸ್ತೆ
ಬೆಂಗಳೂರು – ೫೬೦ ೦೦೧
**I FLOOR**
**MULTISTORIED BUILDING**
**DR. B.R. AMBEDKAR VEEDHI**
**BANGALORE - 560 001**

ಅ.ಸ ಪತ್ರ ಸಂಖ್ಯೆ:ಮಮಅಇ/ಬಾವಿನಿಕೋ/ವಿ.ಕ್ರ/10/2014–15 ದಿನಾಂಕ:19–06–2014.

ಸನ್ಮಾನ್ಯರೇ,

ವಿಷಯ:– ಬಾಲ್ಯ ವಿವಾಹ ನಿಷೇಧ ಕುರಿತು ಜಿಲ್ಲೆಯ ಎಲ್ಲಾ ಮುದ್ರಣ ಸಂಸ್ಥೆ (ಪ್ರಿಂಟಿಂಗ್ ಪ್ರೆಸ್)ಗಳ, ವ್ಯವಸ್ಥಾಪಕರುಗಳಿಗೆ ಮತ್ತು ಜಿಲ್ಲೆಯ ಎಲ್ಲಾ ಧಾರ್ಮಿಕ ಪೌರೋಹಿತ್ಯ ಮದುವೆ ಕಾರ್ಯ ನಡೆಸುವ ಪೂಜಾರಿಗಳು, ಮಠ/ ಕಲ್ಯಾಣ ಮಂಟಪ/ ಫಂಕ್ಷನ್‌ಹಾಲ್‌ಗಳ ವ್ಯವಸ್ಥಾಪಕರುಗಳಿಗೆ, ಸಾಮೂಹಿಕ ವಿವಾಹ ಆಯೋಜಕರಿಗೆ ವಿಶೇಷ ಸೂಚನಾಪತ್ರ ಹೊರಡಿಸುವಂತೆ ಕೋರಿ.

ಉಲ್ಲೇಖ: 1. ಭಾರತ ಸರ್ಕಾರದ ಬಾಲ್ಯ ವಿವಾಹ ನಿಷೇಧ ಕಾಯ್ದೆ–2006 ರ ಪ್ರಕಾರ.
2. ಭಾರತ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾದ ಡಾ॥ ಶಿವರಾಜ್ ಪಾಟೀಲ್ ರವರು ದಿನಾಂಕ:30–06–2014 ರಂದು ಕರ್ನಾಟಕ ಸರ್ಕಾರ ಹಾಗೂ ಕರ್ನಾಟಕ ಹೈಕೋರ್ಟ್‌ಗೆ ಸಲ್ಲಿಸಿದ ಕೋರ್ ಕಮಿಟಿಯ ವರದಿಯಂತೆ.

ಬಾಲ್ಯ ವಿವಾಹವು ಅಭಿವೃದ್ಧಿಗೆ ಮಾರಕವಾಗಿರುವ ಸಮಸ್ಯೆಯಾಗಿದ್ದು, ಇದರಿಂದ ಮಕ್ಕಳ ಭವಿಷ್ಯಕ್ಕೆ, ಹಕ್ಕುಗಳಿಗೆ ಧಕ್ಕೆಯುಂಟಾಗಿ ಉಲ್ಲಂಘನೆಗೆ ಒಳಗಾಗಿ ಬದುಕುವ ಸ್ಥಿತಿ ನಿರ್ಮಾಣವಾಗುತ್ತದೆ. ಇಂತಹ ಕ್ರೂರ ಪದ್ಧತಿಯನ್ನು ಸಂಪೂರ್ಣವಾಗಿ ಹೋಗಲಾಡಿಸಲು ಮತ್ತು ಜನಸಾಮಾನ್ಯರಲ್ಲಿ ಬಾಲ್ಯವಿವಾಹದ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಲು ಇಲಾಖೆಯು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ನಡೆಸುತ್ತಿದೆ. ಆದರೂ ಸಹ ಬಾಲ್ಯ ವಿವಾಹಗಳ ಅನೇಕ ಪ್ರಕರಣಗಳು ವರದಿಯಾಗುತ್ತಿದ್ದು, ಈ ನಿಟ್ಟಿನಲ್ಲಿ ಇನ್ನೂ ಹೆಚ್ಚಿನ ಅರಿವು ಮೂಡಿಸುವುದು ಅಗತ್ಯವಾಗಿರುತ್ತದೆ.

ರಾಯಚೂರು ಜಿಲ್ಲಾಡಳಿತವು ಜಿಲ್ಲೆಯ ಎಲ್ಲಾ ಮುದ್ರಣ ಸಂಸ್ಥೆ(ಪ್ರಿಂಟಿಂಗ್ ಪ್ರೆಸ್)ಗಳ, ಅಂಗಡಿಗಳ ಹಾಗೂ ಡಿಟಿಪಿ ಅಂಗಡಿಗಳ ವ್ಯವಸ್ಥಾಪಕರುಗಳಿಗೆ ಮದುವೆ ಆಮಂತ್ರಣ ಪತ್ರ ಮುದ್ರಿಸುವಾಗ ವಧು, ವರರ ವಯಸ್ಸಿನ ದೃಢೀಕರಣ ಪತ್ರ ಪಡೆದು ವಧುವಿಗೆ 18 ವರ್ಷ, ವರನಿಗೆ 21 ವರ್ಷ, ಪೂರ್ಣವಾಗಿದೆ ಎಂದು ಖಾತ್ರಿಪಡಿಸಿಕೊಂಡ ನಂತರವೇ ಆಮಂತ್ರಣ ಪತ್ರಿಕೆ ಮುದ್ರಿಸುವ ಬಗ್ಗೆ ವಿಶೇಷ ಸೂಚನಾ ಪತ್ರ ಹೊರಡಿಸಿದ್ದು, ಇದರಿಂದ ಅನೇಕ ಬಾಲ್ಯ ವಿವಾಹಗಳನ್ನು ಪ್ರಾರಂಭಿಕ ಹಂತದಲ್ಲೇ ತಡೆಗಟ್ಟಲು ಅನುಕೂಲವಾಗಿದೆ. ಮುಂದುವರೆದು ರಾಯಚೂರು ಜಿಲ್ಲಾಡಳಿತವು ಜಿಲ್ಲೆಯ ಎಲ್ಲಾ ಧಾರ್ಮಿಕ ಪೌರೋಹಿತ್ಯ ಮದುವೆ ಕಾರ್ಯ, ಮಾಂಗಲ್ಯ ಧಾರಣೆ ಕಾರ್ಯಕ್ರಮ ನಡೆಸುವಾಗ ವಧು ವರರ ವಯಸ್ಸನ್ನು ಖಾತ್ರಿಪಡಿಸಿ ಬಾಲ್ಯ ವಿವಾಹಕ್ಕೆ ಯಾವುದೇ ಅವಕಾಶ ನೀಡದಂತೆ ಜಿಲ್ಲೆಯ ಎಲ್ಲಾ ಪೂಜಾರಿಗಳಿಗೆ ವಿಶೇಷ ಸೂಚನಾ ಪತ್ರ ಹೊರಡಿಸಿದ್ದು, ಇದರಿಂದಲೂ ಸಹ ಅನೇಕ ಬಾಲ್ಯ ವಿವಾಹಗಳನ್ನು ತಡೆಗಟ್ಟಲು ಅನುಕೂಲವಾಗಿದೆ. ರಾಯಚೂರು ಜಿಲ್ಲಾಡಳಿತದ ಮಾದರಿಯಲ್ಲಿ ಎಲ್ಲಾ ಜಿಲ್ಲೆಗಳಲ್ಲೂ ಈ ರೀತಿ ಸೂಚನಾ ಪತ್ರಗಳನ್ನು ಹೊರಡಿಸಿದ್ದಲ್ಲಿ, ಬಾಲ್ಯ ವಿವಾಹಗಳನ್ನು ಪರಿಣಾಮಕಾರಿಯಾಗಿ ತಡೆಯಬಹುದೆಂದು ಭಾವಿಸಿದ್ದು, ಈ ಪತ್ರಕ್ಕೆ ಲಗತ್ತಿಸಿರುವ ಮಾದರಿಯಲ್ಲಿ ವಿಶೇಷ ಸೂಚನಾ ಪತ್ರಗಳನ್ನು ಜಿಲ್ಲೆಯ ಎಲ್ಲಾ ಮುದ್ರಣ ಸಂಸ್ಥೆ(ಪ್ರಿಂಟಿಂಗ್ ಪ್ರೆಸ್)ಗಳ, ಅಂಗಡಿಗಳ ಹಾಗೂ ಡಿಟಿಪಿ ಅಂಗಡಿಗಳ ವ್ಯವಸ್ಥಾಪಕರುಗಳಿಗೆ ಮತ್ತು ಮದುವೆಗಳನ್ನು ನಡೆಸುವ ದೇವಸ್ಥಾನದ ಪೂಜಾರಿಗಳು, ಮಠ/ಚರ್ಚ್/ಮಸೀದಿಗಳ ಧಾರ್ಮಿಕ ಮುಖಂಡರು, ಕಲ್ಯಾಣ ಮಂಟಪ/ಫಂಕ್ಷನ್‌ಹಾಲ್‌ಗಳ ವ್ಯವಸ್ಥಾಪಕರುಗಳಿಗೆ ಮತ್ತು ಸಾಮೂಹಿಕ ವಿವಾಹಗಳ ಆಯೋಜಕರಿಗೆ ಯಾವುದೇ ಬಾಲ್ಯ ವಿವಾಹಗಳಿಗೆ ಅವಕಾಶ ಮಾಡಿಕೊಡದಂತೆ ವಿಶೇಷ ಸೂಚನಾಪತ್ರ ಹೊರಡಿಸಲು ಹಾಗೂ ಈ ಮೂಲಕ ಬಾಲ್ಯ ವಿವಾಹಗಳನ್ನು ಸಂಪೂರ್ಣವಾಗಿ ತಡೆಗಟ್ಟಲು ಇಲಾಖೆಗೆ ಸಹಕಾರ ನೀಡಲು ಕೋರಲಾಗಿದೆ.

ತಮ್ಮ

# ಚೈಲ್ಡ್ ಲೈನ್ (ಮಕ್ಕಳ ಸಹಾಯವಾಣಿ):

18 ವರ್ಷದೊಳಗಿನ ಮಕ್ಕಳು
ಯಾವುದೇ ರೀತಿಯ ಸಂಕಷ್ಟ, ತೊಂದರೆ, ದೈಹಿಕ/ಮಾನಸಿಕ ಶಿಕ್ಷೆ,
ಹಿಂಸೆ/ನಿರ್ಲಕ್ಷ್ಯ/ ತಾರತಮ್ಯ ಹಾಗೂ ಲೈಂಗಿಕ ಆಧಾರಿತ
ಯಾವುದೇ ರೀತಿಯ ಶೋಷಣೆಗೆ ಒಳಗಾದರೆ ತಕ್ಷಣ

## ಚೈಲ್ಡ್ ಲೈನ್‌ಗೆ ಕರೆ ಮಾಡಿ: 1098 ಅಥವಾ 112.

ಯಾವುದೇ ಮಕ್ಕಳು ಓಡಿಹೋದರೆ, ಕಾಣೆಯಾದರೆ, ಕಳ್ಳ ಸಾಗಾಣಿಕೆಗೆ ಒಳಪಟ್ಟರೆ, ದೌರ್ಜನ್ಯಕ್ಕೊಳಗಾದರೆ, ಜೀತ ಪದ್ಧತಿಯಲ್ಲಿದ್ದರೆ, ಬಾಲ ಮತ್ತು ಕಿಶೋರ ಕಾರ್ಮಿಕ ಪದ್ಧತಿಯಲ್ಲಿದ್ದರೆ, ಬಾಲ್ಯ ವಿವಾಹದ ಸಿದ್ಧತೆ ಅಥವಾ ಬಾಲ್ಯ ವಿವಾಹ ನಡೆಸಿದಲ್ಲಿ, ಭಿಕ್ಷಾಟನೆಯಲ್ಲಿದ್ದರೆ, ಬೀದಿಯಲ್ಲಿದ್ದರೆ, ನಿರಂತರ ಶಾಲೆಗೆ ಗೈರು ಹಾಜರಾದರೆ, ಯಾವುದೇ ವಿಪತ್ತಿಗೆ ಒಳಗಾದರೆ, ಮಾದಕ ವ್ಯಸನ, ಆನ್ ಲೈನ್ ಬೆದರಿಕೆ, ಜಾಲತಾಣ ಸಮಸ್ಯೆ, ಪೋಷಣೆ ಮತ್ತು ರಕ್ಷಣೆಯ ಅಗತ್ಯವಿದ್ದರೆ, ಹಾಗೂ ಕಾನೂನಿನೊಂದಿಗೆ ಸಂಘರ್ಷಕ್ಕೆ ಒಳಗಾದರೆ ಅವರ ಸಂರಕ್ಷಣೆಗಾಗಿ

## ತಕ್ಷಣ ಕರೆ ಮಾಡಿ; 1098. ತುರ್ತು ರಕ್ಷಣೆಗಾಗಿ 112

**(ಈ ದೂರವಾಣಿ ಉಚಿತ ಹಾಗೂ ದೂರು ನೀಡಿದವರ ವಿವರ ಖಂಡಿತ ಬಹಿರಂಗವಾಗುವುದಿಲ್ಲ, ಗೌಪ್ಯತೆಯನ್ನು ಕಾಪಾಡಲಾಗುವುದು).**

**ಹೆಚ್ಚಿನ ಮಾಹಿತಿ ಮತ್ತು ದೂರು ನೀಡಲು ಇವರನ್ನು ಸಂಪರ್ಕಿಸಿ:**

ಜಿಲ್ಲಾ ಮಕ್ಕಳ ರಕ್ಷಣಾ ಘಟಕ:____________ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ:______

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ:____________

ಹಿರಿಯ ಮಕ್ಕಳ ಕಲ್ಯಾಣ ಪೊಲೀಸ್ ಅಧಿಕಾರಿ:____________

ತಾಲೂಕು ಮಕ್ಕಳ ರಕ್ಷಣಾಧಿಕಾರಿ (ಶಿಶು ಅಭಿವೃದ್ಧಿ ಯೋಜನಾಧಿಕಾರಿ):______

ತಾಲೂಕು ಕಾನೂನು ಸೇವಾ ಪ್ರಾಧಿಕಾರ:____________

ಸಖಿ (ಮಹಿಳಾ ಸಹಾಯವಾಣಿ (ಸಾಂತ್ವನ) ಕೇಂದ್ರ):____________

**ಮುಖ್ಯೋಪಾಧ್ಯಯರು/ಕಾಲೇಜ್ ಪ್ರಾಂಶುಪಾಲರು/ನಿಲಯ ಪಾಲಕರು/ ಮೆಲ್ವಿಚಾರಕರು/ಮುಖ್ಯಸ್ಥರು/ಆಡಳಿತ ಮಂಡಳಿ.**

**ಶಿಕ್ಷಣ ಸಂಸ್ಥೆಯ/ಇಲಾಖೆಯ ಹೆಸರು:**________________________

**_ಸೂಚನೆ:_ 1. ಮೇಲಿನಂತೆ ಮಕ್ಕಳ ಸಹಾಯವಾಣಿ 1098 ಅಥವಾ 112 ಶಾಶ್ವತ ಫಲಕವನ್ನು ಎಲ್ಲಾ ಶಾಲೆ/ವಸತಿನಿಲಯ/ಶಿಕ್ಷಣ ಸಂಸ್ಥೆ/ಪದವಿ ಪೂರ್ವ ಕಾಲೇಜ್/ ಪದವಿ ಕಾಲೇಜ್/ಅಂಗನವಾಡಿ/ಎಲ್ಲಾ ಸರಕಾರಿ/ವಿವಿಧ ಇಲಾಖೆಗಳ ಅಥವಾ ಅರೆ ಸರಕಾರಿ ಕಛೇರಿಗಳ ಮುಂಭಾಗದಲ್ಲಿ ಎಲ್ಲಾ ಸಾರ್ವಜನಿಕರಿಗೆ/ಮಕ್ಕಳಿಗೆ ಕಾಣುವಂತೆ ಟಿನ್‌ನ ಬೋರ್ಡ್‌ನಲ್ಲಿ/ ಅಥವಾ ಕಟ್ಟಡದ ಗೋಡೆಯಲ್ಲಿ ಶಾಶ್ವತವಾಗಿ ಎಲ್.ಎಮ್.ಎಲ್ ಬಣ್ಣದಲ್ಲಿ ಬರೆಸಬೇಕು.**

**2. ಮೇಲಿನ ಇಲಾಖೆಗಳ ದೂರವಾಣಿ ಸಂಖ್ಯೆಗಳನ್ನು ನಿಮ್ಮ ಜಿಲ್ಲಾ ವ್ಯಾಪ್ತಿಯ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಕಛೇರಿಯಿಂದ ಪಡೆಯುವುದು.**

ಕ್ರಮ ಸಂಖ್ಯೆ ...1062..... ದಿ: ...08/02/18
ಮ.ಮ.ಅ. ಇಲಾಖೆ (ಸ್ತ್ರೀಮರ)

**ಕರ್ನಾಟಕ ಸರ್ಕಾರ**

ಸಂಖ್ಯೆ:ಆರ್‌ಡಿ 54 ಡಿಎಸ್‌ಪಿ 2011

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ:20-09-2017.

**ಸುತ್ತೋಲೆ**

**ವಿಷಯ:** ಬಾಲ್ಯ ವಿವಾಹ ತಡೆಗಟ್ಟುವಲ್ಲಿ ಸಮರ್ಪಕವಾಗಿ ಕಾರ್ಯನಿರ್ವಹಿಸುವ ಕುರಿತು.

**ಉಲ್ಲೇಖ:** 1) ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್‌ಡಿ 54 ಡಿಎಸ್‌ಪಿ 2011, ದಿನಾಂಕ:18.08.2011

2) ಸರ್ಕಾರದ ಅಧಿಸೂಚನೆ ಸಂಖ್ಯೆ: ಡಬ್ಲ್ಯೂಸಿಡಿ 100 ಎಸ್‌ಡಬ್ಲ್ಯೂಡಬ್ಲ್ಯೂ 2006, ದಿನಾಂಕ:07.11.2007.

3) ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್‌ಡಿ 54 ಡಿಎಸ್‌ಪಿ 2011, ದಿನಾಂಕ:27.07.2011

*****

ಸರಳ ವಿವಾಹವನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸಾಮೂಹಿಕ ವಿವಾಹಗಳನ್ನು ಸಮರ್ಪಕವಾಗಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಅಯೋಜಿಸುವ ಹಾಗೂ ಸಾಮೂಹಿಕ ವಿವಾಹಗಳಲ್ಲಿ ಬಾಲ್ಯ ವಿವಾಹದಂತ ಅನಿಷ್ಟ ಪದ್ಧತಿಗಳನ್ನು ತಡೆಗಟ್ಟುವ ದೃಷ್ಟಿಯಿಂದ, ಸಾಮೂಹಿಕ ವಿವಾಹ ಕಾರ್ಯಕ್ರಮಗಳನ್ನು ಆಯೋಜಿಸುವಾಗ ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ಉಲ್ಲೇಖ(1)ರ ಸುತ್ತೋಲೆಯಲ್ಲಿ ಹೊರಡಿಸಲಾಗಿರುತ್ತದೆ.

ಉಲ್ಲೇಖ(2)ರ ಅಧಿಸೂಚನೆಯಲ್ಲಿ ಕಂದಾಯ ಇಲಾಖೆಯ ಗ್ರಾಮ ಲೆಕ್ಕಾಧಿಕಾರಿಗಳನ್ನು ಅವರ ಕಾರ್ಯವ್ಯಾಪ್ತಿಗೆ ವಿವಾಹ ನೋಂದಣಿ ಪ್ರಾಧಿಕಾರವೆಂದು ನೇಮಿಸಲಾಗಿದೆ.

ಉಲ್ಲೇಖ(3)ರ ಸುತ್ತೋಲೆಯಲ್ಲಿ ಗ್ರಾಮ ಲೆಕ್ಕಾಧಿಕಾರಿಗಳು ಅವರ ಕಾರ್ಯವ್ಯಾಪ್ತಿಯ ಗ್ರಾಮಗಳಲ್ಲಿ/ ವಾರ್ಡ್‌ಗಳಲ್ಲಿ ವಿವಾಹ ಜರುಗಿದ ಸಂದರ್ಭದಲ್ಲಿ ಅಂತಹ ವಿವಾಹಗಳನ್ನು ಕಡ್ಡಾಯವಾಗಿ ನೋಂದಣಿ ಮಾಡತಕ್ಕದ್ದು, ವಿವಾಹ ನೋಂದಣಿ ದೃಢೀಕರಣ ಪತ್ರವನ್ನು ನಿಗದಿತ ನಮೂನೆಯಂತೆ ಕಡ್ಡಾಯವಾಗಿ ನೀಡತಕ್ಕದ್ದು. ವಿವಾಹ ನೋಂದಣಿಗಳನ್ನು ಮಾಡಲು ನೋಂದಣಿ ರಿಜಿಸ್ಟ್ರರ್‌ಗಳ ಕಾರ್ಯವ್ಯಾಪ್ತಿಯ ಗ್ರಾಮವಾರು/ವಾರ್ಡ್‌ವಾರು ನಿಗದಿತ ನಮೂನೆಯಂತೆ ನಿರ್ವಹಿಸತಕ್ಕದ್ದು. ದಸ್ತಾವೇಜುಗಳನ್ನು ಪ್ರತಿ ತಿಂಗಳು ಸಂಬಂಧಪಟ್ಟ ರಾಜಸ್ವ ನಿರೀಕ್ಷಕರು ಮತ್ತು ಸಾಮಾಜಿಕ ಭದ್ರತಾ ಶಿರಸ್ತೇದಾರರು ಕಡ್ಡಾಯವಾಗಿ ಪರಿಶೀಲಿಸತಕ್ಕದೆಂದು ಸೂಚಿಸಲಾಗಿರುತ್ತದೆ.

ಸಾಮೂಹಿಕ ವಿವಾಹ ಆಯೋಜಕರು, ಕಲ್ಯಾಣ ಮಂಟಪಗಳ ವ್ಯವಸ್ಥಾಪಕರು, ವಿವಾಹಗಳನ್ನು ಆಯೋಜಿಸುವ ದೇವಸ್ಥಾನಗಳ ಮತ್ತು ಇತರೆ ಧಾರ್ಮಿಕ ಮುಖ್ಯಸ್ಥರು, ವಿವಾಹಗಳನ್ನು ಆಯೋಜಿಸುವ ಸಂದರ್ಭದಲ್ಲಿ ತಹಶೀಲ್ದಾರ್‌ರವರು ಸರ್ಕಾರದ ದಿನಾಂಕ:18.08.2011ರ ಸುತ್ತೋಲೆಯಲ್ಲಿನ ಮಾರ್ಗಸೂಚಿಯನ್ನು ಕಡ್ಡಾಯವಾಗಿ ಆಯೋಜಕರ ಗಮನಕ್ಕೆ ತಂದು, ಸದರಿ ಮಾರ್ಗಸೂಚಿಗಳ ಪ್ರಕಾರ ತಪ್ಪದೇ ಕ್ರಮಕೈಗೊಳ್ಳುವಂತೆ ತಿಳಿಸಲು ಎಲ್ಲಾ ತಹಶೀಲ್ದಾರ್‌ರವರಿಗೆ ಸೂಚಿಸಲಾಗಿದೆ.

.....................2

ಗ್ರಾಮ ಲೆಕ್ಕಾಧಿಕಾರಿಗಳು, ಅವರ ಕಾರ್ಯವ್ಯಾಪ್ತಿಯ ವಿವಾಹ ನೋಂದಣಿ ಪ್ರಾಧಿಕಾರವಾಗಿರುವುದರಿಂದ, ಬಾಲ್ಯವಿವಾಹ ನಿಷೇಧ (ಕರ್ನಾಟಕ) ನಿಯಮಾವಳಿಗಳು, 2014ರ ನಿಯಮ 4(11)ರ ಅನುಸೂಚಿ(1)ರಲ್ಲಿ ತಿಳಿಸಿರುವಂತೆ ಕ್ರಮವಹಿಸುವುದು. ಸಾಮೂಹಿಕ ವಿವಾಹ ಕಾರ್ಯಕ್ರಮಗಳಲ್ಲಿ ಬಾಲ್ಯ ವಿವಾಹಗಳು ನಡೆದಲ್ಲಿ ಅದಕ್ಕೆ ಸಂಪೂರ್ಣ ಗ್ರಾಮ ಲೆಕ್ಕಾಧಿಕಾರಿಗಳನ್ನೇ ಜವಾಬ್ದಾರರನ್ನಾಗಿ ಮಾಡಲಾಗುವುದು.

(ಕೆ. ಉಮಾಪತಿ)
ಸರ್ಕಾರದ ಉಪ ಕಾರ್ಯದರ್ಶಿ
ಕಂದಾಯ ಇಲಾಖೆ
(ವಿ.ನಿ ಹಾಗೂ ನೋಂ&ಮು)

<u>ಇವರಿಗೆ:-</u>

ಸಂಕಲನಕಾರರು, ಕರ್ನಾಟಕ ವಿಶೇಷ ರಾಜ್ಯಪತ್ರ, ಬೆಂಗಳೂರು, ಇವರಿಗೆ - ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಿ 100 ಪ್ರತಿಗಳನ್ನು ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ, ಕಂದಾಯ ಭವನ, 5ನೇ ಮಹಡಿ, ಕೆ.ಜಿ ರಸ್ತೆ, ಬೆಂಗಳೂರು ಇಲ್ಲಿಗೆ ಕಳುಹಿಸಬೇಕೆಂದು ಕೋರಿದೆ.

<u>ಪ್ರತಿ:</u>

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
3. ಆಯುಕ್ತರು, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ಕಂದಾಯ ಭವನ, ಬೆಂಗಳೂರು.
4. ಎಲ್ಲಾ ಪ್ರಾದೇಶಿಕ ಆಯುಕ್ತರು,
5. ಎಲ್ಲಾ ಜಿಲ್ಲಾಧಿಕಾರಿಗಳು,
6. ಎಲ್ಲಾ ಉಪ ವಿಭಾಗಾಧಿಕಾರಿಗಳು/ತಹಸೀಲ್ದಾರರು.
7. ಹೆಚ್ಚುವರಿ ಪ್ರತಿ ಮತ್ತು ರಕ್ಷಾ ಕಡತ.

## ಕರ್ನಾಟಕ ಸರ್ಕಾರ

ಪತ್ರ ಸಂಖ್ಯೆ:ಆರ್‌ಡಿ 54 ಡಿಎಸ್‌ಪಿ 2011

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:-18-08-2011.

### ಸುತ್ತೋಲೆ

ವಿಷಯ: ಸಾಮೂಹಿಕ ವಿವಾಹ ಕಾರ್ಯಕ್ರಮಗಳನ್ನು ಆಯೋಜಿಸುವ ವಿಧಿವಿಧಾನಗಳ ಬಗ್ಗೆ

ಉಲ್ಲೇಖ: 1) ಬಾಲ್ಯ ವಿವಾಹಗಳನ್ನು ತಡೆಗಟ್ಟುವ ಬಗ್ಗೆ ಡಾ॥ ಶಿವರಾಜ್ ವಿ. ಪಾಟೀಲ್ ಭಾರತದ ಸರ್ವೋಚ್ಛ ನ್ಯಾಯಾಲಯದ ನಿವೃತ್ತ ನ್ಯಾಯಾದೀಶರ ವರದಿ

2) ದಿನಾಂಕ 14.07.2011 ರಂದು ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡಾವಳಿ

*****

ಸಾಮೂಹಿಕ ವಿವಾಹಗಳು ಇತ್ತೀಚಿನ ದಿನಗಳಲ್ಲಿ ಜನಪ್ರಿಯಗೊಳ್ಳುತ್ತಿದ್ದು, ಇದು ವಿವಾಹದ ಹೆಸರಿನಲ್ಲಿ ದುಂದುವೆಚ್ಚಗಳ ಮೇಲೆ ಕಡಿವಾಣ ಹಾಕುವುದರೊಂದಿಗೆ ಸರಳ ವಿವಾಹಗಳಿಗೆ ಪ್ರೋತ್ಸಾಹ ಮಾಡುತ್ತದೆ. ಈ ನಿಟ್ಟಿನಲ್ಲಿ ಸಾಮೂಹಿಕ ವಿವಾಹಗಳ ಕಾರ್ಯಕ್ರಮಗಳನ್ನು ಖಾಸಗಿ ವ್ಯಕ್ತಿಗಳು, ಸಂಘಟನೆಗಳು, ದೇವಸ್ಥಾನಗಳು, ಟ್ರಸ್ಟ್‌ಗಳು ಇತ್ಯಾದಿ ಸಂಘಸಂಸ್ಥೆಗಳು ಆಯೋಜಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಸಾಮೂಹಿಕ ವಿವಾಹಗಳನ್ನು ಸಮರ್ಪಕವಾಗಿ, ಸಾರ್ವಜನಿಕರಿಗೆ ಅನುಕೂಲವಾಗುವಂತೆ ಆಯೋಜಿಸುವ ಹಾಗೂ ಸಾಮೂಹಿಕ ವಿವಾಹಗಳಲ್ಲಿ ಬಾಲ್ಯ ವಿವಾಹದಂತಹ ಅನಿಷ್ಟ ಪದ್ಧತಿಗಳನ್ನು ತಡೆಗಟ್ಟುವ ದೃಷ್ಟಿಯಿಂದ ಈ ಕೆಳಕಂಡ ಮಾರ್ಗಸೂಚಿಗಳನ್ನು ಹೊರಡಿಸಲಾಗಿರುತ್ತದೆ.

<u>ಸಾಮೂಹಿಕ ವಿವಾಹಗಳ ಕಾರ್ಯಕ್ರಮಗಳನ್ನು ಆಯೋಜಿಸುವ ಕುರಿತು ಮಾರ್ಗಸೂಚಿಗಳು:</u>

**I. ಸಾಮೂಹಿಕ ವಿವಾಹಗಳ ಆಯೋಜಕರು ಕಡ್ಡಾಯವಾಗಿ ತಮ್ಮ ಸಂಸ್ಥೆಗಳನ್ನು ನೋಂದಣಿ ಮಾಡಿಸುವ ಬಗ್ಗೆ.**

1. ಸಾಮೂಹಿಕ ವಿವಾಹಗಳನ್ನು ಆಯೋಜಿಸುವ ಖಾಸಗಿ ಟ್ರಸ್ಟ್‌ಗಳು, ದೇವಸ್ಥಾನದ ಟ್ರಸ್ಟ್‌ಗಳು ಸಂಘಗಳು, ಸೊಸೈಟಿಗಳು ಮತ್ತು ಖಾಸಗಿ ವ್ಯಕ್ತಿಗಳು ಇತ್ಯಾದಿ ಜಿಲ್ಲಾ ನೋಂದಣಿ ಕಛೇರಿಯಲ್ಲಿ ಸಾಮೂಹಿಕ ವಿವಾಹಗಳ ಆಯೋಜಕರೆಂದು ಕಡ್ಡಾಯವಾಗಿ ನೋಂದಣಿ ಮಾಡತಕ್ಕದ್ದು.
2. ಒಂದು ಬಾರಿ ನೋಂದಾಯಿಸಿದ ನಂತರ, ಪ್ರತಿ ಐದು ವರ್ಷಕ್ಕೊಮ್ಮೆ ನೋಂದಣಿಯನ್ನು ನವೀಕರಿಸತಕ್ಕದ್ದು.
3. ಆಯೋಜಕರು ಜಿಲ್ಲಾ ನೋಂದಣಾಧಿಕಾರಿಗಳ ಬಳಿ ನೋಂದಾಯಿಸುವ ಸಂದರ್ಭದಲ್ಲಿ ಕೆಳಕಂಡ ದಾಸ್ತಾವೇಜುಗಳನ್ನು ಸಲ್ಲಿಸತಕ್ಕದ್ದು.

   i) ಆಯೋಜಕರ ಹೆಸರು, ವಿಳಾಸ ಹಾಗೂ ವಿಳಾಸದ ಪ್ರಮಾಣ ಪತ್ರ
   ii) ಟ್ರಸ್ಟ್ ಅಥವಾ ಸೊಸೈಟಿ ಆಗಿದ್ದಲ್ಲಿ ಅದರ ನೋಂದಣಿ ಪ್ರಮಾಣ ಪತ್ರ.
   iii) ಸಾಮೂಹಿಕ ವಿವಾಹ ಕಾರ್ಯಕ್ರಮದ ಸಂದರ್ಭದಲ್ಲಿ ಯಾವುದೇ ಬಾಲ್ಯ ವಿವಾಹಗಳು ನಡೆಯುವುದಿಲ್ಲ ಹಾಗೂ ನಡೆಯಲು ಅವಕಾಶಕೊಡುವುದಿಲ್ಲ ಎಂದು ಪ್ರಮಾಣ ಪತ್ರ.

4. ಸಾಮೂಹಿಕ ವಿವಾಹಗಳ ಆಯೋಜಕರು ನೋಂದಾಯಿಸದ ಪಕ್ಷದಲ್ಲಿ ಸಾಮೂಹಿಕ ವಿವಾಹಗಳನ್ನು ಸಂಘಟಿಸಬಾರದು.
5. ಸಾಮೂಹಿಕ ವಿವಾಹ ಕಾರ್ಯಕ್ರಮದ ನೋಂದಣಿ ಪ್ರಮಾಣ ಪತ್ರವನ್ನು ಸಾಮೂಹಿಕ ವಿವಾಹಗಳನ್ನು ಆಯೋಜಿಸಲು ಅನುಮತಿ ಪಡೆಯುವ ಸಂದರ್ಭದಲ್ಲಿ ಸಲ್ಲಿಸತಕ್ಕದ್ದು.
6. ಸಾಮೂಹಿಕ ವಿವಾಹ ಕಾರ್ಯಕ್ರಮಗಳಲ್ಲಿ ಬಾಲ್ಯ ವಿವಾಹಗಳು ನಡೆದ ಬಗ್ಗೆ ಮಾಹಿತಿ ದೊರತ ಪಕ್ಷದಲ್ಲಿ ನೋಂದಣಿ ಪ್ರಮಾಣ ಪತ್ರವನ್ನು ತಕ್ಷಣವೇ ರದ್ದುಗೊಳಿಸುವ ಅಧಿಕಾರ ನೋಂದಣಾಧಿಕಾರಿಗಳಿಗಿರುತ್ತದೆ.

II ಸಾಮೂಹಿಕ ವಿವಾಹಗಳನ್ನು ಆಯೋಜಿಸಲು ಸಂಬಂಧಪಟ್ಟ ಪ್ರಾಧಿಕಾರಿಯಿಂದ ಅನುಮತಿ ಪಡೆಯುವ ಬಗ್ಗೆ:

ಸಾಮೂಹಿಕ ವಿವಾಹಗಳನ್ನು ಆಯೋಜಕರು ಸಂಬಂಧಪಟ್ಟ ತಾಲ್ಲೂಕಿನ ತಹಸೀಲ್ದಾರರಿಗೆ ಸಾಮೂಹಿಕ ವಿವಾಹಗಳನ್ನು ನಡೆಸಲು ಅನುಮತಿ ಕೋರಿ ಅರ್ಜಿಯನ್ನು ಸಲ್ಲಿಸತಕ್ಕದ್ದು. ಅರ್ಜಿಯ ಜೊತೆ ಕೆಳಕಂಡ ದಾಸ್ತಾವೇಜುಗಳನ್ನು ಲಗತ್ತಿಸತಕ್ಕದ್ದು:

i. ಸಾಮೂಹಿಕ ವಿವಾಹಗಳಲ್ಲಿ ಭಾಗವಹಿಸುವ ವಧು ಮತ್ತು ವರನ ಪ್ರತ್ಯೇಕ ಭಾವಚಿತ್ರ ಲಗತ್ತಿಸತಕ್ಕದ್ದು
ii. ವಯಸ್ಸಿನ ದೃಢೀಕರಣ ಪತ್ರ – ಜನನ ಪ್ರಮಾಣ ಪತ್ರ ಅಥವಾ ಶಾಲಾ ಪ್ರಮಾಣ ಪತ್ರ ಅಥವ ಸಂಬಂಧ ಪಟ್ಟ ಸರ್ಕಾರಿ ವೈದ್ಯಕೀಯ ಪ್ರಾಧಿಕಾರಿಯಿಂದ ವಯಸ್ಸಿನ ಪ್ರಮಾಣ ಪತ್ರ ಪಡೆಯತಕ್ಕದ್ದು (ವಯಸ್ಸಿನ ದೃಢೀಕರಣ ಪತ್ರದ ಬಗ್ಗೆ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ)
iii. ವಾಸ ಸ್ಥಳ ಪ್ರಮಾಣ ಪತ್ರ – ಪಡಿತರ ಚೀಟಿ, ಚುನಾವಣಾ ಗುರುತಿನ ಪತ್ರ, ಪಾಸ್/ ಪೋರ್ಟ್ ಅಥವಾ ಡ್ರೈವಿಂಗ್ ಲೈಸನ್ಸ್
iv. ವಧು ಮತ್ತು ವರನ ಪೋಷಕ / ತಂದೆ /ತಾಯಿ ಯರಿಂದ ವಧು ಮತ್ತು ವರರಿಗೆ ವಿವಾಹಯೋಗ್ಯ ವಯಸ್ಸಾಗಿರುತ್ತದೆ ಎಂಬ ದೃಢೀಕರಣ ಪತ್ರ ಮತ್ತು ವಧು / ವರನ ಒಪ್ಪಿಗೆ.

III ಅರ್ಜಿಗಳನ್ನು ಸಂಬಂಧಪಟ್ಟ ತಾಲ್ಲೂಕಿನ ತಹಸೀಲ್ದಾರರಿಗೆ ಸಲ್ಲಿಸುವ ಕಾಲಮಿತಿ.

ಸಾಮೂಹಿಕ ವಿವಾಹಗಳ ಆಯೋಜಕರು, ಅರ್ಜಿಗಳನ್ನು ನಿಗದಿತ ಕಾಲಮಿತಿಯೊಳಗೆ ಸಂಬಂಧಪಟ್ಟ ತಾಲ್ಲೂಕಿನ ತಹಸೀಲ್ದಾರರಿಗೆ ಪರಿಶೀಲನೆಗಾಗಿ ಸಲ್ಲಿಸತಕ್ಕದ್ದು.

1. ಸಾಮೂಹಿಕ ವಿವಾಹಗಳಲ್ಲಿ ಭಾಗವಹಿಸುವ ಜೋಡಿಗಳ ಸಂಖ್ಯೆ 100 ಕ್ಕಿಂತ ಕಡಿಮೆ ಇದ್ದರೆ ವಿವಾಹ ದಿನಾಂಕಕ್ಕೆ 20 ದಿನಗಳ ಮುಂಚಿತವಾಗಿ ತಿಳಿಸಬೇಕು.
2. ಸಾಮೂಹಿಕ ವಿವಾಹಗಳಲ್ಲಿ ಭಾಗವಹಿಸುವ ಜೋಡಿಗಳ ಸಂಖ್ಯೆ 200 ಕ್ಕಿಂತ ಕಡಿಮೆ ಇದ್ದರೆ ವಿವಾಹ ದಿನಾಂಕಕ್ಕೆ 40 ದಿನಗಳ ಮುಂಚಿತವಾಗಿ ತಿಳಿಸಬೇಕು.
3. ಸಾಮೂಹಿಕ ವಿವಾಹಗಳಲ್ಲಿ ಭಾಗವಹಿಸುವ ಜೋಡಿಗಳ ಸಂಖ್ಯೆ 200ಕ್ಕೆ ಮೇಲ್ಪಟ್ಟಿದ್ದರೆ ವಿವಾಹ ದಿನಾಂಕಕ್ಕೆ 60 ದಿನಗಳ ಮುಂಚಿತವಾಗಿ ತಿಳಿಸಬೇಕು.
4. ಯಾವುದೇ ಕಾರಣಕ್ಕೆ ನಿಗದಿತ ಕಾಲ ಮಿತಿಯೊಳಗೆ ಸಲ್ಲಿಸದ ಅರ್ಜಿಗಳನ್ನು ಸ್ವೀಕರಿಸಬಾರದು.

IV. ಅರ್ಜಿಗಳನ್ನು ಪರಿಶೀಲಿಸುವ ಬಗ್ಗೆ : ತಾಲ್ಲೂಕಿನ ತಹಸೀಲ್ದಾರರು ಅರ್ಜಿಗಳನ್ನು ಹಾಗೂ ಸಂಬಂಧಪಟ್ಟ ದಾಸ್ತಾವೇಜುಗಳನ್ನು ಬಾಲ್ಯ ವಿವಾಹ ನಿಷೇಧ ಅಧಿಕಾರಿಗಳು / ನೌಕರರ ಸಹಾಯದೊಂದಿಗೆ ಪರಿಶೀಲಿಸತಕ್ಕದ್ದು.

V. ಸಾಮೂಹಿಕ ವಿವಾಹ ಕಾರ್ಯಕ್ರಮಕ್ಕೆ ನೀಡಿರುವ ಪತ್ರದೊಂದಿಗೆ ಪರಿಶೀಲಿಸಿದ ಅರ್ಜಿಗಳ ಪಟ್ಟಿ ಹಾಗೂ ವಿವಾಹ ಕಾರ್ಯಕ್ರಮದ ದಿನಾಂಕ, ಸ್ಥಳ ಮತ್ತು ಸದರಿ ಕಾರ್ಯಕ್ರಮದಲ್ಲಿ ವಿವಾಹವಾಗುವ ಜೋಡಿಗಳ ಸಂಖ್ಯೆ ಮತ್ತು ಅವರುಗಳ ವಿವರಗಳನ್ನು ಸಾಮೂಹಿಕ ವಿವಾಹ ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಲಭ್ಯವಿರುವಂತೆ ಸಂಬಂಧಪಟ್ಟ ಮಕ್ಕಳ ಕಲ್ಯಾಣ ಅಭಿವೃದ್ಧಿ ಅಧಿಕಾರಿಗಳು ನೋಡಿಕೊಳ್ಳತಕ್ಕದ್ದು.

VI. ಪರಿಶೀಲಿಸಿದ ಪಟ್ಟಿಯಲ್ಲಿ ಹೆಸರಿಲ್ಲದೇ ಇರುವಂತಹ ಯಾವುದೇ ಜೋಡಿಗಳ ವಿವಾಹವನ್ನು ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ನಡೆಸತಕ್ಕದ್ದಲ್ಲ.

VII. ಸಾಮೂಹಿಕ ವಿವಾಹ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ವಧುವಿನ ವಯಸ್ಸು 18 ವರ್ಷಕ್ಕಿಂತ ಕಡಿಮೆ ಹಾಗೂ ವರನ ವಯಸ್ಸು 21 ವರ್ಷ ವಯಸ್ಸಿಗಿಂತ ಕಡಿಮೆ ಇರತಕ್ಕದ್ದಲ್ಲ. ವಧು/ವರನ ನಿಗದಿತ ವಯಸ್ಸಿಗಿಂತ ಕಡಿಮೆ ಇದ್ದ ಪಕ್ಷದಲ್ಲಿ ಅಥವ ವದು / ವರ ಈಗಾಗಲೇ ಮದುವೆಯಾಗಿರುವರೆಂದು ಸಂಶಯಬಂದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸತಕ್ಕದ್ದು ಮತ್ತು ವಿಷಯವನ್ನು ಸಾಮೂಹಿಕ ವಿವಾಹ ಆಯೋಜಕರ ಗಮನಕ್ಕೆ ತರತಕ್ಕದ್ದು.

VIII. ಸಾರ್ವಜನಿಕ ವಿವಾಹ ಅಯೋಜಕರು ವಿವಾಹ ನಡೆಯುವ ಸ್ಥಳದಲ್ಲಿ ಕಡ್ಡಾಯವಾಗಿ ವಿವಾಹ ನಡೆಯುವ ಸ್ಥಳದಲ್ಲಿ ಬಾಲ್ಯ ವಿವಾಹ ನಿಷೇದಕ್ಕೊಳಪಟ್ಟಿದೆ ಹಾಗೂ ಬಾಲ್ಯ ವಿವಾಹವು ಶಿಕ್ಷಾರ್ಹವಾದ ಅಪರಾದವಾಗಿದೆ ಎಂಬ ಪ್ರಚಾರ ಫಲಕಗಳನ್ನು ಜಾಹಿರಾತು ಮಾಡತಕ್ಕದ್ದು.

IX. ಶಿಶು ಅಭಿವೃದ್ಧಿ ಅಧಿಕಾರಿಗಳು ಮತ್ತು ಸಂಬಂಧಪಟ್ಟ ಕಂದಾಯ ನಿರೀಕ್ಷಕರು ಕಡ್ಡಾಯವಾಗಿ ಸಾರ್ವಜನಿಕ ವಿವಾಹ ನಡೆಯುವ ಸ್ಥಳದಲ್ಲಿ ಹಾಜರಿರತಕ್ಕದ್ದು ಮತ್ತು ಬಾಲ್ಯ ವಿವಾಹಗಳು ಯಾವುದೇ ಕಾರಣಕ್ಕೆ ನಡೆಯದಂತೆ ನೋಡಿಕೊಳ್ಳತಕ್ಕದ್ದು.

X. ಸಾಮೂಹಿಕ ವಿವಾಹ ಕಾರ್ಯಕ್ರಮದ ವಿಡಿಯೋ ಚಿತ್ರೀಕರಣ ಹಾಗೂ ಫೋಟೋಗಳನ್ನು (ಸ್ಥಿರ ಚಿತ್ರಗಳನ್ನು) ಭಾವಚಿತ್ರಗಳನ್ನು ಆಯೋಜಕರು ಸಂಬಂಧಪಟ್ಟ ತಾಲ್ಲೂಕು ಶಿಶು ಅಭಿವೃದ್ಧಿ ಅಧಿಕಾರಿಗಳಿಗೆ ವಿವಾಹ ಕಾರ್ಯಕ್ರಮ ನಡೆದ ಒಂದು ವಾರದೊಳಗೆ ಸಲ್ಲಿಸತಕ್ಕದ್ದು.

XI. ಅರ್ಜಿಗಳನ್ನು ಪರಿಶೀಲಿಸುತ್ತಿರುವ / ಪರಿಶೀಲಿಸಿದ ಅಧಿಕಾರಿಗಳ / ಪ್ರಾಧಿಕಾರಿಗಳ ಮೇಲೆ ಯಾವುದೇ ರೀತಿಯ ಒತ್ತಡವನ್ನು ತಂದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲು ಅವಕಾಶವಿರುತ್ತದೆ.

XII. ವಧು / ವರನ ವಯಸ್ಸು ನಿಗದಿಪಡಿಸಿದ ಯೋಗ್ಯ ವಿವಾಹ ವಯಸ್ಸಿಗಿಂತ ಕಡಿಮೆ ಇದ್ದಲ್ಲಿ ಬಾಲ್ಯ ವಿವಾಹ ನಿಶೇಷ ಅಧಿಕಾರಿಗಳು ಯಾವುದೇ ಸಂದರ್ಭದಲ್ಲಿ ಸಾರ್ವಜನಿಕ ವಿವಾಹ ಆಯೋಜಕರ ಮೇಲೆ ಸಂಬಂಧಪಟ್ಟ ಆರಕ್ಷಕ ಠಾಣೆಯಲ್ಲಿ ಎಫ್.ಐ.ಆರ್ ದಾಖಲಿಸುವ ಅವಕಾಶವಿರುತ್ತದೆ.

XIII. ಸಾರ್ವಜನಿಕ ವಿವಾಹ ಕಾರ್ಯ ನಡೆದ ಪ್ರತಿಯೊಂದು ಜೋಡಿಯ ವಿವಾಯವನ್ನು ಕಡ್ಡಾಯವಾಗಿ ಕರ್ನಾಟಕ ವಿವಾಹ (ನೋಂದಣಿ ಮತ್ತು ಇತರ) ಅಧಿನಿಯಮ, 1976 ಮತ್ತು ನಿಯಮಾವಳಿಗಳು 2006 ರಂತೆ ನೋಂದಣಿ ಮಾಡತಕ್ಕದ್ದು. ಸುತ್ತೋಲೆ ಸಂಖ್ಯೆ ಆರ್‌ಡಿ 54 ಡಿಎಸ್‌ಪಿ 2011 ದಿನಾಂಕ 25.07.2011 ರಂತೆ ಸಂಬಂಧಪಟ್ಟ ಗ್ರಾಮ ಲೆಕ್ಕಾಧಿಕಾರಿಗಳು ವಿವಾಹ ನೋಂದಣಿ ಅಧಿಕಾರಿಗಳಾಗಿ ತಮ್ಮ ಕಾರ್ಯ ವ್ಯಾಪ್ತಿಗೆ ಬರುವ ಗ್ರಾಮ/ವಾರ್ಡ್‌ಗಳಲ್ಲಿ ವಿವಾಹ ನೋಂದಣಿ ಅಧಿಕಾರಿಯಾಗಿ ಕೆಲಸ ನಿರ್ವಹಿಸ ಬಹುದಾಗಿರುತ್ತದೆ. ಅದರಂತೆ, ವಿವಾಹ ನೋಂದಣಿ ಅಧಿಕಾರಿಗಳು ವಿವಾಹ ನಡೆಯುವ ಕಾರ್ಯ ಕ್ರಮ ಸ್ಥಳದಲ್ಲಿ ಹಾಜರಿದ್ದು ನೋಂದಣಿ ಮಾಡತಕ್ಕದ್ದು. ಕಾರಣಾಂತರಗಳಿಂದ ಕೆಲವು ವಿವಾಹಗಳನ್ನು ನೋಂದಣಿ ಮಡಲು ಸಾಧ್ಯವಾಗದಿದ್ದಲ್ಲಿ ಅಂತಹ ವಿವಾಹಗಳನ್ನು ವಿವಾಹ ನಡೆದ ಒಂದು ತಿಂಗಳೊಳಗಾಗಿ ನೋಂದಣಿ ಮಾಡತಕ್ಕದ್ದು. ಪೋಷಕರು / ಆಯೋಜಕರು ವಿವಾಹಗಳನ್ನು ನೋಂದಾಯಿಸಲು ಜವಾಬ್ದಾರರಾಗಿರುತ್ತಾರೆ.

XIV. ಶಿಕ್ಷಣ ಅಭಿವೃದ್ಧಿ / ಬಾಲ್ಯ ವಿವಾಹ ನಿಷೇದ ಅಧಿಕಾರಿಗಳು ಸಾಮೂಹಿಕ ವಿವಾಹಗಳು ನಡೆದ ಬಗ್ಗೆ ಪ್ರತಿ ತಿಂಗಳು ವರದಿಯನ್ನು ಸಂಬಂಧ ಪಟ್ಟ ಜಿಲ್ಲಾಧಿಕಾರಿಗಳು ಹಾಗೂ ಉಪ ವಿಭಾಗ ಅಧಿಕಾರಿಗಳು / ಉಪ ನಿರ್ದೇಶಕರು ಮಹಿಳಾ ಮಕ್ಕಳ ಕಲ್ಯಾಣ ಇಲಾಖೆ / ತಹಸೀಲ್ದಾರರಿಗೆ ಸಲ್ಲಿಸತಕ್ಕದ್ದು.

( ಕೆ. ಎಸ್. ಪ್ರಭಾಕರ್ )
ಸರ್ಕಾರದ ಕಾರ್ಯದರ್ಶಿಗಳು,
ಕಂದಾಯ ಇಲಾಖೆ.

ಪ್ರತಿಯನ್ನು:-

1) ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು, ಬೆಂಗಳೂರು
3) ಎಲ್ಲಾ ಪ್ರಾದೇಶಿಕ ಆಯುಕ್ತರು.
4) ಎಲ್ಲಾ ಜಿಲ್ಲಾಧಿಕಾರಿಗಳು.
5) ಎಲ್ಲಾ ಉಪವಿಭಾಗಾಧಿಕಾರಿಗಳು/ತಹಸೀಲ್ದಾರರುಗಳು/ಉಪತಹಸೀಲ್ದಾರರುಗಳಿಗೆ.
6) ಹೆಚ್ಚುವರಿ ಪ್ರತಿ ಮತ್ತು ರಕ್ಷಾ ಕಡತ.

## ಕರ್ನಾಟಕ ಸರ್ಕಾರ

ನಂ.ಗ್ರಾಅಪ/174/ಗ್ರಾಪಂಅ/2011

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 08-07-2011

## ಸುತ್ತೋಲೆ

ವಿಷಯ: ಬಾಲ್ಯ ವಿವಾಹವನ್ನು ತಡೆಗಟ್ಟುವ ಹಾಗೂ ಮಕ್ಕಳ ಹಕ್ಕನ್ನು ಪ್ರತಿಪಾದಿಸುವ ನಿಟ್ಟಿನಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು ಅನುಸರಿಸಬೇಕಾದ ವಿಧಿ ವಿಧಾನಗಳ ಮಾರ್ಗಸೂಚಿಗಳು.

ಉಲ್ಲೇಖ:
1. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 638 ಗ್ರಾಪಂಅ 2007, ದಿನಾಂಕ: 30-10-2007.
2. ರಾಜ್ಯ ಉಚ್ಚ ನ್ಯಾಯಾಲಯದ ನಿರ್ದೇಶನದನ್ವಯ ರಚಿತವಾದ ಅತ್ಯುನ್ನತ ಸಮಿತಿಯ ವರದಿ.
3. ಸರ್ಕಾರದ ಅಧಿಸೂಚನೆ ಸಂಖ್ಯೆ: ಡಬ್ಲ್ಯೂಸಿಡಿ 377 ಎಸ್‌ಡಬ್ಲ್ಯೂಡಬ್ಲ್ಯೂ 2004, ದಿನಾಂಕ: 6-2-2008.

---

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 3-ಎ, 58 ಮತ್ತು 61 (2) ಸಿ ರಡಿಯ ನಿರೂಪಣೆಯಂತೆ ಗ್ರಾಮೀಣ ಪ್ರದೇಶದ ಮಹಿಳಾ ಮತ್ತು ಮಕ್ಕಳ ಕಲ್ಯಾಣಗಳಿಗೆ ಸಂಬಂಧಿಸಿದ ಪ್ರಮುಖ ವಿಷಯಗಳನ್ನು ಚರ್ಚಿಸಿ ಅವರುಗಳ ಸಾಮಾಜಿಕ ಭದ್ರತೆಗಾಗಿ ಕಾರ್ಯಕ್ರಮ ರೂಪಿಸುವುದು ಪಂಚಾಯತ್ ರಾಜ್ ಸಂಸ್ಥೆಗಳ ಅದರಲ್ಲೂ ಕೆಳಸ್ತರದ ಹಂತವಾದ ಗ್ರಾಮ ಪಂಚಾಯಿತಿಯ ಆದ್ಯ ಕರ್ತವ್ಯವಾಗಿರುತ್ತದೆ.

ಮಕ್ಕಳ ಹಕ್ಕುಗಳನ್ನು ಪ್ರತಿಪಾದಿಸುವ ಹಾಗೂ ಅವರುಗಳ ಸಾಮಾಜಿಕ, ಭೌತಿಕ ಮತ್ತು ಬೌದ್ಧಿಕ ರಕ್ಷಣೆಗಾಗಿ ವಿವರವಾಗಿ ಚರ್ಚಿಸಿ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಲು ಮಕ್ಕಳ ವಿಶೇಷ ಗ್ರಾಮ ಸಭೆಗಳನ್ನು ಆಯೋಜಿಸುವಂತೆ ಉಲ್ಲೇಖ (1) ರಲ್ಲಿನ ಸುತ್ತೋಲೆಯಲ್ಲಿ ಮಾರ್ಗಸೂಚಿಗಳನ್ನು ಹೊರಡಿಸಲಾಗಿರುತ್ತದೆ.

ಬಾಲ್ಯ ವಿವಾಹವನ್ನು ತಡೆಗಟ್ಟಲು ರಾಜ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 11154/2006 ರಲ್ಲಿ ದಿನಾಂಕ: 10-11-2010 ರಂದು ನೀಡಿರುವ ನಿರ್ದೇಶನದನ್ವಯ ದಿನಾಂಕ: 21-12-2010 ರ ಸಂಖ್ಯೆ: 310/2010 ರಲ್ಲಿ ರಚಿತವಾಗಿದ್ದ ಕೋರ್ ಕಮಿಟಿಯು ಸರ್ಕಾರಕ್ಕೆ ಸಲ್ಲಿಸಿರುವ ಶಿಫಾರಸ್ಸಿನನ್ವಯ ರಾಜ್ಯ ಸರ್ಕಾರವು ಅನುಸರಣಾ ಕ್ರಮವನ್ನು ಕೈಗೊಳ್ಳಬೇಕಾಗಿರುತ್ತದೆ. ಈ ಸಂಬಂಧವಾಗಿ ಗ್ರಾಮೀಣ ಪ್ರದೇಶ ಜನತೆಗೆ ತಿಳುವಳಿಕೆಯನ್ನು ಮೂಡಿಸುವುದು ಗ್ರಾಮ ಪಂಚಾಯಿತಿಗಳ ಕರ್ತವ್ಯವಾಗಿರುತ್ತದೆ. ಗ್ರಾಮ ಪಂಚಾಯಿತಿಗಳು ವಾರ್ಡ್ ಸಭೆ/ಗ್ರಾಮ

137

ಸಭೆಗಳಲ್ಲಿ ಬಾಲ್ಯ ವಿವಾಹದಂತಹ ಅನಿಷ್ಟ ಸಾಮಾಜಿಕ ಪಿಡುಗಿನ ಬಗ್ಗೆ ಚರ್ಚಿಸಿ ಇಂತಹ ಅಮಾನವೀಯ ಪದ್ಧತಿಯನ್ನು ತಡೆಹಿಡಿಯಲು, ಖಂಡಿಸಲು ಹಾಗೂ ಅಂತಹ ಕೃತ್ಯಗಳು ಮನರಾವರ್ತನೆಯಾಗದಂತೆ ಜನ-ಸಾಮಾನ್ಯರಲ್ಲಿ ತಿಳುವಳಿಕೆ ಮೂಡಿಸಲು ಕ್ರಮ ವಹಿಸುವಂತೆ ಸೂಚಿಸಲಾಗಿದೆ.

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 61 (2) ರಡಿ ರಚಿತವಾಗಿರುವ ಸಾಮಾಜಿಕ ನ್ಯಾಯ ಸಮಿತಿಯು ಪ್ರತಿ ಸಭೆಯಲ್ಲಿಯೂ ಬಾಲ್ಯ ವಿವಾಹದ ಸಮಸ್ಯೆಯ ಬಗ್ಗೆ ಚರ್ಚಿಸಲು, ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸಮೀಕ್ಷೆ ನಡೆಸಿ ನಿಗಾ ವಹಿಸಲು ಸೂಚಿಸಿದೆ.

ಪಂಚಾಯತ್ ರಾಜ್ ಸಂಸ್ಥೆಯ ಸದಸ್ಯರುಗಳಿಗೆ ಬಾಲ್ಯ ವಿವಾಹದ ಸಮಸ್ಯೆಗಳ ಬಗ್ಗೆ ಅರಿವನ್ನು ಮೂಡಿಸಲು ಕ್ರಮ ವಹಿಸಬೇಕು. ಪಂಚಾಯತ್ ರಾಜ್ ಸಂಸ್ಥೆಗಳ ಅಧ್ಯಕ್ಷರುಗಳು, ಉಪಾಧ್ಯಕ್ಷರುಗಳು, ಸದಸ್ಯರುಗಳು ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳನ್ನೊಳಗೊಂಡಂತೆ ಕಾರ್ಯನಿರತ ಅಧಿಕಾರಿಗಳಿಗೆ ತರಬೇತಿ ನೀಡುವ ಕಾರ್ಯಕ್ರಮಗಳಲ್ಲಿ ಬಾಲ್ಯ ವಿವಾಹದ ಪಿಡುಗು ಹಾಗೂ ಮಕ್ಕಳ ಗ್ರಾಮ ಸಭೆಯ ಮಹತ್ವದ ಬಗ್ಗೆ ಸೂಕ್ತ ತರಬೇತಿಯನ್ನು ನೀಡುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಗೆ ಸೂಚಿಸಿದೆ.

ಬಾಲ್ಯ ವಿವಾಹ ಪದ್ಧತಿಯ ಪಿಡುಗನ್ನು ನಿವಾರಿಸುವ ಬಗ್ಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಹೊರಡಿಸಿರುವ ಉಲ್ಲೇಖ (3) ರಲ್ಲಿನ ಅಧಿಸೂಚನೆಯನ್ವಯ ಗ್ರಾಮ ಪಂಚಾಯಿತಿಗಳು ಸೂಕ್ತ ಕ್ರಮ ವಹಿಸಬೇಕು. ಗ್ರಾಮೀಣ ಪ್ರದೇಶದ ಶಾಲೆಗಳಲ್ಲಿ ಪ್ರತ್ಯೇಕ ಶೌಚಾಲಯವನ್ನು ನಿರ್ಮಿಸಬೇಕು. ಹಾಗೂ ಇದನ್ನು ಖಚಿತಪಡಿಸಿಕೊಳ್ಳಬೇಕು.

2012 ನೇ ನವೆಂಬರ್ ಮಾಹೆಯಿಂದ ಸರ್ಕಾರದ ವತಿಯಿಂದ ಯಾವುದೇ ಸವಲತ್ತುಗಳನ್ನು ಪಡೆಯಲು ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಅಂತಹ ವ್ಯಕ್ತಿಗಳಿಂದ ಈ ಕೆಳಕಂಡ ಪ್ರತಿಜ್ಞಾ ವಿಧಿಯನ್ನು ಪಡೆಯಬೇಕು.

**" ಬಾಲ್ಯ ವಿವಾಹವನ್ನು ನಾನು ನೆರವೇರಿಸುವುದಿಲ್ಲ." ಅಂತಹ ಕಾರ್ಯಕ್ರಮಗಳಲ್ಲಿ ಭಾಗಿಯಾಗುವುದಿಲ್ಲ. ಮತ್ತು ಇಂತಹ ಸಂಭವನೀಯ ಪ್ರಕರಣಗಳನ್ನು ಸರ್ಕಾರದ ಗಮನಕ್ಕೆ ತರುತ್ತೇನೆ. ತಪ್ಪಿದಲ್ಲಿ, ನನಗೆ ಒದಗಿಸಿರುವ ಫಲಾನುಭವವನ್ನು ಹಿಂಪಡೆದುಕೊಳ್ಳಬಹುದು."**

ಪ್ರತಿ ಗ್ರಾಮ ಪಂಚಾಯಿತಿಯ ಹಂತದಲ್ಲಿ ಇಂತಹ ಪ್ರಕರಣಗಳು ಸಂಭವಿಸಬಹುದಾದ ಕುಟುಂಬಗಳ ಬಗ್ಗೆ ಸಮೀಕ್ಷೆ ನಡೆಸಿ ಅವರುಗಳಿಗೆ ತಿಳುವಳಿಕೆ ಮೂಡಿಸುವುದು ಹಾಗೂ ಅಗತ್ಯ



138

ನೆರವನ್ನು ನೀಡುವಂತೆ ಸೂಚಿಸಿದೆ. ಈ ಸಂಬಂಧವಾಗಿ ಅಂಕಿ ಅಂಶಗಳ ಪ್ರದೇಶವಾರು ವಿವರಗಳ ದಾಖಲಾತಿಯನ್ನು ಗ್ರಾಮ ಪಂಚಾಯಿತಿಯಲ್ಲಿ ನಿರ್ವಹಿಸಬೇಕು. 0-18 ವಯೋಮಾನದ ಮಕ್ಕಳ ವಿವರಗಳನ್ನು ಗ್ರಾಮ ಪಂಚಾಯಿತಿಗಳಲ್ಲಿ ನಿರ್ವಹಿಸಲು ಅನುವಾಗುವಂತೆ MIS ತಂತ್ರಾಂಶ ರೂಪಿಸಬೇಕು.

ಗ್ರಾಮ ಪಂಚಾಯಿತಿಗಳ ಆದ್ಯ ಕರ್ತವ್ಯಗಳಲ್ಲಿ ಸೇರ್ಪಡೆಗೊಳಿಸಿರುವ ಮೇಲಿನ ಅಂಶಗಳ ಬಗ್ಗೆ ವಿಚಕ್ಷಣೆ ವಹಿಸದ, ಜವಾಬ್ದಾರಿಯನ್ನು ನಿರ್ವಹಿಸಿದ ಹಾಗೂ ಈ ಸಂಬಂಧವಾಗಿ ಉದಾಸೀನ ಮನೋಭಾವ ಪ್ರದರ್ಶಿಸುವ ಪಂಚಾಯತ್ ರಾಜ್ ಸಂಸ್ಥೆಗಳ ಬಗ್ಗೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 268 ರಡಿ ಕ್ರಮ ವಹಿಸುವಂತೆ ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳ ಅಧಿಕಾರಿಗಳು ಅದರಲ್ಲೂ ವಿಶೇಷವಾಗಿ ಗ್ರಾಮ ಪಂಚಾಯಿತಿ ಹಂತದ ಅಧಿಕಾರಿ/ನೌಕರರುಗಳ ವಿರುದ್ಧ ಕಠಿಣ ಕ್ರಮ ಅಂದರೆ ಕಾರ್ಯನಿರ್ವಹಣಾ ವರದಿಯಲ್ಲಿ ಆಕ್ಷೇಪಣಾ ಅಭಿಪ್ರಾಯವನ್ನು ನಮೂದಿಸಬೇಕು. ಹಾಗೂ ಅಂತಹವರ ವಿರುದ್ಧ ಕಠಿಣ ಶಿಕ್ಷೆಯನ್ನು ನೀಡಲು ಕ್ರಮ ವಹಿಸಬೇಕು. /-

(ಡಾ: ಅಮಿತಾ ಪ್ರಸಾದ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ:

೧) ಎಲ್ಲಾ ಜಿಲ್ಲಾಧಿಕಾರಿಗಳು,
೨) ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್‌ಗಳು,
೩) * ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್‌ಗಳು.
೪) ಸಂಪಾದಕರು, ಕರ್ನಾಟಕ ವಿಕಾಸ ಪತ್ರಿಕೆ, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ.
೫) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

* ಈ ಸುತ್ತೋಲೆಯ ಪ್ರತಿಯನ್ನು ತಮ್ಮ ವ್ಯಾಪ್ತಿಯ ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಕಳುಹಿಸಿ ಸುತ್ತೋಲೆಯಂತೆ ಕ್ರಮ ವಹಿಸುವಂತೆ ನಿರ್ದೇಶನ ನೀಡಲು ಸೂಚಿಸಿದೆ.

ಪ್ರತಿ:

ಸರ್ಕಾರದ ಅಧೀನ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.

ಡಾ॥ ಬಿ.ಬಸವರಾಜು ಭಾ.ಆ.ಸೇ.,
ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪ್ರ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ.

ಫ್ಯಾಕ್ಸ್ ಸಂಖ್ಯೆ: 080-22251011
ಕಛೇರಿ ದೂರವಾಣಿ: 080-22353991
ಕರ್ನಾಟಕ ಸರ್ಕಾರದ ಸಚಿವಾಲಯ
3ನೇ ಗೇಟ್, ಮೊದಲನೇ ಮಹಡಿ
ಎಂ.ಎಸ್. ಬಿಲ್ಡಿಂಗ್, ಬೆಂಗಳೂರು - 560 001
ಇಮೇಲ್: prlsecy-wc@karnataka.gov.in

ಅ.ಸ.ಸಂಖ್ಯೆ:ಐಸಿಪಿಎಸ್/ಚೈಲ್ಡ್-50/2015-16

ದಿನಾಂಕ: 19-07-2017

ಮಾನ್ಯರೇ,

ವಿಷಯ: ಮಕ್ಕಳ ಸಹಾಯವಾಣಿಯ ಕುರಿತು ಗೋಡೆ ಬರಹದ ಮುಖಾಂತರ ವ್ಯಾಪಕ ಪ್ರಚಾರ ನೀಡುವ ಬಗ್ಗೆ.

ಉಲ್ಲೇಖ: ದಿನಾಂಕ:13-02-2017 ರಂದು ನಡೆದ ರಾಜ್ಯ ಮಟ್ಟದ ಚೈಲ್ಡ್ ಲೈನ್ ಸಲಹಾ ಮಂಡಳಿ ಸಭೆಯ ಸಭಾ ನಡವಳಿಗಳಂತೆ.

* * * * * *

ಮಕ್ಕಳ ಸಹಾಯವಾಣಿಯು ಕಳೆದು ಹೋದ ಮಕ್ಕಳ, ಮಾನಸಿಕ ಹಾಗೂ ದೈಹಿಕ ಕಿರುಕುಳಕ್ಕೆ ಒಳಗಾದ ಮಕ್ಕಳು, ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಮಕ್ಕಳು ಹಾಗೂ ಆಶ್ರಯ ಕೋರಿ ಬರುವ ಮಕ್ಕಳಿಗೆ ಸಂಸ್ಥೆಯು ಕಾರ್ಯ ನಿರ್ವಹಿಸುತ್ತಾರೆ. ಈ ಸಂಸ್ಥೆಯ ಸಹಾಯ ಪಡೆಯಬೇಕಿದ್ದಲ್ಲಿ ಅಥವಾ ಸಾರ್ವಜನಿಕರು ಈ ಸೇವೆಯನ್ನು ಬಳಸಿಕೊಳ್ಳಬೇಕಾದಲ್ಲಿ ಸಹಾಯವಾಣಿ ಕುರಿತಾದ ಮಾಹಿತಿ ಕುರಿತು ಸಾರ್ವಜನಿಕರಲ್ಲಿ ಹೆಚ್ಚಿನ ಅರಿವು ಮೂಡಿಸುವ ಅಗತ್ಯತೆ ಇರುತ್ತದೆ.

ಇದಕ್ಕೆ ಸಂಬಂಧಪಟ್ಟಂತೆ ಜಿಲ್ಲಾ ಪಂಚಾಯಿತಿಯಿಂದ ಅನುಮೋದನೆ ನೀಡಿ ಕೈಗೆತ್ತಿಕೊಳ್ಳುವ ಎಲ್ಲಾ ಸರ್ಕಾರಿ ಕಟ್ಟಡಗಳು, ಹೊರ ಭಾಗದಲ್ಲಿ ಅಂಗನವಾಡಿ ಕೇಂದ್ರಗಳು, ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ಜಿಲ್ಲಾ ಆರೋಗ್ಯ ಕೇಂದ್ರಗಳಲ್ಲಿ, ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಯ ಗೋಡೆಗಳ ಮೇಲೆ ಹಾಗೂ ಇನ್ನಿತರ ಸರ್ಕಾರಿ ಕಟ್ಟಡಗಳ ಗೋಡೆಗಳ ಮೇಲೆ ಬರಹಗಳನ್ನು ಬರೆಸುವ ಮುಖಾಂತರ ವ್ಯಾಪಕ ಪ್ರಚಾರ ನೀಡಲು ತಮ್ಮ ಹಂತದಲ್ಲಿ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಕೋರಿದೆ.

ಆದರಗಳೊಂದಿಗೆ,

ತಮ್ಮ ವಿಶ್ವಾಸಿ,

Basavaraju 20/7/17

(ಡಾ॥ ಬಿ. ಬಸವರಾಜು)

ಎಲ್ಲಾ ಜಿಲ್ಲೆಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ
ಜಿಲ್ಲಾ ಪಂಚಾಯಿತಿ,

ಪ್ರತಿಯನ್ನು:

1. Head, South Regional Resource Center Child Line India Foundation, T Nagar, Chennai-600017 ಮಾಹಿತಿಗಾಗಿ ಸಲ್ಲಿಸಿದೆ.
2. ಎಲ್ಲಾ ಜಿಲ್ಲೆಯ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಇವರ ಮಾಹಿತಿಗಾಗಿ ಸಲ್ಲಿಸಿದೆ.

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಸಮಗ್ರ ಮಕ್ಕಳ ರಕ್ಷಣಾ ಯೋಜನೆ ಅಡಿ ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಮಟ್ಟದಲ್ಲಿ ಮಕ್ಕಳ ರಕ್ಷಣಾ ಸಮಿತಿಗಳನ್ನು ರಚಿಸುವ ಬಗ್ಗೆ.

**ಓದಲಾಗಿದೆ:-**

1) ಸರ್ಕಾರಿ ಆದೇಶ ಸಂಖ್ಯೆ: ಮಮಇ 71 ಮಭಾಬ 2009, ದಿನಾಂಕ: 15.06.2010.
2) ಸರ್ಕಾರಿ ಆದೇಶ ಸಂಖ್ಯೆ: ಮಮಇ 79 ಮಭಾಬ 2011, ದಿನಾಂಕ: 23.09.2011.
3) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅನಧಿಕೃತ ಟಿಪ್ಪಣಿ ಸಂ:ಆಕುಕ 30 ಎಫ್‌ಪಿಇ 2014 ದಿನಾಂಕ:29.01.2014
4) ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ, ಬೆಂಗಳೂರು ಇವರ ಪತ್ರ ಸಂಖ್ಯೆ:ಮ.ಮ.ಅ.ಇ.:ಕೆ.ಎಸ್.ಐ.ಸಿ.ಪಿ.ಎಸ್:ಸಿಪಿಸಿ:01:2012-13, ದಿನಾಂಕ:29.06.2013.

......

**ಪ್ರಸ್ತಾವನೆ:-**

ಬಾಲನ್ಯಾಯ ಕಾಯ್ದೆ, ಸಮಗ್ರ ಬೀದಿ ಮಕ್ಕಳ ಕಾರ್ಯಕ್ರಮ, ದತ್ತು ಕಾರ್ಯಕ್ರಮ ಮತ್ತು ಮಕ್ಕಳ ಸಹಾಯವಾಣಿ ಇತ್ಯಾದಿ ಯೋಜನೆಗಳನ್ನು ಒಂದುಗೂಡಿಸಿ ಕೇಂದ್ರ ಸರ್ಕಾರವು ಹೊರಡಿಸಿರುವ ಮಾರ್ಗಸೂಚಿಗಳನ್ವಯ ಸಮಗ್ರ ಮಕ್ಕಳ ಸಂರಕ್ಷಣಾ ಯೋಜನೆಯನ್ನು ದಿನಾಂಕ: 22.03.2010 ರಂದು ಕೇಂದ್ರ ಸರ್ಕಾರದೊಡನೆ ಮಾಡಿಕೊಂಡಿರುವ ಒಪ್ಪಂದದನ್ವಯ ಕರ್ನಾಟಕ ರಾಜ್ಯದಲ್ಲಿ ಅನುಷ್ಠಾನಗೊಳಿಸಲು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆದೇಶದಲ್ಲಿ ಮಂಜೂರಾತಿ ನೀಡಲಾಗಿದೆ.

ಕೇಂದ್ರ ಪುರಸ್ಕೃತ ಸಮಗ್ರ ಮಕ್ಕಳ ರಕ್ಷಣಾ ಯೋಜನೆಯನ್ನು (ಐ.ಸಿ.ಪಿ.ಎಸ್) ಜಿಲ್ಲಾ ಮಟ್ಟದಲ್ಲಿ ಅನುಷ್ಠಾನಗೊಳಿಸಲು ಐ.ಸಿ.ಪಿ.ಎಸ್. ಮಾರ್ಗಸೂಚಿಗಳನ್ವಯ ಕಾರ್ಯನಿರ್ವಹಿಸಲು ಪ್ರತಿ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಅಧಿಕಾರಿ/ಅಧಿಕಾರೇತರ ಸದಸ್ಯರನ್ನೊಳಗೊಂಡಂತೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳನ್ನು ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಆದೇಶದಲ್ಲಿ ರಚಿಸಲಾಗಿದೆ.

ಸಮಗ್ರ ಮಕ್ಕಳ ರಕ್ಷಣಾ ಯೋಜನೆಯ ಮಾರ್ಗಸೂಚಿಗಳನ್ವಯ ಗ್ರಾಮಮಟ್ಟದ ಮಕ್ಕಳ ರಕ್ಷಣಾ ಸಮಿತಿಯ ಕಾರ್ಯವನ್ನು ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿ / ಆರೋಗ್ಯ ಯೋಜನೆ ಮತ್ತು ಮಾನಿಟರಿಂಗ್ ಸಮಿತಿಗೆ ವಹಿಸಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಅನಧಿಕೃತ ಟಿಪ್ಪಣಿಯಲ್ಲಿ ಸಹಮತಿಸಿದೆ.

ಗ್ರಾಮ ಮಕ್ಕಳ ರಕ್ಷಣಾ ಸಮಿತಿಯ ಕಾರ್ಯವನ್ನು ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿ / ಆರೋಗ್ಯ ಯೋಜನೆ ಮತ್ತು ಮಾನಿಟರಿಂಗ್ ಸಮಿತಿಗೆ ವಹಿಸಲು, ಈಗಾಗಲೇ ರಚಿಸಲಾಗಿರುವ ಜಿಲ್ಲಾ ಮಕ್ಕಳ ರಕ್ಷಣಾ ಘಟಕವೇ ಜಿಲ್ಲಾ ಮಕ್ಕಳ ಸಮಿತಿಯಾಗಿ ಕಾರ್ಯನಿರ್ವಹಿಸಲು ಮತ್ತು ಸಮಗ್ರ ಮಕ್ಕಳ ರಕ್ಷಣಾ ಯೋಜನೆಯ ಮಾರ್ಗಸೂಚಿಗಳಲ್ಲಿ ತಿಳಿಸಿರುವಂತೆ ಜಿಲ್ಲಾ ಮಟ್ಟದ ಮಕ್ಕಳ ರಕ್ಷಣಾ ಘಟಕದ ಸಮಿತಿಯಲ್ಲಿರುವ ಸದಸ್ಯರ ಹುದ್ದೆಗಳ ಸಮಾನಾಂತರ ತಾಲ್ಲೂಕು ಅಧಿಕಾರಿಗಳನ್ನು ನೇಮಕ ಮಾಡಿ ಈ ಕೆಳಕಂಡ ತಾಲ್ಲೂಕು ಮಟ್ಟದ ಸಮಿತಿಯನ್ನು ರಚಿಸಲು

ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ ಇವರು ಮೇಲ್ಕಂಡ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಪತ್ರದಲ್ಲಿ ಸರ್ಕಾರವನ್ನು ಕೋರಿರುತ್ತಾರೆ.

| ಕ್ರ.ಸಂ | ಹುದ್ದೆ | ಪದನಾಮ |
|---|---|---|
| 1. | ತಹಶೀಲ್ದಾರ ಮತ್ತು ತಾಲ್ಲೂಕು ದಂಡಾಧಿಕಾರಿಗಳು | ಅಧ್ಯಕ್ಷರು |
| 2. | ಕಾರ್ಯನಿರ್ವಾಹಣಾಧಿಕಾರಿಗಳು, ತಾಲ್ಲೂಕು ಪಂಚಾಯಿತಿ | ಉಪಾಧ್ಯಕ್ಷರು |
| 3. | ವೃತ್ತ ಪೊಲೀಸ್ ನಿರೀಕ್ಷಕರು, ಪೊಲೀಸ್ ಇಲಾಖೆ | ಸದಸ್ಯರು |
| 4. | ತಾಲ್ಲೂಕು ಶಿಕ್ಷಣಾಧಿಕಾರಿ, ಶಿಕ್ಷಣ ಇಲಾಖೆ | ಸದಸ್ಯರು |
| 5. | ತಾಲ್ಲೂಕು ವೈದ್ಯಾಧಿಕಾರಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | ಸದಸ್ಯರು |
| 6. | ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿ, ಸಮಾಜ ಕಲ್ಯಾಣ ಇಲಾಖೆ | ಸದಸ್ಯರು |
| 7. | ತಾಲ್ಲೂಕು ಕಾರ್ಮಿಕ ಅಧಿಕಾರಿ, ಕಾರ್ಮಿಕ ಇಲಾಖೆ | ಸದಸ್ಯರು |
| 8. | ತಾಲ್ಲೂಕು ಪ್ರತಿನಿಧಿ | ಸದಸ್ಯರು |
| 9. | ತಾಲ್ಲೂಕು ಪಂಚಾಯಿತಿಯ ಒಬ್ಬ ಮಹಿಳಾ ಸದಸ್ಯರು | ಸದಸ್ಯರು |
| 10. | ಮುನ್ಸಿಪಾಲಿಟಿ / ಪಟ್ಟಣ ಪಂಚಾಯಿತಿಯ ಒಬ್ಬ ಮಹಿಳಾ ಸದಸ್ಯರು | ಸದಸ್ಯರು |
| 11. | ತಾಲ್ಲೂಕು ಮಟ್ಟದ ಮಕ್ಕಳ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಯ ಪ್ರತಿನಿಧಿ (ಜಿಲ್ಲಾಧಿಕಾರಿಗಳು ನಾಮನಿರ್ದೇಶನ ಮಾಡುವುದು) | ಸದಸ್ಯರು |
| 12. | ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಒಬ್ಬ ಸದಸ್ಯರು | ಸದಸ್ಯರು |
| 13. | ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | ಸದಸ್ಯ ಕಾರ್ಯದರ್ಶಿ |

**ಆದೇಶ ಸಂಖ್ಯೆ:ಮಮಇ 274 ಮಭಾಬ 2013 ಬೆಂಗಳೂರು, ದಿನಾಂಕ:28.07.2014.**

ಮೇಲಿನ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಸಮಗ್ರ ಮಕ್ಕಳ ರಕ್ಷಣಾ ಯೋಜನೆಯ ಮಾರ್ಗಸೂಚಿಗಳಲ್ಲಿ ತಿಳಿಸಿರುವಂತೆ, ಈಗಾಗಲೇ ರಚಿಸಲಾಗಿರುವ ಜಿಲ್ಲಾ ಮಕ್ಕಳ ರಕ್ಷಣಾ ಘಟಕವೇ ಜಿಲ್ಲಾ ಮಕ್ಕಳ ರಕ್ಷಣಾ ಸಮಿತಿಯಾಗಿ ಕಾರ್ಯನಿರ್ವಹಿಸತಕ್ಕದ್ದು.

ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿ /ಆರೋಗ್ಯ ಯೋಜನೆ ಮತ್ತು ಮಾನಿಟರಿಂಗ್ ಸಮಿತಿಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ರಚಿಸಲಾಗಿದ್ದು, ಸದರಿ ಸಮಿತಿಯು ಗ್ರಾಮ ಮಟ್ಟದ ಮಕ್ಕಳ ರಕ್ಷಣಾ ಸಮಿತಿಯಾಗಿಯೂ ಸಹ ಕಾರ್ಯನಿರ್ವಹಿಸತಕ್ಕದ್ದು.

ಈ ಕೆಳಕಂಡಂತೆ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರನ್ನೊಳಗೊಂಡಂತೆ ತಾಲ್ಲೂಕು ಮಕ್ಕಳ ರಕ್ಷಣಾ ಸಮಿತಿಯನ್ನು ರಚಿಸಿ ಆದೇಶಿಸಲಾಗಿದೆ.

| ಕ್ರಸಂ | ಹುದ್ದೆ | ಪದನಾಮ |
|---|---|---|
| 1. | ತಹಶೀಲ್ದಾರ ಮತ್ತು ತಾಲ್ಲೂಕು ದಂಡಾಧಿಕಾರಿಗಳು | ಅಧ್ಯಕ್ಷರು |
| 2. | ಕಾರ್ಯನಿರ್ವಾಹಣಾಧಿಕಾರಿಗಳು, ತಾಲ್ಲೂಕು ಪಂಚಾಯಿತಿ | ಉಪಾಧ್ಯಕ್ಷರು |
| 3. | ವೃತ್ತ ಪೊಲೀಸ್ ನಿರೀಕ್ಷಕರು, ಪೊಲೀಸ್ ಇಲಾಖೆ | ಸದಸ್ಯರು |
| 4. | ತಾಲ್ಲೂಕು ಶಿಕ್ಷಣಾಧಿಕಾರಿ, ಶಿಕ್ಷಣ ಇಲಾಖೆ | ಸದಸ್ಯರು |
| 5. | ತಾಲ್ಲೂಕು ವೈದ್ಯಾಧಿಕಾರಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | ಸದಸ್ಯರು |
| 6. | ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿ, ಸಮಾಜ ಕಲ್ಯಾಣ ಇಲಾಖೆ | ಸದಸ್ಯರು |
| 7. | ತಾಲ್ಲೂಕು ಕಾರ್ಮಿಕ ಅಧಿಕಾರಿ, ಕಾರ್ಮಿಕ ಇಲಾಖೆ | ಸದಸ್ಯರು |
| 8. | ತಾಲ್ಲೂಕು ಪ್ರತಿನಿಧಿ | ಸದಸ್ಯರು |
| 9. | ತಾಲ್ಲೂಕು ಪಂಚಾಯಿತಿಯ ಒಬ್ಬ ಮಹಿಳಾ ಸದಸ್ಯರು | ಸದಸ್ಯರು |
| 10. | ಮುನ್ಸಿಪಾಲಿಟಿ / ಪಟ್ಟಣ ಪಂಚಾಯಿತಿಯ ಒಬ್ಬ ಮಹಿಳಾ ಸದಸ್ಯರು | ಸದಸ್ಯರು |
| 11. | ತಾಲ್ಲೂಕು ಮಟ್ಟದ ಮಕ್ಕಳ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಯ ಪ್ರತಿನಿಧಿ (ಜಿಲ್ಲಾಧಿಕಾರಿಗಳು ನಾಮನಿರ್ದೇಶನ ಮಾಡುವುದು) | ಸದಸ್ಯರು ......... |
| 12. | ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಒಬ್ಬ ಸದಸ್ಯರು | ಸದಸ್ಯರು |
| 13. | ಶಿಶು ಅಭಿವೃದ್ದಿ ಯೋಜನಾಧಿಕಾರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | ಸದಸ್ಯ ಕಾರ್ಯದರ್ಶಿ |

ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಮಟ್ಟದ ಮಕ್ಕಳ ರಕ್ಷಣಾ ಸಮಿತಿಗಳು ಕೇಂದ್ರ ಸರ್ಕಾರದ ಸಮಗ್ರ ಮಕ್ಕಳ ರಕ್ಷಣಾ ಯೋಜನೆಯ ಮಾರ್ಗಸೂಚಿಗಳನ್ವಯ ಕಾರ್ಯನಿರ್ವಹಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

T. Krishnaiah
(ಟಿ.ಕೃಷ್ಣಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ-1(ಪ್ರ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ
ದೂರವಾಣಿ ಸಂಖ್ಯೆ:22032152

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವಂತೆ ಹಾಗೂ 300 ಪ್ರತಿಗಳನ್ನು ಒದಗಿಸುವಂತೆ ಕೋರಿದೆ.

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಎ & ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5329, ಬೆಂಗಳೂರು-560 001.

2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು.
4. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
5. ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ, ಬೆಂಗಳೂರು.
6. ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳ ಅಧ್ಯಕ್ಷರು/ಉಪಾಧ್ಯಕ್ಷರು/ಸದಸ್ಯ ಕಾರ್ಯದರ್ಶಿ/ಎಲ್ಲಾ ಸದಸ್ಯರು.
7. ಸಂಬಂಧಪಟ್ಟ ತಾಲ್ಲೂಕು ಮಟ್ಟದ ಮಕ್ಕಳ ರಕ್ಷಣಾ ಸಮಿತಿಯ ಅಧ್ಯಕ್ಷರು, ಉಪಾಧ್ಯಕ್ಷರು, ಮತ್ತು ಸದಸ್ಯ ಕಾರ್ಯದರ್ಶಿ
8. ಸಂಬಂಧಪಟ್ಟ ಗ್ರಾಮ, ಆರೋಗ್ಯ ಮತ್ತು ನೈರ್ಮಲ್ಯ ಸಮಿತಿ/ ಆರೋಗ್ಯ ಯೋಜನೆ ಮತ್ತು ಮಾನಿಟರಿಂಗ್ ಸಮಿತಿಯ ಅಧ್ಯಕ್ಷರು, ಸದಸ್ಯರು ಮತ್ತು ಕಾರ್ಯದರ್ಶಿ
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು

(ಕ್ರಮ ಸಂ:6, 7, ಮತ್ತು 8 ಅನ್ನು ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ ಇವರ ಮುಖಾಂತರ ಹೊರಡಿಸುವುದು)

**ಪ್ರತಿಯನ್ನು ಮಾಹಿತಿಗಾಗಿ:**

1. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಆಪ್ತಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತಕಾರ್ಯದರ್ಶಿ.

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಣಿಕೆ ತಡೆಗಟ್ಟುವಿಕೆ, ಬಾಲ್ಯ ವಿವಾಹ ನಿಷೇದ ಹಾಗೂ ಸಮಗ್ರ ಮಕ್ಕಳ ರಕ್ಷಣೆಗಾಗಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ರಚಿಸಲಾಗಿರುವ ಸಮಿತಿಗಳನ್ನು ವಿಲೀನಗೊಳಿಸಿ ಪುನರ್ ರಚಿಸುವ ಬಗ್ಗೆ.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ : ಮಮಇ 128 ಮಭಾಬ 2012, ದಿನಾಂಕ : 04.06.2013
2. ಸರ್ಕಾರದ ಆದೇಶ ಸಂಖ್ಯೆ : ಮಮಇ 105 ಮಮಅ 2013 ದಿನಾಂಕ:22.01.2014
3. ಸರ್ಕಾರದ ಆದೇಶ ಸಂಖ್ಯೆ : ಮಮಇ 201 ಮಭಾಬ 2013, ದಿನಾಂಕ : 18.09.2013
4. ಸರ್ಕಾರದ ಆದೇಶ ಸಂಖ್ಯೆ : ಮಮಇ 100 ಮಭಾಬ 2015, ದಿನಾಂಕ : 24.05.2016
5. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಪ್ರಸ್ತಾವನೆ ಸಂಖ್ಯೆ:ಮಮಅಇ ಮಕ 55 2017-18, ದಿನಾಂಕ: 05.07.2019

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ(1)ರ ಆದೇಶದಲ್ಲಿ, ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಣಿಕೆ ತಡೆಗಟ್ಟಲು ಮತ್ತು ಸಾಗಾಣಿಕೆಗೊಳಗಾದ ಮಹಿಳೆಯರ ರಕ್ಷಣೆ ಹಾಗೂ ಪುನರ್ವಸತಿ ಕಲ್ಪಿಸುವ ಸಲುವಾಗಿ ಜಿಲ್ಲೆ, ತಾಲ್ಲೂಕು ಹಾಗೂ ಗ್ರಾಮ ಮಟ್ಟದಲ್ಲಿ ದಿನಾಂಕ:28.06.2007ರಲ್ಲಿ ರಚಿಸಲಾಗಿದ್ದ ಸಮಿತಿಯನ್ನು ಪುನರ್ ರಚಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(2)ರ ಆದೇಶದಲ್ಲಿ ಬಾಲ್ಯ ವಿವಾಹ ನಿಷೇದ ಕೋರ್ ಕಮಿಟಿಯ ವರದಿಯನ್ವಯ ಬಾಲ್ಯ ವಿವಾಹಗಳನ್ನು ತಡೆಯಲು ಸಮರ್ಪಕವಾಗಿ ಕಾರ್ಯ ನಿರ್ವಹಿಸುವ ದೃಷ್ಟಿಯಿಂದ ರಾಜ್ಯ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸಮನ್ವಯ ಮತ್ತು ಪರಿಶೀಲನಾ ಸಮಿತಿಗಳನ್ನು ಹಾಗೂ ಗ್ರಾಮ ಪಂಚಾಯತ್ ಮಟ್ಟದಲ್ಲಿ ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿಗಳನ್ನು ರಚಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(3) ಮತ್ತು (4)ರ ಆದೇಶದಲ್ಲಿ ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಣಿಕೆ ತಡೆಗಟ್ಟಲು ಮತ್ತು ಸಾಗಾಣಿಕೆಗೊಳಗಾದ ಮಹಿಳೆಯರ ರಕ್ಷಣೆ ಹಾಗೂ ಪುನರ್ವಸತಿ ಕಲ್ಪಿಸುವ ಸಲುವಾಗಿ ಜಿಲ್ಲೆ ತಾಲ್ಲೂಕು ಹಾಗೂ ಗ್ರಾಮ ಮಟ್ಟದಲ್ಲಿ ಪುನರ್ ರಚಿಸಲಾಗಿದ್ದ ಕೆಲವು ಅಂಶಗಳಿಗೆ ತಿದ್ದುಪಡಿ ಮಾಡಲಾಗಿದೆ.

ದಿನಾಂಕ:23.01.2018ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಕ್ಷೇತ್ರ ಮಟ್ಟದ ಸಮಿತಿಗಳ ಕಾರ್ಯ ನಿರ್ವಹಣೆ ಪರಿಶೀಲನೆ ಬಗ್ಗೆ ನಡೆದ ಸಭೆಯಲ್ಲಿ ಮಹಿಳೆಯರು ಮತ್ತು ಮಕ್ಕಳ



Scanned by CamScanner

ಅನೈತಿಕ ಸಾಗಾಣಿಕೆ ತಡೆಗಟ್ಟಲು, ಬಾಲ್ಯ ವಿವಾಹಗಳನ್ನು ತಡೆಯಲು ಹಾಗೂ ಸಮಗ್ರ ಮಕ್ಕಳ ರಕ್ಷಣಾ ಸಮಿತಿಯನ್ನು ವಿಲೀನಗೊಳಿಸಿ ಒಂದೇ ಸಮಿತಿಯನ್ನು ರಚಿಸಲು ಸೂಚಿಸಲಾಗಿರುತ್ತದೆ. ಅದರಂತೆ ಮೂರು ಸಮಿತಿಗಳನ್ನು ವಿಲೀನಗೊಳಿಸಿ ಪರಿಷ್ಕರಿಸಿ ಆದೇಶ ಹೊರಡಿಸುವಂತೆ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಇವರು ಮೇಲೆ ಓದಲಾದ ಕ್ರಮ ಸಂಖ್ಯೆ(5)ರ ಪ್ರಸ್ತಾವನೆಯಲ್ಲಿ ಸರ್ಕಾರವನ್ನು ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನ ಕೂಲಂಕುಷವಾಗಿ ಪರಿಶೀಲಿಸಿ ಪ್ರಸ್ತಾಪಿಸಲಾದ ಮೂರು ಸಮಿತಿಗಳನ್ನು ವಿಲೀನಗೊಳಿಸಿ ಸಮಿತಿಯನ್ನು ರಚಿಸಲು ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ : ಮಮಇ 48 ಮಮಅ 2018, ದಿನಾಂಕ :06.08.2019**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಣಿಕೆ ತಡೆಗಟ್ಟುವಿಕೆ, ಬಾಲ್ಯ ವಿವಾಹ ನಿಷೇದ ಹಾಗೂ ಸಮಗ್ರ ಮಕ್ಕಳ ರಕ್ಷಣೆಗಾಗಿ ಗ್ರಾಮ ಪಂಚಾಯತ್ ಮಟ್ಟದಲ್ಲಿ ರಚಿಸಲಾಗಿರುವ ಮಕ್ಕಳ ರಕ್ಷಣಾ ಸಮಿತಿಯನ್ನು ವಿಲೀನಗೊಳಿಸಿ ಈ ಕೆಳಕಂಡ ಸದಸ್ಯರನ್ನೊಳಗೊಂಡ **ಮಹಿಳೆಯರ ಮತ್ತು ಮಕ್ಕಳ ರಕ್ಷಣೆಯ ಕಾವಲು ಸಮಿತಿಯನ್ನು** ರಚಿಸಿ ಆದೇಶಿಸಲಾಗಿದೆ.

| ಕ್ರ ಸಂ | ಸದಸ್ಯರು | ಪದನಾಮ |
|---|---|---|
| 1) | ಗ್ರಾಮ ಪಂಚಾಯತ್ ಅಧ್ಯಕ್ಷರು (ಮಹಿಳೆಯರು) | ಅಧ್ಯಕ್ಷರು |
| 2) | ಗ್ರಾಮ ಪಂಚಾಯತ್ ಉಪಾಧ್ಯಕ್ಷರು (ಮಹಿಳೆಯರು)<br>ಮಹಿಳಾ ಉಪಾಧ್ಯಕ್ಷರಿದ್ದಲ್ಲಿ ಅವರನ್ನೇ ಸಮಿತಿಯ ಉಪಾಧ್ಯಕ್ಷರನ್ನಾಗಿ ನೇಮಿಸುವುದು, ಮಹಿಳಾ ಉಪಾಧ್ಯಕ್ಷರಿಲ್ಲದಿದ್ದಲ್ಲಿ ಮಹಿಳಾ ಸದಸ್ಯರನ್ನೇ ಉಪಾಧ್ಯಕ್ಷರನ್ನಾಗಿ ನೇಮಿಸುವುದು. | ಉಪಾಧ್ಯಕ್ಷರು |
| 3) | ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಎರಡು ಗ್ರಾಮ ಪಂಚಾಯತ್ ಸದಸ್ಯರು (ಕಡ್ಡಾಯವಾಗಿ ಒಬ್ಬರು ಮಹಿಳಾ ಸದಸ್ಯರು) | ಸದಸ್ಯರು |
| 4) | ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸ್ಥಳೀಯ ಪ್ರಾಥಮಿಕ ಶಾಲೆ ಮತ್ತು ಪ್ರೌಢಶಾಲೆಯ ಮುಖ್ಯೋಪಾಧ್ಯಾಯರು (ತಾಲ್ಲೂಕು ಶಿಕ್ಷಣಾಧಿಕಾರಿಗಳು ಆಯ್ಕೆ ಮಾಡುವುದು) ಮುಖ್ಯೋಪಾಧ್ಯಾಯರು ಪುರುಷರಾಗಿದ್ದಲ್ಲಿ, ಮಹಿಳಾ ಶಿಕ್ಷಕರನ್ನು ಆಯ್ಕೆ ಮಾಡುವುದು. | ಸದಸ್ಯರು |
| 5) | ಗ್ರಾಮ ಲೆಕ್ಕಿಗರು (ಒಬ್ಬರನ್ನು ತಹಶೀಲ್ದಾರರು ನೇಮಿಸುವುದು) | ಸದಸ್ಯರು |
| 6) | ಎಲ್.ಎಚ್.ವಿ/ ಎ.ಎನ್.ಎಂ ಮತ್ತು ಆಶಾ ಕಾರ್ಯಕರ್ತೆ (ಎಲ್.ಎಚ್.ವಿ.ಗಳು ಲಭ್ಯವಿಲ್ಲದಿದ್ದ ಪಕ್ಷದಲ್ಲಿ ಎ.ಎನ್.ಎಂ.ಗಳನ್ನು ಹಾಗೂ ಆಶಾ ಕಾರ್ಯಕರ್ತೆಯನ್ನು ತಾಲ್ಲೂಕು ವೈದ್ಯಾಧಿಕಾರಿಗಳು ನಾಮ ನಿರ್ದೇಶನ ಮಾಡುವುದು) | ಸದಸ್ಯರು |
| 7) | ಬೀಟ್ ಪೋಲೀಸ್ ಅಧಿಕಾರಿ (ವೃತ್ತ ನಿರೀಕ್ಷಕರು ನಿಯೋಜಿಸುವುದು) | ಸದಸ್ಯರು |
| 8) | ಗ್ರಾಮ ಪಂಚಾಯಿತಿ ವ್ಯಾಪ್ತಿಯ ಐಸಿಡಿಎಸ್ ಮೇಲ್ವಿಚಾರಕಿ | ಸದಸ್ಯರು |

308

| | | |
|---|---|---|
| | (ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ನೇಮಿಸುವುದು) | |
| 9) | ಆ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಯ ಮಹಿಳಾ ಪ್ರತಿನಿಧಿ | ಸದಸ್ಯರು |
| 10) | ಅಂಗನವಾಡಿ ಕಾರ್ಯಕರ್ತೆ (ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಒಬ್ಬ ಅಂಗನವಾಡಿ ಕಾರ್ಯಕರ್ತೆಯನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ನೇಮಿಸುವುದು) | ಸದಸ್ಯರು |
| 11) | ಸ್ತ್ರೀಶಕ್ತಿ ಸಂಘದ ಒಬ್ಬರು ಪ್ರತಿನಿಧಿ | ಸದಸ್ಯರು |
| 12) | ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪ್ರೌಢಶಾಲೆಯಲ್ಲಿ ಓದುತ್ತಿರುವ ಒಬ್ಬ ವಿದ್ಯಾರ್ಥಿ ಮತ್ತು ಒಬ್ಬ ವಿದ್ಯಾರ್ಥಿನಿ | ಸದಸ್ಯರು |
| 13) | ಪಂಚಾಯತ್ ಅಭಿವೃದ್ಧಿ ಅಧಿಕಾರಿ/ಗ್ರಾಮ ಪಂಚಾಯಿತಿ ಕಾರ್ಯದರ್ಶಿ | ಸದಸ್ಯ ಕಾರ್ಯದರ್ಶಿ |

ಗ್ರಾಮ ಸಭೆಯಲ್ಲಿ ಇಬ್ಬರು ಗ್ರಾಮ ಪಂಚಾಯತ್ ಸದಸ್ಯರು, ಸ್ವಯಂ ಸೇವಾ ಸಂಸ್ಥೆಯ ಪ್ರತಿನಿಧಿ, ಸ್ತ್ರೀಶಕ್ತಿ ಸಂಘದ ಇಬ್ಬರು ಪ್ರತಿನಿಧಿ ವಿದ್ಯಾರ್ಥಿ, ವಿದ್ಯಾರ್ಥಿನಿಯರನ್ನು ಆಯ್ಕೆ ಮಾಡುವುದು ಹಾಗೂ ಸಮಿತಿಯಲ್ಲಿ ಶೇಕಡಾ50ರಷ್ಟು ಮಹಿಳಾ ಸದಸ್ಯರಿರುವಂತೆ ಕ್ರಮ ವಹಿಸುವುದು. ಸಮಿತಿ ಸಭೆಗಳಲ್ಲಿ ತೀರ್ಮಾನಿಸುವ ಎಲ್ಲಾ ಕಾರ್ಯಕ್ರಮಗಳು, ತೀರ್ಮಾನಗಳನ್ನು ಅನುಷ್ಠಾನಗೊಳಿಸುವ ಜವಾಬ್ದಾರಿ ಸದಸ್ಯ ಕಾರ್ಯದರ್ಶಿಯದ್ದಾಗಿರುತ್ತದೆ. ಪ್ರತಿ ಮೂರು ತಿಂಗಳಿಗೊಮ್ಮೆ ಸಭೆಯನ್ನು ಏರ್ಪಡಿಸಿ ಚರ್ಚಿಸುವುದು.

ಸದರಿ ಸಮಿತಿ /ಸದಸ್ಯರ ಕಾರ್ಯ ಮತ್ತು ಜವಾಬ್ದಾರಿಗಳ ಬಗ್ಗೆ ಅನುಬಂಧ 1 ಮತ್ತು 2ರಲ್ಲಿ ವಿವರಿಸಲಾಗಿದ್ದು, ಅದರಂತೆ ಕಡ್ಡಾಯವಾಗಿ ಕಾರ್ಯ ನಿರ್ವಹಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

(ಸಂಧ್ಯಾ ಎಲ್ ನಾಯಕ್)
ಸರ್ಕಾರದ ಉಪ ಕಾರ್ಯದರ್ಶಿ–2
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ
ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ

ಇವರಿಗೆ :

1) ಪ್ರಧಾನ ಮಹಾಲೇಖಪಾಲರು, ಬೆಂಗಳೂರು
2) ಸಂಬಂಧಪಟ್ಟ ಎಲ್ಲಾ ಇಲಾಖೆಗಳ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ.
3) ಪ್ರಧಾನ ಕಾರ್ಯದರ್ಶಿ, ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು
4) ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು
5) ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ, ಬೆಂಗಳೂರು
6) ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳಿಗೆ
7) ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು

ಅನುಬಂಧ-1

ಸರ್ಕಾರದ ಆದೇಶ ಸಂಖ್ಯೆ : ಮಮಇ 48 ಮಮಅ 2018, ದಿನಾಂಕ : 06.08.2019

ಮಹಿಳೆಯರ ಮತ್ತು ಮಕ್ಕಳ ರಕ್ಷಣೆಯ ಕಾವಲು ಸಮಿತಿಯ ಸಮಿತಿಯ ಜವಾಬ್ದಾರಿಗಳು .

- ✓ ಗ್ರಾಮ ಪಂಚಾಯ್ತಿ ಮಟ್ಟದಲ್ಲಿ 18 ವರ್ಷದೊಳಗಿನ ಹೆಣ್ಣು ಮಕ್ಕಳು ಮತ್ತು 21 ವರ್ಷದೊಳಗಿನ ಗಂಡು ಮಕ್ಕಳ ಮಾಹಿತಿ ಇಡಬೇಕು.
- ✓ ಪಂಚಾಯ್ತಿ ಕಛೇರಿ, ಶಾಲೆ, ಪೊಲೀಸ್, ಅಂಗನವಾಡಿ ಮಹಿಳಾ ಸ್ವಸಹಾಯ ಸಂಘಗಳು, ಯುವ ಸಂಘಟನೆಗಳು ಮಕ್ಕಳ ಬಗ್ಗೆ ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳಬೇಕು.
- ✓ ಅನೈತಿಕ ಸಾಗಾಣಿಕೆಗೆ ಒಳಗಾದ ಮಹಿಳೆಯರಿಗೆ ಮತ್ತು ಮಕ್ಕಳಿಗೆ ರಕ್ಷಣೆ ನೀಡುವುದು ಮತ್ತು ಅವರಿಗೆ ಹಾಗೂ ಅವರ ಕುಟುಂಬಗಳಿಗೆ ಆರ್ಥಿಕ, ನೈತಿಕ, ಸಾಮಾಜಿಕ, ವೈದ್ಯಕೀಯ ಹಾಗೂ ಶೈಕ್ಷಣಿಕ ಸಹಾಯವನ್ನು ಒದಗಿಸುವುದು.
- ✓ ಸಮುದಾಯದ ಎಲ್ಲರ ಭಾಗವಹಿಸುವಿಕೆಯೊಂದಿಗೆ ಸಾಗಾಣಿಕೆಯನ್ನು ನಿಷೇಧಿಸುವಲ್ಲಿ ಉಸ್ತುವಾರಿ ಮಾಡುವುದು.
- ✓ ಸಾಗಾಣಿಕೆ ತಡೆಯಲು ಗ್ರಾಮ ಮಟ್ಟದಲ್ಲಿ ಅರಿವು ಮೂಡಿಸಲು ಕಾರ್ಯಕ್ರಮ ಹಮ್ಮಿಕೊಳ್ಳುವುದು. ಸಾಗಾಣಿಕೆ ತಡೆಯಲು ಪ್ರಚಾರಕ್ಕಾಗಿ ಮಾಹಿತಿ ಸಂಗ್ರಹಿಸಿ, ಉತ್ತಮವಾದ ಸಾಮಾಜಿಕ ವ್ಯವಸ್ಥೆಗಾಗಿ ಬೇಕಾದ ಸಂಪನ್ಮೂಲಗಳ ಕ್ರೋಢೀಕರಣಗೊಳಿಸುವುದು.
- ✓ ಮಕ್ಕಳ ಸಾಗಾಣಿಕೆ ವಿರುದ್ಧ ಶಾಲೆಗಳಲ್ಲಿ ಮಕ್ಕಳಿಗೆ ಅರಿವು ಮೂಡಿಸಬೇಕು.
- ✓ ಹೊಸ ವ್ಯಕ್ತಿಗಳು ಗ್ರಾಮಕ್ಕೆ ಆಗಮಿಸಿದ ಬಗ್ಗೆ ದಾಖಲೆ ಇಡಬೇಕು.
- ✓ ಗ್ರಾಮದಿಂದ ಕಾಣೆಯಾದ ಮಹಿಳೆಯರ ಮತ್ತು ಮಕ್ಕಳ ದಾಖಲೆ ಇಡಬೇಕು.
- ✓ ವಲಸೆ ಹೋದ ಕುಟುಂಬದ ಮಾಹಿತಿಯಿಡಬೇಕು ಮತ್ತು ಈ ಕುಟುಂಬದ ಬಗ್ಗೆ ಮೇಲ್ವಿಚಾರಣೆ ಮಾಡಬೇಕು
- ✓ ಬಾಲ್ಯ ವಿವಾಹ ನಿಷೇಧ, ದುಷ್ಪರಿಣಾಮಗಳು ಮತ್ತು ಬಾಲ್ಯ ವಿವಾಹ ನಿಷೇಧ ಕಾನೂನಿನ ಬಗ್ಗೆ ವ್ಯಾಪಕ ಪ್ರಚಾರ ಕೈಗೊಳ್ಳಬೇಕು.
- ✓ ಗ್ರಾಮದಲ್ಲಿ ಯಾವುದೇ ಬಾಲ್ಯ ವಿವಾಹ ನಡೆಯುತ್ತಿರುವುದು ಕಂಡು ಬಂದಲ್ಲಿ ಕೂಡಲೇ ಸಂಬಂಧಪಟ್ಟ ಬಾಲ್ಯ ವಿವಾಹ ನಿಷೇದಾಧಿಕಾರಿಗಳ ಗಮನಕ್ಕೆ ತಂದು ಎಫ್.ಐ.ಆರ್. ಒಳಗೊಂಡಂತೆ ಅಗತ್ಯ ಕ್ರಮ ಕೈಗೊಳ್ಳುವುದು.
- ✓ ಬೇಸಿಗೆ ರಜೆ ಅವಧಿ ಮುಗಿದ ನಂತರ ಶಾಲೆಗೆ ದಾಖಲಾದ/ದಾಖಲಾಗಬೇಕಾದ ಮಕ್ಕಳ ಸಮೀಕ್ಷೆ ನಡೆಸುವುದು.
- ✓ ಶಿಕ್ಷಣ ಇಲಾಖೆಯೊಂದಿಗೆ ಕೈಜೋಡಿಸಿ, ಶಾಲೆಯಿಂದ ಹೊರಗುಳಿದ ಮಕ್ಕಳ ಪೋಷಕರ ಮನವೊಲಿಸಿ, ಶಾಲೆಗೆ ಮರಳಿ ದಾಖಲಾಗುವ ಬಗ್ಗೆ ಕ್ರಮ ವಹಿಸುವುದು.
- ✓ ಗ್ರಾಮ ಸಭೆಗಳಲ್ಲಿ ಮಕ್ಕಳ ವಿದ್ಯಾಭ್ಯಾಸದ ಮಹತ್ವ, ವಿವಿಧ ಇಲಾಖೆಗಳಿಂದ ಸಿಗುವ ಸೌಲಭ್ಯ ಮುಂತಾದುವುಗಳನ್ನು ಸಾರ್ವಜನಿಕರ ಗಮನಕ್ಕೆ ತರುವುದು.
- ✓ ಶಾಲೆಯಿಂದ ಹೊರಗುಳಿದ ಪ್ರಾಯಪೂರ್ವ ಮಕ್ಕಳಿಗೆ ವಿವಿಧ ರೀತಿಯ ಕೌಶಲ್ಯ ತರಬೇತಿಯನ್ನು ನೀಡಲು ಕ್ರಮವಹಿಸುವುದು.
- ✓ ಉತ್ತಮ ಅಂಕಗಳನ್ನು ಪಡೆದ ಮಕ್ಕಳನ್ನು ಗ್ರಾಮಸಭೆಗಳಲ್ಲಿ ಪ್ರೋತ್ಸಾಹಿಸುವುದು.
- ✓ ಹೆಣ್ಣುಮಕ್ಕಳ ದಾಖಲಾತಿ ಹೆಚ್ಚಿರುವ ಶಾಲೆಗಳನ್ನು ಗುರುತಿಸಿ, ಗ್ರಾಮಸಭೆಗಳಲ್ಲಿ ಸನ್ಮಾನಿಸುವುದು.

✓ ಗ್ರಾಮಸಭೆಗಳ ಮೂಲಕ ಉತ್ತಮ ಶಿಕ್ಷಣ ತಜ್ಞರಿಂದ ವಿದ್ಯಾಭ್ಯಾಸದ ಮಹತ್ವದ ಕುರಿತು ಮಕ್ಕಳಿಗೆ ಮತ್ತು ಪೋಷಕರಿಗೆ ಅರಿವು ಮೂಡಿಸುವುದು.

✓ 7ನೇ ತರಗತಿಯಿಂದ 8ನೇ ತರಗತಿ ಹಾಗೂ 10ನೇ ತರಗತಿಯಿಂದ ಪಿ.ಯು.ಸಿ. ತರಗತಿಗಳಿಗೆ ಮಕ್ಕಳು ದಾಖಲಾಗುವಂತೆ ಸಮಿತಿಯ ಸದಸ್ಯರು ಖಚಿತಪಡಿಸಿಕೊಳ್ಳುವುದು.

✓ ಪಂಚಾಯತ್ ವ್ಯಾಪ್ತಿಯಲ್ಲಿ ಸರಕಾರಿ ಸೌಲಭ್ಯಗಳನ್ನು ನೀಡುವಾಗ ಫಲಾನುಭವಿಗಳಿಂದ ಅವರ ಕುಟುಂಬಗಳಲ್ಲಿ ಬಾಲಕಾರ್ಮಿಕತೆ ಅವಕಾಶವಿಲ್ಲದಂತೆ ಕರಾರು ಪತ್ರ ಬರೆಯಿಸಿಕೊಳ್ಳುವುದು.

✓ ಮಕ್ಕಳನ್ನು ದುಡಿಸುವ ಮಾಲೀಕರುಗಳಿಗೆ ಹಾಗೂ ಸಹಕರಿಸುವವರಿಗೂ ಕ್ರಮ ಜರುಗಿಸುವಂತೆ ಸಂಬಂಧಪಟ್ಟ ಇಲಾಖೆಗೆ ಮಾಹಿತಿ ನೀಡುವುದು.

✓ ಗ್ರಾಮ ಪಂಚಾಯತ್ ವ್ಯಾಪ್ತಿಯ 18 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಗುಣಮಟ್ಟದ ಶಿಕ್ಷಣಕ್ಕಾಗಿ ಸಮುದಾಯದ, ಇಲಾಖೆಗಳ, ನಾಗರಿಕ ಸಂಘಸಂಸ್ಥೆಗಳ ಪಾಲುದಾರಿಕೆ, ಸಹಭಾಗಿತ್ವ, ಸಮನ್ವಯತೆ ಮತ್ತು ಹೊಣೆಗಾರಿಕೆ ಕುರಿತು ಕ್ರಮ ಕೈಗೊಳ್ಳುವುದು.

✓ ಪಂಚಾಯತ್ ಮಟ್ಟದಲ್ಲಿ ಯಾವುದೇ ರೈತರು, ಕಾರ್ಮಿಕರು ಮಕ್ಕಳನ್ನು ಹೊಲ, ಗದ್ದೆ, ಜೀತ ಸಂಬಳಕ್ಕೆ 18 ವರ್ಷದೊಳಗಿನ ಮಕ್ಕಳನ್ನು ದುಡಿಸದಂತೆ ಹಾಗೂ ದನ, ಕುರಿ, ಎಮ್ಮೆ ಮೇಯಿಸಲು ಮಕ್ಕಳನ್ನು ಬಳಸದಂತೆ ನಿರಂತರ ನಿಗಾವಹಿಸಿ 18 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ನಿರಂತರ ಶಿಕ್ಷಣ ಒದಗಿಸಲು ಕ್ರಮ ಕೈಗೊಳ್ಳುವುದು.

✓ ವಿಕೃತ ಮೂಢನಂಬಿಕೆಗಳಿಗೆ ಹಾಗೂ ಅವಘಡಗಳಿಗೆ 18 ವರ್ಷದೊಳಗಿನ ಮಕ್ಕಳು ಬಲಿಯಾಗದಂತೆ ರಕ್ಷಣೆ ನೀಡುವುದು ಹಾಗೂ ಈ ಕುರಿತು ಕ್ರಮ ಕೈಗೊಳ್ಳುವುದು.

✓ ಅನಾಥ/ಪೋಷಕರಿಗೆ ಬೇಡವಾದ ಮಕ್ಕಳು ಕಂಡುಬಂದಲ್ಲಿ ಮಕ್ಕಳ ಕಲ್ಯಾಣ ಸಮಿತಿಗೆ ಮಾಹಿತಿ ನೀಡುವುದು ಅಲ್ಲದೆ, ಇಂತಹ ಪ್ರಕರಣಗಳನ್ನು ಮುಂಚಿತವಾಗಿ ಗುರುತಿಸಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ತಿಳಿಸುವುದು. ಸಂಕಷ್ಟದಲ್ಲಿರುವ ಮಹಿಳೆ/ಹೆಣ್ಣು ಮಕ್ಕಳು ಗರ್ಭಿಣಿಯಾದಾಗ ಇವರನ್ನು ನಿರಂತರವಾಗಿ ಅನುಸರಣೆ ಮಾಡುವುದು.

✓ ಮಕ್ಕಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ಕೈಗೆತ್ತಿಕೊಂಡು ಸಮಸ್ಯೆಗಳನ್ನು ಬಗೆಹರಿಸುವುದು.

✓ ಲೈಂಗಿಕ ದೌರ್ಜನ್ಯಕ್ಕೊಳಗಾದ ಮಕ್ಕಳು ಕಂಡುಬಂದಲ್ಲಿ ಮಗುವಿಗೆ ರಕ್ಷಣೆ ನೀಡಿ ತಕ್ಷಣ ಮಕ್ಕಳ ಕಲ್ಯಾಣ ಸಮಿತಿ ಮುಂದೆ ಹಾಜರುಪಡಿಸುವುದು.

✓ ಕಡ್ಡಾಯವಾಗಿ ಮಕ್ಕಳ ಗ್ರಾಮಸಭೆ ನಡೆಸುವಂತೆ ಕ್ರಮ ವಹಿಸಿ ಸದರಿ ಸಭೆಯಲ್ಲಿ ಚರ್ಚಿಸಿದ ಅಂಶಗಳಿಗೆ ಕ್ರಮ ವಹಿಸುವುದು.

✓ ಮಕ್ಕಳಿಗೆ ಸಂಬಂಧಿಸಿದ ಸೂಕ್ತ ಯೋಜನೆಗಳಲ್ಲಿ ಅವಶ್ಯಕವಾದ ಸೌಲಭ್ಯ ಪರಿಹಾರ, ಪುನರ್ವಸತಿ ಮತ್ತು ಪರ್ಯಾಯ ವ್ಯವಸ್ಥೆಗಳನ್ನು ಆಯಾ ಇಲಾಖೆಗಳ ಅನುಸಾರವಾಗಿ ಮಕ್ಕಳಿಗೆ/ಕುಟುಂಬಗಳಿಗೆ ಒದಗಿಸುವುದು.

✓ ಗ್ರಾಮ ಪಂಚಾಯಿತಿಯ ಪ್ರತಿ ಶಾಲೆಗಳಲ್ಲಿ ಮಕ್ಕಳ ಹಕ್ಕುಗಳ ಕ್ಲಬ್/ಮೀನಾ ತಂಡ/ಮಕ್ಕಳ ಸುರಕ್ಷಾ ಸಮಿತಿಗಳ ಕಾರ್ಯ ವೈಖರಿಯ ಬಗ್ಗೆ ಮೇಲ್ವಿಚಾರಣೆ ಮಾಡುವುದು ಹಾಗೂ ಎಲ್ಲಾ ಮೂಲಭೂತ ಸೌಕರ್ಯಗಳು ಇರುವಂತೆ ನೋಡಿಕೊಳ್ಳುವುದು.

(ಸಂಧ್ಯಾ ಎಲ್ ನಾಯಕ್)

ಸರ್ಕಾರದ ಉಪ ಕಾರ್ಯದರ್ಶಿ–2

ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ



Scanned by CamScanner

# ಅನುಬಂಧ-2

## ಸರ್ಕಾರದ ಆದೇಶ ಸಂಖ್ಯೆ : ಮಮಇ 48 ಮಮಅ 2018, ದಿನಾಂಕ : 06.08.2019

## ಮಹಿಳೆಯರ ಮತ್ತು ಮಕ್ಕಳ ರಕ್ಷಣೆಯ ಕಾವಲು ಸಮಿತಿಯ ಸಮಿತಿಯ ಸದಸ್ಯರ ಜವಾಬ್ದಾರಿಗಳು.

- 0 ಯಿಂದ 06 ವರ್ಷದೊಳಗಿನ ಎಲ್ಲಾ ಮಕ್ಕಳ ಮಾಹಿತಿಯನ್ನು ನಿರ್ವಹಿಸುವುದು.
- ಆರೋಗ್ಯ ಇಲಾಖೆಯ ಶುಶ್ರೂಷಕರು/ದಾದಿಗಳು/ಆಶಾ ಕಾರ್ಯಕರ್ತೆಯರೊಂದಿಗೆ ಗ್ರಾಮದಲ್ಲಿ ಆಗುವ ಪ್ರತಿಯೊಂದು ಜನನದ ಬಗ್ಗೆ ಗ್ರಾಮ ಲೆಕ್ಕಿಗರೊಂದಿಗೆ ಪರಿಶೀಲಿಸಿ. ಹೊಂದಾಣಿಕೆ ಮಾಡಿಕೊಳ್ಳುವುದು.
- ಬಾಲ್ಯ ವಿವಾಹ ನಿಷೇಧಾಧಿಕಾರಿಗಳಿಗೆ ಬಾಲ್ಯ ವಿವಾಹ ತಡೆಯಲು ಸಹಕರಿಸುವುದು ಪಂಚಾಯತ್ ಕಾರ್ಯಕ್ಷೇತ್ರದಲ್ಲಿ ಯಾವುದೇ ಬಾಲ್ಯ ವಿವಾಹ ನಡೆಯದಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು.
- ಬಾಲ್ಯ ವಿವಾಹ ನಡೆಯುತ್ತಿರುವುದು ಕಂಡು ಬಂದಲ್ಲಿ ತಕ್ಷಣ ಮೇಲಾಧಿಕಾರಿಗಳ ಗಮನಕ್ಕೆ ತರುವುದು ಮತ್ತು ಮಾಹಿತಿದಾರರ ಹೆಸರನ್ನು ಗೌಪ್ಯವಾಗಿಡುವುದು.
- ವೃತ್ತ ಮೇಲ್ವಿಚಾರಕಿಯರಿಗೆ ಬಾಲ್ಯ ವಿವಾಹಗಳನ್ನು ಒಳಗೊಂಡಂತೆ ಮಾಹಿತಿಯನ್ನು ಪ್ರತಿ ತಿಂಗಳು ವರದಿ ಮಾಡತಕ್ಕದ್ದು. ಬಾಲ್ಯ ವಿವಾಹ ನಡೆಯುವ ಸಂದರ್ಭದಲ್ಲಿ ಗ್ರಾಮಲೆಕ್ಕಿಗರಿಗೆ ದೂರು ನೀಡುವುದು.

### ಎ.ಎನ್.ಎಮ್/ಆಶಾ ಕಾರ್ಯಕರ್ತೆಯರು

- ಗ್ರಾಮದಲ್ಲಿ ಜನಿಸಿದ ಮಕ್ಕಳ ನೋಂದಣಿಯನ್ನು ಗ್ರಾಮಲೆಕ್ಕಿಗರು ಮಾಡಿರುವ ಬಗ್ಗೆ ಖಾತ್ರಿ ಮಾಡಿಕೊಳ್ಳುವುದು.
- ಮಹಿಳೆಯರಿಗೆ ಮತ್ತು ಹದಿಹರೆಯದ ಹೆಣ್ಣು ಮಕ್ಕಳಿಗೆ ಬಾಲ್ಯ ವಿವಾಹದಿಂದ ಆರೋಗ್ಯದ ಮೇಲಾಗುವ ದುಷ್ಪರಿಣಾಮಗಳನ್ನು ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಕಾರ್ಯಕ್ರಮದಲ್ಲಿ ಅರಿವು ಮೂಡಿಸುವುದು.
- ಬಾಲ್ಯ ವಿವಾಹಗಳು ನಡೆಯುವುದು ಕಂಡು ಬಂದ ಸಂದರ್ಭದಲ್ಲಿ ಪೋಷಕರು/ ಮಕ್ಕಳು/ ಹಿರಿಯರೊಂದಿಗೆ ಸಮಾಲೋಚನೆ ನಡೆಸುವುದು. ಬಾಲ್ಯ ವಿವಾಹ ನಿಷೇಧಾಧಿಕಾರಿಗಳಿಗೆ ಬಾಲ್ಯ ವಿವಾಹ ತಡೆಯಲು ಸಹಕರಿಸುವುದು.
- ತನ್ನ ಕಾರ್ಯಕ್ಷೇತ್ರದಲ್ಲಿ ಯಾವುದೇ ಬಾಲ್ಯ ವಿವಾಹ ನಡೆಯದಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು.
- ಬಾಲ್ಯ ವಿವಾಹ ನಡೆಯುತ್ತಿರುವುದು ಕಂಡು ಬಂದಲ್ಲಿ ತಕ್ಷಣ ಮೇಲಾಧಿಕಾರಿಗಳ ಗಮನಕ್ಕೆ ತರುವುದು ಮತ್ತು ಮಾಹಿತಿದಾರರ ಹೆಸರನ್ನು ಗೌಪ್ಯವಾಗಿಡುವುದು.
- ಪ್ರತಿ 2 ತಿಂಗಳಿಗೊಮ್ಮೆ ಸಭೆಗಳಿಗೆ ಹಾಜರಾಗುವುದು ಮತ್ತು ತೆಗೆದುಕೊಂಡ ಕ್ರಮಗಳ ಬಗ್ಗೆ ಅನುಪಾಲನೆ ಮಾಡುವುದು.
- ಪ್ರತಿ ತಿಂಗಳು ಮಾಹಿತಿಯನ್ನು ಮಹಿಳಾ ಆರೋಗ್ಯ ಸಂದರ್ಶಕರಿಗೆ ನೀಡುವುದು.
- ಬಾಲಕಾರ್ಮಿಕ ಪ್ರಕರಣಗಳು ಕಂಡುಬಂದಲ್ಲಿ ತಕ್ಷಣ ಸಮಿತಿಯ ಗಮನಕ್ಕೆ ತರುವುದು.
- ಭಿಕ್ಷಾಟನೆ/ಬೀದಿ-ಚಿಂದಿ ಆಯುವ ಮಕ್ಕಳಿಗೆ ರಕ್ಷಣೆ ಒದಗಿಸಿ ಶಿಕ್ಷಣ ನೀಡುವಂತೆ ಕ್ರಮವಹಿಸುವುದು.
- ತನ್ನ ಕಾರ್ಯಕ್ಷೇತ್ರದಲ್ಲಿ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಗಳು ಕಂಡುಬಂದಲ್ಲಿ ತಕ್ಷಣ ಪೊಲೀಸ್ ಹಾಗೂ ಸಮಿತಿಯ ಗಮನಕ್ಕೆ ತರುವುದು.

- ವಿಕೃತ ಮೂಢನಂಬಿಕೆಗಳಿಗೆ ಹಾಗೂ ಅವಗಡಗಳಿಗೆ 18 ವರ್ಷದೊಳಗಿನ ಮಕ್ಕಳು ಬಲಿಯಾಗದಂತೆ ರಕ್ಷಣೆ ಮಾಡಲು ಸಮಿತಿಯ ಗಮನಕ್ಕೆ ತರುವುದು.
- ಪಂಚಾಯಿತಿ ಮಟ್ಟದಲ್ಲಿ ಯಾವುದೇ ರೈತರು, ಕಾರ್ಮಿಕರು ಮಕ್ಕಳನ್ನು ದುಡಿಸದಂತೆ ಹಾಗೂ ದನ, ಕುರಿ, ಎಮ್ಮೆ ಮೇಯಿಸಲು ಬಳಸದಂತೆ ನಿರಂತರ ನಿಗಾವಹಿಸುವುದು.
- ಅನಾಥ/ಪೋಷಕರಿಗೆ ಬೇಡವಾದ ಮಕ್ಕಳು/ ಬೀದಿಯಲ್ಲಿ ಬಿಸಾಡಿದ ಮಕ್ಕಳು ಕಂಡುಬಂದಲ್ಲಿ ಮಕ್ಕಳ ಕಲ್ಯಾಣ ಸಮಿತಿಗೆ ಮಾಹಿತಿ ನೀಡುವುದು ಅಲ್ಲದೆ, ಇಂತಹ ಪ್ರಕರಣಗಳನ್ನು ಮುಂಚಿತವಾಗಿ ಗುರುತಿಸಿ ಮಕ್ಕಳ ಸಹಾಯವಾಣಿ–1098 ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ತಿಳಿಸುವುದು.

- **ಪೋಲೀಸ್ ಅಧಿಕಾರಿ :** ಮಕ್ಕಳ ದೌರ್ಜನ್ಯ ಪ್ರಕರಣಗಳು ಬಂದಲ್ಲಿ ಎಫ್.ಐ.ಆರ್. ಮಾಡುವುದು ಮತ್ತು ಬಾಲಕಾರ್ಮಿಕ ಪ್ರಕರಣಗಳು ಕಂಡುಬಂದಲ್ಲಿ ತಕ್ಷಣ ಸಮಿತಿಯವರೊಂದಿಗೆ ಚರ್ಚಿಸಿ ಕ್ರಮವಹಿಸುವುದು.

## ಮುಖ್ಯೋಪಾಧ್ಯಾಯರು / ಶಿಕ್ಷಕರು :

- ಮಗುವನ್ನು ಶಾಲೆಯಲ್ಲಿ ಉಳಿಸಿಕೊಳ್ಳಲು ಪ್ರಯತ್ನಿಸುವುದು.
- ಶಾಲೆ ಬಿಟ್ಟ ಮಕ್ಕಳ ಬಗ್ಗೆ ಅದರಲ್ಲೂ ಮುಖ್ಯವಾಗಿ ಋತುಮಾನದ ವಲಸೆಯಿಂದಾಗಿ ಶಾಲೆ ಬಿಡುವ ಮಕ್ಕಳ ಬಗ್ಗೆ ಅಂಗನವಾಡಿ ಕಾರ್ಯಕರ್ತೆಯರ ಸಹಾಯದಿಂದ ಅನುಪಾಲನೆ ಮಾಡುವುದು.
- ಮಕ್ಕಳ ಗೈರು ಹಾಜರಿ ಬಗ್ಗೆ ನಿಗಾ ವಹಿಸುವುದು. ಮಗು 3 ದಿನಕ್ಕಿಂತ ಜಾಸ್ತಿ ದಿನಗಳ ಕಾಲ ಶಾಲೆಗೆ ಗೈರುಹಾಜರಾದಲ್ಲಿ ಅಂಗನವಾಡಿ ಕಾರ್ಯಕರ್ತೆಯರ ಸಹಾಯದಿಂದ ಅಂತಹ ಮಕ್ಕಳ ಪೋಷಕರನ್ನು ಭೇಟಿ ಮಾಡಿ ಮಗುವನ್ನು ವಾಪಸ್ ಶಾಲೆಗೆ ಕರೆಯಿಸುವ ಬಗ್ಗೆ ಕ್ರಮ ವಹಿಸುವುದು.
- ಸುತ್ತೋಲೆಯಲ್ಲಿರುವಂತೆ ಶಾಲೆಗಳಲ್ಲಿ ಮಕ್ಕಳ ಹಕ್ಕುಗಳ ಕ್ಲಬ್‌ಗಳನ್ನು ರಚಿಸುವುದು. ಮಕ್ಕಳನ್ನು ಬಾಲ್ಯ ವಿವಾಹದಿಂದ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ತಿಳಿಯಲು ಮತ್ತು ಬಾಲ್ಯ ವಿವಾಹ ನಡೆಸಿದಲ್ಲಿ ದೊರೆಯುವ ಶಿಕ್ಷೆಯ ಬಗ್ಗೆ ಅರಿವು ಮೂಡಿಸಲು ಸಕ್ರಿಯವಾಗಿ ಭಾಗವಹಿಸುವಂತೆ ಪ್ರೋತ್ಸಾಹಿಸುವುದು.
- ಶಾಲೆಯಲ್ಲಿ ಪ್ರತಿ ತಿಂಗಳು ಮೌಲ್ಯಧಾರಿತ ಶಿಕ್ಷಣದ ತರಗತಿಗಳನ್ನು ನಡೆಸುವ ಮೂಲಕ ಸಾಮಾಜಿಕ ಜವಾಬ್ದಾರಿಗಳನ್ನು ಉತ್ತೇಜಿಸುವುದು ಮತ್ತು ಮಕ್ಕಳ ಹಕ್ಕುಗಳ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸುವುದು.
- ಬಾಲ್ಯ ವಿವಾಹಗಳು ನಡೆಯುವುದು ಕಂಡು ಬಂದ ಸಂದರ್ಭದಲ್ಲಿ ಪೋಷಕರು/ ಮಕ್ಕಳು/ ಹಿರಿಯರೊಂದಿಗೆ ಸಮಾಲೋಚನೆ ನಡೆಸುವುದು ಬಾಲ್ಯ ವಿವಾಹ ನಿಷೇಧಾಧಿಕಾರಿಗಳಿಗೆ ಬಾಲ್ಯ ವಿವಾಹ ತಡೆಯಲು ಸಹಕರಿಸುವುದು.
- ತನ್ನ ಕಾರ್ಯಕ್ಷೇತ್ರದಲ್ಲಿ ಯಾವುದೇ ಬಾಲ್ಯ ವಿವಾಹ ನಡೆಯದಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು.
- ಸಮುದಾಯದಿಂದ ಬಾಲ್ಯ ವಿವಾಹದ ಬಗ್ಗೆ ಮಾಹಿತಿ ದೊರೆತ ತಕ್ಷಣ ಗ್ರಾಮದ ಗ್ರಾಮ ಲೆಕ್ಕಿಗರಿಗೆ ಮಾಹಿತಿ ನೀಡುವುದು. ಮಾಹಿತಿದಾರರ ಹೆಸರನ್ನು ಗೌಪ್ಯವಾಗಿಡುವುದು.
- ಕ್ಷೇತ್ರ ಶಿಕ್ಷಣಾಧಿಕಾರಿಗೆ ಮೇಲಿನ ವಿಷಯಗಳನ್ವಯ ಪ್ರತಿ ತಿಂಗಳು ವರದಿ ಮಾಡುವುದು ಹಾಗೂ ಸಭೆಗಳಿಗೆ ತಪ್ಪದೇ ಹಾಜರಾಗುವುದು.



Scanned by CamScanner

302

## ಗ್ರಾಮ ಲೆಕ್ಕಿಗರು

- ಅಂಗನವಾಡಿ ಕಾರ್ಯಕರ್ತೆಯರು/ ಎ.ಎನ್.ಎಮ್/ ಆಶಾ ಕಾರ್ಯಕರ್ತೆಯರುಗಳ ಸಹಕಾರದೊಂದಿಗೆ ಪ್ರತಿ ಗ್ರಾಮದಲ್ಲಿ ಜನಿಸುವ ಮಕ್ಕಳ ನೋಂದಣಿ ಮತ್ತು ಜನನ ಪ್ರಮಾಣ ಪತ್ರ ವಿತರಿಸುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು.
- ಸಾಮೂಹಿಕ ವಿವಾಹ/ ವೈಯುಕ್ತಿಕ ವಿವಾಹಗಳಲ್ಲಿ ಬಾಲ್ಯ ವಿವಾಹ ನಡೆಯುವ ಬಗ್ಗೆ ದೂರು ಬಂದಲ್ಲಿ ತಕ್ಷಣ ಸೂಕ್ತ ಕ್ರಮ ಕೈಗೊಂಡು, ಬಾಲ್ಯ ವಿವಾಹ ನಿಷೇಧ ಕಾಯ್ದೆಯನ್ವಯ ಬಾಲ್ಯ ವಿವಾಹ ತಡೆಯುವ ಬಗ್ಗೆ ಕ್ರಮ ವಹಿಸುವುದು.
- ಸಾಮೂಹಿಕ ವಿವಾಹಗಳು ನಡೆಯುವ ಸ್ಥಳದಲ್ಲಿ ಖುದ್ದು ಹಾಜರಿದ್ದು, ಯಾವುದೇ ಬಾಲ್ಯ ವಿವಾಹ ನಡೆಯದಂತೆ ಖಚಿತಪಡಿಸಿಕೊಳ್ಳುವುದು.
- ಬಾಲ್ಯ ವಿವಾಹ ಶಿಕ್ಷಾರ್ಹ ಅಪರಾಧ ಎಂದು ಸಾರ್ವಜನಿಕರಿಗೆ ಮಾಹಿತಿ ನೀಡುವ ಫಲಕಗಳನ್ನು ಸಾಮೂಹಿಕ ವಿವಾಹ ನಡೆಯುವ ಸ್ಥಳಗಳಲ್ಲಿ ಪ್ರದರ್ಶಿಸಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳಬೇಕು. ಫಲಕದಲ್ಲಿರುವ ಮಾಹಿತಿಯು ನಿಗದಿತ ಮಾರ್ಗ ಸೂಚಿಯಂತೆ ಇರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳಬೇಕು.
- ಬಾಲ್ಯ ವಿವಾಹಕ್ಕೆ ಸಂಬಂಧಿಸಿದ ಮಾಸಿಕ ಸಭೆಗಳಿಗೆ ತಪ್ಪದೇ ಹಾಜರಾಗುವುದು.
- ರಾಜಸ್ವ ನಿರೀಕ್ಷಕರು/ತಹಶೀಲ್ದಾರರಿಗೆ ಬಾಲ್ಯವಿವಾಹದ ಮಾಹಿತಿಯನ್ನು ಒಳಗೊಂಡಂತೆ ಪ್ರತಿ ತಿಂಗಳು ಮಾಹಿತಿ ನೀಡುವುದು ಹಾಗೂ ಸಭೆಗಳಿಗೆ ತಪ್ಪದೇ ಹಾಜರಾಗುವುದು.

## ಸಮಿತಿಯ ಸಭೆಗಳನ್ನು ಕರೆಯುವುದು

- ಸದರಿ ಸಮಿತಿಯು ಮೂರು ತಿಂಗಳಿಗೊಮ್ಮೆ ಸಭೆ ಸೇರತಕ್ಕದ್ದು.
- ಸಮಿತಿಯ ಸಭೆಯನ್ನು, ಸದಸ್ಯ ಕಾರ್ಯದರ್ಶಿಯು ಸಮಿತಿಯ ಅಧ್ಯಕ್ಷರೊಂದಿಗೆ ಸಮಾಲೋಚಿಸಿ, ನಿಗಧಿಪಡಿಸಬಹದಾದಂತಹ ದಿನಗಳಂದು ಮತ್ತು ಸಮಯದಲ್ಲಿ ನಡೆಸತಕ್ಕದ್ದು.
- ಸದಸ್ಯ ಕಾರ್ಯದರ್ಶಿಯು ಪ್ರತಿಯೊಂದು ಸಭೆಯ ಬಗ್ಗೆ ಸದಸ್ಯರಿಗೆ ಕನಿಷ್ಟ 3 ದಿನಗಳ ಮೊದಲು ಸಭಾ ಸೂಚನೆಯಯನ್ನು ಉದ್ದೇಶಿತ ಕಾರ್ಯಸೂಚಿಯೊಂದಿಗೆ ನೀಡತಕ್ಕದ್ದು.
- ಸದಸ್ಯ ಕಾರ್ಯದರ್ಶಿಯು ಒಂದು ದಿನದ ಮೊದಲು ನೋಟೀಸನ್ನು ನೀಡುವ ಮೂಲಕ ತುರ್ತು ಸಭೆಯನ್ನು ಕರೆಯಬಹುದು.
- ಸಭೆಯ ಕೋರಂ ಅಧ್ಯಕ್ಷರು ಸೇರಿದಂತೆ ಒಟ್ಟು ಸದಸ್ಯರಲ್ಲಿ ಶೇಕಡ 50ಕ್ಕಿಂತ ಹೆಚ್ಚಿನ ಸದಸ್ಯರು ಸಭೆಯಲ್ಲಿ ಹಾಜರಿರತಕ್ಕದ್ದು.
- ಕೋರಂ ಕೊರತೆಯಿಂದಾಗಿ ಸಭೆಯನ್ನು ನಡೆಸಲಾಗದಿದ್ದಲ್ಲಿ, ಸದರಿ ದಿನಾಂಕದಿಂದ 4 ದಿನಗಳ ಒಳಗೆ ಮತ್ತೊಂದು ದಿನಕ್ಕೆ ಸದಸ್ಯ ಕಾರ್ಯದರ್ಶಿಯು ಸಭೆಯನ್ನು ನಿಗಧಿಪಡಿಸತಕ್ಕದ್ದು. ನಿಗಧಿಪಡಿಸಲ್ಪಟ್ಟ ಸಭೆಯೂ ಸಹ ಅಗತ್ಯ ಕೋರಂ ಹೊಂದಿರದಿದ್ದಲ್ಲಿ, ಆಗ ವಾಸ್ತವವಾಗಿ ಹಾಜರಿರುವ ಸದಸ್ಯರ ಕೋರಂ ಸಾಕಾಗುತ್ತದೆ.
- ಅಧ್ಯಕ್ಷರ ಗೈರು ಹಾಜರಿದ್ದಲ್ಲಿ ತುರ್ತು ಸಭೆಯನ್ನು ಕರೆಯಬೇಕಾದ ಸಂದರ್ಭವಿದ್ದಲ್ಲಿ, ಉಪಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಭೆಯನ್ನು ಏರ್ಪಡಿಸುವುದು.

(ಸಂಧ್ಯಾ ಎಲ್ ನಾಯಕ್)
ಸರ್ಕಾರದ ಉಪ ಕಾರ್ಯದರ್ಶಿ-2
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ
ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ
ದೂರವಾಣಿ ಸಂಖ್ಯೆ : 080 – 2235 2931

## ಕರ್ನಾಟಕ ಸರ್ಕಾರ

ಸಂಖ್ಯೆ:ಮಮಅಇ ಮಕ 55 2017-18

ನಿರ್ದೇಶಕರ ಕಚೇರಿ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
1ನೇ ಮಹಡಿ, ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:14.08.2019

**"ತುರ್ತು"**

1) ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, 30 ಜಿಲ್ಲೆಗಳು
2) ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, 30 ಜಿಲ್ಲೆಗಳು

ಮಾನ್ಯರೆ,

**ವಿಷಯ :** ಗ್ರಾಮ ಪಂಚಾಯತ್ ಮಟ್ಟದಲ್ಲಿ ಮಹಿಳೆಯರ ಮತ್ತು ಮಕ್ಕಳ ರಕ್ಷಣೆಯ ಕಾವಲು ಸಮಿತಿಯನ್ನು ರಚಿಸಿರುವ ಬಗ್ಗೆ

**ಉಲ್ಲೇಖ :** ಸರ್ಕಾರದ ಆದೇಶ ಸಂಖ್ಯೆ : ಮಮಅ 48 ಮಮಅ 2018, ದಿನಾಂಕ:06.08.2019

*********

ವಿಷಯಕ್ಕೆ ಸಂಬಂಧಿಸಿದಂತೆ, ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಣಿಕೆ ತಡೆಗಟ್ಟುವಿಕೆ, ಬಾಲ್ಯ ವಿವಾಹ ನಿಷೇದ ಹಾಗೂ ಸಮಗ್ರ ಮಕ್ಕಳ ರಕ್ಷಣೆಗಾಗಿ ಗ್ರಾಮ ಪಂಚಾಯತ್ ಮಟ್ಟದಲ್ಲಿ ರಚಿಸಿರುವ ಮಕ್ಕಳ ರಕ್ಷಣಾ ಸಮಿತಿಯಯನ್ನು ವಿಲೀನಗೊಳಿಸಿ ಉಲ್ಲೇಖಿತ ಆದೇಶದನ್ವಯ **"ಮಹಿಳೆಯರ ಮತ್ತು ಮಕ್ಕಳ ರಕ್ಷಣೆಯ ಕಾವಲು ಸಮಿತಿ"**ಯನ್ನು ರಚಿಸಿ ಆದೇಶಿಸಲಾಗಿದೆ. (ಪ್ರತಿ ಲಗತ್ತಿಸಿದೆ) ಸದರಿ ಆದೇಶವನ್ನು ದಿನಾಂಕ:13.08.2019 ಮತ್ತು 14.08.2019ರಂದು ಇ-ಮೇಲ್ ಮೂಲಕವೂ ರವಾನಿಸಿದೆ.

ಸದರಿ ಆದೇಶದಾನುಸಾರ ಗ್ರಾಮ ಪಂಚಾಯತ್ ಮಟ್ಟದಲ್ಲಿ **"ಮಹಿಳೆಯರ ಮತ್ತು ಮಕ್ಕಳ ರಕ್ಷಣೆಯ ಕಾವಲು ಸಮಿತಿ"**ಯನ್ನು ದಿನಾಂಕ:31.08.2019ರ ಒಳಗಾಗಿ ರಚಿಸಲು ಕ್ರಮ ವಹಿಸುವುದು. ಸದರಿ ಸಮಿತಿಯ ಅಧ್ಯಕ್ಷ/ಉಪಾಧ್ಯಕ್ಷರನ್ನೊಳಗೊಂಡ ಸದಸ್ಯರಿಗೆ ಸೆಪ್ಟೆಂಬರ್ 2ನೇ ವಾರದಲ್ಲಿ ಉಪಗ್ರಹ ಆಧಾರಿತ ತರಬೇತಿಯನ್ನು ನೀಡಲು ಕ್ರಮವಹಿಸಲಾಗುತ್ತಿರುವುದರಿಂದ ಉಲ್ಲೇಖಿತ ಆದೇಶದ ಪ್ರತಿಯನ್ನು ಸಮಿತಿಗೆ ಜರೂರಾಗಿ ಸಲ್ಲಿಸಲು ಸಂಬಂಧಪಟ್ಟ ಉಪ ನಿರ್ದೇಶಕರು, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಮುಖಾಂತರ ಆಯಾ ತಾಲ್ಲೂಕಿನ ವ್ಯಾಪ್ತಿಗೆ ಬರುವ ಗ್ರಾಮ ಪಂಚಾಯ್ತಿ ಅಧ್ಯಕ್ಷರು/ಅಭಿವೃದ್ಧಿ ಅಧಿಕಾರಿಗಳಿಗೆ ಹಾಗೂ ಸದಸ್ಯರುಗಳಿಗೆ ಕಡ್ಡಾಯವಾಗಿ ಆದೇಶದ ಪ್ರತಿ ತಲುಪುವಂತೆ ಕ್ರಮವಹಿಸುವುದು ಹಾಗೂ ಸಮಿತಿಯನ್ನು ರಚಿಸಿರುವ ಬಗ್ಗೆ ಮಾಹಿತಿಯನ್ನು ಕೂಡಲೇ ಈ ಕಛೇರಿಗೆ ಸಲ್ಲಿಸುವಂತೆ ಸೂಚಿಸಿದೆ.

ತಮ್ಮ ವಿಶ್ವಾಸಿ,
ಅರುಂಧತಿ 
ನಿರ್ದೇಶಕರು 14/8/19
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಬೆಂಗಳೂರು

**<u>ಪ್ರತಿಯನ್ನು ಮಾಹಿತಿಗಾಗಿ :</u>** ಎಲ್ಲಾ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಸಮಗ್ರ ಶಿಶು ಅಭಿವೃದ್ಧಿ ಯೋಜನೆ (ಸಂಬಂಧಪಟ್ಟ ಉಪ ನಿರ್ದೇಶಕರ ಮುಖಾಂತರ)



Scanned by CamScanner

**ಕರ್ನಾಟಕ ಸರ್ಕಾರ**

**ಸಂಖ್ಯೆ:** ಗ್ರಾಅಪ 142 ಗ್ರಾಪಂಅ 2016

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:21-04-2016

**ಸುತ್ತೋಲೆ**

**ವಿಷಯ:** ಗ್ರಾಮ ಪಂಚಾಯಿತಿಗಳಲ್ಲಿ ಮಹಿಳಾ ಮತ್ತು ಮಕ್ಕಳ ಮಾರಾಟ ತಡೆ ಸಮಿತಿಯನ್ನು ಬಲಪಡಿಸುವ ಬಗ್ಗೆ.

******

ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿನ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸ್ಥಾಯಿ ಸಮಿತಿಗಳಡಿಯಲ್ಲಿ ರಚಿತವಾಗಿರುವ ಮಹಿಳಾ ಮತ್ತು ಮಕ್ಕಳ ಮಾರಾಟ ತಡೆ ಸಮಿತಿ ಕ್ರಿಯಾಶೀಲವಾಗಿಲ್ಲ. ಸದರಿ ಸಮಿತಿಗಳನ್ನು ಬಲಪಡಿಸಿ ಗ್ರಾಮೀಣ ಮಕ್ಕಳ ಹಾಗೂ ಮಹಿಳೆಯರ ಸಂವಿಧಾನಬದ್ಧ ಹಕ್ಕನ್ನು ರಕ್ಷಣೆ ಮಾಡಬೇಕೆಂಬ ಅಂಶವು ಸಾರ್ವಜನಿಕರಲ್ಲಿ ವ್ಯಕ್ತವಾಗುತ್ತಿದೆ.

ಆದ್ದರಿಂದ, ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 61(1)(iii)ರಡಿ ಸಾಮಾಜಿಕ ನ್ಯಾಯ ಸಮಿತಿಯನ್ನು ರಚಿಸಲಾಗಿರುತ್ತದೆ. ಉಪ ಪ್ರಕರಣ (iii)(ಬಿ)ರಲ್ಲಿ ಈ ಕೆಳಕಂಡಂತಿದೆ.

**"ಮಹಿಳಾ ಮತ್ತು ಮಕ್ಕಳ ಕಲ್ಯಾಣ:** ಸಾಮಾಜಿಕ ನ್ಯಾಯ ಸಮಿತಿಯು ಮಹಿಳೆಯರ ಸಾಮಾಜಿಕ, ಸಾಂಕೃತಿಕ ಮತ್ತು ಆರ್ಥಿಕವಾಗಿ ಅಭಿವೃದ್ಧಿಗೆ ಅನುವು ಮಾಡಿಕೊಟ್ಟು ಮಹಿಳಾ ಸಬಲೀಕರಣದಂಥ ಮಹಿಳೆಯರಿಗೆ ಸಂಬಂಧಪಡುವ ಹಿತಾಸಕ್ತಿಗಳನ್ನು ಮತ್ತು ವಿಷಯಗಳನ್ನು ಪರಾಮರ್ಶಿಸತಕ್ಕದ್ದು ಮತ್ತು ಗ್ರಾಮ ಪಂಚಾಯತ್ ಪ್ರದೇಶದಲ್ಲಿ ಇರುವ ಮಹಿಳೆಯರಿಗೆ ಕೌಟುಂಬಿಕ ಹಿಂಸೆ ಮತ್ತು ಲೈಂಗಿಕ ಕಿರುಕುಳಗಳಂಥ ಮುಂತಾದ ಅಪರಾಧಗಳ ವಿರುದ್ಧ ರಕ್ಷಣೆ ಒದಗಿಸತಕ್ಕದ್ದು. ಸಾಮಾಜಿಕ ನ್ಯಾಯ ಸಮಿತಿಯ ಪ್ರಕಾರ್ಯಗಳು ಮಹಿಳೆಯರಿಗೆ ಶಾಲೆಗಳಲ್ಲಿ, ಕಛೇರಿಗಳಲ್ಲಿ, ಕಾರ್ಖಾನೆಗಳಲ್ಲಿ, ಆಸ್ಪತ್ರೆಗಳಲ್ಲಿ ಮತ್ತು ಇತರೆ ಸಾರ್ವಜನಿಕ ಸ್ಥಳಗಳಲ್ಲಿ ಸಾಕಷ್ಟು ಅನುಕೂಲಗಳನ್ನು ಮತ್ತು ಅವರ ನಿತ್ಯ ಜೀವನದಲ್ಲಿ ಸ್ವಾತಂತ್ರ್ಯ ಮತ್ತು ಘನತೆಯನ್ನು ಖಚಿತಪಡಿಸಿಕೊಳ್ಳುವ ಮೂಲಕ ಪಂಚಾಯಿತಿಗೆ ಸಲಹೆ ನೀಡುವುದನ್ನು ಒಳಗೊಳ್ಳತಕ್ಕದ್ದು" ಎಂದಿದೆ.

ಈ ಸಮಿತಿಯು ಮಕ್ಕಳ ಮತ್ತು ಮಹಿಳೆಯರ ಸಮಸ್ಯೆಗಳ ಬಗ್ಗೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಬೇಕಾಗಿದೆ. ಈ ಸಮಿತಿಯು ಚುನಾಯಿತ ಸದಸ್ಯರುಗಳನ್ನೊಳಗೊಂಡಿದ್ದು, ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತೆ ಸೂಚಿಸಲಾಗಿದೆ. ಮಕ್ಕಳ ಮತ್ತು ಮಹಿಳೆಯರ ಸಮಸ್ಯೆಗಳನ್ನು ವಾರ್ಡ್ ಮತ್ತು ಗ್ರಾಮ ಸಭೆಗಳಲ್ಲಿ ಚರ್ಚಿಸಿ, ಗ್ರಾಮಸ್ಥರುಗಳಲ್ಲೂ ಈ ಸಮಸ್ಯೆಗಳನ್ನು ಚರ್ಚಿಸುವ ಮೂಲಕ ಅರಿವು ಮೂಡಿಸುವಂತೆ ಈ ಮೂಲಕ ಸೂಚಿಸಲಾಗಿದೆ.

(ಕೆ. ಯಾಲಕ್ಕಿಗೌಡ) 21/4/16
ನಿರ್ದೇಶಕರು (ಪಂ.ರಾಜ್-1) ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಗೆ:**

1. ಎಲ್ಲಾ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ಜಿಲ್ಲಾ ಪಂಚಾಯಿತಿಗಳು.
2. ಎಲ್ಲಾ ಕಾರ್ಯನಿರ್ವಾಹಕಾಧಿಕಾರಿಗಳು, ತಾಲ್ಲೂಕು ಪಂಚಾಯಿತಿಗಳು.
3. ಎಲ್ಲಾ ಗ್ರಾಮ ಪಂಚಾಯಿತಿಗಳ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು.

**ಪ್ರತಿ:**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರು.

...2......

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬಾಲ್ಯವಿವಾಹವನ್ನು ತಡೆಯುವಲ್ಲಿ ಸಮರ್ಪಕವಾಗಿ ಕಾರ್ಯನಿರ್ವಹಿಸಲು ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸಮನ್ವಯ ಮತ್ತು ಪರಿಶೀಲನಾ ಸಮಿತಿಗಳನ್ನು ರಚಿಸಲು ಹಾಗೂ ಗ್ರಾಮ ಪಂಚಾಯತ್ ಮಟ್ಟದಲ್ಲಿ ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿಯನ್ನು ರಚಿಸುವ ಬಗ್ಗೆ.

**ಓದಲಾಗಿದೆ:**

ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಪತ್ರ ಸಂಖ್ಯೆಮಮಅಇ/ಮಕ/17/2011-12, ದಿನಾಂಕ:24.06.2013.

**ಪ್ರಸ್ತಾವನೆ:-**

ಬಾಲ್ಯ ವಿವಾಹ ನಿಷೇಧ ಕೋರ್ ಕಮಿಟಿಯ ವರದಿಯಲ್ಲಿ ಬಾಲ್ಯ ವಿವಾಹಗಳನ್ನು ತಡೆಯುವಲ್ಲಿ ಸಮರ್ಪಕವಾಗಿ ಕಾರ್ಯನಿರ್ವಹಿಸಲು ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸಮನ್ವಯ ಮತ್ತು ಪರಿಶೀಲನಾ ಸಮಿತಿಗಳನ್ನು ರಚಿಸುವ ಬಗ್ಗೆ ಹಾಗೂ ಗ್ರಾಮ ಪಂಚಾಯತ್ ಮಟ್ಟದಲ್ಲಿ ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿಯ ರಚನೆಯ ಬಗ್ಗೆ ತಿಳಿಸಲಾಗಿದೆ. ಇದನ್ನು ಬಾಲ್ಯ ವಿವಾಹ ನಿಷೇಧ ನಿಯಮಗಳಲ್ಲಿ ಅಳವಡಿಸುವಂತೆ ತಿಳಿಸಲಾಗಿದೆ. ಆದರೆ, ಸದರಿ ಸಮಿತಿಗಳನ್ನು ರಚಿಸಲು ಅಧಿನಿಯಮದಲ್ಲಿ ಉಪಬಂಧ ಕಲ್ಪಿಸದಿರುವುದರಿಂದ, ಸಮಿತಿಗಳ ರಚನೆಯ ಅಂಶವನ್ನು ನಿಯಮದಲ್ಲಿ ಸೇರ್ಪಡಿಸುವುದನ್ನು ಕೈಬಿಟ್ಟು ರಾಜ್ಯದಲ್ಲಿ ಬಾಲ್ಯವಿವಾಹವನ್ನು ತಡೆಯಲು ಸಮರ್ಪಕವಾಗಿ ಕಾರ್ಯನಿರ್ವಹಿಸುವ ದೃಷ್ಟಿಯಿಂದ ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸಮನ್ವಯ ಮತ್ತು ಪರಿಶೀಲನಾ ಸಮಿತಿಗಳನ್ನು ಮತ್ತು ಗ್ರಾಮ ಪಂಚಾಯತ್ ಮಟ್ಟದಲ್ಲಿ ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿಗಳನ್ನು ರಚಿಸಲು ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ಮೇಲೆ ಓದಲಾದ ದಿನಾಂಕ:24.06.2013ರ ಪತ್ರದಲ್ಲಿ ಕೋರಿರುತ್ತಾರೆ.

**ಆದೇಶ ಸಂಖ್ಯೆ: ಮಮಇ 105 ಮಮಅ 2013, ಬೆಂಗಳೂರು, ದಿನಾಂಕ:22.01.2014.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಬಾಲ್ಯ ವಿವಾಹ ನಿಷೇಧ ಕೋರ್ ಕಮಿಟಿಯ ವರದಿಯನ್ವಯ ಬಾಲ್ಯ ವಿವಾಹಗಳನ್ನು ತಡೆಯಲು ಸಮರ್ಪಕವಾಗಿ ಕಾರ್ಯನಿರ್ವಹಿಸುವ ದೃಷ್ಟಿಯಿಂದ ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸಮನ್ವಯ ಮತ್ತು ಪರಿಶೀಲನಾ ಸಮಿತಿಗಳನ್ನು ಹಾಗೂ ಗ್ರಾಮ ಪಂಚಾಯತ್ ಮಟ್ಟದಲ್ಲಿ ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿಗಳನ್ನು ಅನುಬಂಧ-1 ರಿಂದ 4 ರಲ್ಲಿರುವಂತೆ ರಚಿಸಲಾಗಿದೆ ಹಾಗೂ ಸದರಿ ಸಮಿತಿಗಳು ನಿರ್ವಹಿಸಬೇಕಾದ ಕರ್ತವ್ಯಗಳನ್ನು ಸಹ ಸೂಚಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ವಿ.ಕೆ.ಜಗದೀಶ)
ಸರ್ಕಾರದ ಅಧೀನ ಕಾರ್ಯದರ್ಶಿ-1
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ

1092
27-1-14

**ಇವರಿಗೆ:**

1) ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನಸೌಧ ಬೆಂಗಳೂರು
2) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, ವಿಧಾನಸೌಧ, ಬೆಂಗಳೂರು

55

## ಅನುಬಂಧ-2

# ಬಾಲ್ಯ ವಿವಾಹಗಳನ್ನು ತಡೆಯುವ ಜಿಲ್ಲಾ ಮಟ್ಟದ ಸಮನ್ವಯ ಮತ್ತು ಪರಿಶೀಲನಾ ಸಮಿತಿ

ಜಿಲ್ಲಾಧಿಕಾರಿಗಳು – ಅಧ್ಯಕ್ಷರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು – ಸಹ ಅಧ್ಯಕ್ಷರು.

ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯಿತಿ – ಸದಸ್ಯರು.

ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು –ಸದಸ್ಯರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು – ಸದಸ್ಯರು.

ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು – ಸದಸ್ಯರು.

ಮಹಾನಗರ ಪಾಲಿಕೆ/ನಗರ ಸಭೆಯ ಆಯುಕ್ತರು – ಸದಸ್ಯರು.

ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಸಕ್ರಿಯವಾಗಿ ಕೆಲಸ ಮಾಡುತ್ತಿರುವ 2 ಸ್ವಯಂ ಸೇವಾ ಸಂಸ್ಥೆಗಳು (ಸಮಿತಿಯ ಅಧ್ಯಕ್ಷರಿಂದ ನಾಮ ನಿರ್ದೇಶನ) – ಸದಸ್ಯರು

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು – ಸದಸ್ಯ ಕಾರ್ಯದರ್ಶಿ

**ಕರ್ತವ್ಯಗಳು:-**

1) ಸಾರ್ವಜನಿಕರಲ್ಲಿ ಬಾಲ್ಯ ವಿವಾಹ ನಿಷೇಧದ ಬಗ್ಗೆ ಅರಿವು ಮೂಡಿಸುವುದು, ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಮಟ್ಟದ ಅಧಿಕಾರಿಗಳಿಗೆ ವಿಷಯದ ಬಗ್ಗೆ ಮನವರಿಕೆ ಮಾಡಿಕೊಡುವುದು.
2) ಬಾಲ್ಯ ವಿವಾಹ ನಿಷೇಧಿಸಲು ಜಿಲ್ಲಾ ಮಟ್ಟದಲ್ಲಿ ಕ್ರಿಯಾ ಯೋಜನೆಯನ್ನು ರೂಪಿಸಿಕೊಂಡು ಅದರಂತೆ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು.
3) ತಾಲ್ಲೂಕು ಮತ್ತು ಗ್ರಾಮ ಮಟ್ಟದ ಸಮಿತಿಗಳಿಗೆ ಬಾಲ್ಯ ವಿವಾಹದ ಪ್ರಕರಣಗಳನ್ನು ನಡೆಸುವ ಬಗ್ಗೆ ಸಹಕಾರ ನೀಡುವುದು.
4) ಸಮಿತಿಯು ಬಾಲ್ಯ ವಿವಾಹದಿಂದ ನೊಂದವರಿಗೆ ಪುನರ್ವಸತಿ, ಆಸರೆಗಾಗಿ ಯೋಜನೆಯನ್ನು ರೂಪಿಸಿ, ಅದರಲ್ಲಿ ವಿದ್ಯಾಭ್ಯಾಸ ಮುಂದುವರೆಸಲು, ವೃತ್ತಿ ತರಬೇತಿ, ಆಪ್ತ ಸಮಾಲೋಚನೆ ಮತ್ತು ಉಚಿತ ವೈದ್ಯಕೀಯ ನೆರವು ಮುಂತಾದವುಗಳನ್ನು ನೀಡಲು ಮತ್ತು ಕುಟುಂಬದ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಲು ಶ್ರಮಿಸುವುದು.
5) ಸಾಮೂಹಿಕ ವಿವಾಹ ಆಯೋಜಿಸುವ ವಿಧಿ ವಿಧಾನಗಳನ್ನು ಆಯೋಜಕರು ಕಡ್ಡಾಯವಾಗಿ ಪಾಲಿಸುತ್ತಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು ಮತ್ತು ಸಾಮೂಹಿಕ ವಿವಾಹಗಳಲ್ಲಿ ನಡೆಯುವ ವಿವಾಹಗಳ ನೊಂದಣಿಯ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು.
6) ಬಾಲ್ಯ ವಿವಾಹ ನಿಷೇಧದ ಅಧಿಕಾರಿಗಳು ಕರ್ತವ್ಯದಲ್ಲಿ ವಿಫಲರಾದಲ್ಲಿ ಅಥವಾ ನಿರ್ಲಕ್ಷ್ಯತೆ ತೋರಿದಲ್ಲಿ ಅಂತವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸುವುದು.
7) ತಾಲ್ಲೂಕು ಮಟ್ಟದ ಸಮನ್ವಯ ಮತ್ತು ಪರಿಶೀಲನಾ ಸಮಿತಿಯು ವರದಿಯನ್ನು 3 ತಿಂಗಳಿಗೊಮ್ಮೆ ಪರಿಶೀಲಿಸುವುದು.

## ಅನುಬಂಧ-3

# ಬಾಲ್ಯ ವಿವಾಹಗಳನ್ನು ತಡೆಯುವ ತಾಲ್ಲೂಕು ಮಟ್ಟದ ಸಮನ್ವಯ ಮತ್ತು ಪರಿಶೀಲನಾ ಸಮಿತಿ

ತಹಸಿಲ್ದಾರರು - ಅಧ್ಯಕ್ಷರು

ಕಾರ್ಯನಿರ್ವಹಣಾಧಿಕಾರಿಗಳು, ತಾಲ್ಲೂಕು ಪಂಚಾಯತ್ - ಸದಸ್ಯರು

ಕ್ಷೇತ್ರ ಶಿಕ್ಷಣಾಧಿಕಾರಿಗಳು - ಸದಸ್ಯರು

ತಾಲ್ಲೂಕು ವೈದ್ಯಾಧಿಕಾರಿಗಳು - ಸದಸ್ಯರು

ಸರ್ಕಲ್ ಪೊಲೀಸ್ ಇನ್ಸ್ಪೆಕ್ಟರ್ - ಸದಸ್ಯರು

ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ - ಸದಸ್ಯರು

ಪುರಸಭೆ/ಪಟ್ಟಣ ಪಂಚಾಯಿತಿಯ ಮುಖ್ಯ ಅಧಿಕಾರಿಗಳು - ಸದಸ್ಯರು.

ಉಪ ನೊಂದಣಾಧಿಕಾರಿಗಳು - ಸದಸ್ಯರು

ಮಕ್ಕಳ/ಮಹಿಳಾ ಕಲ್ಯಾಣ ಕ್ಷೇತ್ರದಲ್ಲಿ ಸಕ್ರಿಯವಾಗಿ ಕೆಲಸ ಮಾಡುತ್ತಿರುವ 1 ಸ್ವಯಂ ಸೇವಾ ಸಂಸ್ಥೆ (ಸಮಿತಿಯ ಅಧ್ಯಕ್ಷರಿಂದ ನಾಮ ನಿರ್ದೇಶನ) - ಸದಸ್ಯರು.

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು - ಸದಸ್ಯ ಕಾರ್ಯದರ್ಶಿ

**ಕರ್ತವ್ಯಗಳು:-**

1) ಬಾಲ್ಯ ವಿವಾಹಗಳು ಹೆಚ್ಚಾಗಿ ನಡೆಯುವ ಸೂಕ್ಷ್ಮ ಗ್ರಾಮಗಳನ್ನು ಗುರುತಿಸುವುದು.
2) ಬಾಲ್ಯ ವಿವಾಹಗಳು ನಡೆಯುವ ಸಮುದಾಯ/ಜಾತಿ/ದೇವಸ್ಥಾನ/ಸ್ಥಳ/ಆಯೋಜಕರ ಮಾಹಿತಿಯನ್ನು ನಿರ್ವಹಿಸುವುದು.
3) ತಾಲ್ಲೂಕುಗಳಲ್ಲಿ ವಾಸಿಸುವ ಮಕ್ಕಳ ಮತ್ತು ನಡೆಯುವ ಮದುವೆಗಳ ಬಗ್ಗೆ ಪರಿಶೀಲಿಸುವುದು.
4) ಬಾಲ್ಯ ವಿವಾಹದ ನಿಷೇಧದ ಕುರಿತು ಅರಿವು ಮೂಡಿಸುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು.
5) ಸಮಿತಿಯು ಬಾಲ್ಯ ವಿವಾಹಗಳನ್ನು ತಡೆದ ಸಂಖ್ಯೆ, ಬಾಲ್ಯ ವಿವಾಹಗಳು ನಡೆದ ಸಂಖ್ಯೆ ಮತ್ತು ದೂರುಗಳು ದಾಖಲಾಗಿರುವ ಬಗ್ಗೆ ಪರಿಶೀಲನೆ, ತದನಂತರ ಜಿಲ್ಲಾ ಮಟ್ಟದ ಸಮನ್ವಯ ಮತ್ತು ಪರಿಶೀಲನಾ ಸಮಿತಿಗೆ ವರದಿ ಮಾಡುವುದು.
6) ಸಮಿತಿಯು ಬಾಲ್ಯ ವಿವಾಹದಿಂದ ನೊಂದವರಿಗೆ ಪುನರ್ವಸತಿ, ಅವರಿಗಾಗಿ ಯೋಜನೆಯನ್ನು ರೂಪಿಸಿ, ಅದರಲ್ಲಿ ವಿದ್ಯಾಭ್ಯಾಸ ಮುಂದುವರೆಸಲು, ವೃತ್ತಿ ತರಬೇತಿ, ಆಪ್ತ ಸಮಾಲೋಚನೆ ಮತ್ತು ಉಚಿತ ವೈದ್ಯಕೀಯ ನೆರವು ಮುಂತಾದವುಗಳನ್ನು ನೀಡಲು ಮತ್ತು ಕುಟುಂಬದ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಲು ಶ್ರಮಿಸುವುದು.
7) ಸಮಿತಿಯು ಗ್ರಾಮಮಟ್ಟದ ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿಗೆ ಅವಶ್ಯಕತೆಯಿದ್ದಾಗ ಸಂದರ್ಭಕ್ಕನುಗುಣವಾಗಿ ಸಹಾಯ ನೀಡುವುದು.
8) ಸಮಿತಿಯು ಸಕ್ರಿಯ ಸ್ವಯಂ ಸೇವಾ ಸಂಸ್ಥೆಗಳನ್ನು ಗುರುತಿಸಿ, ಬಾಲ್ಯ ವಿವಾಹ ನಿಷೇಧದಲ್ಲಿ ತೊಡಗಿಸಿಕೊಳ್ಳುವುದು.
9) ಸಮಿತಿಯು ಶಾಲೆಗಳಲ್ಲಿ ಮಕ್ಕಳ ಹಕ್ಕುಗಳ ಕ್ಲಬ್‌ಗಳು ಸ್ಥಾಪನೆಯಾಗಿರುವ ಬಗ್ಗೆ ಮತ್ತು ಸದರಿ ಕ್ಲಬ್‌ಗಳ ಕಾರ್ಯಕ್ರಮಗಳ ಬಗ್ಗೆ ಪರಿಶೀಲಿಸುವುದು.

10) ಸಮಿತಿಯು ಬಾಲ್ಯ ವಿವಾಹ ನಿಷೇಧದಲ್ಲಿ ಪ್ರಕರಣ ದಾಖಲಿಸಿದ್ದಲ್ಲಿ ತಾಲ್ಲೂಕು/ಜಿಲ್ಲಾ ಬಾಲ್ಯ ವಿವಾಹ ನಿಷೇಧ ಅಧಿಕಾರಿಗಳಿಗೆ ಸೂಕ್ತ ದಾಖಲೆಗಳನ್ನು ಒದಗಿಸಲು ಸಹಾಯ ನೀಡುವುದು.

11) ಬಾಲ್ಯ ವಿವಾಹ ನಿಷೇಧಾಧಿಕಾರಿಗಳು ಬಾಲ್ಯ ವಿವಾಹ ನಿಷೇಧ ಸಂದರ್ಭದಲ್ಲಿ ಕರ್ತವ್ಯಲೋಪವೆಸಗಿದಲ್ಲಿ ಶಿಸ್ತು ಕ್ರಮಗಳಿಗಾಗಿ ಜಿಲ್ಲಾ ಮಟ್ಟದ ಸಮನ್ವಯ ಸಮಿತಿಗೆ, ಶಿಫಾರಸ್ಸು ಮಾಡುವುದು.

12) ಸಮಿತಿಯು 3 ತಿಂಗಳಿಗೆ ಒಮ್ಮೆ ಮತ್ತು ಅಗತ್ಯವಿದ್ದ ಸಂದರ್ಭದಲ್ಲಿ ಸಭೆ ಸೇರತಕ್ಕದ್ದು.

13) ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ತಾಲ್ಲೂಕು ಮಟ್ಟದಲ್ಲಿ ಹಮ್ಮಿಕೊಳ್ಳುವುದು.

14) ಗ್ರಾಮ ಪಂಚಾಯಿತಿ ಮಟ್ಟದ ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿಗಳ ವರದಿಗಳ ಪರಿವೀಕ್ಷಣೆ ಮಾಡುವುದು

60

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸಮಗ್ರ ಮಕ್ಕಳ ರಕ್ಷಣಾ ಯೋಜನೆಯ ಮಾರ್ಗಸೂಚಿಗಳನ್ವಯ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ರಚಿಸುವ ಕುರಿತು.

ಓದಲಾಗಿದೆ:-

1) ಆದೇಶ ಸಂಖ್ಯೆ: ಮಮಇ 71 ಮಭಾಬ 2009, ದಿನಾಂಕ: 15.06.2010.
2) ಆದೇಶ ಸಂಖ್ಯೆ: ಮಮಇ 81 ಎಸ್‌ಜೆಡಿ 2011, ದಿನಾಂಕ: 19.08.2011.
3) ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ಇವರ ಪ್ರಸ್ತಾವನೆ ಸಂಖ್ಯೆ: ಮ್ಮಮ.ಅ.ಇ.: ಪಿಡಿಎಂ.: ಪಳಿಸು: ಡಿಸಿಪಿಯು: 10-11, ದಿನಾಂಕ: 17.03.2011 ಮತ್ತು ದಿನಾಂಕ: 06.09.2011.

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮಾಂಕ (1) ರ ಆದೇಶದಲ್ಲಿ ಬಾಲನ್ಯಾಯ ಕಾಯ್ದೆ, ಸಮಗ್ರ ಬೀದಿ ಮಕ್ಕಳ ಕಾರ್ಯಕ್ರಮ, ದತ್ತು ಕಾರ್ಯಕ್ರಮ ಮತ್ತು ಮಕ್ಕಳ ಸಹಾಯವಾಣಿ ಇತ್ಯಾದಿ ಯೋಜನೆಗಳನ್ನು ಒಂದುಗೂಡಿಸಿ ಕೇಂದ್ರ ಸರ್ಕಾರವು ಹೊರಡಿಸಿರುವ ಮಾರ್ಗಸೂಚಿಗಳನ್ವಯ ಸಮಗ್ರ ಮಕ್ಕಳ ಸಂರಕ್ಷಣಾ ಯೋಜನೆಯನ್ನು ದಿನಾಂಕ: 22.03.2010 ರಂದು ಕೇಂದ್ರ ಸರ್ಕಾರದೊಡನೆ ಮಾಡಿಕೊಂಡಿರುವ ಒಪ್ಪಂದದನ್ವಯ ಕರ್ನಾಟಕ ರಾಜ್ಯದಲ್ಲಿ ಅನುಷ್ಠಾನಗೊಳಿಸಲು ಮಂಜೂರಾತಿ ನೀಡಲಾಗಿದೆ.

ಮೇಲೆ ಓದಲಾದ ಕ್ರಮಾಂಕ (2) ರ ಆದೇಶದಲ್ಲಿ ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿ, ವಿಶೇಷ ದತ್ತು ಸಂಪನ್ಮೂಲ ಸಂಸ್ಥೆ ಹಾಗೂ 30 ಜಿಲ್ಲೆಗಳಿಗೆ ಪ್ರತಿ ಜಿಲ್ಲೆಗೆ ಒಂದರಂತೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳಿಗೆ ಅವಶ್ಯವಿರುವ ವಿವಿಧ ವರ್ಗದ ಹುದ್ದೆಗಳನ್ನು ಸೃಜಿಸಿ ಸದರಿ ಹುದ್ದೆಗಳ ನೇಮಕಾತಿ ವಿಧಾನವನ್ನು ಸಹ ನಿರ್ದಿಷ್ಟಪಡಿಸಿ ಮಂಜೂರಾತಿ ನೀಡಲಾಗಿದೆ.

ಮೇಲೆ ಓದಲಾದ ಕ್ರಮಾಂಕ (3) ರ ಪತ್ರದಲ್ಲಿ ಸಮಗ್ರ ಮಕ್ಕಳ ರಕ್ಷಣಾ ಯೋಜನೆಯಡಿ ಪ್ರತಿ ಜಿಲ್ಲೆಯಲ್ಲಿ ಕಾರ್ಯಾಧ್ಯಕ್ಷರು/ಸದಸ್ಯರನ್ನೊಳಗೊಂಡಂತೆ ಜಿಲ್ಲಾ ಸಮಗ್ರ ಮಕ್ಕಳ ರಕ್ಷಣಾ ಘಟಕಗಳನ್ನು ರಚಿಸಿ ಮಂಜೂರಾತಿ ನೀಡಲು ದಿನಾಂಕ: 17.03.2011 ರಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಸಮಗ್ರ ಮಕ್ಕಳ ರಕ್ಷಣಾ ಯೋಜನೆಯ ಮಾರ್ಗಸೂಚಿ ಅಧ್ಯಾಯ (3) ರ 5.1 ಮತ್ತು ಅಧ್ಯಾಯ (4) ರ 1.3 ರಲ್ಲಿ ತಿಳಿಸಿರುವಂತೆ ಜಿಲ್ಲಾ ಮಕ್ಕಳ ರಕ್ಷಣಾ ಸಮಿತಿಯನ್ನು ರಚಿಸಬೇಕಾಗಿದ್ದು, ಈ ಸಮಿತಿಯಲ್ಲಿನ ಸದಸ್ಯರನ್ನೇ ಜಿಲ್ಲಾ ಸಮಗ್ರ ಮಕ್ಕಳ ರಕ್ಷಣಾ ಘಟಕಕ್ಕೆ ಸೂಚಿಸಿದ್ದರಿಂದ ಸದಸ್ಯರ ಸಂಖ್ಯೆಯನ್ನು ಮಿತಿಗೊಳಿಸಲು ಹಾಗೂ ಆಡಳಿತ, ಆರ್ಥಿಕ ನಿರ್ವಹಣೆ ಮತ್ತು ಮೇಲ್ವಿಚಾರಣೆಗೆ ಒಳಪಡುವ ಅಧಿಕಾರಿ/ಇಲಾಖೆಗಳನ್ನು ಒಳಗೊಂಡಂತೆ ಜಿಲ್ಲಾ ಸಮಗ್ರ ಮಕ್ಕಳ ರಕ್ಷಣಾ ಘಟಕವನ್ನು ರಚಿಸುವುದು ಸೂಕ್ತವಾಗಿದ್ದು, ಅದರಂತೆ ದಿನಾಂಕ: 06.09.2011

2..

ಸಂಖ್ಯೆ 3123
ದಿನಾಂಕ 17/10/201

ಎಂದು ಸಲ್ಲಿಸಿರುವ ಪರಿಷ್ಕೃತ ಪ್ರಸ್ತಾವನೆಗೆ ಮಂಜೂರಾತಿ ನೀಡುವಂತೆ ಮಹಿಳಾ ಮತ್ತು ಮಕ್ಕ ಅಭಿವೃದ್ಧಿ ಇಲಾಖೆಯ ನಿರ್ದೇಶಕರು ಕೋರಿರುತ್ತಾರೆ.

***<u>ಆದೇಶ ಸಂಖ್ಯೆ:ಮಮಇ 79 ಮಭಾಬ 2011, ಬೆಂಗಳೂರು, ದಿನಾಂಕ: 23.09.2011.</u>***

ಮೇಲಿನ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಕೇಂದ್ರ ಪುರಸ್ಕೃತ ಸಮಗ್ರ ಮಕ್ಕಳ ರಕ್ಷಣಾ ಯೋಜನೆಯನ್ನು (ಐ.ಸಿ.ಪಿ.ಎಸ್) ಜಿಲ್ಲಾ ಮಟ್ಟದಲ್ಲಿ ಅನುಷ್ಠಾನಗೊಳಿಸಲು ಐ.ಸಿ.ಪಿ.ಎಸ್. ಮಾರ್ಗಸೂಚಿಗಳನ್ವಯ ಅನುಬಂಧ-I ರಲ್ಲಿ ವಿವರಿಸಿರುವಂತೆ ಕಾರ್ಯನಿರ್ವಹಿಸಲು ಪ್ರತಿ ಜಿಲ್ಲೆಯಲ್ಲಿ ಈ ಕೆಳಕಂಡ ಅಧಿಕಾರಿ/ಅಧಿಕಾರೇತರ ಸದಸ್ಯರನ್ನೊಳಗೊಂಡಂತೆ **ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳನ್ನು** ಈ ಆದೇಶ ಹೊರಡಿಸಿದ ದಿನಾಂಕದಿಂದ ಹಾಗೂ ಮುಂದಿನ ಆದೇಶದವರೆಗೆ ರಚಿಸಿ ಆದೇಶಿಸಿದೆ.

| | | |
|---|---|---|
| 1. | ಜಿಲ್ಲಾಧಿಕಾರಿಗಳು | - ಅಧ್ಯಕ್ಷರು |
| 2. | ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾಪಂಚಾಯತ್ | - ಉಪಾಧ್ಯಕ್ಷರು |
| 3. | ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು | - ಸದಸ್ಯರು |
| 4. | ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | - ಸದಸ್ಯರು |
| 5. | ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ | - ಸದಸ್ಯರು |
| 6. | ಜಿಲ್ಲಾ ಆರೋಗ್ಯ ಅಧಿಕಾರಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ. | - ಸದಸ್ಯರು |
| 7. | ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ಸಮಾಜ ಕಲ್ಯಾಣ ಇಲಾಖೆ. | - ಸದಸ್ಯರು |
| 8. | ಒಬ್ಬರು ಮಕ್ಕಳ ಕ್ಷೇತ್ರದಲ್ಲಿ ಅನುಭವವಿರುವ ಸ್ವಯಂ ಸೇವಾ ಸಂಸ್ಥೆಯ ನಾಮ ನಿರ್ದೇಶಿತ ಪ್ರತಿನಿಧಿ (ಜಿಲ್ಲಾಧಿಕಾರಿಯವರಿಂದ ನಾಮನಿರ್ದೇಶಿತವಾದ ಸ್ವಯಂ ಸೇವಾ ಸಂಸ್ಥೆಯ ಪ್ರತಿನಿಧಿ. ಪ್ರತಿ ಎರಡು ವರ್ಷಕ್ಕೊಮ್ಮೆ ಹೊಸ ಸದಸ್ಯರನ್ನು ನಾಮನಿರ್ದೇಶನ ಮಾಡುವುದು.) | - ಸದಸ್ಯರು |
| 9. | ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಜಿಲ್ಲಾ ಸಮಗ್ರ ಮಕ್ಕಳ ರಕ್ಷಣಾ ಘಟಕ. | - ಸದಸ್ಯ ಕಾರ್ಯದರ್ಶಿ |

3.

ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ವಿನ್ಯಾಸವನ್ನು ಅನುಬಂಧ-2 ರಂತೆ ಗುರುತಿಸಲಾಗಿದ್ದು, ಅನುಬಂಧ-3 ರನ್ವಯ ಆವರ್ತಕ ಮತ್ತು ಅನಾವರ್ತಕ ವೆಚ್ಚವನ್ನು ಭರಿಸಬಹುದಾಗಿರುತ್ತದೆ.

ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳು ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿಯ ಆಡಳಿತ ವ್ಯಾಪ್ತಿಗೆ ಒಳಪಟ್ಟಿರುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

23/9/11
(ಎಸ್.ಎನ್.ಕೃಷ್ಣಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಇವರಿಗೆ:
ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವಂತೆ ಹಾಗೂ 500 ಪ್ರತಿಗಳನ್ನು ಒದಗಿಸುವಂತೆ ಕೋರಿದೆ.

ಪ್ರತಿ:

1) ಮಹಾಲೇಖಪಾಲರು (ಎ & ಇ), ಕರ್ನಾಟಕ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಬೆಂಗಳೂರು.
3) ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
4) ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳ ಅಧ್ಯಕ್ಷರು/ಉಪಾಧ್ಯಕ್ಷರು/ಸದಸ್ಯ ಕಾರ್ಯದರ್ಶಿ/ಎಲ್ಲಾ ಸದಸ್ಯರು. (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕರ ಮುಖಾಂತರ)
5) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು

# ಕರ್ನಾಟಕ ಸರ್ಕಾರ

ಸಂಖ್ಯೆ: ಮಮಇ 152 ಮಭಾಬ 2013

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:24.09.2013.

## ಸೇರ್ಪಡೆ

ಸಮಗ್ರ ಮಕ್ಕಳ ರಕ್ಷಣಾ ಯೋಜನೆಯ ಮಾರ್ಗಸೂಚಿಗಳನ್ವಯ ಜಿಲ್ಲಾ ಮಕ್ಕಳ ರಕ್ಷಣಾ ಘಟಕವನ್ನು ರಚಿಸಿ ದಿನಾಂಕ:23.09.2011 ರಂದು ಹೊರಡಿಸಲಾದ ಆದೇಶ ಸಂಖ್ಯೆ:ಮಮಇ 79 ಮಭಾಬ 2011ರ ಆದೇಶ ಭಾಗದ ಕ್ರಮ ಸಂಖ್ಯೆ.9ರ ನಂತರ ಈ ಕೆಳಕಂಡ ಅಧಿಕಾರಿಗಳನ್ನು ಸಹ ಸೇರಿಸಿಕೊಂಡು ಓದಿಕೊಳ್ಳತಕ್ಕದ್ದು.

| | | |
|---|---|---|
| 1. ಕಾರ್ಮಿಕ ಅಧಿಕಾರಿ, ಕಾರ್ಮಿಕ ಇಲಾಖೆ | – | ಸದಸ್ಯರು. |
| 2. ಸದಸ್ಯ ಕಾರ್ಯದರ್ಶಿ / ಪ್ರತಿನಿಧಿ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ | – | ಸದಸ್ಯರು. |
| 3. ಸದಸ್ಯರು, ಜಿಲ್ಲಾ ಪಂಚಾಯತಿ, (ಜಿಲ್ಲಾ ಪಂಚಾಯಿತಿಯ ಒಬ್ಬ ಮಹಿಳಾ ಸದಸ್ಯರು) | – | ಸದಸ್ಯರು. |
| 4. ಸದಸ್ಯರು, ಮಹಾನಗರ ಪಾಲಿಕೆ/ನಗರ ಸಭೆ (ಮಹಾನಗರ ಪಾಲಿಕೆ/ನಗರ ಸಭೆಯ ಒಬ್ಬ ಮಹಿಳಾ ಸದಸ್ಯರು) | – | ಸದಸ್ಯರು. |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಂ.ಕೆ.ಜಂಗಿ)
ಸರ್ಕಾರದ ಅಧೀನ ಕಾರ್ಯದರ್ಶಿ–1,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ.

**ಇವರಿಗೆ,**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವಂತೆ ಹಾಗೂ 500 ಪ್ರತಿಗಳನ್ನು ಒದಗಿಸುವಂತೆ ಕೋರಿದೆ.

1) ಮಹಾಲೇಖಪಾಲರು (ಎ & ಇ), ಕರ್ನಾಟಕ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
3) ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ, ಬೆಂಗಳೂರು.
4) ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳ ಅಧ್ಯಕ್ಷರು/ಉಪಾಧ್ಯಕ್ಷರು/ಸದಸ್ಯ ಕಾರ್ಯದರ್ಶಿ/ಎಲ್ಲಾ ಸದಸ್ಯರು. (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕರ ಮುಖಾಂತರ)
5) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

(99)

ಕರ್ನಾಟಕ ಸರ್ಕಾರ

ಸಂಖ್ಯೆ: ಡಿಡಿ (ಸಿಹೆಚ್) 40/2011-12

ಆಯುಕ್ತಾಲಯ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಆಯುಷ್ ಇಲಾಖೆ
ಬೆಂಗಳೂರು–09, ದಿನಾಂಕ: 21-02-2014.

# ಸುತ್ತೋಲೆ

ವಿಷಯ: ಬಾಲ್ಯ ವಿವಾಹಗಳನ್ನು ತಡೆಗಟ್ಟುವ ಬಗ್ಗೆ ಮಾನ್ಯ ಜಸ್ಟೀಸ್ ಶಿವರಾಜ್.ವಿ. ಪಾಟೀಲ್ ಇವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ, ಬಾಲ್ಯ ವಿವಾಹ ತಡೆ ಕೋರ್ ಕಮಿಟಿಯ ವರದಿಯಲ್ಲಿನ ಶಿಫಾರಸ್ಸುಗಳ ಬಗ್ಗೆ.

ಉಲ್ಲೇಖ: 1. ಮಹಿಳಾ ಮತ್ತು ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ರವರ ಪತ್ರ ಸಂಖ್ಯೆ: ಮಮಇ 184 ಮಮಅ 2012, ದಿನಾಂಕ: 30-03-2013.

2. ಅ.ಸ.ಪ ಸಂಖ್ಯೆ: ಆಕುಕ 60 ಎಫ್‌ಪಿಇ 2012, ದಿ: 23.12.2013.

****

ಬಾಲ್ಯ ವಿವಾಹ ನಿಷೇಧ ಕುರಿತು ಜಸ್ಟೀಸ್ ಶಿವರಾಜ್.ವಿ. ಪಾಟೀಲ್‌ರವರ ಅಧ್ಯಕ್ಷತೆಯಲ್ಲಿ ರಚಿಸಿದ್ದ ಕೋರ್ ಕಮಿಟಿಯ ವರದಿಯ ಶಿಫಾರಸ್ಸಿನಂತೆ, ವಿವಿಧ ಇಲಾಖೆಗಳು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ವಿವರಿಸಲಾಗಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ, ಈ ಕೆಳಗಿನ 6 ಅಂಶಗಳಿಗೆ ಸಂಬಂಧಪಟ್ಟಂತೆ, ಆದೇಶಿಸಿರುವ ಕೈಗೊಳ್ಳಬೇಕಾದ ಕ್ರಮಗಳನ್ನು ಸೂಕ್ತ ರೀತಿಯಲ್ಲಿ ಅನುಷ್ಠಾನಗೊಳಿಸಿ, ಬಾಲ್ಯ ವಿವಾಹಗಳನ್ನು ತಡೆಯಲು ಎಚ್ಚರಿಕೆವಹಿಸಲು ಸೂಚಿಸಲಾಗಿದೆ.

1. ಜನನ ಪ್ರಮಾಣ ಪತ್ರ:
   ಜನನ ಪ್ರಮಾಣ ಪತ್ರವು ವ್ಯಕ್ತಿಯ ವಯಸ್ಸನ್ನು ನಿರ್ಧರಿಸಲು ಮತ್ತು ಬಾಲ್ಯವಿವಾಹ ತಡೆಯಲು ಅತಿ ಮುಖ್ಯವಾದ ಮಾನದಂಡವಾಗಿದೆ. ಆದ್ದರಿಂದ ಇಲಾಖೆಯ ಮುಂಚೂಣಿ ಕಾರ್ಯಕರ್ತರು ಹಾಗೂ ವೈದ್ಯರು ಜನಿಸುವ ಪ್ರತಿ ಮಗುವಿನ ಜನನವನ್ನು ದಾಖಲಿಸಿ, ಜನನ ಪತ್ರ ನೀಡಲು/ಪಡೆಯಲು ಸೂಕ್ತ ಕ್ರಮವಹಿಸುವುದು.
2. ಬಾಲ್ಯ ವಿವಾಹದಿಂದಾಗುವ ದುಷ್ಪರಿಣಾಮಗಳ ಬಗ್ಗೆ ಜನಸಾಮಾನ್ಯರಿಗೆ, ತಾಯಂದಿರಿಗೆ ಮತ್ತು ಹದಿಹರೆಯದವರಿಗೆ ಆಶಾ ಕಾರ್ಯಕರ್ತೆಯರು, ಆರೋಗ್ಯ ಸಹಾಯಕಿಯರು, ದಾದಿಯರು ಮತ್ತು ವೈದ್ಯರು ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿಗಳಲ್ಲಿ, ಉಪಕೇಂದ್ರಗಳಲ್ಲಿ ಹಾಗೂ ಆರೋಗ್ಯ ಕೇಂದ್ರಗಳಲ್ಲಿ ಮಾಹಿತಿ ಶಿಕ್ಷಣ ಸಂಪರ್ಕ ಕ್ರಮಗಳನ್ನು ಅಳವಡಿಸಿಕೊಂಡು ಅರಿವು ಮೂಡಿಸುವುದು.
3. ವಯಸ್ಸಿನ ದೃಢೀಕರಣ ಪ್ರಮಾಣ ಪತ್ರ:
   ಈ ಪ್ರಮಾಣ ಪತ್ರ ನೀಡುವಲ್ಲಿ ವೈದ್ಯರು ಅನುಸರಿಸಬೇಕಾದ ವಿಧಿ ವಿಧಾನಗಳನ್ನು ಕೋರ್ ಕಮಿಟಿಯ ಶಿಫಾರಸ್ಸಿನಲ್ಲಿ ತಿಳಿಸಿರುತ್ತಾರೆ. ಅಧಿಕೃತ ವೈದ್ಯರು ಈ ಸುತ್ತೋಲೆಗೆ ಲಗತ್ತಿಸಿರುವ (Format of Age Certificate) ನಮೂನೆಯಲ್ಲಿ ಮಾತ್ರ ವಯಸ್ಸನ್ನು ದೃಢೀಕರಿಸಲು ಶಿಫಾರಸ್ಸು ಮಾಡಿರುವ ನಿರ್ದಿಷ್ಟ ಕ್ರಮಗಳನ್ನು ಅನುಸರಿಸಿ, ನಿಗದಿತ ಅರ್ಜಿ ನಮೂನೆ ಪಡೆದು ಪ್ರಮಾಣ ಪತ್ರ ನೀಡಲು ಸೂಚಿಸಿದೆ. ಪ್ರಮಾಣ ಪತ್ರ ನೀಡುವಲ್ಲಿ

ವೈದ್ಯರು ಪ್ರಮಾದವೆಸಗಿದರೆ. ಇಲಾಖೆಯಲ್ಲಿ ಸೂಕ್ತ ಶಿಸ್ತಿನ ಕ್ರಮ ಜರುಗಿಸಲಾಗುವುದು ಮತ್ತು ಮುಂದಿನ ಕ್ರಮಕ್ಕಾಗಿ ಕರ್ನಾಟಕ ವೈದ್ಯಕೀಯ ಪರಿಷತ್ತಿಗೂ ಸಹ ತಿಳಿಸಲಾಗುವುದು.

4. ಆರೋಗ್ಯ ಇಲಾಖೆಯ ಬಾಲ್ಯವಿವಾಹ ನಿಷೇಧಾಧಿಕಾರಿಗಳ ಕರ್ತವ್ಯ:
ಇಲಾಖೆಯ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ತಾಲ್ಲೂಕು ಆರೋಗ್ಯಾಧಿಕಾರಿ ಮತ್ತು ಹೆಲ್ತ್ ಇನ್ಸ್‌ಪೆಕ್ಟರ್‌ಗಳು ಬಾಲ್ಯ ವಿವಾಹ ನಿಷೇಧಾಧಿಕಾರಿಗಳೆಂದು ಘೋಷಿಸಲ್ಪಟ್ಟಿದ್ದು, ಬಾಲ್ಯ ವಿವಾಹಗಳು ಜರುಗುವ ಸಂರ್ಭಗಳಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳೊಂದಿಗೆ ಸಹಕರಿಸಲು ಸೂಚಿಸಲಾಗಿದೆ.

5. ಎ.ಎನ್.ಎಂ ಮತ್ತು ಆಶಾ ಕಾರ್ಯಕರ್ತೆಯರು, ಅಪ್ರಾಪ್ತ ವಯಸ್ಸಿನ ಮಕ್ಕಳು ಗರ್ಭಿಣಿಯಾದ ಸಂದರ್ಭದಲ್ಲಿ, ಅವರುಗಳನ್ನು ನೊಂದಾಯಿಸಿಕೊಂಡು, ತಾಯಿ ಕಾರ್ಡ್ ನೀಡಿ, ಪೌಷ್ಠಿಕ ಆಹಾರ, ಚುಚ್ಚು ಮದ್ದು ಮತ್ತು ಸಾಂಸ್ಥಿಕ ಹೆರಿಗೆಯ ಬಗ್ಗೆ ಮಾಹಿತಿ ನೀಡುವಂತೆ ಕ್ರಮಕೈಗೊಳ್ಳಲು ಸೂಚಿಸಲಾಗಿದೆ. ಇದರಿಂದ ತಾಯಿ ಮತ್ತು ಮಗುವಿನ ಮರಣ ಪ್ರಮಾಣ ಕಡಿಮೆ ಮಾಡಬಹುದಾಗಿದೆ.

6. ಎಲ್ಲಾ ಆರೋಗ್ಯ ಸೇವಾ ಕೇಂದ್ರಗಳ ವೈದ್ಯಾಧಿಕಾರಿಗಳು ತಮ್ಮ ಆಸ್ಪತ್ರೆಯ ಹೊರರೋಗಿ ಚೀಟಿಗಳಲ್ಲಿ ಮತ್ತು ತಾಯಂದಿರಿಗೆ ನೀಡುವ ಎಲ್ಲಾ ತಾಯಿ ಕಾರ್ಡುಗಳಲ್ಲಿ ಮತ್ತು ಇಲಾಖೆಯ ಅರ್ಜಿಗಳಲ್ಲಿ 'ಬಾಲ್ಯ ವಿವಾಹವನ್ನು ನಿಷೇಧಿಸಲಾಗಿದೆ ಮತ್ತು ಬಾಲ್ಯ ವಿವಾಹ ಶಿಕ್ಷಾರ್ಹ ಅಪರಾಧ' ಎಂದು ಮುದ್ರಿಸಲು ತಿಳಿಸಲು ಮತ್ತು ಸೂಕ್ತ ಕ್ರಮಕೈಗೊಳ್ಳಲು ಸೂಚಿಸಿದೆ.

**ಆಯುಕ್ತರು**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು**
**ಬೆಂಗಳೂರು**

**ಇವರಿಗೆ,**

ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಜಿಲ್ಲಾ ಶಸ್ತ್ರ ಚಿಕಿತ್ಸಕರು.

**ಪ್ರತಿಯನ್ನು ಗೌರವಪೂರ್ವಕವಾಗಿ ಈ ಕೆಳಕಂಡವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.**

1. ಸರ್ಕಾರದ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.

(76) (97)

ANNEXURE 29

**FORMAT FOR**

**APPLICATION FOR AGE CERTIFICATE**

**FOR PURPOSE OF MARRIAGE**

**(By Parents/Guardians/Bride or Groom if Major)**

Photo

**Name of Child/Person:**

**Name of Parent/Guardian:**

**Address:**

Dear Sir/Madam

I request that the age certificate may kindly be issued for my son/daughter/me for the purpose of his/her/my marriage. My son /daughter /I does/do not have an official birth certificate, and as she has/he has/I have not been to school, also does/do not have any School Certificate. I therefore request an age certificate be issued further to a detailed medical examination.

**DECLARATION**

I understand that child marriage is an offence punishable under the Prohibition of Child Marriages Act, 2006.

Date:

Place: Name and Signature/LTI of Applicant

---

**OFFICIAL PURPOSE**

........................................

Name and Signature of receiving Medical Staff

Date:

Office Seal:

409

(17)

ANNEXURE 28

## MANDATORY NORMS FOR SUBMISSION OF AGE PROOF

1. The order of priority of documents for submission of proof of age is as follows:
   a. Birth Certificate issued based on registration of births at the office of the Registrar/Sub-registrar of Births and Deaths
   b. If Birth Certificate is not available then School Certificate – School admission register extract/Transfer Certificate/ SSLC certificate to be submitted
   c. Only in the event of documents as mentioned in a & b not available then age certificate from a government medical officer to be submitted along with the affidavit by the parents/person stating that I/My son/Daughter has not admitted to the school.
2. No other documents such as affidavits, from any other person/officer other than the medical officer can be accepted as proof of age. .
3. Age certificate by the Medical Officer shall be submitted in the prescribed format and shall have the following: photograph of the child, signature/thumb impression of the child, name of parents/guardians, signature/thumb impression of parents/guardians, residence address, process of medical examination, name, designation, signature of the doctor and his/her registration number.
4. In the event of suspicion of birth certificate being false then school certificate shall be obtained for cross verification.
5. When there is conflict in information in Birth Certificate and School Certificate, then Birth Certificate will be binding provided this has been recorded in official register.

---

408

(95)

ANNEXURE 30

**Format of Age Certificate**[1]

**Government of Karnataka**

**(Name of ) ________ Hospital/PHC**

**Age Certificate for the Purpose of Marriage**

Photo

Name: ______________________________ Age: ______________

Sex: __________

Name of

Father/Mother/Guardian: ______________________________________________

Address:

____________________________________________________________________

____________________________________________________________________

Identification Marks: 1. ________________________________________

2. ________________________________________

Hospital Outpatient No. __________________ Date: ________ X-Ray (if needed):

**Medical Examination Done:**

**Part Radiographed** : 1) ..................................................................................

2) ..................................................................................

3) ..................................................................................

4) ..................................................................................

5) ..................................................................................

**Report** :

- Carpal Bones :
- Epiphysis of base of first Meta Carpal :
- Epiphysis of Head of 2nd, 3rd, 4th & 5th Meta Carpal :
- Epiphysis lower end of Radius and Ulna :

[1] Format of Age Certificate designed based on the format developed by Dr. Priyakumar, Radiologist, KC General Hospital, Malleshwaram, Bangalore

410

- Epiphysis of Head of Radius & Olecronon :
- Epiphyses of lower end of Humours :
- Epiphysis of Iliac Crest :
- Tri radiate Cartilage (Y-Shaped)
- Epiphysis of proximal end of Femur
  ( i.e., Head, Greater Trochanter and lesser Trochanter)
- Epiphysis of lower end of Femur :
- Epiphysis of upper end of Tibia and Fibula :
- Third Molar tooth of Mandible

**Opinion** supported by reasons:

In view of my opinion and reasons, I hereby certify his/her age is

................................................

**DECLARATION**

We understand that the child marriage is an offence punishable under the Prohibition of Child Marriage Act 2006.

Signature/LTI of child/person examined

Signature/LTI of Parent/Guardian

Date of issue:__________

Name & Signature of Medical Officer

Registration Number:_________

Office Seal. Address of the PHC/Hospital:

312 324

ಕರ್ನಾಟಕ ಸರ್ಕಾರ

ಸಂ:ಸಕನಿ/ಇಡಿ 4/ಶಿಆರ್‌/2017-18

ಸಮಾಜ ಕಲ್ಯಾಣ ಆಯುಕ್ತರ ಕಛೇರಿ
5ನೇ ಮಹಡಿ, ಬಹು ಮಹಡಿಗಳ ಕಟ್ಟಡ,
ಡಾ: ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:0 -10-2017

**ಸುತ್ತೋಲೆ**

ವಿಷಯ : ಬಾಲ್ಯ ವಿವಾಹಗಳನ್ನು ಸಮರ್ಪಕವಾಗಿ ತಡೆಗಟ್ಟುವ ಬಗ್ಗೆ.
ಉಲ್ಲೇಖ : (1)ಬಾಲ್ಯ ವಿವಾಹ ನಿಷೇಧ (ಕರ್ನಾಟಕ ತಿದ್ದುಪಡಿ) ಅಧಿನಿಯಮ-2016 ದಿನಾಂಕ:26-04-2017.
(2)ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು ಇವರ ಅಧ್ಯಕ್ಷತೆಯಲ್ಲಿ ದಿನಾಂಕ:21-09-2017ರಂದು ಮಧ್ಯಾಹ್ನ 3:30 ಘಂಟೆಗೆ ನಡೆದ ಸಭೆ.

ಉಲ್ಲೇಖ (1)ರ ಅಧಿನಿಯಮದಲ್ಲಿ ಬಾಲ್ಯ ವಿವಾಹಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ರಾಜ್ಯ ಜಿಲ್ಲಾ/ತಾಲ್ಲೂಕು/ಹೋಬಳಿ/ಗ್ರಾಮ ಪಂಚಾಯಿತಿ/ಗ್ರಾಮ/ನಗರ ಸಭೆ/ಪುರಸಭೆ ಮಟ್ಟದ ಸಮಿತಿಗಳನ್ನು ರಚಿಸಲಾಗಿದೆ. ಅದರನ್ವಯ ಸಮಾಜ ಕಲ್ಯಾಣ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು ಮತ್ತು ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳು, ಜಿಲ್ಲಾ/ತಾಲ್ಲೂಕು ಮಟ್ಟದ ಬಾಲ್ಯ ವಿವಾಹ ಸಮಿತಿಯ ನಿಷೇಧ ಅಧಿಕಾರಿಗಳಾಗಿ ಒಳಗೊಂಡಿರುತ್ತಾರೆ.

ಸಮಾಜ ಕಲ್ಯಾಣ ಇಲಾಖಾ ವತಿಯಿಂದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗಾಗಿ ರಾಜ್ಯಾದ್ಯಂತ ವಸತಿ ಶಾಲೆಗಳು, ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ನಿರ್ವಹಿಸಲಾಗುತ್ತಿದೆ. ಸದರಿ ವಸತಿ ಶಾಲೆ ಮತ್ತು ವಿದ್ಯಾರ್ಥಿನಿಲಯಗಳ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಬಾಲ್ಯ ವಿವಾಹಕ್ಕೆ ಒಳಗಾಗುವ ಸಾಧ್ಯತೆ ಹೆಚ್ಚಾಗಿರುವ ಸಾಧ್ಯತೆ ಇರುತ್ತದೆ. ಆದ್ದರಿಂದ ನಿಲಯಾರ್ಥಿಗಳಿಗೆ ಬಾಲ್ಯ ವಿವಾಹದ ನಿಷೇದದ ಬಗ್ಗೆ ಅರಿವು ಮೂಡಿಸಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಲಾಗಿದೆ.

Pr. Secretary W & CD
No. 8047 Date 25/10/17

**ಮುಂದುವರೆದು, ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳುವಂತೆ ಸೂಚಿಸಲಾಗಿದೆ:-**

- ನಿಲಯ/ವಸತಿ ಶಾಲೆಯ ನಿಲಯಾರ್ಥಿಯು ಒಂದು ವಾರಕ್ಕಿಂತ ಹೆಚ್ಚಿನ ಅವಧಿ ಅನಧಿಕೃತ ಗೈರು ಹಾಜರಿ ಹೊಂದಿದ್ದಲ್ಲಿ ಅವರುಗಳ ಪೋಷಕರು/ಶಿಕ್ಷಕರುಗಳಿಂದ ನಿಲಯಾರ್ಥಿಗಳ ಅನಧಿಕೃತ ಗೈರು ಹಾಜರಿ ಬಗ್ಗೆ ವರದಿಯನ್ನು ಪಡೆಯತಕ್ಕದ್ದು
- ನೋಡಲ್ ಇಲಾಖೆಯ ಬಾಲ್ಯ ವಿವಾಹ ನಿಷೇಧ ಅಧಿಕಾರಿಗಳಿಗೆ ಅಗತ್ಯವಿದ್ದಾಗ ಸಹಾಯವನ್ನು ಮಾಡತಕ್ಕದ್ದು.
- ಬಾಲ್ಯ ವಿವಾಹದಿಂದ ಆಗುವ ತೊಂದರೆಗಳ ಬಗ್ಗೆ ನಿಲಯಾರ್ಥಿಗಳಲ್ಲಿ ಅರಿವು ಮೂಡಿಸಲು ಕ್ರಮ ತೆಗೆದುಕೊಳ್ಳತಕ್ಕದ್ದು.

ಆಯುಕ್ತರು
ಸಮಾಜ ಕಲ್ಯಾಣ ಇಲಾಖೆ.

ಗೆ,

1. ಜಂಟಿ/ಉಪ ನಿರ್ದೇಶಕರು, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ, ಎಲ್ಲಾ ಜಿಲ್ಲೆಗಳು.

2. ಸಹಾಯಕ ನಿರ್ದೇಶಕರು (ಗ್ರೇಡ್ 1/2), ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆ, ಎಲ್ಲಾ ತಾಲ್ಲೂಕುರವರಿಗೆ ಸಂಬಂಧಪಟ್ಟ ಜಂಟಿ/ಉಪ ನಿರ್ದೇಶಕರು, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ, ರವರ ಮುಖಾಂತರ.
3. ಕಛೇರಿ ಟಿಪ್ಪಣಿ

**ಪ್ರತಿಯನ್ನು ಮಾಹಿತಿಗಾಗಿ ಸಲ್ಲಿಸಲಾಗಿದೆ:-**

(1) ಆಯುಕ್ತರು, ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.

(2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು, ರವರಿಗೆ ಗೌರವ ಪೂರ್ವಕವಾಗಿ ಸಲ್ಲಿಸಲಾಗಿದೆ.

(3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಬೆಂಗಳೂರು, ರವರಿಗೆ ಗೌರವ ಪೂರ್ವಕವಾಗಿ ಸಲ್ಲಿಸಲಾಗಿದೆ.

ಶಿಕ್ಷಣದ ಪಕ್ಕು
ಸರ್ವ ಶಿಕ್ಷಣ ಅಭಿಯಾನ
ಎಲ್ಲರೂ ಕಲಿಯೋಣ–ಎಲ್ಲರೂ ಬೆಳೆಯೋಣ

ಕಡತ ಸಂಖ್ಯೆ: ಸಶಿಅ/ಬಾ.ವಿ.ನಿ/2016 ದಿನಾಂಕ:30.12.2016

**ಸುತ್ತೋಲೆ**

**ವಿಷಯ:** ಬಾಲ್ಯ ವಿವಾಹ ತಡೆಗಟ್ಟುವ ಸಂಬಂಧ ತಾಲ್ಲೂಕು ಮತ್ತು ಜಿಲ್ಲಾ ಹಂತದಲ್ಲಿ ಅರಿವು ಮೂಡಿಸುವ ಪ್ರಯುಕ್ತ ಅಗತ್ಯ ಕ್ರಮ ಕೈಗೊಳ್ಳುವ ಬಗ್ಗೆ.

**ಉಲ್ಲೇಖ:**1. ಸರ್ಕಾರದ ಅಪರ ಕಾರ್ಯದರ್ಶಿ ಮತ್ತು ಪ್ರೌಢ ಮತ್ತು ಪ್ರಾಥಮಿಕ ಇಲಾಖೆ/ಪತ್ರ ಸಂಖ್ಯೆ:ಇಡಿ:47886/2016, ದಿನಾಂಕ: 18.11.2016.

2. ಸರ್ಕಾರದ ಅಧೀನ ಕಾರ್ಯದರ್ಶಿ–1 ಆದೇಶ ಸಂಖ್ಯೆ:ಮಮಇ 105 ಮಮಅ 2013, ಬೆಂಗಳೂರು, ದಿನಾಂಕ:22.01.2014.

******

**ಹಿನ್ನೆಲೆ:**

- ಸಂವಿಧಾನ 21ಎ ಹಾಗೂ ಆರ್.ಟಿ.ಇ 2009 ರ ಪ್ರಕಾರ 6 ರಿಂದ 14 ವರ್ಷದ ಎಲ್ಲಾ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡುವುದು ಸರ್ಕಾರದ ಜವಾಬ್ದಾರಿಯಾಗಿರುತ್ತದೆ. ಆದರೆ ನಾನಾ ಕಾರಣಗಳಿಂದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಪೂರ್ಣಗೊಳಿಸುವ ಮೊದಲೇ ಶಾಲೆ ಬಿಡುತ್ತಿರುವುದು, ಅದರಲ್ಲಿಯೂ ಹೆಚ್ಚು ಪ್ರಮಾಣದಲ್ಲಿ ಹೆಣ್ಣು ಮಕ್ಕಳು ಶಾಲೆ ಬಿಡಲು ಇರುವ ಪ್ರಮುಖವಾದ ಕಾರಣಗಳಲ್ಲಿ ಒಂದು ಬಾಲ್ಯಾವಸ್ಥೆಯಲ್ಲಿಯೆ ವಿವಾಹ ಮಾಡುತ್ತಿರುವುದು ಇಂದಿಗೂ ಕಂಡುಬಂದಿರುತ್ತದೆ.

- ಹೆಣ್ಣು ಮಕ್ಕಳು ಗಂಡು ಮಕ್ಕಳಿಗಿಂತ ಹೆಚ್ಚಿನ ರೀತಿಯಲ್ಲಿ ಬಾಲ್ಯ ವಿವಾಹ, ಲೈಗಿಂಕ ಪಿಡುಗಿನಂತಹ ಗಂಡಾಂತರಗಳನ್ನು ಎದುರಿಸುತ್ತಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಪ್ರತಿಯೊಂದು ಹೆಣ್ಣು ಮಗುವೂ ತಾರತಮ್ಯರಹಿತವಾದ ಮತ್ತು ದೌರ್ಜನ್ಯದಿಂದ ಮುಕ್ತವಾದ ವಾತಾವರಣದಲ್ಲಿ, ಘನತೆಯಿಂದ ಪ್ರತಿ ಹೆಣ್ಣು ಮಗುವು ಜೀವಿಸುವ, ಅಭಿವೃದ್ಧಿ ಹೊಂದುವ, ಸುರಕ್ಷಿತವಾಗಿ ಬದುಕುವ ಮತ್ತು ಸಹಬಾಗಿತ್ವದ ಹಾಗೂ ಪಾಲುದಾರಿಕೆಯ ಹಕ್ಕುಗಳನ್ನು ಮಕ್ಕಳ ಬಾಲ್ಯವಸ್ಥೆ ಪೂರ್ಣ (0–18) ಸಂರಕ್ಷಿಸಿ ಈಡೇರಿಸುವುದು ಎಲ್ಲರ ಜವಾಬ್ದಾರಿಯಾಗಿರುತ್ತದೆ.

- ರಾಜ್ಯದಲ್ಲಿ 2006 ರಲ್ಲಿ ಬಾಲ್ಯ ವಿವಾಹ ನಿಷೇದ ಕಾಯ್ದೆ ಜಾರಿ ಆಗಿದ್ದಾಗ್ಯೂ ಶೇ.23 ರಷ್ಟು ಬಾಲ್ಯ ವಿವಾಹ ಪ್ರಕರಣಗಳು ನಡೆದಿರುವುದು ಗಂಭೀರವಾದ ಚರ್ಚೆಗೆ ಕಾರಣವಾಗಿದೆ. ಈ ಬಗ್ಗೆ **ರಾಜ್ಯಮಟ್ಟದ ಸಮನ್ವಯ ಸಮಿತಿ ಮತ್ತು ಪರಿಶೀಲನಾ ಸಮಿತಿ** ತೀವ್ರ ಕ್ರಮ ತೆಗೆದ್ ಕೊಳ್ಳುವಂತೆ ಹಾಗೂ ಸಂಬಂಧಿಸಿದ ಇಲಾಖೆಗಳು ಕಟ್ಟು ನಿಟ್ಟಾಗಿ ಕ್ರಮ ವಹಿಸಲು ಮತ್ತು ಅನುಪಾಲನೆ ಮಾಡಲು ಸೂಚಿಸಿರುತ್ತಾರೆ.

*ಪು.ತಿ.ನೋ...*

**ಈ ಹಿನ್ನೆಲೆಯಲ್ಲಿ ಶಿಕ್ಷಣ ಇಲಾಖೆಯ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅನುಷ್ಠಾನ ಅಧಿಕಾರಿಗಳು ಇತರೆ ಇಲಾಖೆಗಳ ಸಹಯೋಗದೊಂದಿಗೆ ಕೆಳಕಂಡಂತೆ ಕಾರ್ಯನಿರ್ವಹಿಸಲು ಸೂಚಿಸಿದೆ.**

1. **ಹೆಣ್ಣು ಮಕ್ಕಳ ದಾಖಲಾತಿ ಹಾಜರಾತಿ ಪರಿಶೀಲನೆ**

- ಗ್ರಾಮ ಶಿಕ್ಷಣ ವಹಿಯಲ್ಲಿ 6 ರಿಂದ 14 ವರ್ಷದ ಮಕ್ಕಳ ಪಟ್ಟಿ ತಯಾರಿಸಲಾಗಿದ್ದು ಮೂರು ತಿಂಗಳಿಗೊಮ್ಮೆ ಪರಿಷ್ಕರಿಸುವುದು. ಈ ಪಟ್ಟಿಯಲ್ಲಿನ ಹೆಣ್ಣು ಮಕ್ಕಳು ಶಾಲೆಗೆ ದಾಖಲಾಗಿ ನಿರಂತರವಾಗಿ ಹಾಜರಾಗುತ್ತಿರುವ ಬಗ್ಗೆ ಶಾಲಾ ಮುಖ್ಯ ಶಿಕ್ಷಕರು, ಸಿ.ಆರ್.ಪಿ/ಇ.ಸಿ.ಓ, ತಾಲ್ಲೂಕು ಹಾಗೂ ಜಿಲ್ಲಾಮಟ್ಟದ ಅಧಿಕಾರಿಗಳು ಖಾತ್ರಿ ಪಡಿಸಿಕೊಳ್ಳುವುದು.
- ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯತ್ ಸಭೆ ನಡೆಯುವಾಗ ಸಂಬಂಧಿಸಿದ ವ್ಯಾಪ್ತಿಯೊಳಗೆ ಯಾವುದೇ ಬಾಲ್ಯ ವಿವಾಹ ನಡೆದಿರುವ ಬಗ್ಗೆ ಚರ್ಚಿಸಿ, ಸಂಬಂಧಿಸಿದ ಇಲಾಖೆಗಳ ಸಹಯೋಗದೊಂದಿಗೆ ಬಾಲ್ಯವಿವಾಹ ತಡೆಗಟ್ಟುವುದು.
- ಎಲ್ಲಾ ಶಾಲೆಗಳಲ್ಲಿ ಮುಖ್ಯವಾಗಿ ಬಾಲಕಿಯರಿಗಾಗಿ ಉತ್ತಮ ಶೌಚಾಲಯ ಸೌಲಭ್ಯ ಒದಗಿಸುವುದು.

2. **ಮಕ್ಕಳ ಜನ್ಮ ದಿನಾಂಕದ ಪ್ರಮಾಣ ಪತ್ರ ನೀಡುವಿಕೆ**

- ಮಕ್ಕಳ ಜನ್ಮ ದಿನಾಂಕದ ಪ್ರಮಾಣ ಪತ್ರ ನೀಡುವಾಗ ಮುಖ್ಯ ಶಿಕ್ಷಕರು ನಿಖರ ಜನ್ಮ ದಿನಾಂಕ ಪತ್ರ ನೀಡಬೇಕು. ಕೆಲವು ಸಂದರ್ಭದಲ್ಲಿ ಸುಳ್ಳು ಪ್ರಮಾಣ ಪತ್ರ ಪಡೆದು ಬಾಲ್ಯ ವಿವಾಹ ಮಾಡಿರುವುದು ಕಂಡು ಬರುತ್ತದೆ. ಈ ಬಗ್ಗೆ ಮುಖ್ಯ ಶಿಕ್ಷಕರು ಕಡ್ಡಾಯವಾಗಿ ದಾಖಲಾತಿ ವಹಿ ಪ್ರತಿಯನ್ನು ಮಾತ್ರ ದೃಢೀಕರಿಸಿ ನೀಡಬೇಕು. ಇಲ್ಲವಾದ್ದಲ್ಲಿ ಈ ಬಗ್ಗೆ ಮುಖ್ಯ ಶಿಕ್ಷಕರನ್ನು ಜವಾಬ್ದಾರರನ್ನಾಗಿ ಮಾಡಲಾಗುವುದು.
- ಮಹಿಳಾ ಮತ್ತು ಮಕ್ಕಳ ಇಲಾಖೆಯು ಬಾಲ್ಯ ವಿವಾಹ ತಡೆಗಾಗಿ ಶಿಕ್ಷಕರು, ಪೋಷಕರು ಮತ್ತು ನೆರೆಹೊರೆಯವರು ಏನು ಮಾಡಬೇಕೆಂಬ 5 ವಿವಿಧ ಸಿದ್ದಪಡಿಸಿರುವ ಪೋಸ್ಟರ್‌ಗಳ ಮಾಹಿತಿಯ ವ್ಯಾಪಕ ಪ್ರಚಾರ ಮಾಡಿ ಸಾರ್ವಜನಿಕರ ಗಮನಕ್ಕೆ ತರುವುದು. ಬಾಲ್ಯವಿವಾಹ ನಿಷೇಧ ಸಂಬಂಧ ಸಾರ್ವಜನಿಕರಲ್ಲಿ ಜಾಥಾ, ಭಿತ್ತಿಪತ್ರ, ಬೀದಿ ನಾಟಕಗಳ ಮೂಲಕ ಅರಿವು ಮೂಡಿಸುವುದು.

3 . **ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆ**

- ಪಠ್ಯಪುಸ್ತಕದಲ್ಲಿ ಬಾಲ್ಯ ವಿವಾಹ ಮತ್ತು ಆದರಿಂದಾಗುವ ಅನಾಹುತಗಳ ಬಗ್ಗೆ ಅಳವಡಿಸಿದ್ದು, ಈ ಬಗ್ಗೆ ಮಕ್ಕಳಲ್ಲಿ ಗುಂಪು ಚರ್ಚೆ, ಚರ್ಚಾಸ್ಪರ್ಧೆ, ಭಾಷಣಗಳನ್ನು ಏರ್ಪಡಿಸುವುದು, ಉಪನ್ಯಾಸ ಮೂಲಕ ಅರಿವು ಮೂಡಿಸುವುದು.
- ಶಾಲೆಗಳಲ್ಲಿ ಮೀನಾ ತಂಡ ವಿವಿಧ ಕ್ಲಬ್‌ಗಳು, ಮಕ್ಕಳ ಕ್ಲಬ್‌ಗಳ ಕಾರ್ಯ ನಿರ್ವಹಿಸುತ್ತಿವೆ. ಈ ಕ್ಲಬ್ ಮೂಲಕ ಬಾಲ್ಯವಿವಾಹ ನಿಷೇದಿಸುವ ಸಂಬಂಧದ ಚಟುವಟಿಕೆಗಳನ್ನು, ಶಿಕ್ಷಕರ ಮಾರ್ಗದರ್ಶನದಲ್ಲಿ ಹಮ್ಮಿಕೊಳ್ಳುವುದು.

4. **ತರಬೇತಿ ನೀಡುವುದು**

- 2016–17 ಸಾಲಿನಲ್ಲಿ ಶಿಕ್ಷಕರಿಗೆ ತರಬೇತಿ ನೀಡುವ ಸಂದರ್ಭದಲ್ಲಿ ಒಂದು ಅವಧಿಯನ್ನು ಬಾಲ್ಯವಿವಾಹ ತಡೆಗಟ್ಟುವ ಸಂಬಂಧ ಕಡ್ಡಾಯವಾಗಿ ತರಬೇತಿ ನೀಡುವುದು.
- ಎಸ್.ಡಿ.ಎಂ.ಸಿ ಸದಸ್ಯರು ಸಭೆಯಲ್ಲಿ ಹೆಣ್ಣು ಮಕ್ಕಳು ಶಾಲೆ ಬಿಡುವ, ಬಾಲ್ಯ ವಿವಾಹ ಕಂಡು ಬಂದಲ್ಲಿ ಸಂಬಂಧಿಸಿದ ಇಲಾಖೆಯವರಿಗೆ ಮಾಹಿತಿ ನೀಡುವುದು. ಎಸ್.ಡಿ.ಎಂ.ಸಿ ಸದಸ್ಯರಿಗೆ ತರಬೇತಿ ನೀಡುವಾಗ ಬಾಲ್ಯ ವಿವಾಹ ವಿಷಯಗಳ ಬಗ್ಗೆ ಶಾಲಾ ಅಭಿವೃದ್ಧಿ ಮೇಲ್ವಿಚಾರಣಾ ಸಮಿತಿಗಳು ಸದಸ್ಯರಿಗಾಗಿ ಅರಿವು ಮೂಡಿಸುವ ಕಾರ್ಯಕ್ರಮಗಳು ಮತ್ತು ಅವರ ಪಾತ್ರ ಹಾಗೂ ಹೊಣೆಗಾರಿಕೆಗಳ ಬಗ್ಗೆ ತಿಳುವಳಿಕೆ ನೀಡುವುದು.
- ಗ್ರಾಮಹಂತದಲ್ಲಿ ಬಾಲ್ಯ ವಿವಾಹ ಕಂಡು ಬಂದಲ್ಲಿ, ಪಿಡಿಒ, ಗ್ರಾಮಲೆಕ್ಕಿಗರು, ಮುಖ್ಯ ಶಿಕ್ಷಕರು ಅಂಗನವಾಡಿ ಕಾರ್ಯಕರ್ತೆಯರು, ಬಾಲ್ಯವಿವಾಹ ಮಾಡುವ ಪ್ರಯತ್ನವನ್ನು ಬಚ್ಚಿಡೆದೆ. ಸ್ಥಳೀಯ ಎನ್‌ಜಿಓ, ಸ್ತ್ರೀಶಕ್ತಿ ಸಂಘಗಳ ಸಹಾಯ ಪಡೆದು ಸಂಬಂಧಿಸಿದ WCD, CWC, ಕಡ್ಡಾಯವಾಗಿ Police ಇಲಾಖೆಯ ಗಮನಕ್ಕೆ ತರುವುದು.

5. **ಬಿಇಒ, ಬಿಆರ್‌ಪಿ, ಇಸಿಒ, ಸಿಆರ್‌ಪಿ, ರವರುಗಳ ಕರ್ತವ್ಯಗಳು**

- ಎಲ್ಲಾ ಮಕ್ಕಳು ಶಾಲೆಗೆ ಬರುತ್ತಿದ್ದಾರೆಯೇ, ಯಾವುದೇ ಮಗು ಶಾಲೆ ಬಿಟ್ಟು ಹೋಗಿಲ್ಲ ಎಂಬುದನ್ನು ತಿಳಿದುಕೊಳ್ಳುವಲ್ಲಿ ಹಾಗೂ ಸಮುದಾಯದಲ್ಲಿ ಬಾಲ್ಯ ವಿವಾಹವನ್ನು ತಡೆಗಟ್ಟುವುದಕ್ಕಾಗಿ ಶಾಲಾ ಹಂತದಲ್ಲಿ ನಡೆಯುವ ಎಸ್.ಡಿ.ಎಂ.ಸಿ ಸಭೆ ಮತ್ತು ಸಮುದಾಯದತ್ತ ಶಾಲೆ ಕಾರ್ಯಕ್ರಮ ಆಯೋಜನೆ ಸಂದರ್ಭದಲ್ಲಿ ಸದಸ್ಯರಿಗೆ ಅರಿವು ಮೂಡಿಸುವುದು.
- ತಾಲ್ಲೂಕು ಮಟ್ಟದಲ್ಲಿ ಬಾಲ್ಯ ವಿವಾಹ ನಿಷೇದ ದುಷ್ಪರಿಣಾಮ ಕುರಿತು ಕಾನೂನು ಅರಿವಿನ ಬಗ್ಗೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. **ಸಿಆರ್‌ಪಿ, ಬಿಆರ್‌ಪಿ, ಇಸಿಒ, ರವರು ಬಿಇಒ ರವರಿಗೆ ನೆರವು** ನೀಡುವುದು.
- ಗ್ರಾಮ ಮಟ್ಟದ ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿಗೆ ಸಂದರ್ಭಕ್ಕನುಗುಣವಾಗಿ ಬಾಲ್ಯ ವಿವಾಹ ನೀಷೇಧಕ್ಕೆ ಸಂಬಂಧಿಸಿದಂತೆ ಸಹಾಯ ಮಾಡುವುದು.
- ತಮ್ಮ ಕಾರ್ಯಕ್ಷೇತ್ರದಲ್ಲಿ ಯಾವುದೇ ಬಾಲ್ಯ ವಿವಾಹ ನಡೆಯದಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು.
- ಬಾಲ್ಯ ವಿವಾಹದ ಬಗ್ಗೆ ಮಾಹಿತಿ ತಿಳಿದು ಬಂದಾಗ ಶಾಲಾ ಮುಖ್ಯೋಪಾದ್ಯಾಯರಿಗೆ/ ಶಾಲಾ ಶಿಕ್ಷಕರಿಗೆ/ ಅಂಗನವಾಡಿ ಕಾರ್ಯಕರ್ತೆಯರಿಗೆ ಬಾಲ್ಯ ವಿವಾಹ ನಿಷೇಧಕ್ಕೆ ಸಂಬಂಧಿಸಿದಂತೆ **ಸಿಆರ್‌ಪಿ, ಇಸಿಒ, ಬಿಆರ್‌ಪಿ,** ರವರು ಸಹಾಯ ಮಾಡುವುದು.

## 6. ಸಮಿತಿಗಳ ರಚನೆ ಮತ್ತು ಕರ್ತವ್ಯಗಳು

- ಉಲ್ಲೇಖ (2) ರ[redacted] ಆದೇಶದಂತೆ ರಚಿಸಲಾಗಿರುವ ಬಾಲ್ಯ ವಿವಾಹವನ್ನು ತಡೆಯುವ ಜಿಲ್ಲಾ ಮಟ್ಟ ಮತ್ತು ತಾಲ್ಲೂಕು ಮಟ್ಟದ ಸಮ್ವಯ ಮತ್ತು ಸಮಿತಿಗಳ ಸದಸ್ಯರನ್ನೊಳಗೊಂಡ ಮಾಹಿತಿಯನು ಈ ಪತ್ರದೊಂದಿಗೆ **(ಅನುಬಂಧದಲ್ಲಿ)** ಲಗತ್ತಿಸಿದೆ.
- ಬಾಲ್ಯ ವಿವಾಹಗಳನ್ನು ತಡೆಗಟ್ಟಲು ಜಿಲ್ಲಾಮಟ್ಟದ ಸಮನ್ವಯ ಮತ್ತು ಪರಿಶೀಲನಾ ಸಮಿತಿಯ ಸದಸ್ಯರು ಸಾಮೂಹಿಕ ವಿವಾಹ ಆಯೋಜಿಸುವ ವಿಧಿ ವಿಧಾನಗಳನ್ನು ಆಯೋಜಕರು ಕಡ್ಡಾಯವಾಗಿ ಪಾಲಿಸುತ್ತಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು ಮತ್ತು ಸಾಮೂಹಿಕ ವಿವಾಹಗಳಲ್ಲಿ ನಡೆಯುವ ನೊಂದಣಿಯ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು.
- ಜಿಲ್ಲಾ ಮಟ್ಟದ ಸಮನ್ವಯ ಮತ್ತು ಪರಿಶೀಲನಾ ಸಮಿತಿಯ ಸದಸ್ಯರು ತಾಲ್ಲೂಕು ಮಟ್ಟದ ಸಮನ್ವಯ ಮತ್ತು ಪರಿಶೀಲನಾ ಸಮಿತಿಯ ವರದಿಯನ್ನು ಪರಿಶೀಲಿಸುವುದು.
- ತಾಲ್ಲೂಕು ಮಟ್ಟದ ಸಮನ್ವಯ ಮತ್ತು ಪರಿಶೀಲನಾ ಸಮಿತಿಯು ಬಾಲ್ಯ ವಿವಾಹಗಳು ಹೆಚ್ಚಾಗಿ ನಡೆಯುವ ಸೂಕ್ಷ್ಮ ಗ್ರಾಮಗಳನ್ನು ಗುರುತಿಸಿ, ಬಾಲ್ಯ ವಿವಾಹ ನಿಷೇಧದ ಕುರಿತು ಅರಿವು ಮೂಡಿಸಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು.
- ಸಮಿತಿಯು ಬಾಲ್ಯ ವಿವಾಹಗಳನ್ನು ತಡೆದ ಸಂಖ್ಯೆ, ಬಾಲ್ಯ ವಿವಾಹ ನಡೆದ ಸಂಖ್ಯೆ ಮತ್ತು ದೂರುಗಳು ದಾಖಲಾಗಿರುವ ಬಗ್ಗೆ ಪರಿಶೀಲನೆ ತದನಂತರ ಜಿಲ್ಲಾ ಮಟ್ಟದ ಸಮಿತಿಗೆ ವರದಿ ಮಾಡುವುದು.
- ಸಮನ್ವಯ ಸಮಿತಿಯು 3 ತಿಂಗಳಿಗೊಮ್ಮೆ ಸಭೆ ಸೇರುವುದು, ಗ್ರಾಮ ಪಂಚಾಯಿತಿ ಮಟ್ಟದ ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿಗಳು ಸಲ್ಲಿಸಿರುವ ವರದಿಗಳನ್ನು ಪರಿಶೀಲಿಸಿ ಬಾಲ್ಯ ವಿವಾಹ ನಡೆಯದಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು.
- ಪಾಲಕರ ಪೋಷಣೆಯಿಂದ ವಂಚಿತರಾದ ಹೆಣ್ಣು ಮಕ್ಕಳು, ದೇವದಾಸಿಯವರ ಮಕ್ಕಳು ಅಥವಾ ಲೈಂಗಿಕ ದುಡಿಮೆಯ ವಲಸೆ ಕುಟುಂಬಗಳ ಹೆಣ್ಣು ಮಕ್ಕಳಿಗೆ ಬಾಲ್ಯ ವಿವಾಹದ ಸಮಸ್ಯೆಗಳ ಬಗ್ಗೆ ವಿವಿಧ ಶೈಕ್ಷಣಿಕ ಹಂತಗಳಲ್ಲಿ ಅರಿವು ಮೂಡಿಸುವುದು.

## 7. ಇತರೆ ಇಲಾಖೆಗಳೊಂದಿಗೆ.

- ಗ್ರಾಮ ಪಂಚಾಯಿತಿ ಮಟ್ಟದ ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿಯು, ಸಾಮೂಹಿಕ ವಿವಾಹ ಆಯೋಜಕರ ಮಾಹಿತಿ ಮತ್ತು 18 ವರ್ಷದೊಳಗಿನ ಮಕ್ಕಳ ಮಾಹಿತಿಯನ್ನು ಸಮಿತಿಯು ಹೊಂದಿರಬೇಕು.
- ಗ್ರಾಮ ಮಟ್ಟದಲ್ಲಿ/ಬ್ಲಾಕ್ ಮಟ್ಟದಲ್ಲಿ/ವಾರ್ಡ್ ಮಟ್ಟದಲ್ಲಿ ಬಾಲ್ಯ ವಿವಾಹದ ಬಗ್ಗೆ ಅರಿವು ಮೂಡಿಸುವ ಕಾನೂನು ತಿಳುವಳಿಕೆಯ ಶಿಬಿರಗಳನ್ನು ಸಾರ್ವಜನಿಕರ ಸಹಯೋಗದೊಂದಿಗೆ ನಿಯಮಿತವಾಗಿ ನಡೆಸತಕ್ಕದ್ದು.

- ಸಮಿತಿಯು ಸ್ಥಳೀಯ ಸೇವಾ ಸಂಸ್ಥೆಗಳನ್ನು ಗುರುತಿಸಿ ಬಾಲ್ಯ ವಿವಾಹ_ ನಿಷೇಧದಲ್ಲಿ ತೊಡಗಿಸಿಕೊಳ್ಳುವುದು.
- ತಮ್ಮ-ವ್ಯಾಪ್ತಿಗೆ ಬರುವ ಪೊಲೀಸ್ ಠಾಣೆ, ಮಕ್ಕಳ ಸಹಾಯವಾಣಿ, ಬಾಲ ಕಾರ್ಮಿಕ ಪುನರ್ವಸತಿ ಕೇಂದ್ರಗಳ ಸಹಾಯವಾಣಿ ಸಂಖ್ಯೆಯನ್ನು (ಸಹಾಯವಾಣಿ–1098, –1091, ಅಂಗ್ನಿಶಾಮಕ–101, ಅಂಬುಲೆನ್ಸ್–108, ಪೋಲಿಸ್–100) ಶಾಲಾ ಆವರಣ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ನಮೂದಿಸುವುದು.

## 8. ಮೇಲ್ವಿಚಾರಣೆ

- ಜಿಲ್ಲಾಮಟ್ಟದ ಮತ್ತು ತಾಲ್ಲೂಕು ಮಟ್ಟದ ಸಮಿತಿಯ ಸದಸ್ಯರು ಸಮುದಾಯದಲ್ಲಿ ಬಾಲ್ಯ ವಿವಾಹವನ್ನು ತಡೆಗಟ್ಟುವುದಕ್ಕಾಗಿ ಶಾಲಾ ಹಂತದಲ್ಲಿ ನಡೆಯುವ ಎಸ್.ಡಿ.ಎಂ.ಸಿ ಸಭೆ ಮತ್ತು ಸಮುದಾಯದತ್ತ ಶಾಲೆ ಕಾರ್ಯಕ್ರಮ ಆಯೋಜನೆ ಸಂದರ್ಭದಲ್ಲಿ ಸದಸ್ಯರಿಗೆ ಅರಿವು ಮೂಡಿಸಿರುವ ಬಗ್ಗೆ ಮೇಲುಸ್ತುವಾರಿ ಮಾಡುವುದು.
- ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸಮಿತಿಯ ಸದಸ್ಯರು, ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿಯನ್ನು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ರಚಿಸಿ, ಬಾಲ್ಯ ವಿವಾಹ ನಿಷೇಧದ ಜಾಗೃತಿ ಮೂಡಿಸಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು.

ನಿರ್ದೇಶಕರು(ಕಾ)
ಸರ್ವ ಶಿಕ್ಷಣ ಅಭಿಯಾನ
ಬೆಂಗಳೂರು

ಅಗತ್ಯ ಕ್ರಮಕ್ಕಾಗಿ,

1. ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು(ಆ), ಉಪನಿರ್ದೇಶಕರು(ಅಭಿವೃದ್ಧಿ)ರವರಿಗೆ.
2. ಎಲ್ಲಾ ತಾಲ್ಲೂಕಿನ ಬಿ.ಇ.ಓ ರವರ ಮೂಲಕ ಎಲ್ಲಾ ಶಾಲೆಯ ಮುಖ್ಯ ಶಿಕ್ಷಕರಿಗೆ.

ಗೌರವಗಳೊಂದಿಗೆ,

1. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ಅವಗಾಹನೆಗಾಗಿ.
2. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ರವರ ಆಪ್ತ ಶಾಖೆಗೆ ಮಾನ್ಯರ ಅವಗಾಹನೆಗೆ ತರಲು ಕೋರಿದೆ.
3. ಅಪರ ಆಯುಕ್ತರು ಧಾರವಾಡ, ಕಲ್ಬುರ್ಗಿ ರವರ ಅವಗಾಹನೆಗಾಗಿ.

ಕರ್ನಾಟಕ ಸರ್ಕಾರ

**ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ ನೃಪತುಂಗ ರಸ್ತೆ ಬೆಂಗಳೂರು - 560001**

**ಸಂಖ್ಯೆ:ADM2(OTH)/270/2025-26/805223** **ದಿನಾಂಕ:26.06.2025**

## ಸುತ್ತೋಲೆ

**ವಿಷಯ:** ಶಾಲಾ ಗೋಡೆಗಳ ಮೇಲೆ ಮಕ್ಕಳ ಸಹಾಯವಾಣಿ-1098 ಬರೆದು ವ್ಯಾಪಕ ಪ್ರಚಾರ ಮಾಡುವ ಬಗ್ಗೆ.

**ಉಲ್ಲೇಖ:** ಸರ್ಕಾರದ ಆದೇಶ ಸಂಖ್ಯೆ:ಇಪಿ 270 ಎಸ್ ಟಿ ಬಿ ದಿ:07.12.2022

***********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪಾಲನೆ ಮತ್ತು ರಕ್ಷಣೆ ಅವಶ್ಯಕತೆ ಇರುವ ಮಕ್ಕಳು ಸೇರಿದಂತೆ ಎಲ್ಲಾ ಮಕ್ಕಳಿಗೆ ತುರ್ತು ಸೇವೆಯನ್ನು ಒದಗಿಸುವ 24*7 ಉಚಿತ ಮಕ್ಕಳ ಸಹಾಯವಾಣಿ-1098 ಕುರಿತು ಹೆಚ್ಚಿನ ಪ್ರಚಾರ ನೀಡುವ ಕುರಿತಂತೆ ಸಾರ್ವಜನಿಕರಲ್ಲಿ ಹಾಗೂ ಮಕ್ಕಳಲ್ಲಿ ಅರಿವು ಮೂಡಿಸುವ ಮೂಲಕ ಮಕ್ಕಳ ಘನತೆಯ ಬದುಕಿನ ನಿರ್ಮಾಣ ಮಾಡಬೇಕಾಗಿರುವುದರಿಂದ ಹಾಗೂ ಮಕ್ಕಳ ರಕ್ಷಣೆ ಎಲ್ಲರ ಕರ್ತವ್ಯವಾಗಿದ್ದು ಸಾರ್ವಜನಿಕ ಹಿತಾಸಕ್ತಿ ದೃಷ್ಟಿಯಿಂದ ಮಕ್ಕಳ ಸಹಾಯವಾಣಿ 1098 ಕುರಿತು ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಶಾಲೆಗಳು ಪದವಿ ಪೂರ್ವ ಕಾಲೇಜುಗಳ ಕಟ್ಟಡಗಳ ಸೂಕ್ತ ಸ್ಥಳಗಳ ಮೇಲೆ ಗೋಡೆ ಬರಹ ಬರೆಸಲು ಹಾಗೂ ಎಲ್ಲಾ ಶಾಲೆಗಳ ವೆಬ್‌ಸೈಟ್ ನಲ್ಲಿ 1098 ಕುರಿತು ಮಾಹಿತಿ ಪ್ರಕಟಿಸಲು ಬೆಳಗಿನ ಶಾಲಾ ಅಸೆಂಬ್ಲಿ ಪ್ರಾರ್ಥನೆ ಸಮಯದಲ್ಲಿ ಮಕ್ಕಳಿಗೆ ಮಾಹಿತಿ ನೀಡಲು ಮಕ್ಕಳಿಗಾಗಿ ಸಿದ್ಧಪಡಿಸುವ ಎಲ್ಲಾ ಪುಸ್ತಕ ಹಾಗೂ ನೋಟ್ ಬುಕ್‌ಗಳ ಮೇಲೆ ಹಾಗೂ ಎಲ್ಲಾ ಪುಟಗಳ ಕೆಳ ಭಾಗದಲ್ಲಿ ಲೇಬರ್ ಮೇಲೆ ಈ ಮಾಹಿತಿ ಪ್ರಕಟಿಸಲು ಉಲ್ಲೇಖಿತ ಪತ್ರದಲ್ಲಿ ನಿರ್ದೇಶಿಸಲಾಗಿರುತ್ತದೆ.

ಈ ಸಂಬಂಧ ರಾಷ್ಟ್ರವ್ಯಾಪಿಯಲ್ಲಿ ಚಾಲ್ತಿಯಲ್ಲಿರುವ ಪಾಲನೆ ಮತ್ತು ರಕ್ಷಣೆ ಅವಶ್ಯಕತೆ ಇರುವ ಮಕ್ಕಳಿಗೆ ತುರ್ತು ಸೇವೆಯನ್ನು ಒದಗಿಸುವ 24*7 ಉಚಿತ ಮಕ್ಕಳ ಸಹಾಯವಾಣಿ-1098 ಕುರಿತು ಹೆಚ್ಚಿನ ಪ್ರಚಾರ ಮಾಡಿ ಸಂಕಷ್ಟದಲ್ಲಿ ಸಿಲುಕಿರುವ ರಕ್ಷಣೆ ಮತ್ತು ಪೋಷಣೆಗೆ ಅವಶ್ಯಕತೆ ಇರುವ ಮಕ್ಕಳಿಗೆ ತುರ್ತುಸೇವೆಯನ್ನು ಒದಗಿಸಲು ಈ ಸಂಖ್ಯೆಗೆ ಕರೆ ಮಾಡುವ ಮೂಲಕ ನೆರವು ಪಡೆಯಬಹುದಾಗಿದೆ. ಈ ಸಂಖ್ಯೆಯು ಉಚಿತ ದೂರವಾಣಿ ಕರೆಯಾಗಿದ್ದು ಮಕ್ಕಳಾಗಲಿ ಅಥವಾ ಸಾರ್ನಜನಿಕರಾಗಲಿ ಕರೆ ಮಾಡಿ ತುರ್ತು ನೆರವು ಅಗತ್ಯವಿರುವ ಮಕ್ಕಳಿಗೆ ರಕ್ಷಣೆಯನ್ನು ಒದಗಿಸಬಹುದಾಗಿದೆ.

ಈ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಶಾಲೆಗಳ ಗೋಡೆಗಳ ಮಕ್ಕಳ ಸಹಾಯವಾಣಿ-1098 ಕುರಿತು ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಶಾಲೆಗಳು ಪದವಿ ಪೂರ್ವ ಕಾಲೇಜುಗಳ ಕಟ್ಟಡಗಳ ಸೂಕ್ತ ಸ್ಥಳಗಳ ಮೇಲೆ ಗೋಡೆ ಬರಹ ಬರೆಸುವುದು. ಎಲ್ಲಾ ಶಾಲೆಗಳ ವೆಬ್‌ಸೈಟ್ ನಲ್ಲಿ 1098 ಕುರಿತು ಮಾಹಿತಿ ಪ್ರಕಟಿಸುವುದು ಮತ್ತು ಬೆಳಗಿನ ಶಾಲಾ ಅಸೆಂಬ್ಲಿ ಪ್ರಾರ್ಥನೆ ಸಮಯದಲ್ಲಿ ಮಕ್ಕಳಿಗೆ 1098 ಮಾಹಿತಿ ನೀಡಲು ಮಕ್ಕಳಿಗಾಗಿ ಸಿದ್ಧಪಡಿಸುವ ಎಲ್ಲಾ ಪುಸ್ತಕ ಹಾಗೂ ನೋಟ್ ಬುಕ್‌ಗಳ ಮೇಲೆ ಹಾಗೂ ಎಲ್ಲಾ ಪುಟಗಳ ಕೆಳ ಭಾಗದಲ್ಲಿ ಲೇಬಲ್ ಮೇಲೆ 1098 ಸೀಲ್ ಹಾಕಿ ವ್ಯಾಪಕ ಪ್ರಚಾರ ಮಾಡಲು ಸರ್ಕಾರಿ/ಖಾಸಗಿ ಶಾಲಾ ಮುಖ್ಯ ಶಿಕ್ಷಕರಿಗೆ ಸೂಕ್ತ ಕ್ರಮವಹಿಸಲು ನಿರ್ದೇಶನ ನೀಡಲು ಎಲ್ಲಾ ಅಧಿಕಾರಿಗಳಿಗೆ ಉಪನಿರ್ದೇಶಕರು(ಆಡಳಿತ) ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಚಿಸಿದೆ.

ಆಯುಕ್ತರು,
ಶಾಲಾ ಶಿಕ್ಷಣ ಇಲಾಖೆ

**ಇವರಿಗೆ**

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಶಾಲಾ ಶಿಕ್ಷಣ ಇಲಾಖೆ ರವರಿಗೆ ಸೂಕ್ತ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಾಲಾ ಶಿಕ್ಷಣ ಇಲಾಖೆರವರಿಗೆ(ಆಯಾ ಉಪನಿರ್ದೇಶಕರು ಆಡಳಿತ)ರವರ ಮೂಲಕ
3. ಶಾಲಾ ಮುಖ್ಯ ಶಿಕ್ಷಕರಿಗೆ ( ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ) ಅಗತ್ಯ ಕ್ರಮಕ್ಕಾಗಿ
4. ಕಛೇರಿ ಪ್ರತಿ

**No.WCDSEC-SBB/82/2020-WCD-SEC D-WOMEN AND CHILD WELFARE SEC**

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಮಕ್ಕಳ ಹಕ್ಕುಗಳು ಮತ್ತು ರಕ್ಷಣೆಯ ಕಾರ್ಯವನ್ನು ನಿರ್ವಹಿಸಲು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಹುದ್ದೆಗಳಿರುವಂತೆ ತಾಲ್ಲೂಕಾ ಮಟ್ಟದಲ್ಲಿ ಮಕ್ಕಳ ಹಕ್ಕುಗಳು ಮತ್ತು ರಕ್ಷಣೆಯ ಕಾರ್ಯವನ್ನು ನಿರ್ವಹಿಸಲು ಆಯಾ ತಾಲ್ಲೂಕಿನಲ್ಲಿ ಶಿಶು ಅಭಿವೃದ್ಧಿ ಯೋಜನಾಧಿಕಾರಿ(CDPO) ಗಳು ತಾಲ್ಲೂಕು ಹಂತದಲ್ಲಿ ಕಾರ್ಯ ನಿರ್ವಹಿಸುವ ಬಗ್ಗೆ.

ಓದಲಾಗಿದೆ: ಸರ್ಕಾರದ ಆದೇಶ ಸಂಖ್ಯೆ:ಮಮಇ 255 ಮಭಾಬ 2016 ದಿನಾಂಕ:06.09.2019.

**ಪ್ರಸ್ತಾವನೆ:**

ಮೇಲೆ ಓದಲಾದ ಸರ್ಕಾರದ ಆದೇಶ ಸಂಖ್ಯೆ:ಮಮಇ 255 ಮಭಾಬ 2016 ದಿನಾಂಕ:06.09.2019ರಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಮಗ್ರ ಮಕ್ಕಳ ರಕ್ಷಣಾ ಯೋಜನೆ(ಐಸಿಪಿಎಸ್)ಯಡಿಯಲ್ಲಿ ಪತ್ರಾಂಕಿತ 26 ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಹುದ್ದೆಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ನಿವೃತ್ತರಾಗುವ ಪತ್ರಾಂಕಿತ ಅಧಿಕಾರಿಗಳನ್ನು ಒಂದು ವರ್ಷದ ಅವಧಿಗೆ ಕೆಸಿಎಸ್ ಆರ್ ನಿಯಮ 313(ಬಿಬಿ) ರನ್ವಯ ನೇಮಕಾತಿ ಮಾಡಲು ಕೆಲವು ಷರತ್ತುಗಳನ್ನು ವಿಧಿಸಿ, ಮಂಜೂರಾತಿ ನೀಡಲಾಗಿರುತ್ತದೆ.

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಮಕ್ಕಳ ಹಕ್ಕುಗಳು ಮತ್ತು ರಕ್ಷಣೆಯ ಕಾರ್ಯವನ್ನು ನಿರ್ವಹಿಸಲು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಹುದ್ದೆಗಳಿರುವಂತೆ ತಾಲ್ಲೂಕಾ ಮಟ್ಟದಲ್ಲಿ ಮಕ್ಕಳ ಹಕ್ಕುಗಳು ಮತ್ತು ರಕ್ಷಣೆಯ ಕಾರ್ಯವನ್ನು ನಿರ್ವಹಿಸಲು ತಾಲ್ಲೂಕಾ ಮಕ್ಕಳ ರಕ್ಷಣಾಧಿಕಾರಿ ಹುದ್ದೆಗಳು ಸೃಜನೆಯಾಗದಿರುವುದರಿಂದ, ಮಕ್ಕಳ ಹಕ್ಕುಗಳು ಮತ್ತು ರಕ್ಷಣೆಯ ಕಾರ್ಯವನ್ನು ನಿರ್ವಹಿಸುವಲ್ಲಿ ಅಡೆ ತಡೆಯುಂಟಾಗುತ್ತಿದೆ.

ಇದರಿಂದಾಗಿ ಮಕ್ಕಳ ರಕ್ಷಣೆ ಹಾಗೂ ಪೋಷಣೆಗೆ ಹಿನ್ನಡೆಯಾಗುವುದನ್ನು ಗಮನಿಸಲಾಗಿದ್ದು, ಮಕ್ಕಳ ಸರ್ವತೋಮುಖ ಬೆಳವಣಿಗೆ ಅಂಶಗಳ ಹಿನ್ನಲೆಯಲ್ಲಿ, ತಾಲ್ಲೂಕಾ ಮಟ್ಟದಲ್ಲಿ ಮಕ್ಕಳ ಹಕ್ಕುಗಳು ಮತ್ತು ರಕ್ಷಣೆಯ ಕಾರ್ಯವನ್ನು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಯಾವ ರೀತಿಯಾಗಿ ಕಾರ್ಯವನ್ನು ನಿರ್ವಹಿಸುವರೋ, ಅದೇ ರೀತಿಯಲ್ಲಿ ಆಯಾ ತಾಲ್ಲೂಕಿನಲ್ಲಿ ಶಿಶು ಅಭಿವೃದ್ಧಿ ಯೋಜನಾಧಿಕಾರಿ(CDPO) ಗಳು ತಾಲ್ಲೂಕು ಹಂತದಲ್ಲಿ ಕಾರ್ಯ ನಿರ್ವಹಿಸುವ ಬಗ್ಗೆ ಹೆಚ್ಚುವರಿಯಾಗಿ ಕಾರ್ಯ ನಿರ್ವಹಿಸುವ ಬಗ್ಗೆ ಪ್ರಸ್ತಾಪಿಸಲಾಗಿರುತ್ತದೆ.

ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ

**ಸರ್ಕಾರಿ ಆದೇಶ ಸಂಖ್ಯೆ: ಮಮಇ 72 ಮಭಾಬ 2020, ಬೆಂಗಳೂರು, ದಿನಾಂಕ: 02.06.2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಮಕ್ಕಳ ಹಕ್ಕುಗಳು ಮತ್ತು ರಕ್ಷಣೆಯ ಕಾರ್ಯವನ್ನು ನಿರ್ವಹಿಸಲು ಹಾಗೂ ಮಕ್ಕಳ ಸರ್ವತೋಮುಖ ಬೆಳವಣಿಗೆ ಅಂಶಗಳನ್ನು ಗಮನಿಸಿ, "ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಯಾವ ರೀತಿಯಾಗಿ ಮಕ್ಕಳ ಹಕ್ಕುಗಳು ಮತ್ತು ರಕ್ಷಣೆಯ ಕಾರ್ಯವನ್ನು ನಿರ್ವಹಿಸುವರೋ, ಅದೇ ರೀತಿಯಲ್ಲಿ ಆಯಾ ತಾಲ್ಲೂಕಿನಲ್ಲಿ ಶಿಶು ಅಭಿವೃದ್ಧಿ ಯೋಜನಾಧಿಕಾರಿ(CDPO) ಗಳು ತಾಲ್ಲೂಕು ಹಂತದಲ್ಲಿ ಹೆಚ್ಚುವರಿಯಾಗಿ ಕಾರ್ಯ ನಿರ್ವಹಿಸುವಂತೆ ಆದೇಶಿಸಿದೆ."

2..

Karnataka State Child Protection Society Bengaluru

ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ:ಮಮಇ 255 ಮಭಾಬ 2016 ದಿನಾಂಕ:06.09.2019ರಲ್ಲಿ ವಿಧಿಸಲಾಗಿರುವ ಷರತ್ತುಗಳನ್ನು ತಾಲ್ಲೂಕಾ ಹಂತದಲ್ಲಿ ಅನ್ವಯಿಸುವಂತೆ ಕಡ್ಡಾಯವಾಗಿ ಪಾಲಿಸಲು ಆದೇಶಿಸಿದೆ.

ಈ ಆದೇಶವನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಲಾದ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

2/1/20
(ವಿ. ಭಾಗ್ಯಲಕ್ಷ್ಮಿ)
ಸರ್ಕಾರದ ಅಧೀನ ಕಾರ್ಯದರ್ಶಿ-3
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ(ಡಿ ಶಾಖೆ

**ಇವರಿಗೆ,**

1. ಪ್ರಧಾನ ಮಹಾಲೇಖಪಾಲರು (ಎ & ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5329, ಬೆಂಗಳೂರು-560001.
2. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
3. ನಿರ್ದೇಶಕರು, ಸಮಗ್ರ ಮಕ್ಕಳ ರಕ್ಷಣಾ ಯೋಜನೆ, ಬೆಂಗಳೂರು
4. ಎಲ್ಲಾ ಜಿಲ್ಲಾಧಿಕಾರಿಗಳು.
5. ಯೋಜನಾ ನಿರ್ದೇಶಕರು, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ, ಬೆಂಗಳೂರು
6. ನಿರ್ದೇಶಕರು/ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
7. ಆಂತರಿಕ ಆರ್ಥಿಕ ಸಲಹೆಗಾರರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-10), ವಿಧಾನ ಸೌಧ, ಬೆಂಗಳೂರು.
9. ಉಪನಿರ್ದೇಶಕರು, ಎನ್.ಎಂ.ಸಿ, ಖನಿಜ ಭವನ, ಬೆಂಗಳೂರು.
10. ಎಲ್ಲಾ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು.
11. ಎಲ್ಲಾ ಶಿಶು ಅಭಿವೃದ್ಧಿ ಯೋಜನಾಧಿಕಾರಿ(CDPO) ಗಳು.
12. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿ ಕಟ್ಟಡ, ಬೆಂಗಳೂರು.
13. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರ ಆಪ್ತ ಕಾರ್ಯದರ್ಶಿ,ವಿಕಾಸ ಸೌಧ, ಬೆಂಗಳೂರು
14. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

Government of Karnataka
(Police Department)

Office of the Director General & Inspector General of Police, Karnataka State, Nrupathunga Road, Bangalore-560 001

No.CRM-2/139/WP/2019

Office of the
Director General and
Inspector General of Police,
Nrupathunga Road, Bengaluru-01
Dated : 26 .11.2019

## CIRCULAR

Sub: **Registering of FIR (Zero FIR)**

Ref: 1) Ministry of Home Affairs Central State Division New Delhi Letter No. 15011/35/2013-SC/ST-W, dated 10/05/2013
2) Ministry of Home Affairs Central State Division New Delhi Letter No. 15011/91/2013-SC/ST-W, dated 06/02/2014.
3) Ministry of Home Affairs Central State Division New Delhi Letter No. 15011/91/2013-SC/ST-W, dated 12/10/2015.
4) Hon'ble High Court of Karnataka, judgement in WP no. 30666/2019, dated: 19/09/2019

---

With reference to the above captioned subject, regarding registering FIR, your attention is invited to all the above references(Copy enclosed). Directions given by Hon'ble High Court of Karnataka in WP No. 30666/2019, (GM-RES) Umapathi V/s State and others, are reiterated below for strict compliance by all the unit officers:-

(a) Even if the alleged offence has been committed outside the territorial Jurisdiction of the Police Station, FIR Shall still be registered and the same shall be transferred to appropriate Police Station:

(b) The Police officers should be clearly informed that failure to comply with the direction of registration of FIR and a receipt of information about cognizable offence may invite prosecution of the Police officer

under section 166-A of IPC and it may also invite departmental action against them.

2. All the Unit Officers are hereby directed to communicate this order to all their Subordinate Police Officers and police stations to scrupulously abide by the directions of the Hon'ble High Court of Karnataka. Disciplinary action will be initiated against erring officers for non compliance. The senior officers will be liable for contempt of court proceedings in the event of violation of these orders.

3. The Range IGsP, Commissioners of Police, Superintendents of Police should acknowledge the receipt of this circular by name cover to the undersigned immediately.

(NEELMANI N. RAJU)
Director General and
Inspector General of Police
Karnataka State.

To:

1. The Commissioners of Police, Bengaluru City/Mysuru City/Hubbali-Dharawada City/Mangaluru City & Belagavi City.
2. All Range Inspectors General of Police.
3. The Director, Karnataka Police Academy, Mysuru.
4. All Superintendents of Police, In charge of Districts, Including KGF and Railways.

**Copy to:**

The Additional Director General of Police, PCW to take necessary steps to publish this Circular in our official Website and to include in our POLICE IT software.

**Copy with compliments to:**

The Additional Chief Secretary, Home Department, Bengaluru.

DGP CONTROL ROOM
Date 26/11
Signature
Time 1835

SSA-SEDSP
19/03/19

ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಕೆ.ಆರ್.ವೃತ್ತ, ನೃಪತುಂಗ ರಸ್ತೆ, ಬೆಂಗಳೂರು-01

ಸಂ.ಸಶಿಅ/ಆಚ/ಬಿಬಿಬಿಪಿ/01/2018-19 ದಿನಾಂಕ: 18.3.2019

## ಸುತ್ತೋಲೆ

ವಿಷಯ: "ಹೆಣ್ಣು ಮಗುವನ್ನು ರಕ್ಷಿಸಿ, ಹೆಣ್ಣು ಮಗುವನ್ನು ಓದಿಸಿ" (ಬೇಟಿ ಬಚಾವೊ ಬೇಟಿ ಪಡಾವೊ) ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಬಗ್ಗೆ,

ಉಲ್ಲೇಖ:ಅ.ಸ.ಪತ್ರ ಸಂ.ಮಮಅಇ/ಮಕ/ಬಿಬಿಬಿಪಿ/06/2018-19 ದಿ.16.02.2019 & 2.3.2019

-------

ಸಾರ್ವಜನಿಕರೊಂದಿಗೆ ಪೊಲೀಸರ ಸಂಬಂಧವನ್ನು ಉತ್ತಮಗೊಳಿಸುವ ನಿಟ್ಟಿನಲ್ಲಿ ಜಿಲ್ಲಾ ಹಂತದಲ್ಲಿ ಪೋಲಿಸ್ ಇಲಾಖೆಯು "ತೆರೆದ ಮನೆ" ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಈ ಕಾರ್ಯಕ್ರಮದಡಿ ಶಾಲಾ ಮಕ್ಕಳಿಗೆ ಪ್ರತಿ ಗುರುವಾರದಂದು ಬೆಳಿಗ್ಗೆ 10.30 ರಿಂದ ಸಂಜೆ 4.30 ಗಂಟೆಯವರೆಗೆ ಮಕ್ಕಳ ಹಕ್ಕುಗಳು ಹಾಗೂ ಅವರ ರಕ್ಷಣೆ ಕುರಿತು ಪೊಲೀಸ್ ಇಲಾಖೆಯ ಜವಾಬ್ದಾರಿ ಮತ್ತು ಕಾನೂನುಗಳ ಬಗ್ಗೆ ಮಕ್ಕಳಿಗೆ ಮಾಹಿತಿ ನೀಡುವರು. ಈ ಹಿನ್ನೆಲೆಯಲ್ಲಿ ತಮ್ಮ ವ್ಯಾಪ್ತಿಯ ಪೊಲೀಸ್ ಠಾಣೆಗೆ ಶಾಲಾ ಮಕ್ಕಳನ್ನು ಕರೆತಂದು ಮಾಹಿತಿ ಒದಗಿಸಲು ಸೂಚಿಸಿದೆ. "ತೆರೆದ ಮನೆ" ಸುತ್ತೋಲೆಯ ಪ್ರತಿಯನ್ನು ಲಗತ್ತಿಸಿದೆ.

ನಿರ್ದೇಶಕರು (ಗುಣಮಟ್ಟ)
ಸಮಗ್ರ ಶಿಕ್ಷಾ - ಕರ್ನಾಟಕ

19/3/19

1. ಉಪನಿರ್ದೇಶಕರು (ಆಡಳಿತ) ಹಾಗೂ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ-ಕರ್ನಾಟಕ, ಎಲ್ಲಾ ಜಿಲ್ಲೆಗಳು
2. ಉಪನಿರ್ದೇಶಕರು (ಅಭಿವೃದ್ಧಿ) ಸಮಗ್ರ ಶಿಕ್ಷಣ ಕರ್ನಾಟಕ ಎಲ್ಲಾ ಜಿಲ್ಲೆಗಳು
3. ರಾಜ್ಯ ಯೋಜನಾ ನಿರ್ದೇಶಕರ ಆಪ್ತ ಶಾಖೆಗೆ - ಮಾಹಿತಿಗಾಗಿ
4. ಕಛೇರಿಯ ಪ್ರತಿ

19/3/19

ಕರ್ನಾಟಕ ಸರ್ಕಾರ
(ಪೊಲೀಸ್ ಇಲಾಖೆ)

ಸಂ: ಡಿಜಿಪಿ/ತರಬೇತಿ/ಎಸ್‌ಜೆಪಿಯು/15/2013

ಪೊಲೀಸ್ ಮಹಾ ನಿರ್ದೇಶಕರವರ ಕಛೇರಿ,
ತರಬೇತಿ,
ಕಾರ್ಲ್‌ಟನ್ ಭವನ, ಅರಮನೆ ರಸ್ತೆ,
ಬೆಂಗಳೂರು, ದಿನಾಂಕ: 31/05/2013.

**ಸುತ್ತೋಲೆ**

**ವಿಷಯ:_ತೆರೆದ ಮನೆ ಕಾರ್ಯಕ್ರಮ ಮತ್ತು ಜನಸಂಪರ್ಕ ಸಭೆಯಲ್ಲಿ ನೀಡಬೇಕಾದ ಮಾಹಿತಿ ಬಗ್ಗೆ.**

* * *

ಸಾರ್ವಜನಿಕರೊಂದಿಗೆ ಪೊಲೀಸರ ಸಂಬಂಧವನ್ನು ಉತ್ತಮಗೊಳಿಸುವ ನಿಟ್ಟಿನಲ್ಲಿ ಈಗಾಗಲೇ ಈಶಾನ್ಯ ವಲಯ ಗುಲ್ಬರ್ಗಾದ ಠಾಣೆಗಳಲ್ಲಿ ನಡೆಸುತ್ತಿರುವ **'ತೆರೆದ ಮನೆ'** (OPEN HOUSE) ಕಾರ್ಯಕ್ರಮವನ್ನು ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳಲ್ಲಿ ಕಟ್ಟುನಿಟ್ಟಾಗಿ ಜಾರಿಗೊಳಿಸಲು ಸೂಚಿಸಿದೆ. ಠಾಣಾ ವ್ಯಾಪ್ತಿಯಲ್ಲಿ ಬರುವ ಶಾಲಾ ಮಕ್ಕಳನ್ನು ಪ್ರತಿ ಗುರುವಾರ ಬೆಳಗ್ಗೆ 10-30 ಗಂಟೆಯಿಂದ ಸಂಜೆ 4-30 ಗಂಟೆಯ ಅವಧಿಯೊಳಗೆ ಠಾಣೆಗೆ ಕರೆತಂದು ಮಕ್ಕಳಿಗೆ ಪೊಲೀಸ್ ಇಲಾಖೆಯ ಬಗ್ಗೆ ವಿವರವಾದ ಮಾಹಿತಿಯನ್ನು ನೀಡುವುದು ಹಾಗೂ ತಮ್ಮ ಠಾಣಾ ವ್ಯಾಪ್ತಿಯ ಶಾಲೆಗಳಿಗೆ ಠಾಣಾಧಿಕಾರಿಯು ಭೇಟಿ ನೀಡಿ ಸಂವಾದ ನಡೆಸುವುದು. ಈ ಬಗ್ಗೆ ಪ್ರತಿ ಗುರುವಾರ ಸಾಯಂಕಾಲ ಆಯಾ ಜಿಲ್ಲಾ/ನಗರ ನಿಸ್ತಂತು ಘಟಕವು ಮಾಹಿತಿ ಪಡೆದು ಈ ಕಛೇರಿಗೆ ರವಾನಿಸುವುದು.

ಹಾಗೂ ಈ ಹಿಂದೆ ಹೊರಡಿಸಿರುವ ಸ್ಥಾಯಿ ಆದೇಶ ಸಂಖ್ಯೆ:920 ದಿನಾಂಕ:4/04/1994ರಂತೆ ಪ್ರತಿ ತಿಂಗಳಿಗೊಂದರಂತೆ ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳಲ್ಲಿ ಕಡ್ಡಾಯವಾಗಿ **'ಜನಸಂಪರ್ಕ ಸಭೆ'** (Community Outreach Programme) ಗಳನ್ನು ನಡೆಸುವಂತೆ ಸೂಚಿಸಲಾಗಿದೆ. ಸದರಿ ಸಭೆಗಳಲ್ಲಿ ಮಹಿಳೆಯರು ಮತ್ತು ಮಕ್ಕಳ ಹಕ್ಕುಗಳು ಹಾಗೂ ಕಾಯ್ದೆಗಳ ಬಗ್ಗೆ ಸಾರ್ವಜನಿಕರಿಗೆ ಮನವರಿಕೆ ಮಾಡಿಸುವುದು.

ಸದರಿ ಠಾಣಾ ಮಟ್ಟದಲ್ಲಿ ನಡೆಸುವ ತೆರೆದ ಮನೆ ಹಾಗೂ ಜನಸಂಪರ್ಕ ಸಭೆಯಲ್ಲಿ ಈ ಕೆಳಗಿನ ಮಾಹಿತಿಯನ್ನು ನೀಡಬೇಕೆಂದು ಈ ಮೂಲಕ ಆದೇಶಿಸಲಾಗಿದೆ.

1. **ಪೊಲೀಸ್ ಇಲಾಖೆ ಎಂದರೇನು? ಪೊಲೀಸ್ ಇಲಾಖೆಯ ಕೆಲಸ ಕಾರ್ಯಗಳ ಬಗ್ಗೆ ವಿವರ:-** ಸಾರ್ವಜನಿಕರ ಆಸ್ತಿಪಾಸ್ತಿ ರಕ್ಷಣೆ, ಅಪರಾಧಗಳನ್ನು ತಡೆಯುವುದು ಮತ್ತು ಪತ್ತೆ ಹಚ್ಚುವುದು, ಕಾನೂನು ಸುವ್ಯವಸ್ಥೆಯನ್ನು ಕಾಪಾಡುವುದು ಖಾಕಿ ಸಮವಸ್ತ್ರಧಾರಿ ಪೊಲೀಸ್ ಇಲಾಖೆಯ ಕರ್ತವ್ಯವಾಗಿದೆ.

2. **ಮೂಲತ: ಜನಸಂಪರ್ಕ ಸಭೆ ನಡೆಯುವ ಪಂಚಾಯ್ತಿ/ಹಳ್ಳಿ/ವಾರ್ಡ್‌ನಲ್ಲಿನ(ದಾಖಲಾದ ಪ್ರಕರಣಗಳನ್ನಾಧರಿಸಿ) ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುವುದು:-**

ಜನಸಂಪರ್ಕ ಸಂವಾದ ಸಭೆ ನಡೆಯುವ ಸ್ಥಳದಲ್ಲಿ ದಾಖಲಾದ ಪ್ರಕರಣಗಳ ಬಗ್ಗೆ ಹಾಗೂ ಅವುಗಳನ್ನು ತಡೆಯುವ ನಿಟ್ಟಿನಲ್ಲಿ ಹಾಗೂ ಆ ಸ್ಥಳದಲ್ಲಿನ ಕಾನೂನು ಸುವ್ಯವಸ್ಥೆಗೆ ಸಂಬಂಧಿಸಿದ ವಿಚಾರಗಳನ್ನು ಚರ್ಚಿಸುವುದು.

3. **ಮಕ್ಕಳ ಹಕ್ಕುಗಳಿಗೆ ಸಂಬಂಧಪಟ್ಟ ಕಾನೂನುಗಳ ಬಗ್ಗೆ ವಿವರಿಸುವುದು.**

ಮಕ್ಕಳ ಹಕ್ಕುಗಳ ಒಡಂಬಡಿಕೆಯಲ್ಲಿ ಗುರುತಿಸಲಾದ 1. ಜೀವಿಸುವ ಹಕ್ಕು, 2. ರಕ್ಷಣೆಯ ಹಕ್ಕು, 3.ಅಭಿವೃದ್ಧಿ ಹೊಂದುವ ಹಕ್ಕು, 4. ಭಾಗವಹಿಸುವ ಹಕ್ಕು, ಇವುಗಳನ್ನು ರಕ್ಷಣೆ ಮಾಡುವ ಜವಾಬ್ದಾರಿ ಸರ್ಕಾರ, ಕುಟುಂಬ ಮತ್ತು ಸಾರ್ವಜನಿಕರ ಕರ್ತವ್ಯವಾಗಿರುತ್ತದೆ.

- ಬಾಲ ನ್ಯಾಯ ಕಾಯ್ದೆ-2000 ಅಡಿಯಲ್ಲಿ ಮಕ್ಕಳು ಎಂದರೆ 18 ವರ್ಷದೊಳಗಿನವರು ಎಂದು ಹೇಳಿದೆ.
- ಬಾಲ್ಯ ವಿವಾಹ ನಿಷೇಧ ಕಾಯ್ದೆ-2006ರ ಅನ್ವಯ 21 ವರ್ಷದೊಳಗಿನ ಗಂಡು, 18 ವರ್ಷದೊಳಗಿನ ಹೆಣ್ಣು ಮದುವೆಯಾದರೆ ಅದನ್ನು ಬಾಲ್ಯವಿವಾಹ ಎಂದು ಕರೆಯುತ್ತೇವೆ.
  ಆ ರೀತಿ ಮದುವೆಯಾದರೆ ಮದುವೆಯಾದ ವಯಸ್ಕ ಪುರಷ, ವಧು, ವರರ ತಂದೆ ತಾಯಿಗಳು, ಅವರ ಸಂಬಂಧಿಕರು, ಪುರೋಹಿತ ಹಾಗೂ ಆ ಮದುವೆಯಲ್ಲಿ ಹಾಜರಿದ್ದವರೆಲ್ಲರೂ ಅಪರಾಧಿಗಳಾಗುತ್ತಾರೆ. ಇವರಿಗೆ 2 ವರ್ಷ ಜೈಲು ಹಾಗೂ 1 ಲಕ್ಷ ದಂಡ ವಿಧಿಸಬಹುದಾಗಿದೆ.
- ಬಾಲ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ-1986ರ ಅನ್ವಯ 14 ವರ್ಷದೊಳಗಿನ ಶಾಲೆಬಿಟ್ಟ ಎಲ್ಲ ಮಕ್ಕಳನ್ನು ಬಾಲ ಕಾರ್ಮಿಕರೆಂದು ಪರಿಗಣಿಸಲಾಗಿದೆ.

ಬಾಲ ಕಾರ್ಮಿಕರನ್ನು ಕೆಲಸಕ್ಕಿಟ್ಟುಕೊಂಡರೆ 1 ವರ್ಷ ಶಿಕ್ಷೆ ಮತ್ತು 20 ಸಾವಿರ ದಂಡ ವಿಧಿಸಬಹುದಾಗಿದೆ. 15-18 ವರ್ಷದೊಳಗಿನ ಮಕ್ಕಳನ್ನು ದುಡಿಸಿಕೊಂಡು ದೌರ್ಜನ್ಯ ಮತ್ತು ಹಿಂಸೆ ನೀಡಿದರೆ ಬಾಲ ನ್ಯಾಯ ಕಾಯ್ದೆ ಪ್ರಕಾರ 3 ವರ್ಷ ಶಿಕ್ಷೆ ಮತ್ತು ದಂಡ ಹಾಗೂ ಐಪಿಸಿ ಮತ್ತು ಇತರೇ ಕಾಯ್ದೆಗಳ ಪ್ರಕಾರ ಕಾನೂನು ಕ್ರಮ ತೆಗೆದುಕೊಳ್ಳಬಹುದು.

- ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕಿನ ಕಾಯ್ದೆ-2009ರ ಪ್ರಕಾರ ಆರರಿಂದ ಹದಿನಾಲ್ಕು ವರ್ಷದೊಳಗಿನ ಎಲ್ಲ ಮಕ್ಕಳು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಪೂರೈಸುವ ತನಕ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಹೊಂದುವ ಹಕ್ಕು ಹೊಂದಿರುವರು.
- ಮಕ್ಕಳ ಹಕ್ಕುಗಳ ಒಡಂಬಡಿಕೆಯಲ್ಲಿ ಮಕ್ಕಳು ಎಂದರೆ 18 ವರ್ಷದೊಳಗಿನವರು. ಆದ್ದರಿಂದ 18 ವರ್ಷದೊಳಗಿನ ಎಲ್ಲ ಮಕ್ಕಳು ಶಾಲೆಯಲ್ಲಿರಬೇಕು.
- ಬಾಲ ನ್ಯಾಯ ಕಾಯ್ದೆ ಪ್ರಕಾರ ತೊಂದರೆಯಲ್ಲಿರುವ(ಆರೈಕೆ ಮತ್ತು ರಕ್ಷಣೆ) ಮಕ್ಕಳನ್ನು ಪ್ರತಿ ಜಿಲ್ಲೆ/ನಗರಗಳಲ್ಲಿ ಇರುವ ಮಕ್ಕಳ ಕಲ್ಯಾಣ ಸಮಿತಿಗೆ ಯಾರಾದರೂ ಹಾಜರ್ಪಡಿಸಬಹುದು.
  ಕಾನೂನು ಸಂಘರ್ಷಕ್ಕೆ ಒಳಗಾದ (ತಪ್ಪು ಮಾಡಿದ) ಮಕ್ಕಳನ್ನು ಬಾಲ ನ್ಯಾಯ ಮಂಡಳಿಗೆ ಪೋಲೀಸ್ ಮೂಲಕ ಹಾಜರ್ಪಡಿಸಲಾಗುತ್ತದೆ.
- ಮಕ್ಕಳನ್ನು ಬಿಕ್ಷಾಟನೆಗಾಗಿ, ದುಡಿಸಿಕೊಳ್ಳಲು, ವೇಶ್ಯಾವಾಟಿಕೆಗೆ ಹಾಗೂ ಇತರೇ ಉದ್ದೇಶಗಳಿಗಾಗಿ ಮಾರಾಟ ಮತ್ತು ಸಾಗಾಣಿಕೆ ಮಾಡಿದರೆ ಐಟಿಪಿಎ ಕಾಯ್ದೆ/ಐಪಿಸಿ ಅನ್ವಯ ಅಪರಾಧವಾಗಿದೆ.
- ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ – 2012ರ ಬಗ್ಗೆ ತಿಳಿಸುವುದು.

4. **ಮಕ್ಕಳು ಮತ್ತು ಮಹಿಳೆಯರು ಮನೆ ಬಿಟ್ಟು ಹೋದರೆ ಮುಂದೆ ಎದುರಿಸುವ ಸಮಸ್ಯೆಗಳು.**

ಯಾವುದೇ ಮಕ್ಕಳು ಅಥವಾ ಮಹಿಳೆಯರು ಯಾವುದೇ ಕಾರಣಗಳಿಗಾಗಿ ಮನೆ ಬಿಟ್ಟು ಹೋದರೆ ನೀವು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ನಗರ ಪ್ರದೇಶಗಳಲ್ಲಿ ಈ ರೀತಿ ಹಳ್ಳಿಗಳಿಂದ ಮನೆ ಬಿಟ್ಟು ಬರುವವರನ್ನು ಕರೆದುಕೊಂಡು ಹೋಗಿ ಕೆಲಸ ಕೊಡಿಸುವ ನೆಪ ಹೇಳಿ ನಿಮ್ಮನ್ನು ವೇಶ್ಯಾವಾಟಿಕೆಗೆ, ಭಿಕ್ಷಾಟನೆಗೆ, ಅಂಗಾಂಗ ಮಾರಾಟಕ್ಕೆ, ಜೀತಕ್ಕೆ ನೇಮಿಸಿಕೊಳ್ಳಬಹುದು. ಆದ್ದರಿಂದ ನೀವು ನಿಮ್ಮ ಮನೆ ಮತ್ತು ಊರನ್ನು ಬಿಟ್ಟು ಹೋಗುವ ಮುಂಚೆ ಯೋಚಿಸಬೇಕು. ನಿಮ್ಮ ರಕ್ಷಣೆಗಾಗಿ ನಮ್ಮನ್ನು ಸಂಪರ್ಕಿಸಿ ಸಹಾಯ ಪಡೆದುಕೊಳ್ಳಿ.

5. **ಮಹಿಳೆಯರ ಹಕ್ಕುಗಳು ಹಾಗೂ ಸಂಬಂಧಪಟ್ಟ ಕಾನೂನುಗಳ ಬಗ್ಗೆ ವಿವರಿಸುವುದು.**

- ಮಹಿಳೆಯರ ಮೇಲಿನ ದೌರ್ಜನ್ಯಕ್ಕೆ ಸಂಬಂಧಿಸಿದಂತೆ ದೌರ್ಜನ್ಯ ಎಸಗುವವರ ಮೇಲೆ 498(ಎ) ಐಪಿಸಿ ಹಾಗೂ ಇತರೇ ಕಾಯ್ದೆಗಳ ಪ್ರಕಾರ ಕಾನೂನು ಕ್ರಮ ತೆಗೆದುಕೊಳ್ಳಬಹುದು.
- ಮಹಿಳೆಯು ಪರಿಹಾರಕ್ಕಾಗಿ ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ – 2005 ರಡಿಯಲ್ಲಿ ಸಿಡಿಪಿಓರವರ ಬಳಿ ದೂರನ್ನು ಸಲ್ಲಿಸಬಹುದಾಗಿದೆ.

6. **ಜಿಲ್ಲೆ/ನಗರಗಳಲ್ಲಿ ಮಕ್ಕಳು ಮತ್ತು ಮಹಿಳೆಯರಿಗೆ ಇರುವ ರಕ್ಷಣೆ ವ್ಯವಸ್ಥೆಗಳ ವಿವರ.**

- ಪೋಲೀಸ್ ಕಂಟ್ರೋಲ್ ರೂಂ-100,
  ಕಾನೂನು ಸುವ್ಯವಸ್ಥೆಗೆ ಸಂಬಂಧಿಸಿದಂತೆ ಹಾಗೂ ಅಪರಾಧಗಳು ಜರುಗುವ ಬಗ್ಗೆ ಮಾಹಿತಿಗೆ ಸಂಬಂಧಿಸಿದಂತೆ ಪೋಲೀಸ್ ಕಂಟ್ರೋಲ್ ರೂಂ 100ಗೆ ಕರೆ ಮಾಡಬಹುದಾಗಿದೆ.
- ಮಕ್ಕಳ ಸಹಾಯವಾಣಿ-1098,
  18 ವರ್ಷದೊಳಗಿನ ಮಕ್ಕಳ ಯಾವುದೇ ಸಮಸ್ಯೆಗಾಗಿ ಜಿಲ್ಲೆಯಲ್ಲಿ ಉಚಿತ ದೂರವಾಣಿ ಸಂಖ್ಯೆ 1098 ಕಾರ್ಯನಿರ್ವಹಿಸುತ್ತಿದ್ದು ಅಲ್ಲಿಗೆ ಕರೆ ಮಾಡಿ ದೂರು ಸಲ್ಲಿಸಬಹುದು.
- ಮಹಿಳಾ ಸಹಾಯವಾಣಿ-1091,
  ಮಹಿಳೆಯರ ಸಮಸ್ಯೆಗೆ ಸಂಬಂಧಿಸಿದಂತೆ ಉಚಿತ ದೂರವಾಣಿ ಸಂಖ್ಯೆ 1091 ಕಾರ್ಯ ನಿರ್ವಹಿಸುತ್ತಿದ್ದು ಅಲ್ಲಿಗೆ ಕರೆ ಮಾಡಿ ದೂರು ಸಲ್ಲಿಸಬಹುದು. ಹಾಗೂ ಪ್ರತಿ ತಾಲ್ಲೂಕಿನಲ್ಲಿ ಇರುವ ಸಾಂತ್ವಾನ ಕೇಂದ್ರಗಳಿಗೆ ದೂರು ನೀಡಬಹುದಾಗಿದೆ.
- ಪೋಲೀಸ್ ಠಾಣೆಯಲ್ಲಿ ಮಹಿಳೆಯರು ಮತ್ತು ಮಕ್ಕಳ ಹೆಲ್ಪ್‌ಡೆಸ್ಕ ಬಗ್ಗೆ ಮಾಹಿತಿ ನೀಡುವುದು
  ಪ್ರತಿ ಪೋಲೀಸ್ ಠಾಣೆಯಲ್ಲಿ ಮಹಿಳೆಯರ ಮತ್ತು ಮಕ್ಕಳ ಕುಂದುಕೊರತೆ ಆಲಿಸಲು ಪ್ರತ್ಯೇಕ ವಿಭಾಗ ಇರುತ್ತದೆ. ಯಾವುದೇ ಸಾರ್ವಜನಿಕರು, ಮಹಿಳೆಯರು, ಮಕ್ಕಳು ಯಾವುದೇ ಭಯವಿಲ್ಲದೆ ದಿನದ 24 ಗಂಟೆಯೂ ಸಹ ಪೋಲೀಸ್ ಠಾಣೆಗೆ ಬಂದು ನಿಮ್ಮ ದೂರನ್ನು ನೀಡಬಹುದಾಗಿದೆ.
- **ಮಕ್ಕಳ ಕಲ್ಯಾಣ ಸಮಿತಿ,**
  ಪ್ರತಿ ಜಿಲ್ಲೆಯಲ್ಲಿ ಒಂದು ಮಕ್ಕಳ ಕಲ್ಯಾಣ ಸಮಿತಿ ಇದ್ದು, ಇದರಲ್ಲಿ ಒಬ್ಬರು ಅದ್ಯಕ್ಷರು ಮತ್ತು 4 ಜನ ಸದಸ್ಯರು ಇರುತ್ತಾರೆ. 18 ವರ್ಷದೊಳಗಿನ ಮಕ್ಕಳ ರಕ್ಷಣೆ ಪೋಷಣೆ ಸಲುವಾಗಿ ಈ ಸಮಿತಿಯ ಮುಂದೆ ಯಾವುದೇ ಒಬ್ಬ ಸಾರ್ವಜನಿಕ ಮಕ್ಕಳನ್ನು ಹಾಜರ್ಪಡಿಸಬಹುದು.
- **ಮಕ್ಕಳ ವಿಶೇಷ ಪೋಲೀಸ್ ಘಟಕ**

ಜಿಲ್ಲೆ/ನಗರ ಪೋಲೀಸ್ ಕಛೇರಿಯಲ್ಲಿ ಮಕ್ಕಳ ವಿಶೇಷ ಪೋಲೀಸ್ ಘಟಕ ಕಾರ್ಯ ನಿರ್ವಹಿಸುತ್ತಿದ್ದು, ಜಿಲ್ಲೆ/ನಗರದ ಎಲ್ಲಾ ಪೋಲೀಸ್ ಠಾಣೆಗಳಲ್ಲಿ ವರದಿಯಾದ ಮಕ್ಕಳ ಮೇಲಿನ ದೌರ್ಜನ್ಯ ಹಾಗೂ ಆರೈಕೆ ಮತ್ತು ರಕ್ಷಣೆ ಬೇಕಾದ ಮಕ್ಕಳ ಮಾಹಿತಿ ಈ ಘಟಕದಲ್ಲಿ ಇದ್ದು. ಎಲ್ಲಾ ಪೋಲೀಸ್ ಠಾಣೆಗಳೊಂದಿಗೆ ಸಂಪರ್ಕದಲ್ಲಿರುತ್ತದೆ. ಪ್ರತಿ ಪೋಲೀಸ್ ಠಾಣೆಯಲ್ಲಿ ಮಕ್ಕಳ ಪ್ರಕರಣಗಳನ್ನು ನಿರ್ವಹಿಸಲು ತರಬೇತಿ ಪಡೆದ ಮಕ್ಕಳ ಕಲ್ಯಾಣಾಧಿಕಾರಿಗಳು ಇರುತ್ತಾರೆ, ಮಕ್ಕಳಿಗೆ ಸಂಬಂಧಪಟ್ಟ ಯಾವುದೇ ಪ್ರಕರಣಗಳನ್ನು ಅವರಿಗೆ ತಿಳಿಸಬಹುದಾಗಿದೆ.

7. **ನಿಮಗೆ ಅನುಮಾನಾಸ್ಪದ ವ್ಯಕ್ತಿಗಳು, ಕಳ್ಳಕಾಕರು, ದರೋಡೆಕೋರರು, ವಂಚಕರು ಊರಿಗೆ ಹೊಸದಾಗಿ ಬಂದ ವ್ಯಕ್ತಿಗಳು ಕಂಡು ಬಂದರೆ ಕೂಡಲೇ ಪೋಲೀಸ್ ಠಾಣೆಗೆ ಮಾಹಿತಿ ತಿಳಿಸುವ ಬಗ್ಗೆ:-**

ನಿಮ್ಮ ಹಳ್ಳಿಗಳಲ್ಲಿ ಅಥವಾ ನೀವು ವಾಸಿಸುವ ಸ್ಥಳಗಳಲ್ಲಿ ನಿಮ್ಮ ಊರಿನವರಲ್ಲದೆ ಬೇರೆಯವರು ಬಂದು ಅನುಮಾನಾಸ್ಪದವಾಗಿ ತಿರುಗುತ್ತಿದ್ದರೆ ಅಥವಾ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿದ್ದರೆ, ಹಣ ದ್ವಿಗುಣಗೊಳಿಸುವ, ಬೆಳ್ಳಿ ಬಂಗಾರ ಪಾಲಿಷ್ ಮಾಡುವವರು, ಕೆಲಸ ಕೊಡಿಸುತ್ತೇನೆ ಎಂದು ಆಮಿಷ ತೋರಿಸುವವರು, ಸಿನಿಮಾದಲ್ಲಿ ಚಾನ್ಸ್ ಕೊಡಿಸುತ್ತೇನೆಂದು ಹೇಳುವ ವ್ಯಕ್ತಿಗಳು ಕಂಡು ಬಂದರೆ ನೀವು ಹತ್ತಿರದ ಪೋಲೀಸ್ ಠಾಣೆ ಅಥವಾ ಪೋಲೀಸ್ ಕಂಟ್ರೋಲ್ ರೂಂ 100ಗೆ ಕರೆ ಮಾಡಿ ತಿಳಿಸಬಹುದಾಗಿದೆ. ನಿಮ್ಮ ಹೆಸರನ್ನು ಗೌಪ್ಯವಾಗಿಡಲಾಗುತ್ತದೆ.

ಮೇಲ್ಕಂಡ ಮಾಹಿತಿಯ ಜೊತೆಗೆ ಸ್ಥಳೀಯ ಸಮಸ್ಯೆಯ ವಿಷಯಗಳ ಕಡೆಗೆ ಗಮನಹರಿಸಿ ತಿಳಿಸಲು ಸೂಚಿಸಲಾಗಿದೆ.

(ಎಸ್. ಮಹಾಪಾತ್ರ, ಐ.ಪಿ.ಎಸ್.,)
ಪೋಲೀಸ್ ಮಹಾ ನಿರ್ದೇಶಕರು,(ತರಬೇತಿ)
ಮತ್ತು ನೋಡಲ್ ಅಧಿಕಾರಿಗಳು,
ಮಕ್ಕಳ ವಿಶೇಷ ಪೋಲೀಸ್ ಘಟಕ, ಕರ್ನಾಟಕ ರಾಜ್ಯ.

**ರವರಿಗೆ:**

1. ಪೋಲೀಸ್ ಆಯುಕ್ತರು ಬೆಂಗಳೂರು, ಮೈಸೂರು. ಮಂಗಳೂರು, ಹಾಗೂ ಹುಬ್ಬಳ್ಳಿ-ಧಾರವಾಡ ನಗರಗಳು.
2. ಎಲ್ಲಾ ವಲಯಯದ ಪೋಲೀಸ್ ಮಹಾ ನಿರೀಕ್ಷಕರುಗಳಿಗೆ.
3. ಎಲ್ಲಾ ಉಪ ಪೋಲೀಸ್ ಆಯುಕ್ತರುಗಳಿಗೆ, ಬೆಂಗಳೂರು ನಗರ ಒಳಗೊಂಡಂತೆ.
4. ಎಲ್ಲಾ ಜಿಲ್ಲೆಯ ಪೋಲೀಸ್ ಅಧೀಕ್ಷಕರು, ಕೆ.ಜಿ.ಎಫ್ ಸೇರಿದಂತೆ.

**ಪ್ರತಿಯನ್ನು ಮಾಹಿತಿಗಾಗಿ:**

1. . ಹೆಚ್ಚುವರಿ ಪೋಲೀಸ್ ಮಹಾನಿರ್ದೇಶಕರು (ಅಪರಾಧ & ತಾಂತ್ರಿಕ ಸೇವೆಗಳು) ಬೆಂಗಳೂರು.
2. ಹೆಚ್ಚುವರಿ ಪೋಲೀಸ್ ಮಹಾನಿರ್ದೇಶಕರು (ಆಡಳಿತ) ನೃಪತುಂಗ ರಸ್ತೆ, ಬೆಂಗಳೂರು.

**ಪ್ರತಿಯನ್ನು ಮಾಹಿತಿಗಾಗಿ ಅಭಿನಂದನೆಗಳೊಂದಿಗೆ:**

1. ಪ್ರಧಾನ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
2. ಮಹಾ ನಿರ್ದೇಶಕರು ಮತ್ತು ಪೋಲೀಸ್ ಮಹಾ ನಿರೀಕ್ಷಕರು, ಕರ್ನಾಟಕ ರಾಜ್ಯ, ಬೆಂಗಳೂರು.
3. ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬೆಂಗಳೂರು.

F. No. HQ-13065/1/2022-AUTH-II HQ/8075
**Unique Identification Authority of India**
(Authentication and Verification Division)

UIDAI Headquarter
Bangla Sahib Road, Behind Kali Mandir
Gole Market, New Delhi – 110 001
Dated 22.12.2023

**Circular No. 08 of 2023**

**Subject: Accepting Aadhaar as a proof of Date of Birth (DoB) — regarding.**

It has been observed that AUAs/KUAs are considering and accepting Aadhaar card / e-Aadhaar as one of the acceptable documents for proof of Date of Birth (DoB).

2. In this regard, it is pertinent to mention that, Aadhaar is a unique 12 digit ID issued to a resident after he/she undergoes the enrolment process by submitting his/her demographic and biometric information. Once a resident is assigned an Aadhaar number, it can be used to authenticate the resident through various modes as prescribed under Aadhaar Act, 2016 and Regulations framed there under.

3. At the time of enrolment/updation, UIDAI records DoB as claimed by the resident, on the basis of the documents submitted by them, as specified under the list of supporting documents for Aadhaar enrolment, provided on the UIDAI website (https://uidai.gov.in/images/commdoc/26_JAN_2023_Aadhaar_List_of_documents_English.pdf). Further, it is to be noted that Regulations 10(4) and 19A of the Aadhaar (Enrolment and Update) Regulations, 2016, mention that verification of the enrolment and update data shall be performed as provided in Schedule III.

4. In this regard, attention is drawn towards Office Memorandum dated 20.12.2018 issued by MeitY through UIDAI, wherein it has been stated that *"An Aadhaar number can be used for establishing identity of an individual subject to authentication and thereby, per se its not a proof of date of birth" (copy enclosed).*

5. This aspect of the Aadhaar Act, 2016 has been reiterated/highlighted/stressed upon by different High Courts in recent judgments. The most recent one is given by the Hon'ble High Court of Bombay, in the case of *State of Maharashtra V/s Unique Identification Authority of India And Ors.* dated 28.07.2023 *(copy enclosed).*

6. In view of the above, it is required that use of Aadhaar, as a proof of DoB needs to be deleted from the list of acceptable documents.

7. This issues with the approval of the Competent Authority.

Encl.: As above.

(Sanjeev Yadav)
Director
Tel: 011-23478609
Email: dir1.auth-hq@uidai.net.in

To:

All AUAs/KUAs

Copy to,

All UIDAI Regional Offices (ROs)

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಅಪ್ರಾಪ್ತ ವಯಸ್ಸಿನ ಹೆಣ್ಣು ಮಕ್ಕಳು ಗರ್ಭಿಣಿ (ಬಾಲ ಗರ್ಭಿಣಿ) ಯರಾಗುವುದನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ವಿವಿಧ ಇಲಾಖೆಗಳಿಗೆ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿಗದಿಪಡಿಸುವ ಬಗ್ಗೆ.

**ಓದಲಾಗಿದೆ:** ಮಾನ್ಯ ಮುಖ್ಯ ಮಂತ್ರಿಯವರ ಟಿಪ್ಪಣಿ ಸಂಖ್ಯೆ: CM/OSD/33/2024, ದಿನಾಂಕ: 15.04.2024.

******

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಟಿಪ್ಪಣಿಯಲ್ಲಿ ಮಾನ್ಯ ಮುಖ್ಯಮಂತ್ರಿಯವರು ಕೇಂದ್ರ ಸರ್ಕಾರದ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ (RCH) ಪೋರ್ಟಲ್‌ನಲ್ಲಿರುವ ಅಂಕಿ ಅಂಶಗಳ ಪ್ರಕಾರ 2023ರ ಜನವರಿಯಿಂದ ನವೆಂಬರ್ 2023ರವರೆಗೆ ರಾಜ್ಯದಲ್ಲಿ 18 ವರ್ಷದೊಳಗಿನ 28657 ಬಾಲಕಿಯರು ಗರ್ಭಿಣಿಯರಾಗಿರುವ ವರದಿ ಕುರಿತಂತೆ ಬಾಲಗರ್ಭಿಣಿ ಪ್ರಕರಣಗಳಿಗೆ ಕಾರಣವಾಗಿರುವ ಇಂತಹ ಆಚರಣೆಗಳನ್ನು, ಅಪರಾಧ ಪ್ರಕರಣಗಳನ್ನು ತಳಮಟ್ಟದಲ್ಲಿ ತಡೆಯಲು ಹಾಗೂ ಕಾನೂನು ರೀತಿ ರೂಪಿಸಲಾದ ಪೋಕ್ಸೋ, ಮಕ್ಕಳ ರಕ್ಷಣಾ ಕಾಯ್ದೆ, ಬಾಲಾಪರಾಧಗಳು, ಬಾಲ್ಯವಿವಾಹ ನಿಷೇಧ ಮುಂತಾದ ಕಾಯ್ದೆಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನ ಮಾಡುವ ನಿಟ್ಟಿನಲ್ಲಿ ವಿವಿಧ ಇಲಾಖೆಗಳು ಸಮನ್ವಯತೆಯಿಂದ ಸಮರೋಪಾದಿಯಲ್ಲಿ ಕಾರ್ಯನಿರ್ವಹಿಸಲು ಅಗತ್ಯ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುವಂತೆ ನಿರ್ದೇಶನ ನೀಡಿರುತ್ತಾರೆ.

ಮಾನ್ಯ ಮುಖ್ಯಮಂತ್ರಿಯವರ ನಿರ್ದೇಶನದ ಹಿನ್ನೆಲೆಯಲ್ಲಿ ಅಪ್ರಾಪ್ತ ವಯಸ್ಸಿನ ಹೆಣ್ಣು ಮಕ್ಕಳು ಗರ್ಭಿಣಿಯರಾಗುವುದನ್ನು ತಡೆಗಟ್ಟುವುದು, ಸಂತ್ರಸ್ತರಿಗೆ ರಕ್ಷಣೆ ಹಾಗೂ ಮನೋಸ್ಥೈರ್ಯ ಹೆಚ್ಚಿಸುವುದು ಹಾಗೂ ಈ ಉದ್ದೇಶಕ್ಕಾಗಿ ಇರುವ ಕಾಯ್ದೆಗಳು ಹಾಗೂ ಕಾನೂನುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡುವ ಮೂಲಕ ತಪ್ಪಿತಸ್ಥರು ಶಿಕ್ಷೆಯಿಂದ ಪಾರಾಗದಂತೆ ನೋಡಿಕೊಳ್ಳಲು ಅಗತ್ಯ ಕಟ್ಟುನಿಟ್ಟಿನ ಕ್ರಮಗಳನ್ನು ಜಾರಿಗೊಳಿಸುವುದಕ್ಕಾಗಿ ರಾಜ್ಯಮಟ್ಟದಲ್ಲಿ, ಕಾನೂನು ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಒಳಾಡಳಿತ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತರ ಕಲ್ಯಾಣ/ಹಜ್ ಮತ್ತು ವಕ್ಫ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕಂದಾಯ ಇಲಾಖೆಗಳಿಗೆ ಜವಾಬ್ದಾರಿ ಮತ್ತು ಕರ್ತವ್ಯಗಳನ್ನು ನಿಗದಿಪಡಿಸಲು **ಸದರಿ ಇಲಾಖೆಗಳ** ಅಭಿಪ್ರಾಯ/ ಸಹಮತಿ ಕೋರಲಾಗಿತ್ತು.

ಅದರಂತೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತರ ಕಲ್ಯಾಣ/ಹಜ್ ಮತ್ತು ವಕ್ಫ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕಂದಾಯ ಇಲಾಖೆಗಳು ಅಪ್ರಾಪ್ತ ವಯಸ್ಸಿನ ಹೆಣ್ಣು ಮಕ್ಕಳು ಗರ್ಭಿಣಿಯರಾಗುವುದನ್ನು ತಡೆಗಟ್ಟಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ನಿಗದಿಪಡಿಸಲಾಗಿದ್ದ ಜವಾಬ್ದಾರಿ ಕರ್ತವ್ಯಗಳಿಗೆ ಸಹಮತಿ ನೀಡಿರುತ್ತಾರೆ. ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಮಮಇ 115 ಮಮಅ 2024 ಬೆಂಗಳೂರು,**
**ದಿನಾಂಕ: 06.09.2024.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಅಪ್ರಾಪ್ತ ವಯಸ್ಸಿನ ಹೆಣ್ಣು ಮಕ್ಕಳು ಗರ್ಭಿಣಿ (ಬಾಲ ಗರ್ಭಿಣಿ) ಯರಾಗುವುದನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಒಳಾಡಳಿತ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತರ ಕಲ್ಯಾಣ/ಹಜ್ ಮತ್ತು ವಕ್ಫ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕಂದಾಯ ಇಲಾಖೆಗಳಿಗೆ ಅನುಬಂಧದಲ್ಲಿರುವಂತೆ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿಗದಿಪಡಿಸಿ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 264 ವೆಚ್ಚ-10/2024, ದಿನಾಂಕ 04.07.2024 ರಲ್ಲಿ ನೀಡಿರುವ ಸಹಮತಿ ಹಾಗೂ ಸಚಿವ ಸಂಪುಟದ ಪ್ರಕರಣ ಸಂಖ್ಯೆ: ಸಿ. 419/2024, ದಿನಾಂಕ: 21.08.2024ರ ನಿರ್ಣಯದ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಸಿ. ಬಲರಾಮ್)**
ಸರ್ಕಾರದ ಉಪ ಕಾರ್ಯದರ್ಶಿ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ.

ಇವರಿಗೆ:

1. ಪ್ರಧಾನ ಮಹಾಲೇಖಪಾಲರು, (ಎ & ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-560001.
2. ಅಪರ ಮುಖ್ಯ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು-560001.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು-560001.
4. ಸರ್ಕಾರದ ಪ್ರಧಾನ ಕಾರ್ಯದರ್ಶಿ , ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು-560001.
5. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು-560001.
6. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು-560001.
7. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು-01.
8. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು-01.
9. ಸರ್ಕಾರದ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು-01.
10. ಸರ್ಕಾರದ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ/ಹಜ್ ಮತ್ತು ವಕ್ಫ್ ಇಲಾಖೆ, ವಿಕಾಸ ಸೌಧ, ಬೆಂಗಳೂರು-560001.
11. ಜಂಟಿ ಕಾರ್ಯದರ್ಶಿ,(ಸಚಿವ ಸಂಪುಟ ಶಾಖೆ), ಮುಖ್ಯ ಕಾರ್ಯದರ್ಶಿಯವರ ಕಛೇರಿ (ಪ್ರಕರಣ ಸಂಖ್ಯೆ: ಸಿ. 419/2024), ವಿಧಾನ ಸೌಧ, ಬೆಂಗಳೂರು.
12. ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ, ವಿ.ವಿ. ಟವರ್, ಬೆಂಗಳೂರು-560001.
13. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಪಿಡಬ್ಲ್ಯೂಡಿ ಕಟ್ಟಡ ಆವರಣ, ಆನಂದ್‌ರಾವ್ ಸರ್ಕಲ್, ಬೆಂಗಳೂರು.

**ಪ್ರತಿ ಮಾಹಿತಿಗಾಗಿ:**

1. ಮಾನ್ಯ ಮುಖ್ಯ ಮಂತ್ರಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬೆಂಗಳೂರು.
5. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

*******

# ಅನುಬಂಧ-1

## ಅಪ್ರಾಪ್ತ ವಯಸ್ಸಿನ ಹೆಣ್ಣು ಮಕ್ಕಳು ಗರ್ಭಿಣಿ (ಬಾಲ ಗರ್ಭಿಣಿ) ಯರಾಗುವುದನ್ನು ಪರಿಣಾಮಕಾರಿ ತಡೆಗಟ್ಟಲು ವಿವಿಧ ಇಲಾಖೆಗಳಿಗೆ ನಿಗದಿಪಡಿಸಲು ಉದ್ದೇಶಿಸಿರುವ ಕರ್ತವ್ಯ ಮತ್ತು ಜವಾಬ್ದಾರಿಗಳು

I. <u>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ:</u>

- ಕೇಂದ್ರ ಸರ್ಕಾರದ ಆರ್‌ಸಿಎಚ್ ಪೋರ್ಟಲ್‌ನಲ್ಲಿರುವ ತಾಂತ್ರಿಕ ಸಮಸ್ಯೆಗಳನ್ನು ಬಗೆಹರಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.
- ಬಾಲಗರ್ಭಿಣಿಯರ ನಿಖರವಾದ ವಯಸ್ಸನ್ನು ದಾಖಲಿಸಲು Age Matrix Index ಕಡ್ಡಾಯಗೊಳಿಸುವುದು.
- ಖಾಸಗಿ ಆಸ್ಪತ್ರೆಯಲ್ಲಿ ಬಾಲಗರ್ಭಿಣಿಯರ ಪ್ರಕರಣಗಳನ್ನು ವರದಿ ಮಾಡಲು ಸರಳೀಕೃತ ವಿಧಾನವನ್ನು ರಚಿಸುವುದು.
- ವೈದ್ಯರ ಸಲಹೆ ಇಲ್ಲದೆ ಷೆಡ್ಯೂಲ್-ಹೆಚ್ ಔಷಧಿಗಳಾದಂತಹ ಗರ್ಭಪಾತ ಮಾತ್ರೆಗಳನ್ನು ಮಾರಾಟ ಮಾಡುವಂತಹ ಅಂಗಡಿಗಳ ಮೇಲೆ ಔಷಧ ನಿಯಂತ್ರಣ ಇಲಾಖೆ ಸೂಕ್ತ ಕಾನೂನು ಕ್ರಮ ಜರುಗಿಸುವುದು.
- ಅನಧಿಕೃತವಾಗಿ ಗರ್ಭಪಾತ ಚಟುವಟಿಕೆಗಳಲ್ಲಿ ಭಾಗಿಯಾಗಿರುವ ವೈದ್ಯರು ಮತ್ತು ಸಾರ್ವಜನಿಕರುಗಳ ವಿರುದ್ಧ PCPNDT ಕಾಯ್ದೆಯನ್ವಯ ಕ್ರಮ ಜರುಗಿಸುವುದು ಮತ್ತು ಈ ಕುರಿತು ವೈದ್ಯಕೀಯ ಮಂಡಳಿ ಹಾಗೂ ಇನ್ನಿತರ ನುರಿತ ತಜ್ಞರ ಸಲಹಾ ಸಮಿತಿ ರಚಿಸುವುದು.
- ಪ್ರಾಥಮಿಕ ಆರೋಗ್ಯ ಕೇಂದ್ರಗಳ ವೈದ್ಯಾಧಿಕಾರಿಗಳು ಅವರ ವ್ಯಾಪ್ತಿಯ ಸರ್ಕಾರಿ/ಖಾಸಗಿ ವಸತಿ ಶಾಲೆಗಳಿಗೆ ನಿಗದಿತ ವೇಳಾಪಟ್ಟಿಯಂತೆ ಕಡ್ಡಾಯವಾಗಿ ಭೇಟಿ ನೀಡಿ ಮಕ್ಕಳ ಆರೋಗ್ಯ ತಪಾಸಣೆ ನಡೆಸುವುದು.
- ಪೋಷಕರು ಹಾಗೂ ಹದಿಹರೆಯದ ಮಕ್ಕಳಿಗೆ ಸುಲಭವಾಗಿ ಅರ್ಥವಾಗುವ ಮಾಧ್ಯಮಗಳ ಮೂಲಕ ಲೈಂಗಿಕ ಶಿಕ್ಷಣವನ್ನು ನೀಡಲು ಕ್ರಮವಹಿಸುವುದು.
- ಶಾಲಾಮಟ್ಟದಲ್ಲಿ ಮಕ್ಕಳಿಗೆ ದೈಹಿಕ ಬೆಳವಣಿಗೆ ಹಾಗೂ ಆರೋಗ್ಯದ ಬಗ್ಗೆ ಅರಿವು ಮೂಡಿಸುವುದು.
- ಆರ್.ಸಿ.ಎಚ್ ಪೋರ್ಟಲ್‌ನಲ್ಲಿ ದಾಖಲಾಗುವ 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಬಾಲಗರ್ಭಿಣಿಯರ ಮಾಹಿತಿಯನ್ನು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಹಾಗೂ ಆಶಾ ಕಾರ್ಯಕರ್ತೆಯರು ಗ್ರಾಮ/ತಾಲ್ಲೂಕು/ಜಿಲ್ಲಾ ಪಂಚಾಯತ್‌ಗಳಿಗೆ ಒದಗಿಸುವುದು.
- ಬಾಲ್ಯವಿವಾಹ ನಿಷೇಧ ಕಾಯ್ದೆ, 2006 ಮತ್ತು ಕರ್ನಾಟಕ ತಿದ್ದುಪಡಿ ಕಾಯ್ದೆ, 2016ರ ಕಲಂ 16(1) ರನ್ವಯ ಗ್ರಾಮ/ತಾಲ್ಲೂಕು/ಜಿಲ್ಲಾ/ರಾಜ್ಯ ವ್ಯಾಪ್ತಿಯಲ್ಲಿ ಕ್ರಮವಾಗಿ ಆರೋಗ್ಯ ನಿರೀಕ್ಷಕರು, ತಾಲ್ಲೂಕು ವೈದ್ಯಾಧಿಕಾರಿಗಳು, ಜಿಲ್ಲಾ ಆರೋಗ್ಯಾಧಿಕಾರಿಗಳು ಮತ್ತು ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರುಗಳನ್ನು "ಬಾಲ್ಯವಿವಾಹ ನಿಷೇಧಾಧಿಕಾರಿ" ಗಳೆಂದು ಗುರುತಿಸಿ ದಿನಾಂಕ:28.05.2018ರಂದು ಅಧಿಸೂಚಿಸಲಾಗಿದೆ. ಅದರಂತೆ ಬಾಲ್ಯವಿವಾಹ ನಿಷೇಧಾಧಿಕಾರಿಗಳಿಗೆ ನಿಗದಿಪಡಿಸಲಾದ ಕರ್ತವ್ಯಗಳನ್ನು ಕಡ್ಡಾಯವಾಗಿ ನಿರ್ವಹಿಸುವ ಕುರಿತು ನಿರ್ದೇಶನ ನೀಡುವುದು.

2. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ:

- ವಿದ್ಯಾರ್ಥಿಗಳು 7 ದಿನಗಳಿಗಿಂತ ಹೆಚ್ಚಿನ ಅವಧಿಗೆ ಶಾಲೆಗೆ ಗೈರುಹಾಜರಾದಲ್ಲಿ ಸಂಬಂಧಪಟ್ಟ ಶಾಲಾಶಿಕ್ಷಕರು ಅನುಸರಣೆ ಮಾಡಿ ಶಾಲೆಗೆ ಮರುಹಾಜರಾಗುವಂತೆ ಕ್ರಮವಹಿಸುವುದು.
- ಶಾಲೆಗೆ ಗೈರುಹಾಜರಾದ ವಿದ್ಯಾರ್ಥಿಗಳ ಮಾಹಿತಿ ಲಭ್ಯವಾಗದ ಪ್ರಕರಣಗಳು ಕಂಡುಬಂದಲ್ಲಿ ವ್ಯಾಪ್ತಿಯ ಗ್ರಾಮಪಂಚಾಯತ್ ಕಾವಲು ಸಮಿತಿಗೆ ವರದಿ ನೀಡುವುದು.
- ವಿದ್ಯಾರ್ಥಿಗಳು ಶಾಲೆಗೆ ಗೈರುಹಾಜರಾಗಲು ನಿಖರವಾದ ಕಾರಣಗಳನ್ನು ತಿಳಿದು, ಶಾಲೆಗೆ ಮರುದಾಖಲಿಸಲು ಸೂಕ್ತ ಕ್ರಮವಹಿಸುವುದು. ಶಾಲೆಗಳಲ್ಲಿ ಪ್ರಮುಖವಾಗಿ ವಿದ್ಯಾರ್ಥಿನಿಯರಿಗೆ ಸುಸಜ್ಜಿತ ಶೌಚಾಲಯ ಹಾಗೂ ನೀರಿನ ವ್ಯವಸ್ಥೆ ಕಲ್ಪಿಸುವುದು.
- ಬಾಲ್ಯವಿವಾಹ ನಿಷೇಧ ಕಾಯ್ದೆಯ ಬಗ್ಗೆ ಮತ್ತು ಬಾಲ್ಯವಿವಾಹದಿಂದಾಗುವ ದುಷ್ಪರಿಣಾಮಗಳ ಕುರಿತು ಮಾಧ್ಯಮಿಕ ಹಾಗೂ ಪ್ರೌಢ ಶೈಕ್ಷಣಿಕ ಪಠ್ಯಕ್ರಮದಲ್ಲಿ ಅಧ್ಯಾಯವನ್ನು ಅಳವಡಿಸುವುದು.
- ಶಾಲಾ ಆವರಣದಲ್ಲಿ ಬಾಲ್ಯವಿವಾಹದಿಂದಾಗುವ ದುಷ್ಪರಿಣಾಮಗಳ ಕುರಿತು ಮತ್ತು ಬಾಲ್ಯವಿವಾಹ ನಡೆಯುವ ಕುರಿತು ಮಾಹಿತಿ ದೊರೆತಲ್ಲಿ ಸಂಪರ್ಕಿಸಬೇಕಾದ ಸಹಾಯವಾಣಿ ಹಾಗೂ ಅಧಿಕಾರಿಗಳ ಮಾಹಿತಿಯನ್ನು ಪ್ರದರ್ಶಿಸುವುದು.
- ಶಾಲಾ ಅಭಿವೃದ್ಧಿ ಸಮಿತಿ ಸದಸ್ಯರಿಗೆ ಮತ್ತು ಶಾಲಾ ಶಿಕ್ಷಕರುಗಳಿಗೆ ಬಾಲ್ಯವಿವಾಹ ನಿಷೇಧ ಹಾಗೂ ಬಾಲಗರ್ಭಿಣಿಯರ ಪ್ರಕರಣಗಳ ತಡೆಗಟ್ಟುವ ಕುರಿತು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಏರ್ಪಡಿಸುವುದು.
- ಶಾಲೆಗಳಲ್ಲಿ ಕಡ್ಡಾಯವಾಗಿ ಪೋಷಕರ ಸಭೆಗಳನ್ನು ಏರ್ಪಡಿಸಿ ಬಾಲ್ಯ ವಿವಾಹದಿಂದಾಗುವ ದುಷ್ಪರಿಣಾಮಗಳ ಕುರಿತು ಅರಿವು ಮೂಡಿಸುವುದು.
- ಶಾಲಾ ಮುಖ್ಯೋಪಾಧ್ಯಾಯರು ವ್ಯಾಪ್ತಿಯ ಸ್ಥಳೀಯ ಪ್ರಾಥಮಿಕ ಆರೋಗ್ಯ ಕೇಂದ್ರದ ಆರೋಗ್ಯಾಧಿಕಾರಿಗಳನ್ನು ಸಂಪರ್ಕಿಸಿ, ಮಕ್ಕಳಿಗೆ ಲೈಂಗಿಕ ಶಿಕ್ಷಣದ ಅರಿವು, ಬಾಲಗರ್ಭಾವಸ್ಥೆಯಿಂದ ಮಗುವಿನ ಮಾನಸಿಕ ಹಾಗೂ ದೈಹಿಕ ಆರೋಗ್ಯದ ಮೇಲೆ ಉಂಟಾಗುವ ದುಷ್ಪರಿಣಾಮಗಳ ಕುರಿತು ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. ಹಾಗೂ ಕಾರ್ಯಕ್ರಮದ ಮೇಲ್ವಿಚಾರಣೆಯನ್ನು ತಾಲ್ಲೂಕು ಮಟ್ಟದ ಅಧಿಕಾರಿಗಳು ನಿರ್ವಹಿಸುವಂತೆ ಕ್ರಮವಹಿಸುವುದು.
- ಶಾಲಾ ಮುಖ್ಯೋಪಾಧ್ಯಾಯರು ತಮ್ಮ ಕಾರ್ಯಕ್ಷೇತ್ರದಲ್ಲಿ ಯಾವುದೇ ಬಾಲ್ಯವಿವಾಹ ನಡೆಯದಿರುವ ಬಗ್ಗೆ ಖಾತರಿಪಡಿಸಿಕೊಳ್ಳುವುದು.
- ಶಾಲೆಯಲ್ಲಿ ಪ್ರತೀ ತಿಂಗಳು ಮೌಲ್ಯಾಧಾರಿತ ಶಿಕ್ಷಣದ ತರಬೇತಿಗಳನ್ನು ನಡೆಸುವುದು.
- ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮೇಲಿನ ವಿಷಯಗಳನ್ನು ಪ್ರತೀ ತಿಂಗಳು ವರದಿ ಮಾಡುವುದು.
- ಶಾಲಾ ವ್ಯಾಪ್ತಿಯ ಸ್ಥಳೀಯ ಪ್ರಾಥಮಿಕ ಆರೋಗ್ಯ ಕೇಂದ್ರದ ಆರೋಗ್ಯಾಧಿಕಾರಿಗಳನ್ನು ಸಂಪರ್ಕಿಸಿ, ಮಕ್ಕಳ ಆರೋಗ್ಯ ತಪಾಸಣೆಯನ್ನು ನಿಯಮಿತವಾಗಿ ಆಯೋಜಿಸುವುದು.

- ಬಾಲ್ಯವಿವಾಹ ನಿಷೇಧ ಕಾಯ್ದೆ 2006 ಮತ್ತು ಕರ್ನಾಟಕ ತಿದ್ದುಪಡಿ ಕಾಯ್ದೆ 2016ರ ಸೆಕ್ಷನ್ 16(1)ರನ್ವಯ ಗ್ರಾಮ/ತಾಲ್ಲೂಕು/ಜಿಲ್ಲಾ/ರಾಜ್ಯ ವ್ಯಾಪ್ತಿಯಲ್ಲಿ ಕ್ರಮವಾಗಿ ಶಾಲಾ ಮುಖ್ಯೋಪಾಧ್ಯಾಯರು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಉಪನಿರ್ದೇಶಕರು ಮತ್ತು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರುಗಳನ್ನು ಬಾಲ್ಯವಿವಾಹ ನಿಷೇಧಾಧಿಕಾರಿಗಳೆಂದು ಗುರುತಿಸಿ ದಿನಾಂಕ:28.05.2018ರಂದು ಅಧಿಸೂಚನೆ ಹೊಡಿಸಲಾಗಿದೆ. ಅದರಂತೆ ಬಾಲ್ಯವಿವಾಹ ನಿಷೇಧಾಧಿಕಾರಿಗಳಿಗೆ ನಿಗದಿಪಡಿಸಲಾದ ಕರ್ತವ್ಯಗಳನ್ನು ಕಡ್ಡಾಯವಾಗಿ ನಿರ್ವಹಿಸುವ ಕುರಿತು ನಿರ್ದೇಶನ ನೀಡುವುದು.

3. <u>ಒಳಾಡಳಿತ ಇಲಾಖೆ</u>:

- ಪೋಕ್ಸೋ ಕಾಯ್ದೆ, ಬಾಲನ್ಯಾಯ ಕಾಯ್ದೆ (ಮಕ್ಕಳ ರಕ್ಷಣೆ ಮತ್ತು ಪೋಷಣೆ), ಬಾಲ್ಯವಿವಾಹ ನಿಷೇಧ ಕಾಯ್ದೆ ಹಾಗೂ ಮಕ್ಕಳ ಸಂಬಂಧಿತ ಇತರೆ ಕಾಯ್ದೆಗಳ ಕುರಿತು ಇಲಾಖೆಯ ಅಧಿಕಾರಿ/ಸಿಬ್ಬಂದಿಗಳಿಗೆ ಸಂವೇದನಾ ಶೀಲತೆ ತರಬೇತಿ ನೀಡುವುದು. ಹಾಗೂ ಜಾರಿಯಲ್ಲಿರುವ ಸಂಬಂಧಿತ ಕಾನೂನುಗಳನ್ನು ಕಟ್ಟುನಿಟ್ಟಾಗಿ ಪರಿಣಾಮಕಾರಿಯಾಗಿ ಜಾರಿಗೊಳಿಸಲು ಅಗತ್ಯ ತರಬೇತಿ ಸೂಚನೆಗಳನ್ನು ನೀಡಲು ಕ್ರಮವಹಿಸುವುದು.
- ಸ್ಥಳೀಯ ಪೊಲೀಸ್ ಅಧಿಕಾರಿ/ಸಿಬ್ಬಂದಿಯವರು ಗ್ರಾಮ ಪಂಚಾಯತ್ ಮಟ್ಟದ ಮಹಿಳೆಯರು ಮತ್ತು ಮಕ್ಕಳ ಕಾವಲು ಸಮಿತಿ ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ, ಬಾಲ್ಯವಿವಾಹ ತಡೆಗಟ್ಟುವಲ್ಲಿ ಕ್ರಮವಹಿಸುವುದು.
- ಬಾಲ್ಯವಿವಾಹ ನಿಷೇಧ ಕಾಯ್ದೆ 2006 ಮತ್ತು ಕರ್ನಾಟಕ ತಿದ್ದುಪಡಿ ಕಾಯ್ದೆ 2016ರ ಸೆಕ್ಷನ್ 16(1)ರನ್ವಯ ಗ್ರಾಮ/ತಾಲ್ಲೂಕು/ಜಿಲ್ಲಾ/ರಾಜ್ಯ ವ್ಯಾಪ್ತಿಯಲ್ಲಿ ಕ್ರಮವಾಗಿ ಪ್ರದೇಶ ವ್ಯಾಪ್ತಿಯ ಪೊಲೀಸ್ ಇನ್‌ಸ್‌ಪೆಕ್ಟರ್, ಪೊಲೀಸ್ ಸಬ್ ಇನ್ಸ್ ಪೆಕ್ಟರ್, ಸರ್ಕಲ್ ಇನ್ಸ್ ಪೆಕ್ಟರ್, ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು/ಹಿರಿಯ ಮಕ್ಕಳ ಕಲ್ಯಾಣಾಧಿಕಾರಿ(SJPU) ಮತ್ತು ಪೊಲೀಸ್ ಮಹಾನಿರ್ದೇಶಕರು/ಸಂಬಂಧಿಸಿದ IGP/ಪೊಲೀಸ್ ಮಹಾನಿರ್ದೇಶಕರು Training, ಪೊಲೀಸ್ ಇಲಾಖೆ ಇವರುಗಳನ್ನು ಬಾಲ್ಯವಿವಾಹ ನಿಷೇಧಾಧಿಕಾರಿಗಳೆಂದು ಗುರುತಿಸಿ ದಿನಾಂಕ:28.05.2018ರಂದು ಅಧಿಸೂಚನೆ ಹೊರಡಿಸಲಾಗಿದೆ. ಅದರಂತೆ ಬಾಲ್ಯವಿವಾಹ ನಿಷೇಧಾಧಿಕಾರಿಗಳಿಗೆ ನಿಗದಿಪಡಿಸಲಾದ ಕರ್ತವ್ಯಗಳನ್ನು ಕಡ್ಡಾಯವಾಗಿ ನಿರ್ವಹಿಸುವ ಕುರಿತು ನಿರ್ದೇಶನ ನೀಡುವುದು.
- ಬಾಲ್ಯವಿವಾಹ ನಿಷೇಧ ಕರ್ನಾಟಕ ನಿಯಮಗಳು,2016ರನ್ವಯ "ಪ್ರತಿಯೊಬ್ಬ ಪೊಲೀಸ್ ಅಧಿಕಾರಿಯು ತನ್ನ ಅಧಿಕಾರ ವ್ಯಾಪ್ತಿಯಲ್ಲಿ ನಡೆದ ಅಪರಾಧದ ಸಂಜ್ಞೆಯನ್ನು ಗಮನಿಸಿ ತಾನಾಗಿಯೇ (Suo-moto) ಕ್ರಮ ಕೈಗೊಳ್ಳಬಹುದಾಗಿದ್ದು ಬಾಲ್ಯವಿವಾಹಗಳು ನಡೆದ ಅಥವಾ ನಡೆಯುತ್ತಿರುವ ಸಂದರ್ಭಗಳಲ್ಲಿ Suo-moto ಪ್ರಕರಣವನ್ನು ದಾಖಲಿಸುವುದು.
- ಸೈಬರ್ ಅಪರಾಧಗಳು/ಮಾದಕ ಪದಾರ್ಥಗಳ ಸೇವನೆಯಿಂದಾಗುವ ದುಷ್ಪರಿಣಾಮಗಳು ಹಾಗೂ ತಕ್ಷಣಕ್ಕೆ ಕೈಗೊಳ್ಳಬಹುದಾದ ಸ್ವಯಂ ರಕ್ಷಣಾ ಕ್ರಮಗಳ ಕುರಿತು ಶಾಲಾಕಾಲೇಜು ವಿದ್ಯಾರ್ಥಿಗಳಿಗೆ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುವುದು.

- ತುರ್ತು (ERSS) ಸಹಾಯವಾಣಿ 112 ಕುರಿತು ವ್ಯಾಪಕ ಪ್ರಚಾರ ನೀಡುವುದು.

4. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ:

- ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಮಹಿಳೆಯರ ಮತ್ತು ಮಕ್ಕಳ ರಕ್ಷಣೆಯ ಕಾವಲು ಸಮಿತಿಗಳನ್ನು ದಿನಾಂಕ:06.08.2019ರ ಆದೇಶದಂತೆ ಕಡ್ಡಾಯವಾಗಿ ಪ್ರತಿ ಗ್ರಾಮ ಪಂಚಾಯತ್‌ಗಳಲ್ಲಿ ರಚಿಸುವುದು. ಹಾಗೂ ಕಾವಲು ಸಮಿತಿಗಳು ನಿಗದಿಪಡಿಸಿದ ಕಾರ್ಯ ಮತ್ತು ಜವಾಬ್ದಾರಿಗಳನ್ನು ಕಡ್ಡಾಯವಾಗಿ ನಿರ್ವಹಿಸತಕ್ಕದ್ದು.
- ಗ್ರಾಮ ಪಂಚಾಯತ್ ಮಟ್ಟದಲ್ಲಿ 18 ವರ್ಷದೊಳಗಿನ ಹೆಣ್ಣು ಮಕ್ಕಳು ಮತ್ತು 21 ವರ್ಷದೊಳಗಿನ ಗಂಡು ಮಕ್ಕಳ ಮಾಹಿತಿಯನ್ನು ಸಂಗ್ರಹಿಸುವುದು.
- ಗ್ರಾಮದಲ್ಲಿ ಯಾವುದೇ ಬಾಲ ಗರ್ಭಿಣಿಯರು /ಬಾಲ್ಯವಿವಾಹ ಪ್ರಕರಣಗಳು ನಡೆಯುತ್ತಿರುವುದು ಕಂಡುಬಂದಲ್ಲಿ ಕೂಡಲೇ ಸೂಕ್ತ ಕ್ರಮವಹಿಸುವುದು.
- ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ಶಾಲೆಯಿಂದ ಹೊರಗುಳಿದ ಮಕ್ಕಳ ಪೋಷಕರ ಮನವೊಲಿಸಿ, ಶಾಲೆಗೆ ಮರಳಿ ದಾಖಲಿಸುವುದು.
- ಶಾಲೆಯಿಂದ ಹೊರಗುಳಿದ ಪ್ರಾಯಪೂರ್ವ ಮಕ್ಕಳಿಗೆ ವಿವಿಧ ರೀತಿಯ ಕೌಶಲ್ಯ ತರಬೇತಿಯನ್ನು ನೀಡಲು ಕ್ರಮವಹಿಸುವುದು.
- ಬಾಲ್ಯವಿವಾಹದಿಂದಾಗುವ ದುಷ್ಪರಿಣಾಮಗಳ ಕುರಿತು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಸಾರ್ವಜನಿಕರು/ಧಾರ್ಮಿಕ ಮುಖಂಡರಿಗೆ ಹಾಗೂ ಕಾವಲು ಸಮಿತಿಯ ಸದಸ್ಯರಿಗೆ ಹಮ್ಮಿಕೊಳ್ಳುವುದು.
- ಕಡ್ಡಾಯವಾಗಿ ಮಕ್ಕಳ ಕಾವಲು ಸಮಿತಿ ಸಭೆಗಳನ್ನು ಹಮ್ಮಿಕೊಳ್ಳುವುದು.
- ಲೈಂಗಿಕ ದೌರ್ಜನ್ಯ/ಬಾಲಗರ್ಭಿಣಿ ಪ್ರಕರಣಗಳಿಗೆ ಸಂಬಂಧಿಸಿದ ಮಕ್ಕಳು ಕಂಡುಬಂದಲ್ಲಿ ಮಗುವಿಗೆ ರಕ್ಷಣೆ ನೀಡಿ, ಮಕ್ಕಳ ಕಲ್ಯಾಣ ಸಮಿತಿ ಮುಂದೆ ಹಾಜರುಪಡಿಸುವುದು.
- ಆರ್‌ಸಿಎಚ್ ಪೋರ್ಟಲ್‌ನಲ್ಲಿ ದಾಖಲಾಗುವ 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಬಾಲಗರ್ಭಿಣಿಯರ ಮಾಹಿತಿಯನ್ನು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಹಾಗೂ ಆಶಾ ಕಾರ್ಯಕರ್ತೆಯರಿಂದ ಪಡೆದು ಅಗತ್ಯವಿದ್ದಲ್ಲಿ ರಕ್ಷಣೆ ಮತ್ತು ಪುನರ್ವಸತಿ ಕಲ್ಪಿಸುವುದು. ಹಾಗೂ ಭವಿಷ್ಯದಲ್ಲಿ ಇಂತಹ ಪ್ರಕರಣಗಳು ವರದಿಯಾಗದಂತೆ ನಿಗಾವಹಿಸುವುದು.
- ಮಕ್ಕಳ ಸಹಾಯವಾಣಿ-1098 ಹಾಗೂ ಮಹಿಳಾ ಸಹಾಯವಾಣಿ-181 ಕುರಿತು ಸಾರ್ವಜನಿಕರಲ್ಲಿ ವ್ಯಾಪಕ ಪ್ರಚಾರ ಮಾಡುವುದು.
- ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ನಡೆಯುವ ವಿವಾಹಗಳು "ಬಾಲ್ಯವಿವಾಹಗಳಲ್ಲ" ಎಂದು ಖಾತರಿಪಡಿಸಿಕೊಳ್ಳುವುದು.
- ಮಕ್ಕಳ ರಕ್ಷಣಾ ಕಾವಲು ಸಮಿತಿಗಳು ನಿಯಮಿತವಾಗಿ ಸಭೆಗಳನ್ನು ನಡೆಸುತ್ತಿರುವ ಕುರಿತು ಮತ್ತು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿರುವ ಕುರಿತು ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್‌ಗಳು ಮೇಲ್ವಿಚಾರಣೆ ಮಾಡುವುದು.
- ಬಾಲ್ಯವಿವಾಹ ನಿಷೇಧ ಕಾಯ್ದೆ 2006 ಮತ್ತು ಕರ್ನಾಟಕ ತಿದ್ದುಪಡಿ ಕಾಯ್ದೆ 2016ರ ಸೆಕ್ಷನ್ 16(1)ರನ್ವಯ ಗ್ರಾಮ/ತಾಲ್ಲೂಕು/ಜಿಲ್ಲಾ/ರಾಜ್ಯ ವ್ಯಾಪ್ತಿಯಲ್ಲಿ ಕ್ರಮವಾಗಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ ಸಹಾಯಕ ನಿರ್ದೇಶಕರು, ಕಾರ್ಯನಿರ್ವಾಹಕ ಅಧಿಕಾರಿಗಳು,

ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಮತ್ತು ನಿರ್ದೇಶಕರು(ಪಂಚಾಯತ್ ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರುಗಳನ್ನು ಬಾಲ್ಯವಿವಾಹ ನಿಷೇಧಾಧಿಕಾರಿಗಳೆಂದು ಗುರುತಿಸಿ ದಿನಾಂಕ:28.05.2018 ಮತ್ತು ಸೇರ್ಪಡೆ ಆದೇಶದ ದಿನಾಂಕ:30.08.2023ರಂದು ಅಧಿಸೂಚನೆ ಹೊರಡಿಸಲಾಗಿದೆ. ಅದರಂತೆ ಬಾಲ್ಯವಿವಾಹ ನಿಷೇಧಾಧಿಕಾರಿಗಳಿಗೆ ನಿಗದಿಪಡಿಸಲಾದ ಕರ್ತವ್ಯಗಳನ್ನು ಕಡ್ಡಾಯವಾಗಿ ನಿರ್ವಹಿಸುವ ಕುರಿತು ನಿರ್ದೇಶನ ನೀಡುವುದು.

- ಬಾಲ್ಯವಿವಾಹದಿಂದಾಗುವ ದುಷ್ಪರಿಣಾಮಗಳ ಕುರಿತು ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟಗಳು, ಮಹಿಳಾ ಸ್ವಸಹಾಯ ಸಂಘಗಳಿಗೆ ಅರಿವು ಮೂಡಿಸುವುದು ಮತ್ತು ಶಾಲೆಯಿಂದ ಹೊರಗುಳಿದ, ದೌರ್ಜನ್ಯಕ್ಕೆ ಒಳಗಾದ ಪ್ರಾಯಪೂರ್ವ ಮಕ್ಕಳಿಗೆ ಕೌಶಲ್ಯಾಭಿವೃದ್ಧಿ ತರಬೇತಿಯನ್ನು ನೀಡಲು ಅಗತ್ಯವಾಗಿದೆ.

5. <u>ಸಮಾಜ ಕಲ್ಯಾಣ ಇಲಾಖೆ:</u>

- ವಸತಿ ನಿಲಯಗಳಲ್ಲಿ ಗೈರುಹಾಜರಾಗುವ ಹೆಣ್ಣು ಮಕ್ಕಳ ಹಾಜರಾತಿಯನ್ನು ಶಾಲೆಗಳಿಂದ ಪಡೆದು ಪರಿಶೀಲಿಸುವುದು.
- ಸರ್ಕಾರ ಹೊರಡಿಸಿರುವ ನಿಲಯ ಮಾರ್ಗಸೂಚಿಗಳನ್ನು ನಿಲಯ ಮೇಲ್ವಿಚಾರಕರು ಹಾಗೂ ತಾಲ್ಲೂಕು/ ಜಿಲ್ಲಾಮಟ್ಟದ ಅಧಿಕಾರಿಗಳು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವುದು.
- ವಸತಿ ನಿಲಯಗಳಲ್ಲಿ ದಾಖಲಾಗಿರುವ ವಿದ್ಯಾರ್ಥಿಗಳ ಚಲನ-ವಲನ ಮತ್ತು ವರ್ತನೆಗಳಲ್ಲಿ ಬದಲಾವಣೆಗಳಾದಲ್ಲಿ ಗುರುತಿಸಿ, ಅಗತ್ಯ ಆಪ್ತ ಸಮಾಲೋಚನಾ ನೆರವು ಒದಗಿಸುವುದು.
- ವಿದ್ಯಾರ್ಥಿನಿಲಯಗಳಲ್ಲಿ ಸಿಸಿ ಟಿವಿ ಕಣ್ಗಾವಲಿರಿಸುವುದು.
- ಪ್ರತೀ ತಿಂಗಳು ವಿದ್ಯಾರ್ಥಿಗಳ ಆರೋಗ್ಯ ತಪಾಸಣೆಗೆ ಕ್ರಮವಹಿಸುವುದು.
- ದೀರ್ಘಾವಧಿ ಗೈರುಹಾಜರಾದ ವಿದ್ಯಾರ್ಥಿನಿಯರು ನಿಲಯಕ್ಕೆ ಮರುಹಾಜರಾದಾಗ ಕಡ್ಡಾಯವಾಗಿ ವೈದ್ಯಕೀಯ ತಪಾಸಣೆಗೆ ಒಳಪಡಿಸುವುದು.
- ಗೈರುಹಾಜರಾದ ವಿದ್ಯಾರ್ಥಿಗಳ ಪಾಲಕರನ್ನು ಸಂಪರ್ಕಿಸಿ, ಮರು ದಾಖಲಾತಿಗೆ ಕ್ರಮವಹಿಸುವುದು.
- ವಸತಿ ನಿಲಯಗಳ ಆವರಣದಲ್ಲಿ ಬಾಲ್ಯವಿವಾಹದಿಂದಾಗುವ ದುಷ್ಪರಿಣಾಮಗಳ ಕುರಿತು ಮಾಹಿತಿಯನ್ನು ಮತ್ತು ಬಾಲ್ಯವಿವಾಹ ನಡೆಯುವ ಕುರಿತು ಮಾಹಿತಿ ದೊರೆತಲ್ಲಿ ಸಂಪರ್ಕಿಸಬೇಕಾದ ಸಹಾಯವಾಣಿ ಹಾಗೂ ಅಧಿಕಾರಿಗಳ ಮಾಹಿತಿಯನ್ನು ಪ್ರದರ್ಶಿಸುವುದು.
- ಇಲಾಖೆಯ ಅಧಿಕಾರಿ/ಸಿಬ್ಬಂದಿಗಳಿಗೆ ಮತ್ತು ವಸತಿನಿಲಯಗಳ ವಿದ್ಯಾರ್ಥಿಗಳಿಗೆ ಪೋಕ್ಸೋ ಕಾಯ್ದೆ, ಬಾಲನ್ಯಾಯ ಕಾಯ್ದೆ(ಮಕ್ಕಳ ರಕ್ಷಣೆ ಮತ್ತು ಪೋಷಣೆ), ಬಾಲ್ಯವಿವಾಹ ನಿಷೇಧ ಕಾಯ್ದೆ ಹಾಗೂ ಮಕ್ಕಳ ಸಂಬಂಧಿತ ಇತರೆ ಕಾಯ್ದೆಗಳ ಕುರಿತು ಸಂವೇದನಾ ಶೀಲತೆ ತರಬೇತಿ ನೀಡುವುದು.
- ವಸತಿನಿಲಯಗಳ ಮಕ್ಕಳಿಗೆ ಸೈಬರ್ ಅಪರಾಧಗಳು/ಮಾದಕ ಪದಾರ್ಥಗಳ ಸೇವನೆಯಿಂದಾಗುವ ದುಷ್ಪರಿಣಾಮಗಳು ಹಾಗೂ ತಕ್ಷಣಕ್ಕೆ

ಕೈಗೊಳ್ಳಬಹುದಾದ ಸ್ವಯಂ ರಕ್ಷಣಾ ಕ್ರಮಗಳ ಕುರಿತು ಶಾಲಾಕಾಲೇಜು ವಿದ್ಯಾರ್ಥಿಗಳಿಗೆ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುವುದು.

- ಬಾಲ್ಯವಿವಾಹ ನಿಷೇಧ ಕಾಯ್ದೆ 2006 ಮತ್ತು ಕರ್ನಾಟಕ ತಿದ್ದುಪಡಿ ಕಾಯ್ದೆ 2016ರ ಸೆಕ್ಷನ್ 16(1)ರನ್ವಯ ತಾಲ್ಲೂಕು/ಜಿಲ್ಲಾ/ರಾಜ್ಯ ವ್ಯಾಪ್ತಿಯಲ್ಲಿ ಕ್ರಮವಾಗಿ ತಾಲ್ಲೂಕು ಹಾಗೂ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು ಮತ್ತು ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರುಗಳನ್ನು ಬಾಲ್ಯವಿವಾಹ ನಿಷೇಧಾಧಿಕಾರಿಗಳೆಂದು ಗುರುತಿಸಿ ದಿನಾಂಕ:28.05.2018ರಂದು ಅಧಿಸೂಚಿಸಲಾಗಿದೆ. ಅದರಂತೆ ಬಾಲ್ಯವಿವಾಹ ನಿಷೇಧಾಧಿಕಾರಿಗಳಿಗೆ ನಿಗದಿಪಡಿಸಲಾದ ಕರ್ತವ್ಯಗಳನ್ನು ಕಡ್ಡಾಯವಾಗಿ ನಿರ್ವಹಿಸುವ ಕುರಿತು ನಿರ್ದೇಶನ ನೀಡುವುದು.

6. <u>ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ:</u>

- ವಸತಿ ನಿಲಯಗಳಲ್ಲಿ ಗೈರುಹಾಜರಾಗುವ ಹೆಣ್ಣು ಮಕ್ಕಳ ಹಾಜರಾತಿಯನ್ನು ಶಾಲೆಗಳಿಂದ ಪಡೆದು ಪರಿಶೀಲಿಸುವುದು.
- ಸರ್ಕಾರ ಹೊರಡಿಸಿರುವ ನಿಲಯ ಮಾರ್ಗಸೂಚಿಗಳನ್ನು ನಿಲಯ ಮೇಲ್ವಿಚಾರಕರು ಹಾಗೂ ತಾಲ್ಲೂಕು/ ಜಿಲ್ಲಾ ಮಟ್ಟದ ಅಧಿಕಾರಿಗಳು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವುದು.
- ವಸತಿ ನಿಲಯಗಳಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳ ಪೋಷಕರೊಂದಿಗೆ ಪ್ರತಿ ತಿಂಗಳು ಸಭೆಗಳನ್ನು ನಡೆಸಿ ವಿದ್ಯಾರ್ಥಿಗಳ ಚಲನ-ವಲನ ಮತ್ತು ವರ್ತನೆಗಳಲ್ಲಿ ಬದಲಾವಣೆಗಳಾಗಿದ್ದಲ್ಲಿ ಪೋಷಕರಿಗೆ ಮನವರಿಕೆ ಮಾಡಿ ಆಪ್ತ ಸಮಾಲೋಚನಾ ನೆರವು ನೀಡುವುದು.
- ವಿದ್ಯಾರ್ಥಿ ನಿಲಯಗಳಲ್ಲಿ ಸಿಸಿ ಟಿವಿ ಕಣ್ಗಾವಲಿರಿಸುವುದು
- ಪ್ರತಿ ತಿಂಗಳು ವಿದ್ಯಾರ್ಥಿಗಳ ಆರೋಗ್ಯ ತಪಾಸಣೆಗೆ ಕ್ರಮ ವಹಿಸುವುದು ಹಾಗೂ ಆರೋಗ್ಯ ಹಾಗೂ ಮೌಲ್ಯಗಳ ಕುರಿತು ಜಾಗೃತಿ ಮೂಡಿಸುವುದು.
- ದೀರ್ಘಾವಧಿ ಗೈರುಹಾಜರಾದ ವಿದ್ಯಾರ್ಥಿನಿಯರು ನಿಲಯಕ್ಕೆ ಮರು ಹಾಜರಾದಾಗ ಕಡ್ಡಾಯವಾಗಿ ವೈದ್ಯಕೀಯ ತಪಾಸಣೆಗೆ ಒಳಪಡಿಸುವುದು.
- ಗೈರುಹಾಜರಾದ ವಿದ್ಯಾರ್ಥಿಗಳ ಪಾಲಕರನ್ನು ಸಂಪರ್ಕಿಸಿ, ಮರು ದಾಖಲಾತಿಗೆ ಕ್ರಮವಹಿಸುವುದು.
- ವಸತಿ ನಿಲಯಗಳ ಆವರಣದಲ್ಲಿ ಬಾಲ್ಯವಿವಾಹದಿಂದಾಗುವ ದುಷ್ಪರಿಣಾಮಗಳ ಕುರಿತು ಮತ್ತು ಬಾಲ್ಯವಿವಾಹ ನಡೆಯುವ ಕುರಿತು ಮಾಹಿತಿ ದೊರೆತಲ್ಲಿ ಸಂಪರ್ಕಿಸಬೇಕಾದ ಸಹಾಯವಾಣಿ ಹಾಗೂ ಅಧಿಕಾರಿಗಳ ಮಾಹಿತಿಯನ್ನು ಪ್ರದರ್ಶಿಸುವುದು.
- ಇಲಾಖೆಯ ಅಧಿಕಾರಿ/ಸಿಬ್ಬಂದಿಗಳಿಗೆ ಮತ್ತು ವಸತಿನಿಲಯಗಳ ವಿದ್ಯಾರ್ಥಿಗಳಿಗೆ ಪೋಕ್ಸೋ ಕಾಯ್ದೆ, ಬಾಲನ್ಯಾಯ ಕಾಯ್ದೆ(ಮಕ್ಕಳ ರಕ್ಷಣೆ ಮತ್ತು ಪೋಷಣೆ), ಬಾಲ್ಯವಿವಾಹ ನಿಷೇಧ ಕಾಯ್ದೆ ಹಾಗೂ ಮಕ್ಕಳ ಸಂಬಂಧಿತ ಇತರೆ ಕಾಯ್ದೆಗಳ ಕುರಿತು ಸಂವೇದನಾ ಶೀಲತೆ ತರಬೇತಿ ನೀಡುವುದು.
- ವಸತಿ ನಿಲಯಗಳಲ್ಲಿ ಮಕ್ಕಳಿಗೆ ಸೈಬರ್ ಅಪರಾಧಗಳು/ಮಾದಕ ಪದಾರ್ಥಗಳ ಸೇವನೆಯಿಂದಾಗುವ ದುಷ್ಪರಿಣಾಮಗಳ ಹಾಗೂ ತಕ್ಷಣಕ್ಕೆ ಕೈಗೊಳ್ಳಬಹುದಾದ ಸ್ವಯಂ ರಕ್ಷಣಾ ಕ್ರಮಗಳ ಕುರಿತು ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುವುದು ಹಾಗೂ

ವಿದ್ಯಾರ್ಥಿನಿಲಯಗಳಲ್ಲಿ ಸಂಭವಿಸಬಹುದಾದ ಸೈಬರ್ ಅಪರಾಧಗಳನ್ನು ದಾಖಲಿಸಲು ಸೈಬರ್ ಕ್ರೈಂ ಸಹಾಯವಾಣಿ ಸಂಖ್ಯೆಯನ್ನು ವಿದ್ಯಾರ್ಥಿಗಳಿಗೆ ಕಾಣುವಂತೆ ಫಲಕದಲ್ಲಿ ಪ್ರದರ್ಶಿಸುವುದು ಮತ್ತು ಸಾಮಾಜಿಕ ಜಾಲತಾಣಗಳನ್ನು ಬಳಕೆ ಮಾಡುವುದರಿಂದ ಸಂಭವಿಸಬಹುದಾದ ಸಮಸ್ಯೆಗಳ ಕುರಿತು ಜಾಗೃತಿ ಮೂಡಿಸುವುದು.

- ಪ್ರತಿ ತಿಂಗಳು ಸಂಬಂಧಿಸಿದ ಮಹಿಳಾ ವಿದ್ಯಾರ್ಥಿನಿಲಯಗಳಿಗೆ ಸ್ಥಳೀಯ ಮಹಿಳಾ ಪೊಲೀಸ್ ಅಧಿಕಾರಿಗಳು ಭೇಟಿ ನೀಡಿ ಜಾಗೃತಿ ಮೂಡಿಸುವುದು.
- ವಿದ್ಯಾರ್ಥಿನಿಯರು ರಜೆಯನ್ನು ಪಡೆಯಬೇಕಾದಲ್ಲಿ ಸಂಬಂಧಪಟ್ಟ ಪೋಷಕರು ಕಡ್ಡಾಯವಾಗಿ ನಿಲಯ ಮೇಲ್ವಿಚಾರಕರಿಂದ ಅನುಮತಿಯನ್ನು ಪಡೆಯುವುದು ಹಾಗೂ ವಿದ್ಯಾರ್ಥಿನಿಯರು ರಜೆಯಿಂದ ಮರಳಿ ವಿದ್ಯಾರ್ಥಿ ನಿಲಯಕ್ಕೆ ಹಾಜರಾಗುವ ಸಂದರ್ಭದಲ್ಲಿ ಪೋಷಕರಿಗೆ ನಿಲಯ ಮೇಲ್ವಿಚಾರಕರು ಮಾಹಿತಿಯನ್ನು ನೀಡುವುದು.
- ವಿದ್ಯಾರ್ಥಿನಿಲಯಗಳಲ್ಲಿ ಕಡ್ಡಾಯವಾಗಿ ಚಲನ-ವಲನ ವಹಿಯಲ್ಲಿ ವಿದ್ಯಾರ್ಥಿಗಳು ದಾಖಲಿಸಿರುವ ವಿವರವನ್ನು ಪರಿಶೀಲಿಸಿ ಮುಂಜಾಗ್ರತ ಕ್ರಮವನ್ನು ಕೈಗೊಳ್ಳುವುದು.
- ಅನಿವಾರ್ಯ ಸಂದರ್ಭಗಳನ್ನು ಹೊರತುಪಡಿಸಿ ಉಳಿದಂತೆ ಪ್ರತಿದಿನ ಸಂಜೆ 6:30 ಒಳಗೆ ವಿದ್ಯಾರ್ಥಿಗಳು ಕಡ್ಡಾಯವಾಗಿ ವಿದ್ಯಾರ್ಥಿ ನಿಲಯಗಳಲ್ಲಿ ಹಾಜರಿರುವಂತೆ ನಿಲಯ ಮೇಲ್ವಿಚಾರಕರು ಕ್ರಮ ವಹಿಸತಕ್ಕದ್ದು.

7. **ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:**

- ವಸತಿ ನಿಲಯಗಳಲ್ಲಿ ಗೈರುಹಾಜರಾಗುವ ಹೆಣ್ಣು ಮಕ್ಕಳ ಹಾಜರಾತಿಯನ್ನು ಶಾಲೆಗಳಿಂದ ಪಡೆದು ಪರಿಶೀಲಿಸುವುದು.
- ಸರ್ಕಾರ ಹೊರಡಿಸಿರುವ ನಿಲಯ ಮಾರ್ಗಸೂಚಿಗಳನ್ನು ನಿಲಯ ಮೇಲ್ವಿಚಾರಕರು ಹಾಗೂ ತಾಲ್ಲೂಕು/ ಜಿಲ್ಲಾ ಮಟ್ಟದ ಅಧಿಕಾರಿಗಳು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವುದು.
- ವಸತಿ ನಿಲಯಗಳಲ್ಲಿ ದಾಖಲಾಗಿರುವ ವಿದ್ಯಾರ್ಥಿಗಳ ಚಲನ-ವಲನ ಮತ್ತು ವರ್ತನೆಗಳಲ್ಲಿ ಬದಲಾವಣೆಗಳಾದಲ್ಲಿ ಗುರುತಿಸಿ, ಅಗತ್ಯ ಆಪ್ತ ಸಮಾಲೋಚನಾ ನೆರವು ಒದಗಿಸುವುದು.
- ವಿದ್ಯಾರ್ಥಿನಿಲಯಗಳಲ್ಲಿ ಸಿಸಿ ಟಿವಿ ಕಣ್ಗಾವಲಿರಿಸುವುದು
- ಪ್ರತ ತಿಂಗಳು ವಿದ್ಯಾರ್ಥಿಗಳ ಆರೋಗ್ಯ ತಪಾಸಣೆಗೆ ಕ್ರಮವಹಿಸುವುದು.
- ದೀರ್ಘಾವಧಿ ಗೈರುಹಾಜರಾದ ವಿದ್ಯಾರ್ಥಿನಿಯರು ನಿಲಯಕ್ಕೆ ಮರುಹಾಜರಾದಾಗ ಕಡ್ಡಾಯವಾಗಿ ವೈದ್ಯಕೀಯ ತಪಾಸಣೆಗೆ ಒಳಪಡಿಸುವುದು.
- ಗೈರು ಹಾಜರಾದ ವಿದ್ಯಾರ್ಥಿಗಳ ಪಾಲಕರನ್ನು ಸಂಪರ್ಕಿಸಿ, ಮರು ದಾಖಲಾತಿಗೆ ಕ್ರಮವಹಿಸುವುದು.
- ವಸತಿ ನಿಲಯಗಳ ಆವರಣದಲ್ಲಿ ಬಾಲ್ಯವಿವಾಹದಿಂದಾಗುವ ದುಷ್ಪರಿಣಾಮಗಳ ಕುರಿತು ಮತ್ತು ಬಾಲ್ಯವಿವಾಹ ನಡೆಯುವ ಕುರಿತು ಮಾಹಿತಿ ದೊರೆತಲ್ಲಿ ಸಂಪರ್ಕಿಸಬೇಕಾದ ಸಹಾಯವಾಣಿ ಹಾಗೂ ಅಧಿಕಾರಿಗಳ ಮಾಹಿತಿಯನ್ನು ಪ್ರದರ್ಶಿಸುವುದು.

- ಇಲಾಖೆಯ ಅಧಿಕಾರಿ/ಸಿಬ್ಬಂದಿಗಳಿಗೆ ಮತ್ತು ವಸತಿನಿಲಯಗಳ ವಿದ್ಯಾರ್ಥಿಗಳಿಗೆ ಪೋಕ್ಸೋ ಕಾಯ್ದೆ, ಬಾಲನ್ಯಾಯ ಕಾಯ್ದೆ(ಮಕ್ಕಳ ರಕ್ಷಣೆ ಮತ್ತು ಪೋಷಣೆ), ಬಾಲ್ಯವಿವಾಹ ನಿಷೇಧ ಕಾಯ್ದೆ ಹಾಗೂ ಮಕ್ಕಳ ಸಂಬಂಧಿತ ಇತರೆ ಕಾಯ್ದೆಗಳ ಕುರಿತು ಸಂವೇದನಾ ಶೀಲತೆ ತರಬೇತಿ ನೀಡುವುದು.
- ವಸತಿನಿಲಯಗಳ ಮಕ್ಕಳಿಗೆ ಸೈಬರ್ ಅಪರಾಧಗಳು/ಮಾದಕ ಪದಾರ್ಥಗಳ ಸೇವನೆಯಿಂದಾಗುವ ದುಷ್ಪರಿಣಾಮಗಳು ಹಾಗೂ ತಕ್ಷಣಕ್ಕೆ ಕೈಗೊಳ್ಳಬಹುದಾದ ಸ್ವಯಂ ರಕ್ಷಣಾ ಕ್ರಮಗಳ ಕುರಿತು ಶಾಲಾಕಾಲೇಜು ವಿದ್ಯಾರ್ಥಿಗಳಿಗೆ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುವುದು.
- ಬಾಲ್ಯವಿವಾಹ ನಿಷೇಧ ಕಾಯ್ದೆ 2006 ಮತ್ತು ಕರ್ನಾಟಕ ತಿದ್ದುಪಡಿ ಕಾಯ್ದೆ 2016ರ ಸೆಕ್ಷನ್ 16(1)ರನ್ವಯ ತಾಲ್ಲೂಕು/ಜಿಲ್ಲಾ/ರಾಜ್ಯ ವ್ಯಾಪ್ತಿಯಲ್ಲಿ ಕ್ರಮವಾಗಿ ವಿಸ್ತರಣಾಧಿಕಾರಿಗಳು, ಜಿಲ್ಲಾ ಅಧಿಕಾರಿಗಳು ಮತ್ತು ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರುಗಳನ್ನು ಬಾಲ್ಯವಿವಾಹ ನಿಷೇಧಾಧಿಕಾರಿಗಳೆಂದು ಗುರುತಿಸಿ ದಿನಾಂಕ:28.05.2018ರಂದು ಅಧಿಸೂಚಿಸಲಾಗಿದೆ. ಅದರಂತೆ ಬಾಲ್ಯವಿವಾಹ ನಿಷೇಧಾಧಿಕಾರಿಗಳಿಗೆ ನಿಗದಿಪಡಿಸಲಾದ ಕರ್ತವ್ಯಗಳನ್ನು ಕಡ್ಡಾಯವಾಗಿ ನಿರ್ವಹಿಸುವ ಕುರಿತು ನಿರ್ದೇಶನ ನೀಡುವುದು.
- ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯಗಳಲ್ಲಿ ಯಾವುದೇ ಬಾಲಕಿ ಒಮ್ಮೆ ಹಾಸ್ಟೆಲ್ ಪ್ರವೇಶಾತಿ ಪಡೆದು, ಶೈಕ್ಷಣಿಕ ವರ್ಷದ ಮಧ್ಯದಲ್ಲಿ ವಸತಿ ನಿಲಯವನ್ನು ಬಿಟ್ಟು ಹೋಗುವ ಪ್ರಕರಣಗಳಲ್ಲಿ ಕಡ್ಡಾಯವಾಗಿ ಸಂಬಂಧಪಟ್ಟ ಪೋಷಕರನ್ನು ಕರೆದು ಸಮಾಲೋಚನೆ ನಡೆಸತಕ್ಕದ್ದು.

8. <u>ಅಲ್ಪಸಂಖ್ಯಾತರ ಕಲ್ಯಾಣ/ಹಜ್ ಮತ್ತು ವಕ್ಫ್ ಇಲಾಖೆ:</u>

- ವಸತಿ ನಿಲಯಗಳಲ್ಲಿ ಗೈರು ಹಾಜರಾಗುವ ಹೆಣ್ಣು ಮಕ್ಕಳ ಹಾಜರಾತಿಯನ್ನು ಶಾಲೆಗಳಿಂದ ಪಡೆದು ಪರಿಶೀಲಿಸುವುದು.
- ಸರ್ಕಾರ ಹೊರಡಿಸಿರುವ ನಿಲಯ ಮಾರ್ಗಸೂಚಿಗಳನ್ನು ನಿಲಯ ಮೇಲ್ವಿಚಾರಕರು ಹಾಗೂ ತಾಲ್ಲೂಕು/ ಜಿಲ್ಲಾ ಮಟ್ಟದ ಅಧಿಕಾರಿಗಳು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವುದು.
- ವಸತಿ ನಿಲಯಗಳಲ್ಲಿ ದಾಖಲಾಗಿರುವ ವಿದ್ಯಾರ್ಥಿಗಳ ಚಲನ-ವಲನ ಮತ್ತು ವರ್ತನೆಗಳಲ್ಲಿ ಬದಲಾವಣೆಗಳಾದಲ್ಲಿ ಗುರುತಿಸಿ, ಅಗತ್ಯ ಆಪ್ತ ಸಮಾಲೋಚನಾ ನೆರವು ಒದಗಿಸುವುದು.
- ವಿದ್ಯಾರ್ಥಿನಿಲಯಗಳಲ್ಲಿ ಸಿಸಿ ಟಿವಿ ಕಣ್ಗಾವಲಿರಿಸುವುದು
- ಪ್ರತೀ ತಿಂಗಳು ವಿದ್ಯಾರ್ಥಿಗಳ ಆರೋಗ್ಯ ತಪಾಸಣೆಗೆ ಕ್ರಮವಹಿಸುವುದು.
- ದೀರ್ಘಾವಧಿ ಗೈರುಹಾಜರಾದ ವಿದ್ಯಾರ್ಥಿನಿಯರು ನಿಲಯಕ್ಕೆ ಮರುಹಾಜರಾದಾಗ ಕಡ್ಡಾಯವಾಗಿ ವೈದ್ಯಕೀಯ ತಪಾಸಣೆಗೆ ಒಳಪಡಿಸುವುದು.
- ಗೈರುಹಾಜರಾದ ವಿದ್ಯಾರ್ಥಿಗಳ ಪಾಲಕರನ್ನು ಸಂಪರ್ಕಿಸಿ, ಮರು ದಾಖಲಾತಿಗೆ ಕ್ರಮವಹಿಸುವುದು.
- ವಸತಿ ನಿಲಯಗಳ ಆವರಣದಲ್ಲಿ, ಬಾಲ್ಯವಿವಾಹದಿಂದಾಗುವ ದುಷ್ಪರಿಣಾಮಗಳ ಕುರಿತು ಮತ್ತು ಬಾಲ್ಯವಿವಾಹ ನಡೆಯುವ ಕುರಿತು

ಮಾಹಿತಿ ದೊರೆತಲ್ಲಿ ಸಂಪರ್ಕಿಸಬೇಕಾದ ಸಹಾಯವಾಣಿ ಹಾಗೂ ಅಧಿಕಾರಿಗಳ ಮಾಹಿತಿಯನ್ನು ಪ್ರದರ್ಶಿಸುವುದು.

- ಇಲಾಖೆಯ ಅಧಿಕಾರಿ/ಸಿಬ್ಬಂದಿಗಳಿಗೆ ಮತ್ತು ವಸತಿನಿಲಯಗಳ ವಿದ್ಯಾರ್ಥಿಗಳಿಗೆ ಪೋಕ್ಸೋ ಕಾಯ್ದೆ, ಬಾಲನ್ಯಾಯ ಕಾಯ್ದೆ(ಮಕ್ಕಳ ರಕ್ಷಣೆ ಮತ್ತು ಪೋಷಣೆ), ಬಾಲ್ಯವಿವಾಹ ನಿಷೇಧ ಕಾಯ್ದೆ ಹಾಗೂ ಮಕ್ಕಳ ಸಂಬಂಧಿತ ಇತರ ಕಾಯ್ದೆಗಳ ಕುರಿತು ಸಂವೇದನಾ ಶೀಲತೆ ತರಬೇತಿ ನೀಡುವುದು.
- ವಸತಿನಿಲಯಗಳ ಮಕ್ಕಳಿಗೆ ಸೈಬರ್ ಅಪರಾಧಗಳು/ಮಾದಕ ಪದಾರ್ಥಗಳ ಸೇವನೆಯಿಂದಾಗುವ ದುಷ್ಪರಿಣಾಮಗಳು ಹಾಗೂ ತಕ್ಷಣಕ್ಕೆ ಕೈಗೊಳ್ಳಬಹುದಾದ ಸ್ವಯಂ ರಕ್ಷಣಾ ಕ್ರಮಗಳ ಕುರಿತು ಶಾಲಾಕಾಲೇಜು ವಿದ್ಯಾರ್ಥಿಗಳಿಗೆ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುವುದು.

೪. **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ:**

- ಗ್ರಾಮ ಪಂಚಾಯತ್ ಕಾವಲು ಸಮಿತಿಗಳನ್ನು ಹೆಚ್ಚು ಕ್ರಿಯಾಶೀಲಗೊಳಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯೊಂದಿಗೆ ಸಮನ್ವಯತೆಯಿಂದ ಕೆಲಸ ನಿರ್ವಹಿಸುವುದು.
- ಬಾಲ್ಯವಿವಾಹಗಳನ್ನು ತಡೆಗಟ್ಟಲು KHPT ಸಂಸ್ಥೆಯ ಮೂಲಕ ಸ್ಫೂರ್ತಿ ಕಾರ್ಯಕ್ರಮದ ತರಬೇತಿ ಮಾದರಿಯನ್ನು ಅನುಸರಿಸಿ ಹೆಚ್ಚು ಬಾಲಗರ್ಭಿಣಿಯರ ಪ್ರಕರಣಗಳು ವರದಿಯಾಗಿರುವ ಜಿಲ್ಲೆಗಳಲ್ಲಿ ಜಿಲ್ಲಾ ಹಾಗೂ ತಾಲ್ಲೂಕು ಹಂತದಲ್ಲಿ ವಿವಿಧ ಭಾಗೀದಾರ ಇಲಾಖೆಗಳ ಅಧಿಕಾರಿ/ಸಿಬ್ಬಂದಿಗಳಿಗೆ ಸಾಮರ್ಥ್ಯಾಭಿವೃದ್ಧಿ ತರಬೇತಿ ಆಯೋಜಿಸಲು ರೂ.457.88 ಲಕ್ಷಗಳ ಪ್ರಸ್ತಾವನೆಯನ್ನು ಸ್ವೀಕರಿಸಿದ್ದು, ಪರಿಗಣಿಸುವ ಹಾಗೂ ಅನುಮೋದನೆ ಪಡೆಯುವ ಕುರಿತು ಕ್ರಮವಹಿಸುವುದು.
- ಆರ್‌ಸಿಎಚ್ ದತ್ತಾಂಶವನ್ನು ಜಿಲ್ಲಾ ಹಂತದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಪಡೆದು ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಹಂತದಲ್ಲಿ ವಿಶ್ಲೇಷಿಸಿ ಬಾಲಗರ್ಭಿಣಿಯರ ರಕ್ಷಣೆ ಮತ್ತು ಪುನರ್ವಸತಿಗೆ ಕ್ರಮವಹಿಸುವುದು.
- ಬಾಲ್ಯವಿವಾಹಗಳನ್ನು ತಡೆಯುವ ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದ ಸಮನ್ವಯ ಮತ್ತು ಪರಿಶೀಲನಾ ಸಮಿತಿ ಸಭೆಗಳನ್ನು ನಿಯಮಿತವಾಗಿ ಆಯೋಜಿಸುವುದು ಹಾಗೂ ಬಾಲ್ಯವಿವಾಹ ತಡೆಗಟ್ಟುವ ಕುರಿತು ಮೇಲ್ವಿಚಾರಣೆ ಮಾಡುವುದು.
- ಬಾಲ್ಯವಿವಾಹ ನಿಷೇಧ ಕಾಯ್ದೆಯ ಸಮರ್ಪಕ ಅನುಷ್ಠಾನಕ್ಕೆ ಸಂಬಂಧಿಸಿದಂತೆ, ವಿವಿಧ ಭಾಗೀಧಾರ ಇಲಾಖೆಗಳೊಂದಿಗೆ ಸಮನ್ವಯತೆ ಸಾಧಿಸುವುದು.
- ಬಾಲ್ಯವಿವಾಹಗಳನ್ನು ತಡೆಯುವ ರಾಜ್ಯ ಮಟ್ಟದ ಸಮನ್ವಯ ಮತ್ತು ಪರಿಶೀಲನಾ ಸಮಿತಿಯನ್ನೇ "ಕೇಂದ್ರೀಯ ಕಾರ್ಯಪಡೆ" ಎಂದು ಗುರುತಿಸಿ ಸಭೆಯನ್ನು ನಿಯಮಿತವಾಗಿ 3 ತಿಂಗಳಿಗೊಮ್ಮೆ ಆಯೋಜಿಸಲು ಅಧಿಸೂಚಿಸುವುದು.
- ಬಾಲ್ಯವಿವಾಹ ನಿಷೇಧ ಕಾಯ್ದೆ 2006 ಮತ್ತು ಕರ್ನಾಟಕ ತಿದ್ದುಪಡಿ ಕಾಯ್ದೆ 2016ರ ಸೆಕ್ಷನ್ 16(1)ರನ್ವಯ ಗ್ರಾಮ/ತಾಲ್ಲೂಕು/ಜಿಲ್ಲೆ ಹಾಗೂ ರಾಜ್ಯ ವ್ಯಾಪ್ತಿಯಲ್ಲಿ ಕ್ರಮವಾಗಿ ಗ್ರಾಮ ಮೇಲ್ವಿಚಾರಕಿಯರು, ಶಿಶು ಅಭಿವೃದ್ಧಿ

ಯೋಜನಾಧಿಕಾರಿಗಳು, ಸಂರಕ್ಷಣಾಧಿಕಾರಿಗಳು, ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ, ನಿರೂಪಣಾಧಿಕಾರಿಗಳು, ಉಪನಿರ್ದೇಶಕರು ಮತ್ತು ನಿರ್ದೇಶಕರು ಇವರುಗಳನ್ನು ಬಾಲ್ಯವಿವಾಹ ನಿಷೇಧಾಧಿಕಾರಿಗಳೆಂದು ಗುರುತಿಸಿ ದಿನಾಂಕ:28.05.2018ರಂದು ಅಧಿಸೂಚನೆ ಹೊಡಿಸಲಾಗಿದೆ. ಅದರಂತೆ ಬಾಲ್ಯವಿವಾಹ ನಿಷೇಧಾಧಿಕಾರಿಗಳಿಗೆ ನಿಗದಿಪಡಿಸಲಾದ ಕರ್ತವ್ಯಗಳನ್ನು ಕಡ್ಡಾಯವಾಗಿ ನಿರ್ವಹಿಸುವ ಕುರಿತು ನಿರ್ದೇಶನ ನೀಡುವುದು.

- ಆರ್‌ಸಿಹೆಚ್ ಪೋರ್ಟಲ್‌ನಲ್ಲಿ ದಾಖಲಾಗುವ 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಬಾಲಗರ್ಭಿಣಿಯರ ಮಾಹಿತಿಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಪಡೆದು ವಿಶ್ಲೇಷಿಸಿ ಬಾಲಗರ್ಭಿಣಿಯರಿಗೆ ಅಗತ್ಯ ರಕ್ಷಣೆ ಹಾಗೂ ಪುನರ್ವಸತಿ ಒದಗಿಸುವುದು.
- ಇಲಾಖೆಯ ಅಧಿಕಾರಿ/ಸಿಬ್ಬಂದಿಗಳಿಗೆ ಮತ್ತು ಬಾಲಮಂದಿರದ ಮಕ್ಕಳಿಗೆ ಪೋಕ್ಸೋ ಕಾಯ್ದೆ, ಬಾಲನ್ಯಾಯ ಕಾಯ್ದೆ(ಮಕ್ಕಳ ರಕ್ಷಣೆ ಮತ್ತು ಪೋಷಣೆ), ಬಾಲ್ಯವಿವಾಹ ನಿಷೇಧ ಕಾಯ್ದೆ, ಬಾಲ್ಯವಿವಾಹದ ದುಷ್ಪರಿಣಾಮಗಳ ಕುರಿತು ಅರಿವು ಮತ್ತು ಜಾಗೃತಿ ಕಾರ್ಯಕ್ರಮಗಳನ್ನುಏರ್ಪಡಿಸುವುದು.
- ಮಕ್ಕಳಿಗೆ ಸುಲಭವಾಗಿ ಅರ್ಥವಾಗುವ ಮಾಧ್ಯಮಗಳ ಮೂಲಕ ಲೈಂಗಿಕ ಶಿಕ್ಷಣ/ಸ್ವಯಂ ರಕ್ಷಣಾ ಕ್ರಮಗಳು/ಸೈಬರ್ ಅಪರಾಧಗಳು/ಮಾದಕ ಪದಾರ್ಥಗಳ ಸೇವನೆಯಿಂದಾಗುವ ದುಷ್ಪರಿಣಾಮಗಳು ಹಾಗೂ ತಕ್ಷಣಕ್ಕೆ ಕೈಗೊಳ್ಳಬಹುದಾದ ಸ್ವಯಂ ರಕ್ಷಣಾ ಕ್ರಮಗಳ ಕುರಿತು ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಆಯೋಜಿಸುವುದು.
- ಮಕ್ಕಳ ಸಹಾಯವಾಣಿ-1098 ಕುರಿತು ವ್ಯಾಪಕ ಪ್ರಚಾರ ಮಾಡುವುದು .
- ಮಕ್ಕಳ ಕಲ್ಯಾಣ ಸಮಿತಿ ಸದಸ್ಯರುಗಳಿಗೆ ಬಾಲ್ಯವಿವಾಹ ನಿಷೇಧ ಕಾಯ್ದೆ, ಪೋಕ್ಸೋ ಕಾಯ್ದೆ ಮತ್ತು ಬಾಲನ್ಯಾಯ ಕಾಯ್ದೆಗಳ ಕುರಿತು ಸಂವೇದನಾ ತರಬೇತಿಗಳನ್ನು ಏರ್ಪಡಿಸುವುದು.
- ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಮೂಲಕ ಶಾಲಾಕಾಲೇಜು/ ವಸತಿನಿಲಯಗಳಲ್ಲಿ ಬಾಲಗರ್ಭಿಣಿಯರು/ ಬಾಲ್ಯವಿವಾಹ ಪ್ರಕರಣಗಳನ್ನು ತಡೆಗಟ್ಟುವ ಕುರಿತು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
- ಬಾಲ್ಯವಿವಾಹಗಳನ್ನು ತಡೆಗಟ್ಟಿದ ಪ್ರಕರಣಗಳಲ್ಲಿ ಹೆಣ್ಣು ಮಗುವಿಗೆ 18 ವರ್ಷ ಪೂರ್ಣಗೊಳ್ಳುವವರೆಗೂ ವಿವಾಹವಾಗದಂತೆ ಅನುಸರಣೆ ಮಾಡುವುದು.
- ಸರ್ಕಾರಿ/ಖಾಸಗಿ ಮಕ್ಕಳ ಪಾಲನಾ ಕೇಂದ್ರಗಳಲ್ಲಿ ದಾಖಲಾಗಿರುವ ಮಕ್ಕಳಿಗೆ ಪ್ರತೀ ತಿಂಗಳು ಆರೋಗ್ಯ ತಪಾಸಣೆಗೆ ಮಾಡಿಸುವುದು.
- ದೀರ್ಘಾವಧಿ ಗೈರುಹಾಜರಾದ ವಿದ್ಯಾರ್ಥಿನಿಯರು ಪಾಲನಾ ಕೇಂದ್ರಗಳಿಗೆ ಮರುಹಾಜರಾದಾಗ ಕಡ್ಡಾಯವಾಗಿ ವೈದ್ಯಕೀಯ ತಪಾಸಣೆಗೆ ಒಳಪಡಿಸುವುದು.
- ಬಾಲ್ಯವಿವಾಹ ನಿಷೇಧ ಕಾಯ್ದೆ 2006 ಮತ್ತು ಕರ್ನಾಟಕ ತಿದ್ದುಪಡಿ ಕಾಯ್ದೆ 2016ರ ಸೆಕ್ಷನ್ 16(1)ರನ್ವಯ ಜಿಲ್ಲಾ ಹಾಗೂ ರಾಜ್ಯ ವ್ಯಾಪ್ತಿಯಲ್ಲಿ ಕ್ರಮವಾಗಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಮತ್ತು ಯೋಜನಾ ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ ಇವರನ್ನು ಬಾಲ್ಯವಿವಾಹ ನಿಷೇಧಾಧಿಕಾರಿಗಳೆಂದು ಗುರುತಿಸಿ ದಿನಾಂಕ:28.05.2018 ರಂದು ಅಧಿಸೂಚನೆ ಹೊಡಿಸಲಾಗಿದೆ. ಅದರಂತೆ ಬಾಲ್ಯವಿವಾಹ

ನಿಷೇಧಾಧಿಕಾರಿಗಳಿಗೆ ನಿಗದಿಪಡಿಸಲಾದ ಕರ್ತವ್ಯಗಳನ್ನು ಕಡ್ಡಾಯವಾಗಿ ನಿರ್ವಹಿಸುವ ಕುರಿತು ನಿರ್ದೇಶನ ನೀಡುವುದು.

10. <u>ಕಂದಾಯ ಇಲಾಖೆ:</u>

- ದಿನಾಂಕ:06.08.2019ರ ಸರ್ಕಾರದ ಆದೇಶದಂತೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ರಚನೆಯಾದ ಮಹಿಳೆಯರ ಮತ್ತು ಮಕ್ಕಳ ರಕ್ಷಣೆಯ ಕಾವಲು ಸಮಿತಿಗಳಲ್ಲಿ ಗ್ರಾಮ ಆಡಳಿತ ಅಧಿಕಾರಿ ಸದಸ್ಯರಾಗಿದ್ದು, ಪ್ರತೀ ಗ್ರಾಮದಲ್ಲಿ ಜನಿಸುವ ಮಕ್ಕಳ ನೋಂದಣಿ ಮತ್ತು ಜನನ ಪ್ರಮಾಣ ಪತ್ರ ವಿತರಿಸುವ ಬಗ್ಗೆ ಖಾತರಿಪಡಿಸಿಕೊಳ್ಳುವುದು.
- ಸಾಮೂಹಿಕ/ವೈಯಕ್ತಿಕ ವಿವಾಹಗಳಲ್ಲಿ ಬಾಲ್ಯವಿವಾಹ ನಡೆಯದಂತೆ ನಿಗಾವಹಿಸುವುದು ಮತ್ತು ದೂರು ಬಂದಲ್ಲಿ ಸೂಕ್ತ ಕ್ರಮಕೈಗೊಂಡು ಬಾಲ್ಯವಿವಾಹ ನಿಷೇಧ ಕಾಯ್ದೆಯನ್ವಯ ಬಾಲ್ಯವಿವಾಹಗಳನ್ನು ತಡೆಯಲು ಕ್ರಮವಹಿಸುವುದು.
- ಬಾಲ್ಯವಿವಾಹ ಶಿಕ್ಷಾರ್ಹ ಅಪರಾಧ ಎಂದು ಸಾರ್ವಜನಿಕರಿಗೆ ಮಾಹಿತಿ ನೀಡುವ ಫಲಕಗಳನ್ನು ಪ್ರದರ್ಶಿಸುವುದು.
- ಬಾಲ್ಯವಿವಾಹ ನಿಷೇಧ ಕಾಯ್ದೆ 2006 ಮತ್ತು ಕರ್ನಾಟಕ ತಿದ್ದುಪಡಿ ಕಾಯ್ದೆ 2016ರ ಸೆಕ್ಷನ್ 16(1)ರನ್ವಯ ಗ್ರಾಮ/ತಾಲ್ಲೂಕು/ಜಿಲ್ಲೆ ಹಾಗೂ ರಾಜ್ಯ ವ್ಯಾಪ್ತಿಯಲ್ಲಿ ಕ್ರಮವಾಗಿ ಗ್ರಾಮ ಆಡಳಿತ ಅಧಿಕಾರಿ, ಕಂದಾಯ ನಿರೀಕ್ಷಕರು, ತಹಶೀಲ್ದಾರ್, ಜಿಲ್ಲಾಧಿಕಾರಿಗಳು ಮತ್ತು ಸರ್ಕಾರದ ಕಾರ್ಯದರ್ಶಿಗಳನ್ನು ಬಾಲ್ಯವಿವಾಹ ನಿಷೇಧಾಧಿಕಾರಿಗಳೆಂದು ಗುರುತಿಸಿ ದಿನಾಂಕ:28.05.2018 ರಂದು ಅಧಿಸೂಚನೆ ಹೊರಡಿಸಲಾಗಿದೆ. ಅದರಂತೆ ಬಾಲ್ಯವಿವಾಹ ನಿಷೇಧಾಧಿಕಾರಿಗಳಿಗೆ ನಿಗದಿಪಡಿಸಲಾದ ಕರ್ತವ್ಯಗಳನ್ನು ಕಡ್ಡಾಯವಾಗಿ ನಿರ್ವಹಿಸುವ ಕುರಿತು ನಿರ್ದೇಶನ ನೀಡುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಸಿ. ಬಲರಾಮ್)**
ಸರ್ಕಾರದ ಉಪ ಕಾರ್ಯದರ್ಶಿ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ.

*****

**ಡಾ. ಶಮ್ಲಾ ಇಕ್ಬಾಲ್,** ಭಾ.ಆ.ಸೇ.,
ಸರ್ಕಾರದ ಕಾರ್ಯದರ್ಶಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ

ಕರ್ನಾಟಕ ಸರ್ಕಾರದ ಸಚಿವಾಲಯ
ಮೊದಲನೇ ಮಹಡಿ, 3ನೇ ಗೇಟ್,
ಬಹುಮಹಡಿಗಳ ಕಟ್ಟಡ, ಬೆಂಗಳೂರು-560 001
ಕಛೇರಿ ದೂರವಾಣಿ: 080-2235 3991
080-2203 2562
ಇ-ಮೇಲ್: prlsecy-wc@karnataka.gov.in

ಅ.ಸ.ಪತ್ರ ಸಂಖ್ಯೆ:ಮರನಿ/ಬಾ.ವಿ.ನಿ.ಕೋ/2024-25 ದಿನಾಂಕ:25.08.2025

ಮಾನ್ಯರೇ,

ವಿಷಯ: ಅಪ್ರಾಪ್ತ ವಯಸ್ಸಿನ ಹೆಣ್ಣು ಮಕ್ಕಳು ಗರ್ಭಿಣಿ (ಬಾಲ ಗರ್ಭಿಣಿ) ಯರಾಗುವುದನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ವಿವಿಧ ಇಲಾಖೆಗಳಿಗೆ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿಗದಿಪಡಿಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ: ಮಮ ಇ 115 ಮಭಾಬ 2024 ದಿನಾಂಕ:06-09-2024.

******

ಮಾನ್ಯ ಮುಖ್ಯಮಂತ್ರಿಯವರ ನಿರ್ದೇಶನದಂತೆ ಅಪ್ರಾಪ್ತ ವಯಸ್ಸಿನ ಹೆಣ್ಣು ಮಕ್ಕಳು ಗರ್ಭಿಣಿಯಾಗುವುದನ್ನು ತಡೆಗಟ್ಟುವುದು, ಸಂತ್ರಸ್ಥರಿಗೆ ರಕ್ಷಣೆ ಹಾಗೂ ಮನೋಸ್ಥೈರ್ಯ ಹೆಚ್ಚಿಸುವುದು ಹಾಗೂ ಈ ಉದ್ದೇಶಕ್ಕಾಗಿ ಇರುವ ಕಾಯ್ದೆಗಳು ಮತ್ತು ಕಾನೂನುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡುವ ಮೂಲಕ ತಪ್ಪಿತಸ್ಥರು ಶಿಕ್ಷೆಯಿಂದ ಪಾರಾಗದಂತೆ ನೋಡಿಕೊಳ್ಳಲು ಅಗತ್ಯ ಕಟ್ಟುನಿಟ್ಟಿನ ಕ್ರಮಗಳನ್ನು ಜಾರಿಗೊಳಿಸುವುದಕ್ಕಾಗಿ ರಾಜ್ಯಮಟ್ಟದಲ್ಲಿ ವಿವಿಧ ಭಾಗೀದಾರ ಇಲಾಖೆಗಳಿಗೆ ಜವಾಬ್ದಾರಿ ಮತ್ತು ಕರ್ತವ್ಯ ನಿಗದಿಪಡಿಸಲು ನಿರ್ದೇಶನ ನೀಡಿರುತ್ತಾರೆ.

ಅದರಂತೆ, ಸರ್ಕಾರ ದಿನಾಂಕ:06.09.2024ರಂದು ಅಪ್ರಾಪ್ತ ವಯಸ್ಸಿನ ಹೆಣ್ಣು ಮಕ್ಕಳು ಬಾಲ ಗರ್ಭಿಣಿಯಾಗುವುದನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಒಳಾಡಳಿತ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಅಲ್ಪ ಸಂಖ್ಯಾತರ ಕಲ್ಯಾಣ/ಹಜ್ ಮತ್ತು ವಕ್ಫ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಕಂದಾಯ ಇಲಾಖೆಗಳಿಗೆ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿಗದಿಪಡಿಸಿ ಉಲ್ಲೇಖ ಪತ್ರದಂತೆ ಆದೇಶ ಹೊರಡಿಸಲಾಗಿದೆ.

ಆದರೂ ಇತ್ತೀಚಿನ ದಿನಗಳಲ್ಲಿ ರಾಜ್ಯದಲ್ಲಿ ಬಾಲಗರ್ಭಿಣಿಯರ ಪ್ರಕರಣಗಳ ಸಂಖ್ಯೆಯು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವುದರಿಂದ ಆತಂಕವನ್ನು ಮೂಡಿಸುತ್ತಿದೆ ಎಂದು ಸುದ್ದಿವಾಹಿನಿ, ಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ. ಈ ಕುರಿತು ಉಭಯ ಸದನಗಳಲ್ಲಿ ಕೂಡ ಚರ್ಚೆಯಾಗಿರುತ್ತದೆ.

....2

ಆದ್ದರಿಂದ, ಎಲ್ಲಾ ಭಾಗೀದಾರ ಇಲಾಖೆಗಳು ಬಾಲ್ಯವಿವಾಹ ಹಾಗೂ ಬಾಲ ಗರ್ಭಿಣಿಯರ ಪ್ರಕರಣಗಳನ್ನು ತಡೆಯುವ ನಿಟ್ಟಿನಲ್ಲಿ ಜಾರಿಯಲ್ಲಿರುವ ಕಾಯ್ದೆಗಳನ್ನು ಮತ್ತು ಸರ್ಕಾರ ದಿನಾಂಕ:06.09.2024ರ ಆದೇಶದಲ್ಲಿ ನಿಗದಿಪಡಿಸಿದ ಜವಾಬ್ದಾರಿ ಮತ್ತು ಕರ್ತವ್ಯಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು ಹಾಗೂ ಈ ಕುರಿತು ಅರಿವು ಕಾರ್ಯಕ್ರಮಗಳನ್ನು ಇಲಾಖೆಯ ಹಂತದಲ್ಲಿ ಹಮ್ಮಿಕೊಳ್ಳಲು ಕೋರಿದೆ.

ಗೌರವಗಳೊಂದಿಗೆ,

ತಮ್ಮ ವಿಶ್ವಾಸಿ,

(ಡಾ. ಶಮ್ಲಾ ಇಕ್ಬಾಲ್)

ಇವರಿಗೆ:

1. ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹು ಮಹಡಿಗಳ ಕಟ್ಟಡ, ಬೆಂಗಳೂರು-560 001.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು-560 001.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹು ಮಹಡಿಗಳ ಕಟ್ಟಡ, ಬೆಂಗಳೂರು-560 001.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು-560 001.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹು ಮಹಡಿಗಳ ಕಟ್ಟಡ, ಬೆಂಗಳೂರು-560 001.
6. ಸರ್ಕಾರದ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು-560 001.
7. ಸರ್ಕಾರ ಕಾರ್ಯದರ್ಶಿಗಳು, ಅಲ್ಪ ಸಂಖ್ಯಾತರ ಕಲ್ಯಾಣ/ಹಜ್ ಮತ್ತು ವಕ್ಫ್ ಇಲಾಖೆ, ವಿಕಾಸ ಸೌಧ, ಬೆಂಗಳೂರು-560 001.
8. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಪಿಡಬ್ಲ್ಯೂಡಿ ಕಟ್ಟಡ ಅವರಣ, ಆನಂದ ರಾವ್ ಸರ್ಕಲ್, ಬೆಂಗಳೂರು.
9. ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ, ವಿ.ವಿ. ಟವರ್, ಬೆಂಗಳೂರು-560 001.

# ಬಾಲ್ಯ ವಿವಾಹದ ಬಗ್ಗೆ ಮಾನ್ಯ ಸುಪ್ರೀಂ ಕೋರ್ಟ್ ದಿನಾಂಕ 18.10.2024 ರಂದು ನೀಡಿದ ತೀರ್ಪಿನ ಸಾರಾಂಶ.

## ರಿಟ್ ಪೆಟಿಷನ್ (ಸಿವಿಲ್) 2017ರ ಸಂಖ್ಯೆ 1234ರ *ಸೊಸೈಟಿ ಫಾರ್ ಎನ್‌ಲೈಟೆನ್‌ಮೆಂಟ್ ಅಂಡ್ ವಾಲಂಟರಿ ಆ್ಯಕ್ಷನ್ & ಅನದರ್ ವರ್ಸಸ್ ಯೂನಿಯನ್ ಆಫ್ ಇಂಡಿಯಾ & ಅದರ್ಸ್*, ಪ್ರಕರಣದ ತೀರ್ಪು

***141 ಪುಟಗಳ ಸುದೀರ್ಘ ತೀರ್ಪನ್ನು ಸಂಪೂರ್ಣವಾಗಿ ಓದಲು ಸಮಯ ಇಲ್ಲದವರು ಅಥವಾ ಪೂರ್ತಿ ಓದಲು ಬಯಸದಿರುವವರ ಸಹಾಯ ಹಾಗೂ ಅನುಕೂಲಕ್ಕಾಗಿ ಈ ಸಂಕ್ಷಿಪ್ತ ಅಂಶಗಳ ಕೈಪಿಡಿಯನ್ನು ಸಿದ್ಧಪಡಿಸಲಾಗಿದೆ. ಅಧಿಕೃತ ಹಾಗೂ ಅಥಾರಿಟೇಟಿವ್ ಬಳಕೆ ಅಥವಾ ಉಲ್ಲೇಖಕ್ಕಾಗಿ ತೀರ್ಪಿನ ಮೂಲ ಪ್ರತಿಯನ್ನು ನೋಡುವಂತೆ ಓದುಗರಿಗೆ ಸಲಹೆ ನೀಡಲಾಗಿದೆ.***

1. ರಾಜ್ಯಗಳು/ ಕೇಂದ್ರಾಡಳಿತ ಪ್ರದೇಶಗಳು ಪ್ರತಿ ಜಿಲ್ಲೆಯಲ್ಲೂ, ಪ್ರತ್ಯೇಕ ವಿಶೇಷ ಬಾಲ್ಯ ವಿವಾಹ ನಿಷೇಧ ಅಧಿಕಾರಿಗಳನ್ನು ನೇಮಿಸುವುದು. [ಪ್ಯಾರಾ 78]
2. ಬಾಲ್ಯ ವಿವಾಹ ನೀಷೇಧ ಕಾಯ್ದೆಯು, ಪೋಕ್ಸೊ ಕಾಯ್ದೆಯ ನೀತಿಗಳ ಮೇಲೆ ನೇರ ಬೆದರಿಕೆಯನ್ನು ಒಡ್ಡುತ್ತದೆ. [ಪ್ಯಾರಾ 81]
3. ಇತರೆ ಯಾವುದೇ ಪದ್ಧತಿಗಳ ಅಭ್ಯಾಸಗಳ ಹೋಲಿಕೆಯಲ್ಲಿ, ಬಾಲ್ಯ ವಿವಾಹ ಪದ್ಧತಿಯು ವಾಸ್ತವದಲ್ಲಿ ಅಪ್ರಾಪ್ತ ವಯಸ್ಸಿನ ಮಕ್ಕಳ ಮೇಲೆ ಲೈಂಗಿಕ ಹಲ್ಲೆ ಹಾಗೂ ಶೋಷಣೆಗೆ ದಾರಿ ಮಾಡಿಕೊಡುತ್ತದೆ. [ಪ್ಯಾರಾ 81]
4. ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ 2015, ಕಲಂ 2(14)4 ಉಪ ವಿಧಿ (xii) ತಿಳಿಸುವಂತೆ, ಮಕ್ಕಳ ಪೋಷಣೆ ಮತ್ತು ರಕ್ಷಣೆ ಅಗತ್ಯವುಳ್ಳ (ಸಿಎನ್‌ಸಿಪಿ– CNCP) ಮಕ್ಕಳಲ್ಲಿ, ಬಾಲ್ಯ ವಿವಾಹಕ್ಕೆ ಒಳಗಾದ ಮಕ್ಕಳು ಅತೀ ಹೆಚ್ಚಿನ ಸಂಭವ/ ಗಂಡಾಂತರದಲ್ಲಿರುವ ಮಕ್ಕಳಾಗಿರುತ್ತಾರೆ.. [ಪ್ಯಾರಾ 83]
5. **ಬಾಲ್ಯ ವಿವಾಹಕ್ಕೆ ಒಳಗಾದ ಮಕ್ಕಳನ್ನು ಪುನರ್ವಸತಿ ಹಾಗೂ ಪೋಷಣೆ ಮತ್ತು ರಕ್ಷಣೆಗಾಗಿ ಮಕ್ಕಳ ಕಲ್ಯಾಣ ಸಮಿತಿ (CWC) ಮುಂದೆ ಹಾಜರುಪಡಿಸಬೇಕು.** [ಪ್ಯಾರಾ 85]
6. ತಮ್ಮ ಕುಟುಂಬ ಅಥವಾ ಸಂಬಂಧಿಕರಿಂದಾಗಿ ಬಾಲ್ಯ ವಿವಾಹದ ಗಂಡಾಂತರದ ಸಂಭವವನ್ನು ಎದುರಿಸುತ್ತಿರುವ ಮಕ್ಕಳನ್ನು ಪೋಷಣೆ ಮತ್ತು ರಕ್ಷಣೆಯ ಅಗತ್ಯವುಳ್ಳ ಮಕ್ಕಳು (ಸಿಎನ್‌ಸಿಪಿ) ಎಂದು ಗುರುತಿಸಲಾಗುತ್ತದೆ. [ಪ್ಯಾರಾ 88]
7. ಐಪಿಸಿಯ 2013ರ ತಿದ್ದುಪಡಿಯ ಪ್ರಕಾರ ಅತ್ಯಾಚಾರದ ನಿಬಂಧನೆಯಡಿ ಇದ್ದ ಒಪ್ಪಿಗೆಯ ವಯಸ್ಸನ್ನು 16 ರಿಂದ 18ಕ್ಕೆ ಏರಿಕೆ ಮಾಡಲಾಗಿದೆ. ಆದಾಗ್ಯೂ, ಐಪಿಸಿ ಕಲಂ 375ರಡಿ ಇರುವಂತಹ ಅತ್ಯಾಚಾರ ಪ್ರಾವಧಾನಕ್ಕೆ ವೈವಾಹಿಕ ಅತ್ಯಾಚಾರ ವಿನಾಯಿತಿಯ ಅಂಶವು ಪುರುಷರಿಗೆ ತಮ್ಮ ಅಪ್ರಾಪ್ತ ವಯಸ್ಸಿನ ಪತ್ನಿಯರೊಂದಿಗೆ ಲೈಂಗಿಕ ಕ್ರಿಯೆ ಹೊಂದುವುದಕ್ಕೆ ರಕ್ಷಣೆಯನ್ನು ಮುಂದುವರೆಸುತ್ತದೆ. ಮಾನ್ಯ ನ್ಯಾಯಾಲಯವು ತನ್ನ ಸ್ವತಂತ್ರ ಆಲೋಚನೆಯೊಂದಿಗೆ ಅಸಂಗತತೆಯನ್ನು ತೆಗೆದು, **ಈವರೆಗೂ ಅಪ್ರಾಪ್ತರಿಗೆ ಸಂಬಂಧಿಸಿದಂತಹ ವಿನಾಯಿತಿಯನ್ನು ನಿರ್ಮೂಲನೆಗೊಳಿಸಿದೆ. ಮುಂದುವರಿದು,** ವಿಧಿ(d)ನ ಉಪವಿಧಿ (vi), **ಭಾರತೀಯ ನ್ಯಾಯ ಸಂಹಿತೆ 2023ರ ಕಲಂ 63 ಒಪ್ಪಿಗೆಯ ವಯಸ್ಸನ್ನು 18 ವರ್ಷಗಳು ಎನ್ನುತ್ತದೆ.** [ಪ್ಯಾರಾ 80]
8. ಭಾರತದಲ್ಲಿ ಬಾಲ್ಯ ವಿವಾಹಗಳಿಗೆ ಸಂಬಂಧಿಸಿದ ಸಮಕಾಲೀನ ಕಾನೂನು ಚೌಕಟ್ಟಿನಲ್ಲಿ ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ 2015, ಬಹುಮುಖ್ಯವಾದಂತಹ ಕಾಯ್ದೆಯಾಗಿದೆ. [ಪ್ಯಾರಾ 88]
9. ಮಕ್ಕಳ ವಿರುದ್ಧದ ಅಪರಾಧಗಳು ಅಥವಾ ಮಕ್ಕಳ ಹಕ್ಕುಗಳ ಉಲ್ಲಂಘನೆಯಂತಹ ಪ್ರಕರಣಗಳ ಕ್ಷಿಪ್ರ ವಿಚಾರಣೆಗಾಗಿ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಕಾಯ್ದೆ–2005 ರ (ಸಿಪಿಸಿಆರ್‌ಎ) ಪ್ರಕಾರ ಮಕ್ಕಳ ನ್ಯಾಯಾಲಯಗಳನ್ನು ಸ್ಥಾಪಿಸಿದೆ. ಸಿಪಿಸಿಆರ್‌ಎನ ಕಲಂ 2ರ ವಿಧಿ (b), ಮಕ್ಕಳ ಹಕ್ಕುಗಳ ವ್ಯಾಖ್ಯಾನದಲ್ಲಿ ಸಿಆರ್‌ಸಿಯಲ್ಲಿ ತಿಳಿಸಿರುವ ಹಕ್ಕುಗಳನ್ನು ಸೇರಿಸುವಂತೆ ತಿಳಿಸುತ್ತದೆ. [ಪ್ಯಾರಾ 90]

10. ಬಾಲ್ಯ ವಿವಾಹಗಳ ತಡೆಗಟ್ಟುವಿಕೆ ಹಾಗೂ ನಿರ್ಮೂಲನೆಗಾಗಿ, ನಾವು ಈ ತೀರ್ಪಿನಲ್ಲಿ ನೀಡುವ ಕಾರ್ಯನಿರ್ವಾಹಕ ನಿರ್ದೇಶನಗಳು ಹಾಗೂ ಮಾರ್ಗಸೂಚಿಗಳು, ಎನ್‌ಸಿಪಿಸಿಆರ್ ಹಾಗೂ ಎಸ್‌ಸಿಪಿಸಿಆರ್‌ಗಳಿಗಾಗಿ ನಮ್ಮ ಕಲ್ಪನೆಯ ಮುಂದುವರಿದ ಹಾಗೂ ನಿರ್ದಿಷ್ಟ ಪಾತ್ರಗಳನ್ನೂ ಒಳಗೊಂಡಿರಬೇಕು. [ಪ್ಯಾರಾ 92]
11. 2023–24ರಲ್ಲಿ ಭಾರತದಾದ್ಯಂತ ಶಾಲೆಯಿಂದ ಹೊರಗುಳಿದಿರುವ ಅಥವಾ ಬಾಲ್ಯವಿವಾಹದ ಸಂಭವ ಎದುರಿಸುತ್ತಿರುವ 645,673 ಮಕ್ಕಳನ್ನು ಎನ್‌ಸಿಪಿಸಿಆರ್ ಗುರುತಿಸಿದೆ. [ಪ್ಯಾರಾ 94]
12. ಬಾಲ್ಯ ವಿವಾಹಗಳ ಪರಿಣಾಮಕಾರಿ ತಡೆಗಟ್ಟುವಿಕೆಗೆ ಕೇವಲ ಅರಿವು ಮೂಡಿಸುವುದೊಂದಿಗೆ ಸಾಕಾಗುವುದಿಲ್ಲ ಎಂಬುದು ಸಾಬೀತಾಗಿದೆ. ಕಾನೂನುಗಳ ಜಾರಿ, ಸಮುದಾಯ ಪಾಲ್ಗೊಳ್ಳುವಿಕೆ ಹಾಗೂ ಸಂಕಷ್ಟವನ್ನು ಎದುರಿಸುತ್ತಿರುವಂತಹ ಮಕ್ಕಳಿಗಾಗಿ ಸೂಕ್ತ ಬೆಂಬಲ ವ್ಯವಸ್ಥೆಗಳು ಸಮಾನವಾಗಿ ನಿರ್ಣಾಯಕವಾಗುತ್ತದೆ. [ಪ್ಯಾರಾ 94]
13. ಬಾಲ್ಯ ವಿವಾಹಗಳಿಂದ ಹೊರಗೆ ಬರಲು ಆಯ್ಕೆ ಮಾಡಿಕೊಳ್ಳುವ ಮಹಿಳೆಯರು ಹಾಗೂ ಬಾಲಕಿಯರಿಗೆ ಕೌಶಲ್ಯ ಅಭಿವೃದ್ಧಿ, ವೃತ್ತಿಪರ ತರಬೇತಿ ಹಾಗೂ ಆರ್ಥಿಕ ಸ್ಥಿರತೆಯ ಮೇಲೆ ನಿರ್ದಿಷ್ಟವಾಗಿ ಗಮನಕೇಂದ್ರೀಕರಿಸುವಂತೆ ಒಂದು ವಿಶೇಷ ಯೋಜನೆಯನ್ನು ಪರಿಚಯಿಸುವಂತೆ ನಿರ್ದೇಶಿಸುತ್ತೇವೆ. ಈ ಯೋಜನೆಯು, ಇಂತಹ ಹೆಣ್ಣು ಮಕ್ಕಳು ಸ್ವಾವಲಂಬಿ ಜೀವನದ ಕಡೆ ಪರಿವರ್ತಿತಗೊಳ್ಳಲು ನೆರವಾಗುವಂತೆ ಕಾನೂನು ನೆರವು, ಮಾನಸಿಕ ಬೆಂಬಲ ಹಾಗೂ ಹಣಕಾಸಿನ ನೆರವನ್ನು ಒಳಗೊಂಡಿರಬೇಕು. [ಪ್ಯಾರಾ 101]
14. ವರದಿಯಾಗುವ ವಿವಾಹಗಳ ಸಂಖ್ಯೆಯ ಹೋಲಿಕೆಯಲ್ಲಿ ಬಹುಪಾಲು ರಾಜ್ಯಗಳಲ್ಲಿ ಎಫ್‌ಐಆರ್‌ಗಳು ದಾಖಲಾಗುವ ಪ್ರಕರಣಗಳ ಸಂಖ್ಯೆ ಬಹಳ ಕಡಿಮೆ ಇದೆ. ಇದರಿಂದ ಕಾನೂನು ಕ್ರಮ ಹಾಗೂ ಕಾನೂನು ಕ್ರಮದಲ್ಲಿ ಅಂತ್ಯಗೊಳ್ಳುವ ಪ್ರಯತ್ನಗಳಲ್ಲಿರುವ ಸಂಭಾವ್ಯ ಅಂತರಗಳು ಕಂಡು ಬರುತ್ತವೆ. [ಪ್ಯಾರಾ 116]
15. ಅಂತಾರಾಷ್ಟ್ರೀಯ ಕಾನೂನಿನಡಿ ಬಾಲ್ಯ ವಿವಾಹದ ನೀತಿಯಿಂದಾಗಿ ಶಿಕ್ಷಣದ ಹಕ್ಕಿನ ಉಲ್ಲಂಘನೆಯಾಗುತ್ತದೆ. [ಪ್ಯಾರಾ 153]
16. ಬಾಲ್ಯ ವಿವಾಹವನ್ನು ನೇರವಾಗಿ ಸಂಬೋಧಿಸದೇ ಇರುವಂತಹ ಕೆಲವು ಪ್ರಾದೇಶಿಕ ಒಡಂಬಡಿಕೆಗಳಿಗೆ ಭಾರತ ಸಹಿ ಹಾಕಿರದಿದ್ದರೂ ಸಹ, ತಾರತ್ಯಮೇತರ ತತ್ವಗಳು, ಮಗುವಿನ ಅತ್ಯುತ್ತಮ ಆಸಕ್ತಿ, ಹಾಗೂ ಮಾಹಿತಿಪೂರ್ವಕ ಸಮ್ಮತಿಯ ಹಕ್ಕುಗಳು ಈ ಕ್ಷೇತ್ರದಲ್ಲಿ ರಾಷ್ಟ್ರದ ಶಾಸನ ಹಾಗೂ ನೀತಿಗೆ ಮಾರ್ಗದರ್ಶನ ನೀಡಬೇಕು. [ಪ್ಯಾರಾ 167]
17. ಬಲವಂತದ ಹಾಗೂ ಅಪ್ರಾಪ್ತ ವಯಸ್ಸಿನ ವಿವಾಹ ಎರಡೂ ಲಿಂಗಗಳ ಮೇಲೆ ಅಡ್ಡಪರಿಣಾಮವನ್ನು ಉಂಟು ಮಾಡುತ್ತದೆ. [ಪ್ಯಾರಾ 174]
18. ಬಾಲ್ಯ ವಿವಾಹದ ಪ್ರಕರಣಗಳಲ್ಲಿ ವ್ಯಕ್ತಿಯ ಲಿಂಗದ ಗುರುತಿನ ಹಕ್ಕು ವ್ಯವಸ್ಥಿತವಾಗಿ ರದ್ದುಗೊಳ್ಳುತ್ತದೆ. ಅಪ್ರಾಪ್ತ ವಯಸ್ಸಿನಲ್ಲೇ ಮಗುವಿನ ಮೇಲಿನ ಲೈಂಗಿಕತೆಯೊಂದಿಗೆ ಆಕ್ರಮಣ ಆರಂಭವಾಗುತ್ತದೆ. ನಾವು ಮೇಲೆ ತಿಳಿಸಿರುವಂತೆ, ವಿವಾಹವು ಕಾನೂನಿನಡಿ ರಾಜ್ಯ ಹಾಗೂ ಸಮಾಜವು ಲೈಂಗಿಕ ಕ್ರಿಯೆಯನ್ನು ಅಧಿಕೃತಗೊಳಿಸುವಂತೆ ಒಂದು ಒಡಂಬಡಿಕೆ ಇದ್ದಂತೆ. [ಪ್ಯಾರಾ 176]
19. ಬಾಲ್ಯ ವಿವಾಹದ ಬಹು ಆಯಾಮಗಳ ದಾಳಿಯು ಹಾಗಾಗಿ ಕೇವಲ ಬಾಲಕರು ಹಾಗೂ ಬಾಲಕಿಯರ ಮೇಲಿನ ದಬ್ಬಾಳಿಕೆಯಷ್ಟೇ ಅಲ್ಲದೆ, ಎಲ್ಲ ಲಿಂಗ ಹಾಗೂ ಲೈಂಗಿಕ ಅಲ್ಪಸಂಖ್ಯಾತರಿಗೂ ಅನ್ವಯಿಸುತ್ತದೆ. [ಪ್ಯಾರಾ 177]
20. ಬಾಲ್ಯ ವಿವಾಹಗಳಲ್ಲಿ ಹುಡುಗರು ಅಥವಾ ಬಾಲಕರನ್ನು ಕಾಳಜಿ, ಸಹಾನುಭೂತಿ ಹಾಗೂ ವಾತ್ಸಲ್ಯದಿಂದ ಸಂಪರ್ಕಿಸುವ ವಿಷಯ ದುರಾದೃಷ್ಟವಶಾತ್ ಬಾಲ್ಯ ವಿವಾಹದ ಮುಖ್ಯವಾಹಿನಿ ಭಾಷಣಗಳಲ್ಲಿ ಕಳೆದುಹೋಗಿದೆ. ಬಾಲ್ಯ ವಿವಾಹಗಳಲ್ಲಿ ಹುಡುಗಿಯರು ನೇರ ಪರಿಣಾಮವನ್ನು ಎದುರಿಸುತ್ತಾರೆ ಎನ್ನುವುದರಲ್ಲಿ ಯಾವುದೇ ಸಂದೇಹವಿಲ್ಲ. ಆದರೆ ಇಂತಹ ಪ್ರಕರಣಗಳಲ್ಲಿ ಎಳೆಯ ಮನಸ್ಸಿನ ಹುಡುಗರ ಮೇಲೆ ಬಲವಂತದಿಂದಾಗಿ ಉಂಟಾಗಬಹುದಾದ ಪ್ರಭಾವವನ್ನೂ ನಾವು ಪರಿಗಣಿಸಬೇಕು. [ಪ್ಯಾರಾ 196]
21. ರಾಜ್ಯ ಸರ್ಕಾರಗಳು, ಖಾಸಗಿ ಹಾಗೂ ರಾಜ್ಯೇತರ ಎರಡೂ ಪ್ರಾಧಿಕಾರಗಳನ್ನೂ ಮಕ್ಕಳ ಕಲ್ಯಾಣವನ್ನು ಖಾತ್ರಿಪಡಿಸುವಂತೆ ನಿಯಂತ್ರಿಸಬೇಕು ಹಾಗೂ ಮಕ್ಕಳ ಹಕ್ಕುಗಳ ರಕ್ಷಣೆ ರಾಜ್ಯ ಸರ್ಕಾರದ ಜವಾಬ್ದಾರಿಯಾಗಿದೆ. [ಪ್ಯಾರಾ 206]

22. ಬಾಲ್ಯ ವಿವಾಹ ನಿಷೇಧ ಕಾಯ್ದೆ 20026 (ಪಿಸಿಎಂಎ– PCMA) ಎರಡು ಮುಖ್ಯ ಸ್ತಂಭಗಳ ಮೇಲೆ ಗಮನ ನೀಡುವುದಾಗಿ ಯೂನಿಯನ್ ತಿಳಿಸುತ್ತದೆ: (ಎ) ಅರಿವು ಮೂಡಿಸುವುದು ಹಾಗೂ (ಬಿ) ಕಾನೂನು ಕ್ರಮ. ಅರಿವು ಮೂಡಿಸುವ ಅಭಿಯಾನಗಳಲ್ಲಿ ಪ್ರಗತಿ ಸಾಧಿಸಲಾಗಿದ್ದರೂ ಸಹ, ಹೊಣೆಗಾರಿಕೆಯ ಕಾರ್ಯವಿಧಾನಗಳನ್ನು ಹೆಚ್ಚಿಸುವುದು, ಕಡ್ಡಾಯವಾಗಿ ವರದಿ ಆಗುವುದನ್ನು ಖಾತ್ರಿಪಡಿಸುವುದು ಹಾಗೂ ಬಾಲ್ಯ ವಿವಾಹಗಳ ಅಪ್ರಾಪ್ತ ವಯಸ್ಸಿನ ಸಂತ್ರಸ್ತರ ಪುನರ್ವಸತಿ ಕ್ರಮಗಳ ಹೆಚ್ಚಿನ ಅಗತ್ಯವಿದೆ. [ಪ್ಯಾರಾ 207]
23. ಬಾಲ್ಯ ವಿವಾಹಗಳ ಸಂಪೂರ್ಣ ನಿರ್ಮೂಲನೆಯನ್ನು ಖಾತ್ರಿಪಡಿಸಲು ಹೆಚ್ಚು ಸಮಗ್ರ ದೃಷ್ಟಿಕೋನಗಳು ಹಾಗೂ ಸಮುದಾಯ ಚಾಲಿತ ಕಾರ್ಯತಂತ್ರಗಳ ಅಗತ್ಯಕ್ಕೆ ಮಹತ್ವ ನೀಡುವ ಅಗತ್ಯವಿದೆ. [ಪ್ಯಾರಾ 209]
24. ದಂಡನೆಗೆ ಮುಂಚೆ, ರಕ್ಷಣೆಗಿಂತಲೂ ಮುಂಚೆ ತಡೆಗಟ್ಟುವ ಕ್ರಮಗಳಿಗೆ ಹೆಚ್ಚು ಆದ್ಯತೆ ನೀಡುವುದು ಈ ಮಾರ್ಗಸೂಚಿಗಳ ಉದ್ದೇಶವಾಗಿದೆ. ಕುಟುಂಬಗಳು ಹಾಗೂ ಸಮುದಾಗಳ ಮೇಲೆ ಉಂಟಾಗಬಹುದಾದಂತಹ ಅಪರಾಧದ ಪರಿಣಾಮಗಳ ಬಗ್ಗೆ ನಮಗೆ ಅರಿವಿದೆ. ಪಿಸಿಎಂಎ ಅಡಿ ತಡೆಗಟ್ಟುವ ಕ್ರಮಗಳ ಪರಿಣಾಮಕಾರಿ ಅನುಷ್ಠಾದ ವಿಸ್ತರಣೆಗೆ ಈ ಮಾರ್ಗಸೂಚಿಗಳು ಅರ್ಥೈಸುವಂತಾಗಲಿ. [ಪ್ಯಾರಾ 210]
25. ನಾವು ಪಿಸಿಎಂಎ ದಲ್ಲಿ ಕೆಲವು ಅಂತರಗಳನ್ನು ಗಮನಿಸಿದ್ದೇವೆ. ಸಾಂವಿಧಾನಿಕ ಸವಾಲು ಅಥವಾ ವಾದದಲ್ಲಿರುವ ಪ್ರಕರಣದ ಅನುಪಸ್ಥಿತಿಯಲ್ಲಿ ನಾವು ಘೋಷಣೆಗಳನ್ನು ಮಾಡುವುದಿಲ್ಲ ಹಾಗೂ ಯೂನಿಯನ್‌ನ ಪರಿಶೀಲನೆಗಾಗಿ ಸಲಹೆಗಳನ್ನು ನೀಡುವುದಕ್ಕೆ ನಮ್ಮನ್ನು ನಾವು ಸೀಮಿತಗೊಳಿಸಿಕೊಳ್ಳುತ್ತೇವೆ. [ಪ್ಯಾರಾ 212]
26. ಪಿಸಿಎಂಎ ಅಡಿ ಬಾಲ್ಯ ವಿವಾಹದ ನಿಷೇಧದೊಂದಿಗೆ **ವೈಯಕ್ತಿಕ ಕಾನೂನುಗಳ ಇಂಟರ್‌ಫೇಸ್ ಸಮಸ್ಯೆ, ಸ್ವಲ್ಪ ಗೊಂದಲಕ್ಕೆ ಕಾರಣವಾಗಿದೆ. ವೈಯಕ್ತಿಕ ಕಾನೂನಿನಿಗಿಂತಲೂ ಪಿಸಿಎಂಎ ಸೂಕ್ತ ಎಂದು ಈ ನ್ಯಾಯಾಲಯವು ನಿರ್ದೇಶಿಸಬಹುದು ಎಂದು ಯೂನಿಯನ್ ತಿಳಿಸಿದೆ.** [ಪ್ಯಾರಾ 213]. ಈ ನಡವಳಿಗಳಿಗೆ ಯಾವುದೇ ಪಕ್ಷಗಳೂ ಸಹ ವಿರುದ್ಧ ಅಭಿಪ್ರಾಯಗಳನ್ನು ಸಲ್ಲಿಸಿರುವುದಿಲ್ಲ. ಮೇಲೆ ತಿಳಿಸಿರುವಂತೆ **ವಿವಾಹದ ಮಾನ್ಯತೆಯ ಕುರಿತಂತೆ ಪಿಸಿಎಂಎ ಏನೂ ಸೂಚಿಸಿರುವುದಿಲ್ಲ**. ಬಾಲ್ಯ ವಿವಾಹ ನಿಷೇಧ (ತಿದ್ದುಪಡಿ) ಮಸೂದೆ 2021 ಅನ್ನು ಸಂಸತ್ತಿನಲ್ಲಿ 21ನೇ ಡಿಸೆಂಬರ್ 2021ರಂದು ಪರಿಚಯಿಸಲಾಯಿತು. ಈ ಮಸೂದೆಯನ್ನು ಇಲಾಖೆಯ ಸಂಬಂಧಪಟ್ಟ ಶಿಕ್ಷಣ, ಮಹಿಳೆಯರು, ಮಕ್ಕಳು, ಯುವಜನರು ಹಾಗೂ ಕ್ರೀಡೆಗಳ ಸ್ಥಾಯಿ ಸಮಿತಿಗೆ ಪರಿಶೀಲನೆಗಾಗಿ ಉಲ್ಲೇಖಿಸಲಾಯಿತು. ವಿಧೇಯಕವು ಪಿಸಿಎಂಎ ಗೆ ತಿದ್ದುಪಡಿ ಮಾಡಲು ಪ್ರಯತ್ನಿಸಿದ್ದು, ವಿವಿಧ ವೈಯಕ್ತಿಕ ಕಾನೂನುಗಳ ಮೇಲೆ ಶಾಸನದ ಪ್ರಭಾವವನ್ನು ಸ್ಪಷ್ಟವಾಗಿ ಹೇಳುತ್ತದೆ. ಈ ವಿಷಯ, ಹಾಗಾಗಿ, ಸಂಸತ್ತಿನ ಮುಂದೆ ಪರಿಗಣನೆಗೆ ಬಾಕಿ ಇರುತ್ತದೆ. [ಪ್ಯಾರಾ 214]
27. ಪಿಸಿಎಂಎ ಬಾಲ್ಯ ವಿವಾಹಗಳನ್ನು ನಿಷೇಧಿಸುತ್ತದೆ, ಆದರೆ ನಿಶ್ಚಿತಾರ್ಥಗಳ ಮೇಲೆ ಯಾವುದೇ ನಿರ್ಬಂಧಗಳಿಲ್ಲ ಎಂಬುದನ್ನು ನಾವು ಗಮನಿಸಿದ್ದೇವೆ. ಪಿಸಿಎಂಎ ಅಡಿಯಲ್ಲಿ ದಂಡವನ್ನು ತಪ್ಪಿಸಿಕೊಳ್ಳಲು ಬಳಸಬಹುದಾದ ಮಕ್ಕಳ ನಿಶ್ಚಿತಾರ್ಥಗಳನ್ನು ಕಾನೂನುಬಾಹಿರಗೊಳಿಸುವುದನ್ನು ಸಂಸತ್ತು ಪರಿಗಣಿಸಬಹುದು. ನಿಶ್ಚಿತಾರ್ಥಕ್ಕೆ ಒಳಗಾಗಿರುವ ಮಗುವು ಜೆಜೆ ಕಾಯ್ದೆಯಡಿ ಆರೈಕೆ ಹಾಗೂ ರಕ್ಷಣೆಯನ್ನು ಪಡೆದುಕೊಳ್ಳಬಹುದು, ಹಾಗೂ ಈ ಅಭ್ಯಾಸದ ನಿರ್ಮೂಲನೆಗಾಗಿ ಗುರಿ ಪರಿಹಾರಗಳ ಅಗತ್ಯವಿದೆ. [ಪ್ಯಾರಾ 215]
28. ಹೊರಡಿಸಿರುವ ಪ್ರಮುಖ ನಿರ್ದೇಶನಗಳ ಸಾರಾಂಶ [ಪ್ಯಾರಾ 211]:
    i. **ವಿಶೇಷ ಸಿಎಂಪಿಓ ಗಳು** (ವಿಶೇಷ ಬಾಲ್ಯ ವಿವಾಹ ನಿಷೇಧಾಧಿಕಾರಗಳನ್ನು (CMPO- Child Marriage Prohibition Officers) ನೇಮಿಸಬೇಕು)
    ii. ಸಿಎಂಪಿಓಗಳು ಸಂಪನ್ಮೂಲಗಳ ಕೊರತೆಯನ್ನು ಎದುರಿಸುತ್ತಿದ್ದರೆ ಸಂಬಂಧಪಟ್ಟ ಇಲಾಖೆಗೆ ಕೋರಿಕೆ ಸಲ್ಲಿಸಬಹುದು. ಇಲಾಖೆಯು ಈ ಕೋರಿಕೆಯನ್ನು 3 ತಿಂಗಳ ಒಳಗಾಗಿ ಪೂರೈಸಬೇಕು.
    iii. ಪ್ರತಿ ರಾಜ್ಯ/ ಕೇಂದ್ರಾಡಳಿತ ಪ್ರದೇಶವೂ ಸಹ ತಮ್ಮ ಅಧಿಕೃತ ವೆಬ್‌ಸೈಟ್‌ಗಳಲ್ಲಿ ಸಿಎಂಪಿಓಗಳಿಂದ ಬಂದಿರುವಂತಹ ತ್ರೈಮಾಸಿಕ ವರದಿಗಳನ್ನು ಅಪ್‌ಲೋಡ್ ಮಾಡಬೇಕು. ಈ ವರದಿಯು ಬಾಲ್ಯ ವಿವಾಹಗಳನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮಗಳ ವಿವರಗಳು ಹಾಗೂ ತಪಾಸಣೆಗಳ ಪರಿಣಾಮಗಳ ವಿವರಗಳನ್ನು ಒಳಗೊಂಡಿರಬೇಕು.

iv. ಪ್ರತಿ ರಾಜ್ಯ/ ಕೇಂದ್ರಾಡಳಿತ ಪ್ರದೇಶವೂ ಸಹ 6 ಸೂಚ್ಯಂಕಗಳ ಕುರಿತು ಸಿಎಂಪಿಓಗಳು ಹಾಗೂ ಕಾನೂನು ಜಾರಿಗೊಳಿಸುವ ಏಜೆನ್ಸಿಗಳ ತ್ರೈಮಾಸಿಕ ಪರಿಷ್ಕರಣೆಯನ್ನು ಕೈಗೊಳ್ಳಬೇಕು.

v. ಪ್ರತಿ 6 ತಿಂಗಳಿಗೊಮ್ಮೆ ಕಡ್ಡಾಯವಾಗಿ ರಿಫ್ರೆಷರ್ ತರಬೇತಿಗಳನ್ನು ನಡೆಸಬೇಕು

vi. ಪ್ರತಿ ಜಿಲ್ಲೆಯ ಜಿಲ್ಲಾಧಿಕಾರಿಗಳು ಹಾಗೂ ಪೊಲೀಸ್ ವರಿಷ್ಠಾಧಿಕಾರಿಗಳು ಸಹ ಸಕ್ರಿಯವಾಗಿ ಬಾಲ್ಯ ವಿವಾಹಗಳನ್ನು ತಡೆಗಟ್ಟಲು ಜವಾಬ್ದಾರಿ ಹೊಂದಿರಬೇಕು

vii. ರಾಜ್ಯ ಗೃಹ ಇಲಾಖೆಯು ಮಕ್ಕಳ ವಿಶೇಷ ಪೊಲೀಸ್ ಘಟಕಗಳನ್ನು ಬಾಲ್ಯ ವಿವಾಹ ತಡೆಗಟ್ಟುವ ಚೌಕಟ್ಟಿನೊಳಗೆ ಏಕೀಕರಣಗೊಳಿಸುವ ಸಾಧ್ಯತೆಯನ್ನು ಪರಿಗಣಿಸಬೇಕು. ಬಾಲ್ಯ ವಿವಾಹದ ಪ್ರಕರಣಗಳ ನಿರ್ವಹಣೆಗಾಗಿ ಎಸ್‌ಜೆಪಿಯುಗಳನ್ನು ನೇಮಿಸಬೇಕು.

viii. ಎಸ್‌ಜೆಪಿಯು **(SJPU)** ಗಳು ಸಿಎಂಪಿಓ **(CMPO)** ಗಳು ಹಾಗೂ ಜಿಲ್ಲಾ ಪ್ರಾಧಿಕಾರಗಳ ಸಹಯೋಗದೊಂದಿಗೆ ಕಾರ್ಯ ನಿರ್ವಹಿಸಬೇಕು.

ix. 4 ನಿರ್ದಿಷ್ಟ ಕಾರ್ಯಪ್ರದರ್ಶನ ಸೂಚ್ಯಂಕಗಳ ಮೇಲೆ ದ್ವೈಮಾಸಿಕ ವರದಿಯನ್ನು ಸಲ್ಲಿಸುವ ಕಾರ್ಯಸಾಧ್ಯತೆ ಕುರಿತು ನಿರ್ದೇಶನ ನೀಡಲು ಎಂಡಬ್ಲ್ಯೂಸಿಡಿ ಗಮನ ನೀಡಬೇಕು ಹಾಗೂ ಎಸ್‌ಜೆಪಿಯುಗಳಿಗೆ ಒಂದು ನಮೂನೆಯನ್ನು ಒದಗಿಸಬೇಕು.

x. ರಾಜ್ಯಗಳು/ ಕೇಂದ್ರಾಡಳಿತ ಪ್ರದೇಶಗಳು ರಾಜ್ಯ ಮಟ್ಟದ ವಿಶೇಷ ಬಾಲ್ಯ ವಿವಾಹ ನಿಷೇಧ ಘಟಕ ಹಾಗೂ ಜಿಲ್ಲಾ ಮಟ್ಟದಲ್ಲಿ ಸಿಎಂಪಿಯು **(CMPU- Child Marriage Prohibition Unit)** ಗಳನ್ನು ರಚಿಸಬೇಕು. ರಾಜ್ಯ ಘಟಕವು ಬಾಲ್ಯ ವಿವಾಹ ಅಥವಾ ಮಕ್ಕಳ ಹಕ್ಕುಗಳ ಕ್ಷೇತ್ರದಲ್ಲಿ ಕೆಲಸದ ಅನುಭವವಿರುವ 5 ಸಾಮಾಜಿಕ ಕಾರ್ಯಕರ್ತರನ್ನು ಒಳಗೊಂಡಿರಬೇಕು. ಅದರಲ್ಲಿ ಕನಿಷ್ಠ ಇಬ್ಬರು ಮಹಿಳೆಯರಿರಬೇಕು.

**xi.** ಸಿಎಂಪಿಎ ಅಡಿ ಅಧಿಕಾರ ಹೊಂದಿರುವ ಎಲ್ಲಾ **ಮ್ಯಾಜಿಸ್ಟ್ರೇಟ್‌ಗಳಿಗೂ ಸ್ವಯಂಪ್ರೇರಿತ ಕ್ರಮ ಕೈಗೊಳ್ಳುವ ಅಧಿಕಾರ ಹಾಗೂ ತಡೆಗಟ್ಟುವ ಕ್ರಮಗಳನ್ನು ಕೈಗೊಳ್ಳುವ ಅಧಿಕಾರವನ್ನು ನೀಡಲಾಗಿದೆ.**

xii. ವಿಶೇಷವಾಗಿ ಪಿಸಿಎಂಎ ಅಡಿ ಬರುವ ಪ್ರಕರಣಗಳ ನಿರ್ವಹಣೆಗಾಗಿಯೇ **ವಿಶೇಷ ಫಾಸ್ಟ್ ಟ್ರ್ಯಾಕ್ ನ್ಯಾಯಾಲಯಗಳನ್ನು ಸ್ಥಾಪಿಸುವ ಆಯ್ಕೆಯನ್ನು ಕೇಂದ್ರ ಸರ್ಕಾರ ಪರಿಗಣಿಸಬೇಕು.** ಈ ನ್ಯಾಯಾಲಯಗಳ ಸ್ಥಾಪನೆ, ಸಂಪನ್ಮೂಲ ಹಂಚಿಕೆ ಹಾಗೂ ಸಂಭಾವ್ಯ ಪರಿಣಾಮಗಳ ಸ್ಥಿತಿಗತಿ ವರದಿಯನ್ನು, ಈಗಿನಿಂದ ಒಂದು ವರ್ಷದ ಅವಧಿಯೊಳಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಬೇಕು.

**xiii. ಬಾಲ್ಯ ವಿವಾಹದ ಪ್ರಕರಣಗಳಲ್ಲಿ ಉದ್ದೇಶಪೂರ್ವಕವಾಗಿ ನಿರ್ಲಕ್ಷ್ಯವನ್ನು ತೋರಿಸುವಂತಹ ಯಾವುದೇ ಸರ್ಕಾರಿ ಅಧಿಕಾರಿಯ ವಿರುದ್ಧ ಕಟ್ಟುನಿಟ್ಟಾಗಿ ಶಿಸ್ತು ಕ್ರಮ ಹಾಗೂ ಕಾನೂನು ಕ್ರಮವನ್ನು ಜರುಗಿಸಬೇಕು.**

**xiv.** ಬಾಲ್ಯ ವಿವಾಹಗಳನ್ನು ತಡೆಗಟ್ಟುವ ಸಲುವಾಗಿ ಪ್ರತಿ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶವೂ **ಸಹ ವಾರ್ಷಿಕ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಬೇಕು.**

xv. ಸ್ವಚ್ಛ ಭಾರತ್ ಅಭಿಯಾನದಡಿ "ಬಯಲುಮುಕ್ತ ಶೌಚ ಗ್ರಾಮ' ಮಾದರಿಯಂತೆ, **'ಬಾಲ್ಯ ವಿವಾಹ ಮುಕ್ತ ಗ್ರಾಮ'** ಉಪಕ್ರಮವನ್ನು ಚಾಲನೆಗೊಳಿಸಲು ಪ್ರೋತ್ಸಾಹಿಸಬೇಕು. ಗ್ರಾಮ ಪಂಚಾಯಿತಿಗಳು ಹಾಗೂ ಸಮುದಾಯ ನಾಯಕರು ಬಾಲ್ಯ ವಿವಾಹಗಳನ್ನು ತಡೆಗಟ್ಟುವುದು ಹಾಗೂ ವರದಿ ಮಾಡುವ ಸಂಬಂಧ ಸಕ್ರಿಯ ಪಾತ್ರ ನಿರ್ವಹಿಸುವಂತೆ ಸೂಚಿಸಬೇಕು. ಈ ಉಪಕ್ರಮದಲ್ಲಿ **'ಬಾಲ್ಯ ವಿವಾಹ ಮುಕ್ತ' ಗೊಂಡ ಗ್ರಾಮಗಳು ಹಾಗೂ ಗ್ರಾಮ ಪಂಚಾಯಿತಿಗಳಿಗೆ ಸರ್ಟಿಫಿಕೆಟ್‌ಗಳ ವಿತರಣೆ ಸೇರಿರುತ್ತದೆ.** ಇಂತಹ ಗ್ರಾಮಗಳ ಕುರಿತು ಪ್ರಚಾರ ಮಾಡಬೇಕು.

xvi. ಎಲ್ಲಾ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳು, **ಸಮಗ್ರ ಲೈಂಗಿಕ ಶಿಕ್ಷಣ ಪಠ್ಯವನ್ನು ಶಾಲಾ ಪಠ್ಯಕ್ರಮದಲ್ಲಿ ಸೇರಿಸಲು ಕ್ರಮ ಕೈಗೊಳ್ಳಬೇಕು.** ಈ ಲೈಂಗಿಕ ಶಿಕ್ಷಣ ಪಠ್ಯವು ಡಬ್ಲ್ಯೂಹೆಚ್‌ಓ ನಿಗಧಿತ ಚೌಕಟ್ಟಿನ ಪ್ರಕಾರ ಇರಬೇಕು ಹಾಗೂ ಆಲೋಚನೆಗಳು ಸಿಎಸ್‌ಇ ಕಡೆಗೆ ಹೊರಳುವಂತಿರಬೇಕು.

xvii. ಯಾವುದಾದರೂ ಶಾಲೆಯಲ್ಲಿ ಬಾಲಕಿಯೊಬ್ಬಳು ಅಥವಾ ವಿದ್ಯಾರ್ಥಿನಿಯು ಇದ್ದಕ್ಕಿದ್ದಂತೆ ಶಾಲೆಗೆ ಬರುವುದನ್ನು ನಿಲ್ಲಿಸಿದಾಗ, ಇಂತಹ ಪ್ರಕರಣಗಳಲ್ಲಿ ಆಯಾ ಶಾಲೆಗಳ ಪ್ರಾಂಶುಪಾಲರು ಹಾಗೂ ಶಿಕ್ಷಕರು ಸಂಬಂಧಪಟ್ಟ ಪ್ರಾಧಿಕಾರಗಳ ಗಮನಕ್ಕೆ ತರಲು ಶಿಷ್ಟಾಚಾರವನ್ನು ರೂಪಿಸಿ ಅದನ್ನು ಅನುಸರಿಸುವಂತೆ ಮಾಡಬೇಕು.

xviii. ಸಿಎಂಪಿಓಗಳಿಗೆ ಗುರಿಪಡಿಸಿದ ಸಮುದಾಯ ಅರಿವು ಮೂಡಿಸುವ ಅಭಿಯಾನಗಳನ್ನು ಕೈಗೊಳ್ಳಲು ಅನುಕೂಲ ಒದಗಿಸುವುದು

xix. ಸಹಾಯವಾಣಿ ಅರಿವು ಹಾಗೂ ವರದಿಗಾರಿಕೆ ಕಾರ್ಯವಿಧಾನಗಳು

xx. ಬಾಲ್ಯ ವಿವಾಹಗಳನ್ನು ತಡೆಗಟ್ಟುವಲ್ಲಿ ಅಂಗನವಾಡಿ ಕಾರ್ಯಕರ್ತರು, ಎಎನ್‌ಎಂ (Now in Karnataka PHCO) ಗಳು ಹಾಗೂ ಆಶಾ ಕಾರ್ಯಕರ್ತೆಯರ ಪಾತ್ರವನ್ನು ವೃದ್ಧಿಸಲು ವಿಶೇಷ ತರಬೇತಿಗಳು.

xxi. ಪೋಲಿಸ್ ಅಧಿಕಾರಿಗಳು, ವಿಶೇಷವಾಗಿ ಎಸ್‌ಜೆಪಿಯುಗಳು, ಪಿಸಿಎಂಎನ ಮಕ್ಕಳ ಹಕ್ಕುಗಳಂತಹ ಕಾನೂನು ವಿಷಯಗಳಲ್ಲಿ ತರಬೇತಿಯನ್ನು ಪಡೆದುಕೊಳ್ಳಬೇಕು, ಹಾಗೂ ಅಪ್ರಾಪ್ತರು ಒಳಗೊಂಡಿರುವ ಪ್ರಕರಣಗಳ ಕುರಿತಂತೆ ಸಂವೇದನಾಶೀಲತೆಯನ್ನು ಬೆಳೆಸಿಕೊಳ್ಳಬೇಕು.

xxii. ಸಂಭಾವ್ಯ ಬಾಲ್ಯ ವಿವಾಹದ ಪ್ರಕರಣಗಳನ್ನು ಗುರುತಿಸಲು ಶಿಕ್ಷಕರು ಹಾಗೂ ಶಾಲಾ ನಿರ್ವಾಹಕರಿಗೆ ತರಬೇತಿ ನೀಡಬೇಕು.

xxiii. ಪಂಚಾಯಿತಿ ರಾಜ್ ಸಂಸ್ಥೆಗಳ ಸದಸ್ಯರು ಹಾಗೂ ಸಮುದಾಯ ಪ್ರಭಾವಿಗಳು ಒಳಗೊಂಡಂತೆ ಸ್ಥಳೀಯ ನಾಯಕರುಗಳಿಗೆ ಬಾಲ್ಯ ವಿವಾಹಗಳನ್ನು ತಡೆಗಟ್ಟುವಲ್ಲಿ ಅವರ ನಿರ್ಣಾಯಕ ಪಾತ್ರಗಳ ಕುರಿತು ತರಬೇತಿ ನೀಡುವುದು

xxiv. ಸಿಎಂಪಿಓಗಳು ಹಾಗೂ ಎಸ್‌ಜೆಪಿಯುಗಳು ಎನ್‌ಜಿಓಗಳನ್ನು ಗುರುತಿಸಿ, ಸಂಯೋಜನೆ ಹೊಂದಬೇಕು.

xxv. ಆರೋಗ್ಯ ಸೇವೆ ಒದಗಿಸುವರು, ವೈದ್ಯರು, ಆಪ್ತಸಮಾಲೋಚಕರಿಗೆ ಬಾಲ್ಯ ವಿವಾಹಕ್ಕೆ ಸಂಬಂಧಪಟ್ಟ ನಿರ್ದಿಷ್ಟ ಆರೋಗ್ಯದ ಅಪಾಯಗಳನ್ನು ಬಗೆಹರಿಸಲು ಅಗತ್ಯ ತರಬೇತಿ ಒದಗಿಸುವುದು.

xxvi. ಎಂಡಬ್ಲ್ಯೂಸಿಡಿ ಬಾಲ್ಯ ವಿವಾಹಕ್ಕೆ ಒಳಗಾಗುವ ಸಂಭವ ಇರುವಂತಹ ಬಾಲಕಿಯರನ್ನು ನಿರ್ದಿಷ್ಟವಾಗಿ ಗುರುತಿಸಿ ಸಮಗ್ರ ಶೈಕ್ಷಣಿಕ ಪ್ರೋತ್ಸಾಹಕ ಕಾರ್ಯಕ್ರಮಗಳ ಅನುಷ್ಠಾನದ ಕುರಿತು ಪರಿಗಣಿಸಬೇಕು. ಈ ಕಾರ್ಯಕ್ರಮಗಳಲ್ಲಿ, ಬಾಲ್ಯ ವಿವಾಹವನ್ನು ತಡೆದು ವಿವಾಹವನ್ನು ವಿಳಂಬಗೊಳಿಸಲು, 15 ವರ್ಷಗಳನ್ನು ದಾಟಿರುವ ಹೆಣ್ಣು ಮಕ್ಕಳಿರುವಂತಹ ಕುಟುಂಬಗಳಿಗೆ ಶಿಷ್ಯವೇತನ ಅಥವಾ ಹಣಕಾಸಿನ ಬೆಂಬಲದಂತಹ ಕ್ರಮಗಳು ಒಳಗೊಂಡಿರಬೇಕು.

xxvii. ಸಂಕಷ್ಟದಲ್ಲಿರುವವರು ಹಾಗೂ ಗಂಡಾಂತರದಲ್ಲಿರುವಂತಹ ಸಮುದಾಯದವರ ಸೇವೆಗಾಗಿ ಒಗ್ಗಟ್ಟಿನ ಬೆಂಬಲ ವ್ಯವಸ್ಥೆಯನ್ನು ಸೃಷ್ಟಿಸುವ ಸಲುವಾಗಿ ಎಲ್ಲಾ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಕಾರ್ಯದರ್ಶಿಗಳು, ವಿವಿಧ ಸರ್ಕಾರಿ ಇಲಾಖೆಗಳು ಹಾಗೂ ಏಜೆನ್ಸಿಗಳ ಸೇವೆಗಳು ಒಟ್ಟುಗೂಡುವುದನ್ನು ಖಾತ್ರಿಪಡಿಸಲು ಸಕ್ಷಮ ಪ್ರಾಧಿಕಾರವನ್ನು ರಚಿಸಬೇಕು.

xxviii. ಬಾಲ್ಯ ವಿವಾಹ ಸಂತ್ರಸ್ತರ ಪುನರ್ವಸತಿ ಹಾಗೂ ಕಾನೂನು-ಬೆಂಬಲ ಸೇವೆಗಳಿಗಾಗಿ ಸಮಗ್ರ ಮಾರ್ಗಸೂಚಿಗಳನ್ನು ಒದಗಿಸಲು ಎನ್‌ಎಎಲ್‌ಎಸ್‌ಎ, ವಕೀಲರು ಹಾಗೂ ಕಾನೂನು ಜಾರಿಗೊಳಿಸುವ ಅಧಿಕಾರಿಗಳಿಗೆ ಎಸ್‌ಓಪಿ ಅನ್ನು ರೂಪಿಸಬೇಕು. ಈ ಎಸ್‌ಓಪಿ ಅನ್ನು ಎನ್‌ಎಎಲ್‌ಎಸ್‌ಎ ಎಲ್ಲಾ ರಾಜ್ಯಗಳು ಹಾಗೂ ಜಿಲ್ಲಾ ಎಲ್‌ಎಸ್‌ಎಗಳಿಗೆ ಕಳುಹಿಸಿಕೊಡಬೇಕು.

xxix. ತಡೆಗಟ್ಟಿದಂತಹ ಬಾಲ್ಯ ವಿವಾಹಗಳ ಸಂಖ್ಯೆ, ಅರಿವು ಮೂಡಿಸುವ ಕಾರ್ಯಕ್ರಮಗಳು, ಸಾಮರ್ಥ್ಯ ಅಭಿವೃದ್ಧಿ ಉಪಕ್ರಮಗಳ ಸಂಖ್ಯೆಯಂತಹ ವಿವರಗಳಿರುವ ರಿಜಿಸ್ಟರ್‌ಗಳ ನಿರ್ವಹಣೆ ಹಾಗೂ ವರದಿ, ಪ್ರತಿ ಪ್ರಕರಣದಲ್ಲಿಯೂ ಕೈಗೊಂಡಂತಹ ಅನುಸರಣಾ ಕ್ರಮ, ಇತ್ಯಾದಿ ಕ್ರಮಗಳಿಗಾಗಿ, ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ರಾಜ್ಯ ಮಕ್ಕಳ ಹಕ್ಕುಗಳ ಸೊಸೈಟಿಗಳೊಂದಿಗೆ ಎಂಡಬ್ಲ್ಯೂಸಿಡಿ ಸಮಾಲೋಚಿಸಿ ಕರಡು ಎಸ್‌ಓಪಿಗಳನ್ನು ಸಿದ್ಧಪಡಿಸಬೇಕು.

xxx. ಬಾಲ್ಯ ವಿವಾಹದ ಪ್ರಕರಣಗಳನ್ನು ವರದಿ ಮಾಡದಿರುವ ಸಂದರ್ಭಗಳು, ಅಪ್ರಾಪ್ತ ವಯಸ್ಸಿನ ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸಲು ಹಾಗೂ ಕಾನೂನು ಕ್ರಮದ ವಿಧಾನಗಳನ್ನು ಕೈಗೊಳ್ಳಲು ಹೊಣೆಗಾರಿಕೆಯನ್ನು ಸ್ಥಾಪಿಸಲು ಎನ್‌ಸಿಪಿಸಿಆರ್ ಕರಡು ಎಸ್‌ಓಪಿ ಅನ್ನು ಸಿದ್ಧಪಡಿಸಬೇಕು.

xxxi. ಸಂಕಷ್ಟದಲ್ಲಿರುವಂತಹ ಹೆಣ್ಣು ಮಕ್ಕಳಿಗಾಗಿ ರಾಜ್ಯ ಸರ್ಕಾರದ ಪ್ರಾಧಿಕಾರಗಳು ವೈಯಕ್ತಿಕ ಸೇವಾ ಯೋಜನೆಗಳನ್ನು (Individual Care Plans (ICP) ಸಿದ್ಧಪಡಿಸಿ, ಅದನ್ನು ಅನುಷ್ಠಾನಗೊಳಿಸಬೇಕು, ಮತ್ತು ಆ ಮೂಲಕ ಜೆಜೆ ಕಾಯ್ದೆಯ ಕಲಂ 10ರ ಅನುಸರಣೆಯನ್ನು ಖಾತ್ರಿಪಡಿಸಬೇಕು.

xxxii. ಎಂಡಬ್ಲ್ಯೂಸಿಡಿ ಹಾಗೂ ಎನ್‌ಎಎಲ್‌ಎಸ್‌ಎದ ಸಂಯೋಜನೆಯೊಂದಿಗೆ ಗೃಹ ಸಚಿವಾಲಯವು ಕೇಂದ್ರೀಕರಿಸಿದ ಪೋರ್ಟಲ್ ಅನ್ನು ಅಭಿವೃದ್ಧಿಪಡಿಸುವುದು.

xxxiii. **12ನೇ ತರಗತಿಯವರೆಗಿನ ಶಾಲೆಗೆ ಹೋಗುವ ಬಾಲಕಿಯರ ಶಾಲಾ ಹಾಜರಾತಿಯ ಟ್ರ್ಯಾಕ್ ಅನ್ನು ಹೊಂದಲು ತಂತ್ರಜ್ಞಾನ ಚಾಲಿತ ನಿಗಾವಣಾ ವ್ಯವಸ್ಥೆಯನ್ನು ಸ್ಥಾಪಿಸಿ,** ಮಾನ್ಯ ಸರ್ವೋಚ್ಚ ನ್ಯಾಯಾಲಯದ ಕೆಎಸ್ ಪುಟ್ಟಸ್ವಾಮಿ ತೀರ್ಪಿನಲ್ಲಿ ತಿಳಿಸಿರುವ ಖಾಸಗಿ ಮಾನಕಗಳ ಅಂಗೀಕಾರವನ್ನು ಖಾತ್ರಿಪಡಿಸುವುದು.

**xxxiv.** ಬಾಲ್ಯ ವಿವಾಹಗಳ ತಡೆಗಟ್ಟುವಿಕೆ ಹಾಗೂ ಸಂತ್ರಸ್ತರಿಗೆ ಬೆಂಬಲ ಒದಗಿಸುವ ಗುರಿಯೊಂದಿಗೆ **ಪ್ರತಿ ರಾಜ್ಯವೂ ಆಯವ್ಯಯದಲ್ಲಿ ನಿರ್ದಿಷ್ಟವಾದ ಹಣ ಹಂಚಿಕೆ ಮಾಡುವಂತೆ ಕೇಂದ್ರ ಸರ್ಕಾರದ ಸಂಬಂಧಪಟ್ಟ ಮಂತ್ರಾಲಯಗಳು ಶಿಫಾರಸ್ಸು ಮಾಡಬೇಕು.**

xxxv. ಜೆಜೆ ಕಾಯ್ದೆಯ ಕಲಂ 105 ರಡಿ ಮಕ್ಕಳ ನ್ಯಾಯ ನಿಧಿಯನ್ನು ಸಾಂಸ್ಥೀಕರಣಗೊಳಿಸಿ (Institutionalization of Juvenile Justice Fund), ಬಾಲ್ಯ ವಿವಾಹದ ಸಂಭವ ಎದುರಿಸುತ್ತಿರುವ ಬಾಲಕಿಯರಿಗೆ ಅಥವಾ ವಿವಾಹಗಳು ರದ್ದಾಗಿರುವಂತಹ ಬಾಲಕಿಯರಿಗೆ ವಿದ್ಯಾರ್ಥಿವೇತನ ಹಾಗೂ ಶಿಷ್ಯವೇತನಗಳನ್ನು ಒದಗಿಸಲು, ಈ ನಿಧಿಯನ್ನು ಒದಗಿಸಬೇಕು.

xxxvi. ಎನ್‌ಎಎಲ್‌ಎಸ್‌ಎ ಸಂತ್ರಸ್ತ ಪರಿಹಾರ ಯೋಜನೆ ಅಥವಾ ಸಂಬಂಧಪಟ್ಟ ರಾಜ್ಯ ಸಂತ್ರಸ್ತರ ಪರಿಹಾರ ಯೋಜನೆಗಳಡಿ, ಪ್ರಾಪ್ತ ವಯಸ್ಸಿಗೆ ಬಂದಾಗ ವಿವಾಹವಾಗಲು ಒಪ್ಪದಿರುವಂತಹ ಹೆಣ್ಣು ಮಕ್ಕಳಿಗೆ (ಲೈಂಗಿಕ ಹಲ್ಲೆಯ ಸಂತ್ರಸ್ತರಿಗೆ ಸಮವಾಗಿರುವಂತಹವರು) ಪರಿಹಾರವನ್ನು ಒದಗಿಸುವ ಕಾರ್ಯಸಾಧ್ಯತೆಯನ್ನು ಎಂಡಬ್ಲ್ಯೂಸಿಡಿ ಪರಿಗಣಿಸಬೇಕು.

**xxxvii.** **ಜಿಲ್ಲೆಗಳ ಜಿಲ್ಲಾಧಿಕಾರಿಗಳು ಹಾಗೂ ಪೊಲೀಸ್ ವರಿಷ್ಠಾಧಿಕಾರಿಗಳು ಬಾಲ್ಯ ವಿವಾಹದ ಪ್ರಕರಣಗಳನ್ನು ಗುರುತಿಸಿ, ಶಾಲೆಯಿಂದ ಹೊರಗುಳಿಯುವ ಸಂಭವ ಇರುವಂತಹ ಮಕ್ಕಳ ಮೇಲೆ ನಿಗಾವಹಿಸಲು ಕ್ರಮ ಕೈಗೊಳ್ಳಬೇಕು.**

---

***ವಿಸ್ತೃತ ಕಾನೂನು ದಾಖಲೆಗಳನ್ನು ಓದಲು ಸಮಯ ಇಲ್ಲದಿರುವಂತಹ ಮಕ್ಕಳ ಹಕ್ಕುಗಳ ಹೋರಾಟದಲ್ಲಿ ತೊಡಗಿಸಿಕೊಂಡಿರುವವರ ಅನುಕೂಲಕ್ಕಾಗಿ ಹಾಗೂ ಸುಲಭಗೊಳಿಸುವ ಸಲುವಾಗಿ ಈ ಕೈಪಿಡಿಯನ್ನು ಸಾರ್ವಜನಿಕ ಹಿತಾಸಕ್ತಿಯಲ್ಲಿ ಸಿದ್ಧಪಡಿಸಿ, ಹೊರಡಿಸಲಾಗಿದೆ. ಇದರಲ್ಲಿರುವ ವಿಷಯವಸ್ತು ಸಾಧ್ಯವಾದಷ್ಟೂ ನಿಖರವಾಗಿರುವಂತೆ ಎಚ್ಚರಿಕೆ ವಹಿಸಲಾಗಿದೆ. ಯಾವುದಾದರೂ ತಪ್ಪು ಅಥವಾ ದೋಷಗಳಿದ್ದಲ್ಲಿ ದಯಮಾಡಿ ಇಮೇಲ್ anant.asthana@gmail.com ಮೂಲಕ ಅಥವಾ ವಾಟ್ಸ್‌ಆಫ್ ಸಂಖ್ಯೆ 9212117105 ಮೂಲಕ ನನ್ನ ಗಮನಕ್ಕೆ ತರುವುದು.***

---

# ಕರ್ನಾಟಕ ಸರ್ಕಾರ

ಸಂಖ್ಯೆ: DCP/CNCP/4/2025

ಕರ್ನಾಟಕ ಸರ್ಕಾರದ ಸಚಿವಾಲಯ,
ಬೆಂಗಳೂರು.
ದಿನಾಂಕ: 14.05.2025

## ಸುತ್ತೋಲೆ

ವಿಷಯ: ಬಾಲ್ಯ ವಿವಾಹ ನಿಷೇಧಾಧಿಕಾರಿಗಳ ಕಾರ್ಯನಿರ್ವಹಣೆ ಮತ್ತು ಜಿಲ್ಲಾ ಹಂತದಲ್ಲಿ ತ್ರೈಮಾಸಿಕ ಪರಿಶೀಲನೆ ನಡೆಸುವ ಕುರಿತು.

ಉಲ್ಲೇಖ: ಮಾನ್ಯ ಸರ್ವೋಚ್ಚನ್ಯಾಯಾಲಯದ ರಿಟ್ ಪಿಟಿಷನ್ ಪ್ರಕರಣ ಸಂಖ್ಯೆ:WP(C) 1234/2017ರ ಆದೇಶ ದಿನಾಂಕ:18-10-2024.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ರಿಟ್ ಪಿಟಿಷನ್ ಪ್ರಕರಣ ಸಂಖ್ಯೆ:WP(C) 1234/2017ರ ದಿನಾಂಕ:18.10.2024 ಆದೇಶದ ಪ್ಯಾರಾ ಸಂಖ್ಯೆ:211 A(1.4)ರಲ್ಲಿ ಬಾಲ್ಯವಿವಾಹ ನಿಷೇಧಾಧಿಕಾರಿಗಳ ಕಾರ್ಯನಿರ್ವಹಣೆ ಪರಿಶೀಲನೆ ನಡೆಸಲು ಹಾಗೂ A(2)ರಲ್ಲಿ ಬಾಲ್ಯವಿವಾಹ ತಡೆಗಟ್ಟುವ ನಿಟ್ಟಿನಲ್ಲಿ ಜಿಲ್ಲಾ ಹಂತದ ಜವಾಬ್ದಾರಿಗಳ ಬಗ್ಗೆ ತಿಳಿಸಲಾಗಿದೆ.

ದಿನಾಂಕ:06.03.2025 ರಂದು ನಡೆದ ಬಾಲ್ಯವಿವಾಹಗಳನ್ನು ತಡೆಯುವ ರಾಜ್ಯ ಮಟ್ಟದ ಸಮನ್ವಯ ಮತ್ತು ಪರಿಶೀಲನಾ ಸಭೆಯ ನಡವಳಿಯ 5ನೇ ಅಂಶದಲ್ಲಿ ಜಿಲ್ಲಾ ಹಂತದಲ್ಲಿ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳ ನೇತೃತ್ವದಲ್ಲಿ, ಪ್ರತೀ ತ್ರೈಮಾಸಿಕ ನಡೆಯುವ ಜಿಲ್ಲೆಯ ಎಲ್ಲಾ ಬಾಲ್ಯವಿವಾಹ ನಿಷೇಧಾಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆಯನ್ನು ಕಡ್ಡಾಯವಾಗಿ ನಡೆಸುವ ಬಗ್ಗೆ ತಿಳಿಸಲಾಗಿದೆ.

ಈ ಹಿನ್ನೆಲೆಯಲ್ಲಿ, ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳನ್ನೊಳಗೊಂಡ ಬಾಲ್ಯವಿವಾಹಗಳನ್ನು ತಡೆಯುವ ಜಿಲ್ಲಾ ಮಟ್ಟದ ಸಮನ್ವಯ ಮತ್ತು ಪರಿಶೀಲನಾ ಸಮಿತಿಯ ತ್ರೈಮಾಸಿಕ ಸಭೆಯಲ್ಲಿ ಜಿಲ್ಲೆಯ ವ್ಯಾಪ್ತಿಯಲ್ಲಿನ ಎಲ್ಲಾ ಬಾಲ್ಯವಿವಾಹ ನಿಷೇಧಾಧಿಕಾರಿಗಳ ಕಾರ್ಯನಿರ್ವಹಣೆ ಕುರಿತು ಪರಿಶೀಲನೆ ನಡೆಸುವಂತೆ ಈ ಮೂಲಕ ಸೂಚಿಸಿದೆ.

**(ಉಮಾ ಮಹಾದೇವನ್)**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ
ಅಭಿವೃದ್ಧಿ ಆಯುಕ್ತರು

**ಪ್ರತಿಗಳು:**

1. ಜಿಲ್ಲಾಧಿಕಾರಿಗಳು, ಎಲ್ಲಾ ಜಿಲ್ಲೆಗಳು.
2. ಮುಖ್ಯ ಕಾರ್ಯನಿವರ್ಹಣಾಧಿಕಾರಿಗಳು, ಎಲ್ಲಾ ಜಿಲ್ಲಾ ಪಂಚಾಯತ್ ಗಳು
3. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಎಲ್ಲಾ ಜಿಲ್ಲೆಗಳು
4. ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಸದಸ್ಯ ಕಾರ್ಯದರ್ಶಿಗಳು ಬಾಲ್ಯವಿವಾಹಗಳನ್ನು ತಡೆಯುವ ಜಿಲ್ಲಾ ಮಟ್ಟದ ಸಮನ್ವಯ ಮತ್ತು ಪರಿಶೀಲನಾ ಸಮಿತಿ, ಎಲ್ಲಾ ಜಿಲ್ಲೆಗಳು
5. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಎಲ್ಲಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕ

# ಅಪ್ರಾಪ್ತಳಿಗೆ ಮದುವೆ ಮಾಡಿಸಿದ ಶಾಸ್ತ್ರಿಗಳಿಗೆ 1 ವರ್ಷ ಜೈಲುಶಿಕ್ಷೆ

## ಬಲವಂತವಾಗಿ ತಾಳಿಕಟ್ಟಿದವನಿಗೆ 3 ವರ್ಷ ಸಜೆ

■ **ವಿಕ ಸುದ್ದಿಲೋಕ** ಚಾಮರಾಜನಗರ

ಅಪ್ರಾಪ್ತ ಬಾಲಕಿಯನ್ನು ಬಲವಂತವಾಗಿ ಕಾರಿನಲ್ಲಿ ಕರೆದೊಯ್ದು, ಆಕೆಯ ಇಷ್ಟಕ್ಕೆ ವಿರುದ್ಧವಾಗಿ ಬಲವಂತವಾಗಿ ತಾಳಿಕಟ್ಟಿ ಮದುವೆಯಾಗಿ ಲೈಂಗಿಕ ಕಿರುಕುಳ ನೀಡಿದಾತನಿಗೆ 3 ವರ್ಷ ಜೈಲು ಶಿಕ್ಷೆ ಹಾಗೂ ಇದಕ್ಕೆ ಸಹಕರಿಸಿದ ಇನ್ನಿಬ್ಬರಿಗೆ 1 ವರ್ಷ ಕಠಿಣ ಶಿಕ್ಷೆ ವಿಧಿಸಿ, ಮಕ್ಕಳ ಸ್ನೇಹಿ ಹಾಗೂ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ತೀರ್ಪು ನೀಡಿದೆ.

ಯಳಂದೂರು ತಾಲೂಕು ಗಣಿಗನೂರು ಗ್ರಾಮದ ಸಾರಿಗೆ ಸಂಸ್ಥೆ ಬಸ್ ಕಂಡಕ್ಟರ್ ಎಂ.ರವಿಕುಮಾರ್ ಬಾಲಕಿಯನ್ನು ಬಲವಂತವಾಗಿ ಮದುವೆಯಾದ ಅಪರಾಧಿಯಾಗಿದ್ದು, ಈತನಿಗೆ ಮೂರು ವರ್ಷ ಶಿಕ್ಷೆ ವಿಧಿಸಲಾಗಿದೆ. ಇದಕ್ಕೆ ಸಹಕರಿಸಿ, ಮದುವೆ ಮಾಡಿಸಿದ ಮೈಸೂರು ಜಯನಗರದ ಕೆ.ಎನ್.ಚಂದ್ರಶೇಖರ (ಕೆ.ಎನ್.ಶಾಸ್ತ್ರಿ), ಮೈಸೂರಿನ ಹೆಬ್ಬಾಳದ ರಾಜೇಶ್ವರ ಶಾಸ್ತ್ರಿ ಅವರಿಗೆ ತಲಾ ಒಂದು ವರ್ಷ ಜೈಲು ಶಿಕ್ಷೆ ನೀಡಲಾಗಿದೆ.

ಕೆಎಸ್ಆರ್‌ಟಿಸಿ ಬಸ್‌ನಲ್ಲಿ ಕಾಲೇಜಿಗೆ ಬರುತ್ತಿದ್ದ ಅಪ್ರಾಪ್ತ ಬಾಲಕಿಯನ್ನು ನಿರ್ವಾಹಕ ರವಿಕುಮಾರ್ ಪರಿಚಯ ಮಾಡಿಕೊಂಡು, 2017ರ ಅಕ್ಟೋಬರ್ 23ರಂದು ಬಸ್‌ಗೆ ಕಾಯುತ್ತಿದ್ದ ಬಾಲಕಿಯನ್ನು ಬಲವಂತವಾಗಿ ತನ್ನ ಕಾರಿನಲ್ಲಿ ಕರೆದೊಯ್ದಿದ್ದ. ಶ್ರೀರಂಗಪಟ್ಟಣದ ಗೋಸಾಯಿಘಾಟ್‌ನಲ್ಲಿ ಶೆಡ್‌ವೊಂದರಲ್ಲಿ ಬಲವಂತವಾಗಿ ತಾಳಿ ಕಟ್ಟಿದ್ದ. ಈ ಬಾಲ್ಯವಿವಾಹಕ್ಕೆ ಚಂದ್ರಶೇಖರ ಶಾಸ್ತ್ರಿ ಹಾಗೂ ರಾಜೇಶ್ವರ ಶಾಸ್ತ್ರಿ ಸಹಕಾರ ನೀಡಿ ಮದುವೆ ಮಾಡಿಸಿದ್ದರು. ಮದುವೆ ಆಗಿರುವ ವಿಚಾರವನ್ನು ಯಾರಿಗಾದರೂ ಹೇಳಿದರೆ, ನಿನ್ನನ್ನು ಹೊಳೆಗೆ ತಳ್ಳಿ ಕೊಲೆ ಮಾಡುವುದಾಗಿ ರವಿಕುಮಾರ ಬಾಲಕಿಗೆ ಬೆದರಿಕೆ ಹಾಕಿದ್ದ.

ಈ ಸಂಬಂಧ ಗುಂಡ್ಲುಪೇಟೆ ತಾಲೂಕಿನ ಬೇಗೂರು ಪೊಲೀಸ್ ಠಾಣೆಯ ಎಸ್‌ಐ ಅವರು ಪೋಕ್ಸೋ ಮತ್ತು ಬಾಲ್ಯ ವಿವಾಹ ನಿಷೇಧ ಕಾಯಿದೆ ಅನ್ವಯ ಪ್ರಕರಣ ದಾಖಲಿಸಿ, ತನಿಖೆ ನಡೆಸಿ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ನ್ಯಾಯಾಧೀಶರಾದ ನಿಶಾರಾಣಿ ಅವರು ರವಿಕುಮಾರ್‌ಗೆ ಪೋಕ್ಸೋ ಕಾಯ್ದೆಯಡಿ 3 ವರ್ಷ ಶಿಕ್ಷೆ ವಿಧಿಸಿದ್ದಾರೆ. ಇನ್ನಿಬ್ಬರು ಅಪರಾಧಿಗಳಿಗೆ 1 ವರ್ಷ ಕಠಿಣ ಶಿಕ್ಷೆ ನೀಡಿದ್ದಾರೆ. ಕಾನೂನು ಸೇವಾ ಪ್ರಾಧಿಕಾರದಿಂದ ಬಾಲಕಿಗೆ 1 ಲಕ್ಷ ರೂ. ಪರಿಹಾರ ನೀಡಬೇಕು ಎಂದು ಆದೇಶಿಸಿದ್ದಾರೆ. ಸರಕಾರದ ಪರವಾಗಿ ವಿಶೇಷ ಸರಕಾರಿ ಅಭಿಯೋಜಕ ಕೆ. ಯೋಗೇಶ್ ವಾದ ಮಂಡಿಸಿದ್ದರು.

---

ಬುಧವಾರ, 27 ನವೆಂಬರ್ 2024, ಕಲಬುರಗಿ | 03

# 40 ಜನರ ವಿರುದ್ಧ ಪ್ರಕರಣ

**ಕಲಬುರಗಿ:** ಬಾಲ್ಯ ವಿವಾಹ ನಡೆಸಿದ ಸುಮಾರು 40 ಜನರ ವಿರುದ್ಧ ನಗರದ ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಮಳಖೇಡ ಗ್ರಾಮದ ಅಪ್ರಾಪ್ತೆಯ ಮದುವೆ ನಗರದ ಜೇವರ್ಗಿ ರಸ್ತೆಯ ಕಲ್ಯಾಣ ಮಂಟಪವೊಂದರಲ್ಲಿ ಮದುವೆ ನಡೆದಿದೆ ಎಂಬ 112/1098ಗೆ ಬಂದ ದೂರಿನ ಅನ್ವಯ ಮಕ್ಕಳ ರಕ್ಷಣಾ ಅಧಿಕಾರಿ ಮಂಜುಳಾ ವಿ.ಪಾಟೀಲ್, ಮೇಲ್ವಿಚಾರಕಿ ಪಿಂಕು, ಸ್ಟೇಷನ್ ಬಜಾರ್ ಸಿಬ್ಬಂದಿ, ಮಕ್ಕಳ ರಕ್ಷಣಾ ಕಾನೂನು ಘಟಕದ ಅಧಿಕಾರಿ ಭರತೇಶ ಶೀಲವಂತರ ಹಾಗೂ 112 ಸಂಯೋಜಕ ಬಸವರಾಜ ಟೆಂಗಳಿ, ಕೇಸ್ ವರ್ಕರ್ ಮರಳಮ್ಮ ಮಾರ್ಗದರ್ಶನದಲ್ಲಿ ಕಲ್ಯಾಣ ಮಂಟಪಕ್ಕೆ ಭೇಟಿ ನೀಡಿದ್ದಾರೆ. ಈ ವೇಳೆ ಕಲ್ಯಾಣ ಮಂಟಪದಲ್ಲಿ ಅಕ್ಷತೆ, ಡೆಕೋರೇಷನ್ ಹಾಗೂ ಜನರು ಊಟ ಮಾಡುವುದು ಸೇರಿ ಇತರ ಕಂಡು ಬಂದ ದೃಶ್ಯ ನೋಡಿದಾಗ ಅಲ್ಲಿ ಮದುವೆ ಆಗಿರುವುದು ಕಂಡು ಬಂತು. ಈ ವೇಳೆ ವಧುವನ್ನು ಕರೆಸಿದಾಗ ಆಕೆಯ ಕೊರಳಲ್ಲಿ ತಾಳಿ, ಕಾಲಲ್ಲಿ ಕಾಲುಂಗರ ಇದ್ದದ್ದು ಕಂಡು ಬಂದಿದ್ದು, ಬಾಲ್ಯ ವಿವಾಹ ಆಗಿರುವುದು ಖಚಿತ ಮಾಡಿಕೊಳ್ಳಲಾಗಿದೆ. ನಂತರ ಅಪ್ರಾಪ್ತೆ ತಂದೆ, ತಾಯಿ ಹಾಗೂ ಮದುವೆ ಮಾಡಿದ ಪುರೋಹಿತ ಸೇರಿ ಸುಮಾರು 40 ಜನರ ವಿರುದ್ಧ ಪ್ರಕರಣ ದಾಖಲಾಗಿದೆ.

---

# ಬಾಲ್ಯವಿವಾಹ ನಿಷೇಧ ಕುರಿತ ಗೋಡೆಬರಹ ಕಡ್ಡಾಯ

---

ಪ್ರಜಾವಾಣಿ 15-10-2025

# ಬಾಲ್ಯ ವಿವಾಹ ದೃಢ; ಶಿಕ್ಷೆ ಪ್ರಕಟ

ಗಂಗಾವತಿ: ಐದು ವರ್ಷಗಳ ಹಿಂದೆ ತಾಲ್ಲೂಕಿನ ಗ್ರಾಮವೊಂದರಲ್ಲಿ ಬಾಲ್ಯವಿವಾಹ ಮಾಡಿದ ಪ್ರಕರಣದಲ್ಲಿ ಆರೋಪ ದೃಢಪಟ್ಟಿದ್ದು ಅಪರಾಧಿಗಳಿಗೆ ಇಲ್ಲಿನ ಪ್ರಧಾನ ಸಿವಿಲ್ ಹಾಗೂ ಜೆಎಂಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶರಾದ ನಾಗೇಶ ಪಾಟೀಲ ಶಿಕ್ಷೆ ಹಾಗೂ ದಂಡ ವಿಧಿಸಿ ಆದೇಶಿಸಿದ್ದಾರೆ.

ಗಂಗಾವತಿ ಗ್ರಾಮೀಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ ಪ್ರಕರಣದಲ್ಲಿ ಮೊದಲ ಆರೋಪಿ ಕುರುಪಣ್ಣ, ಆನಂದ, ಆಶೀರ್ವಾದಮ್ಮ, ಯೇಸು, ಶಾಂತಮ್ಮ ಹಾಗೂ ಅಂಬ್ರಮ್ಮ ಹಾಗೂ ಚರ್ಚ್ ಫಾದರ್ ಅವರಿಗೆ ಎರಡು ವರ್ಷ ಜೈಲು ಹಾಗೂ ತಲಾ ₹10 ಸಾವಿರ ದಂಡ ವಿಧಿಸಲಾಗಿದೆ. ಪಬ್ಲಿಕ್ ಪ್ರಾಸಿಕ್ಯೂಟರ್ ನಿರಂಜನಸ್ವಾಮಿ ಹಿರೇಮಠ ವಾದ ಮಂಡಿಸಿದ್ದರು.

---

# ಬಾಲ್ಯವಿವಾಹ: ಗ್ರಾ.ಪಂ ಅಧ್ಯಕ್ಷ ವಿರುದ್ಧ ಪ್ರಕರಣ

ಬೆಳಗಾವಿ: 15 ವರ್ಷದ ಬಾಲಕಿ ಜೊತೆ ಮದುವೆಯಾಗಿದ್ದ ಹುಕ್ಕೇರಿ ತಾಲ್ಲೂಕು ಬಸ್ಸಾಪುರ ಗ್ರಾಮ ಪಂಚಾಯಿತಿ ಅಧ್ಯಕ್ಷ ಭೀಮಶಿ ಕಾಲಿಮಣಿ ವಿರುದ್ಧ ಪೋಕ್ಸೊ ಪ್ರಕರಣ ದಾಖಲಾಗಿದೆ.

‘2023ರ ನ.5ರಂದು ವಿವಾಹವಾಗಿತ್ತು. ಆಗ ಬಾಲಕಿಗೆ 15 ವರ್ಷ ವಯಸ್ಸು. ಆರೋಪಿ ಸದ್ಯ ತಲೆ ಮರೆಸಿಕೊಂಡಿದ್ದಾನೆ’ ಎಂದು ಯಮಕನಮರಡಿ ಠಾಣೆ ಪೊಲೀಸರು ತಿಳಿಸಿದ್ದಾರೆ.

‘ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಡಾ.ಪರ್ವಿನ್ ನೇತೃತ್ವದ ನೇತೃತ್ವದ ತಂಡದ ಅಧಿಕಾರಿಗಳು ಬಾಲಕಿಯನ್ನು ಭೇಟಿಯಾಗಲು ನಾಲ್ಕು ಬಾರಿ ಪ್ರಯತ್ನಿಸಿದ್ದರು. ಅದರೆ, ಆರೋಪಿಯು ಆಕೆಯ ನಕಲಿ ಜನ್ಮಪ್ರಮಾಣಪತ್ರ ಸೃಷ್ಟಿಸಿ, ತಪ್ಪುಮಾಹಿತಿ ನೀಡಿದ್ದ’ ಎಂದು ತಿಳಿಸಿದ್ದಾರೆ.

ಪ್ರಜಾವಾಣಿ 2-9-2025

---

# ಬಾಲ್ಯವಿವಾಹಕ್ಕೆ ಯತ್ನ: ಪೋಷಕರಿಗೆ ಶಿಕ್ಷೆ ಪ್ರಕಟ

ಪ್ರಜಾವಾಣಿ ವಾರ್ತೆ

ಗಂಗಾವತಿ: ವಯಸ್ಕಳಲ್ಲದ ತಮ್ಮ ಮಗಳನ್ನು ಬಾಲ್ಯವಿವಾಹ ಮಾಡಲು ಪ್ರಯತ್ನಿಸಿದ ಪೋಷಕರ ಮೇಲಿನ ಆರೋಪ ಸಾಬೀತಾಗಿದ್ದು, ಅವರಿಗೆ ಇಲ್ಲಿನ ಪ್ರಧಾನ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶರಾದ ನಾಗೇಶ ಪಾಟೀಲ ಅವರು ಬಾಲಕಿಯ ಪೋಷಕರಿಗೆ ಮತ್ತು ಅದಕ್ಕೆ ಸಹಕರಿಸಿವರಿಗೆ ಶಿಕ್ಷೆ ವಿಧಿಸಿ ಸೋಮವಾರ ಆದೇಶಿಸಿದ್ದಾರೆ.

2017ರ ಏಪ್ರಿಲ್‌ನಲ್ಲಿ ತಮ್ಮ ಮಗಳು ವಯಸ್ಕಳು ಅಲ್ಲದಿದ್ದರೂ ಪೋಷಕರು ನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರು ನೀಡಿದ್ದಾರೆ ಎಂದು ಖೊಟ್ಟಿ ವರ್ಗಾವಣೆ ಪತ್ರ ತಂದು ಮದುವೆ ಮಾಡಲು ಮುಂದಾಗಿದ್ದರು. ಆಗ ಬಾಲಕಿಯ ತಂದೆಯನ್ನು ಎ–1, ತಾಯಿಯನ್ನು ಎ–2 ಆರೋಪಿಯನ್ನಾಗಿ ಮಾಡಲಾಗಿತ್ತು. ಮದುವೆ ನಿಶ್ಚಯ ಮಾಡಿದ್ದ ಹುಡುಗ ಹಾಗೂ ಸಹಕರಿಸಿದ್ದ ಇನ್ನಿಬ್ಬರು ಸೇರಿ ಒಟ್ಟು ಐದು ಜನರನ್ನು ಆರೋಪಿಗಳನ್ನಾಗಿಸಲಾಗಿತ್ತು.

ಆಗಿನ ತನಿಖಾಧಿಕಾರಿಯಾಗಿದ್ದ ಗುಲಾಮ್ ಅಹ್ಮದ್ ಅವರು ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು. ಬಾಲ್ಯ ವಿವಾಹ ನಿಷೇಧ ಕಾಯ್ದೆ ಕಲಂ 10ರ ಅಪರಾಧಕ್ಕೆ ಎರಡು ವರ್ಷಗಳ ಕಾಲ ಜೈಲು ಮತ್ತು ತಲಾ ₹10 ಸಾವಿರ ದಂಡ ವಿಧಿಸಲಾಗಿದೆ. ಸರ್ಕಾರದ ಪರವಾಗಿ ಸಹಾಯಕ ಸರ್ಕಾರಿ ಅಭಿಯೋಜಕ ನಿರಂಜನಸ್ವಾಮಿ ದೇವಯ್ಯಸ್ವಾಮಿ ಹಿರೇಮಠ ಅವರು ವಾದ ಮಂಡಿಸಿದ್ದರು.

ಪ್ರಜಾವಾಣಿ 23-9-2025


---

ಪ್ರಜಾವಾಣಿ ಗುರುವಾರ ನವೆಂಬರ್ 28, 2024

ಕ್ರಿಮಿನಲ್ ಪ್ರಕರಣ ರದ್ದುಪಡಿಸಬಾರದು, ಅನಿಷ್ಟ ಪದ್ಧತಿ ತಡೆಗೆ ಕಠಿಣ ಕ್ರಮ ಅಗತ್ಯ: ಹೈಕೋರ್ಟ್

# ಬಾಲ್ಯವಿವಾಹ: ಪೋಷಕರನ್ನು ಹೊಣೆಯಾಗಿಸಿ

ಪ್ರಜಾವಾಣಿ ವಾರ್ತೆ



---

ಬಾಲ್ಯ ಮದುವೆಗೆ ಪ್ರಚೋದನೆ ಪ್ರಕರಣ

# ಕಟಕಟೆಗೆ ಗ್ರಾ.ಪಂ. ಅಧ್ಯಕ್ಷ ಸೇರಿ 10 ಜನ

---

# 17ರ ಬಾಲಕಿಗೆ ಮದುವೆ ಮಾಡಿದ್ದಕ್ಕೆ ಹೈಕೋರ್ಟ್ ಗರಂ!

ತಮ್ಮ ವಿರುದ್ಧ ದಾಖಲಾಗಿದ್ದ ಬಾಲ್ಯ ವಿವಾಹ ಕೇಸ್ ರದ್ದು ಕೋರಿದ್ದ ಪೋಷಕರಿಗೆ ಹೈಕೋರ್ಟ್ ಚಾಟಿ | ಒಂದೆರಡು ಕ್ರಮವಾದ್ರೆ ಜ್ಞಾನೋದಯ

• ಕನ್ನಡಪ್ರಭ ವಾರ್ತೆ ಬೆಂಗಳೂರು



---

# ಕಟ್ಟಡಗಳ ಮೇಲೆ 1098 ಸಂಖ್ಯೆ ಬರೆಸಿ

**ಬೆಂಗಳೂರು:** ರಾಜ್ಯದ ಎಲ್ಲಾ ಸರಕಾರಿ, ಅರೆ ಸರಕಾರಿ ಅಥವಾ ಸೇವಾ ಸಂಸ್ಥೆಗಳ ಕಟ್ಟಡಗಳ ಮೇಲೆ ಮಕ್ಕಳ ಸಹಾಯವಾಣಿ ಸಂಖ್ಯೆ 1098ನ್ನು ಕಡ್ಡಾಯ ಬರೆಸಬೇಕು ಎಂದು ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಸೂಚಿಸಿದ್ದಾರೆ.

ರಚನೆ, ಸಂಗ್ರಹ ಹಾಗೂ ಸಂಯೋಜನೆ : ಡಾ. ಕೊಣಿಲ ರಾಘವೇಂದ್ರ ಭಟ್